2. 1977ರ ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 28-4-1998ರಂದು ಹೊರಡಿಸಲಾದ ಡಿಪಿಎಆರ್ 97ನೇ ಕ್ರಮಾಂಕದ ಅಧಿಸೂಚನೆ 48 ಎಸ್‌ಆರ್‌ಆರ್ ಗಳನ್ನು ಮಂಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ,

II ಮಾನ್ಯ ಬಿ.ಎ. ಮೊಯಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿ) : ಅವರ ಪರವಾಗಿ ಅವರ ಹೆಸರಿನಲ್ಲಿರತಕ್ಕಂಥ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1956ರ ಕಂಪನಿಗಳ ಕಾಯ್ದೆಯ 619 ಎ ಪ್ರಕರಣದ ಮೇರೆಗೆ;

1. 1997-98ನೇ ಸಾಲಿನ ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜನ್ಸೀಸ್ ನಿಯಮಿತದ 26ನೇ ವಾರ್ಷಿಕ ವರದಿ :

   1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 24(4)ನೇ ಪ್ರಕರಣದ ಮೇರೆಗೆ;

2. 1995-96ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ,

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಮಂತ್ರಿ) : ಅವರ ಪರವಾಗಿ ಅವರ ಹೆಸರಿನಲ್ಲಿರತಕ್ಕ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1996ರ ಕಂಪನಿಗಳ ಕಾಯ್ದೆಯ 619 ಎ ಪ್ರಕರಣದ ಮೇರೆಗೆ;

1995-96ನೇ ಸಾಲಿನ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ 16ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು

ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

+ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾನು ಇಂದು ಸರ್ಕಾರ ಮುಂದಿಟ್ಟಿರುವ ಬೇಡಿಕೆಗಳ ಮೇಲೆ ಬೆಳಕು ಚೆಲ್ಲುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಈ ಸರ್ಕಾರ

ಬಂದು 3 ವರ್ಷಗಳಾಯಿತು, ರಾಜ್ಯದ ಜನ ಏನೊಂದು ಕನಸು ಕಟ್ಟಿದ್ದರು, ಪರಿವರ್ತನೆಯಾಗುತ್ತದೆ ಎಂಬ ಆಶಾಭಾವನೆ ಹೊತ್ತಿದ್ದರು. ಕಳೆದ ಮೂರು ವರ್ಷಗಳಲ್ಲಿ ಅದು ನಿಷ್ಫಲವಾಗಿದೆ. ಆ ಜನ ನಿರಾಶರಾಗುವ ಪರಿಸ್ಥಿತಿಗೆ ಸರ್ಕಾರ ಬಂದು ಮುಟ್ಟಿದೆ. ಜನರಿಗೆ ಸಿಗಬೇಕಾದ ಸೌಲಭ್ಯ, ಅಭಿವೃದ್ಧಿ ಕಾರ್ಯಗಳಲ್ಲಿ ಜನರ ಬೆವರಿನ ಹಣ, ವಿದೇಶಗಳಿಂದ ತಂದಿರುವ ಸಾಲ ಇವುಗಳು ಮುಟ್ಟದೇನೆ ಯಾರ್ಯಾರದೋ ಗರೀಭಿ ಹಠಾವೋ ಆಗುವಂತಹ ದುಸ್ಥಿತಿಗೆ ಅನೇಕ ಇಲಾಖೆಗಳು ಬಂದು ಮುಟ್ಟಿವೆ. ಆ ಇಲಾಖೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬ ಬಗ್ಗೆ ಮುಂದೆ ಬರುತ್ತೇನೆ. ನಾನು ವಿಶೇಷವಾಗಿ ಅರಣ್ಯ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಒತ್ತು ಕೊಟ್ಟು ಮಾತನಾಡುತ್ತೇನೆ. ಅಧ್ಯಕ್ಷರೇ, ಅರಣ್ಯದ ಮಹತ್ವ ನಮಗೆಲ್ಲರಿಗೂ ಗೊತ್ತಿದೆ, ಹೆಚ್ಚಿಗೆ ಹೇಳುವ ಅಗತ್ಯ ಇಲ್ಲ. ನಮ್ಮ ತಾಯಿ ನಮಗೆ ಒಂಭತ್ತು ತಿಂಗಳು ತನ್ನ ಹೊಟ್ಟೆಯಲ್ಲಿಟ್ಟು ಎಲ್ಲ ರೀತಿಯ ಪೋಷಣೆ ಮಾಡುತ್ತಾಳೆ. ಜನನದ ಕಾಲದಲ್ಲಿ ಹೊಸ ಪ್ರಪಂಚಕ್ಕೆ ನಮ್ಮನ್ನು ಬಿಡುಗಡೆ ಮಾಡುವಾಗ ಮೊದಲು ನಮ್ಮನ್ನು ಹೊರುವುದು ತೊಟ್ಟಿಲು. ಅರಣ್ಯದಿಂದ ತಂದು ಬಿದಿರು, ಮರದಿಂದಲೋ ಮಾಡಿರುವ ತೊಟ್ಟಿಲಿನಲ್ಲಿ ಮಲಗಿಸುತ್ತಾರೆ. ಆ ನಂತರ ನಮಗೆ ಪೋಷಣೆ ಮಾಡುವುದು, ಮನೆ ಅದಕ್ಕೂ ಅರಣ್ಯ ನಮಗೆ ಸೌಲಭ್ಯ ಒದಗಿಸಿಕೊಡುತ್ತದೆ. ಅಡಿಗೆ ಮಾಡಲು ಬೇಕಾದ ಕಟ್ಟಿಗೆಯನ್ನು ಅರಣ್ಯ ಕೊಡುತ್ತದೆ. ನಮ್ಮನ್ನು ಆರೋಗ್ಯವಾಗಿಡಲು ಬೇಕಾದ ಗಿಡಮೂಲಿಕೆಗಳನ್ನೂ ಅರಣ್ಯವೇ ಕೊಟ್ಟಿದೆ. ಸಾಕಷ್ಟು ವೈವಿದ್ಯಮಯವಾದ ಗಿಡಮೂಲಿಕೆಗಳ ಸಸ್ಯ ಸಾಮ್ರಾಜ್ಯವೇ ಕರ್ನಾಟಕದಲ್ಲಿ ಇವತ್ತು ಇದೆ ಎಂದು ಹೇಳಲು ಬರುವುದಿಲ್ಲ, ಇತ್ತು. ಹಾಗೇನೆ ನಮ್ಮ ಜೀವಿತದ ಕಡೆ ಅವಧಿಯಲ್ಲಿ ಸತ್ತಾಗ ನಮ್ಮನ್ನು ಹೊತ್ತೊಯ್ಯಲು ಉಪಯೋಗಿಸುವ ಚಟ್ಟ, ಅದಕ್ಕೂ ಕೂಡ ಅರಣ್ಯ ಸಹಾಯ ಮಾಡುತ್ತದೆ. ನಮ್ಮನ್ನು ಕೊಳೆಯಲು ಬಿಡದೆ ಉರಿಸಿ ಬೂದಿ ಮಾಡಲೂ ಅರಣ್ಯ ಕಟ್ಟಿಗೆ ಒದಗಿಸಿ ಸಹಾಯ ಮಾಡುತ್ತದೆ. ಹೀಗೆ ನಮ್ಮ ಹುಟ್ಟಿನಿಂದ ಸಾವಿನವರೆಗೆ ನಮಗೆ ಪೋಷಣೆ ಮಾಡುವ ನಮ್ಮ ತಾಯಿಯಷ್ಟೇ ನಮಗೆ ಪ್ರಮುಖವಾಗಿರುವ ಅರಣ್ಯದ ಬಗ್ಗೆ, ಪರಿಸರದ ಬಗ್ಗೆ ನಾವೆಷ್ಟು ಗಮನ ಕೊಟ್ಟಿದ್ದೇವೆ? ಎಷ್ಟು ಕಾಳಜಿ ಇವತ್ತು ತೋರಿಸುತ್ತಿದ್ದೇವೆ? ನಮ್ಮನ್ನು ಪ್ರತಿನಿಧಿಸುವ ಸರ್ಕಾರ ಎಷ್ಟು ಗಮನ ಕೊಟ್ಟಿದೆ ಅಂದರೆ ಇವತ್ತು ಬಹಳ ವಿಷಾದವಾಗುತ್ತದೆ. ಕೊಡಬೇಕಾಗಿದ್ದ ಮಹತ್ವವನ್ನು ಕೊಡಲಿಲ್ಲ. ನಮ್ಮಲ್ಲಿ ಹೇಳುತ್ತಾರೆ: ಇಡೀ ಹಿಂದೂಸ್ಥಾನದ ನಾಗರೀಕತೆಯ ಉದಯ ನದಿಯ ದಡದಲ್ಲಿ ಆಯಿತು ಎಂದು ಕೇಳಿದ್ದೇವೆ. ಅಂತಹ ಪವಿತ್ರ ನದಿಗಳನ್ನು ಕಲ್ಮಶಯುಕ್ತ ಮಾಡಿದ್ದೇವೆ, ಅಪವಿತ್ರ ಮಾಡಿದ್ದೇವೆ, ಜೊತೆಗೆ ಹೇಳುತ್ತಾರೆ. ಭಾರತ ಒಂದು ಕಾಲದಲ್ಲಿ ಇತರೆ ದೇಶಗಳಿಗೆ ಗುರುವಿನ ಸ್ಥಾನದಲ್ಲಿತ್ತು ಎಂದು ಮನುಷ್ಯ ಆಹಾರ ಬೇಯಿಸದೆ ತಿನ್ನುತ್ತಿದ್ದ ಕಾಲದಲ್ಲಿ, ಸ್ನಾನ ಮಾಡದೇ ಇದ್ದ ಕಾಲದಲ್ಲಿ ಅನಾಗರೀಕನಾಗಿದ್ದ ಕಾಲದಲ್ಲಿ ಈ ದೇಶದಲ್ಲಿ ಹುಟ್ಟಿದ್ದ ಸಾಧುಸಂತರು ದಿವ್ಯ ಜ್ಞಾನವನ್ನು ಪಡೆದರು, ಬೇರೆ ಬೇರೆ ದೇಶಕ್ಕೂ ಹೋಗಿ ಅವರಿಗೆ ನಾಗರೀಕತೆಯನ್ನು ಹೇಳಿಕೊಟ್ಟರು ಮನುಷ್ಯ ಮತು ಮೃಗಳ್ಳಿರುವ ವ್ಯತ್ಯಾಸಗಳನ್ನು ಕಲಿಸಿಕೊಟ್ಟರು ಎಂದು ಹೇಳುತ್ತಾರೆ. ಇವೆಲ್ಲ ಉದಯವಾಗಿದ್ದು ಕಾಡಿನಲ್ಲಿ ಋಷಿಮುನಿಗಳ ತಪಸ್ಸಿನ ಮೂಲಕ-ಹೀಗೆ ಜ್ಞಾನ ಕೊಟ್ಟಿರುವಂತಹ, ಬದುಕಲು ಬೇಕಾದ ರಕ್ಷಣೆ ಕೊಟ್ಟಿರುವಂತಹ ನಮಗೆ ಮಳೆ, ಬೆಳೆ, [illegible]

ಕೊಟ್ಟಿರುವಂತಹ ಒಳ್ಳೆಯ ಗಾಳಿಯನ್ನು ಕೊಟ್ಟಿರುವ ಅರಣ್ಯದ ಬಗ್ಗೆ ಪರಿಸರದ ಬಗ್ಗೆ ದಿವ್ಯವಾಗಿರುವ ಮೌನವನ್ನು ನಾವು ವಹಿಸಿದ್ದೇವೆ. ನಾವು ಹೇಳುತ್ತೇವೆ, ಬುದ್ಧನಿಗೆ ಬೋಧಿ ವೃಕ್ಷದ ಕೆಳಗಡೆ ಜ್ಞಾನೋದಯವಾಯಿತು ಎಂದು. ಇವತ್ತು ವೈಜ್ಞಾನಿಕವಾಗಿ ಪ್ರೂವ್ ಆಗಿದೆ. ಮನುಷ್ಯ ಹುಟ್ಟಿದ ಒಂದು ನಕ್ಷತ್ರಕೂ ಒಂದೊಂದು ಮರದ ಸಾಮಿೂಪ್ಯ ಇದೆ ಸಂಬಂಧ ಇದೆ ಎಂದು. ಆ ಸಂಬಂಧ ಇರುವ ಮರದ ಕೆಳಗೆ ಕೂತಾಗ ಅವನಿಗೆ ಆ ಮರ ಆಂಟೆನಾ ಆಗಿ ದಿವ್ಯವಾಗಿರುವ ಜ್ಞಾನ ಕೊಡುತ್ತದೆ ಎಂದು ಹೇಳುತ್ತಾರೋ ಹಾಗಯೇ ಬೇರೆ ಬೇರೆ ಮಹರ್ಷಿಗಳು ಯಾವ್ಯಾವ ಮರಗಳ ಕೆಳಗೆ ಕೂತು ತಪಸ್ಸು ಮಾಡಿದರೋ ಅವರಿಗೆ ಅಂಟೆನಾ ಆಗಿದ್ದವು ಅವು. ಇವತ್ತಿಗೂ ಟಿವಿ ಅಂಟೆನಾ ಬದಲಿಗೆ ಬಾಳೆ ಮರವನ್ನು ಕೆಲವು ಕಡೆ ಉಪಯೋಗಿಸುತ್ತಾರೆ. ಇಷ್ಟೊಂದು ಮಹತ್ವದ, ವೆಜ್ಞಾನಿಕವಾಗಿರುವ ಮರಗಿಡಗಳ ಬಗ್ಗೆ ಪರಿಸರದ ಬಗ್ಗೆ ಹೆಚ್ಚು ಕಾಳಜಿಯನ್ನು ಇವತ್ತು ತಾಳಬೇಕಾಗಿದೆ. ನಾವು ಆಧುನಿಕತೆ ಹೆಸರಿನಲ್ಲಿ ಎಲ್ಲವನ್ನೂ ಸಂಹಾರ ಮಾಡಿದ್ದೇವೆ. ಹಾಲನ್ನು ಕರೆದು ಉಂಡಿದ್ದರೆ ಏನೂ ತೊಂದರೆ ಇಲ್ಲ. ಮನುಷ್ಯ ಬದುಕುವುದಕ್ಕೆ ಬೇಕಾದ ಮೂಲಭೂತ ಅವಶ್ಯಕತೆ ಪೂರೈಸುವ ಎಲ್ಲವನ್ನೂ ಕೊಡುತ್ತಾ ಇದೆ. ಆದರೆ ನಮ್ಮ ದುರಾಸೆಯನ್ನು ತುಂಬಿಸಲಿಕ್ಕೆ ಪರಿಸರಕ್ಕೆ ಸಾಧ್ಯವಾಗದೆ ಇವತ್ತು ಬೇಡಾಗಿ ಹೋಗುವುದನ್ನು ನೋಡಿದ್ದೇವೆ. ಕರ್ನಾಟಕದಲ್ಲಿ 20 ಭಾಗ ಅರಣ್ಯ ಇದೆ ಎಂದು ಹೇಳುತ್ತೀರಿ, ಸುಮಾರು 33 ಭಾಗ ಅರಣ್ಯವಿದ್ದರೆ ಪರಿಸರ ಸಮತೋಲನವನ್ನು ಕಾಪಾಡ ಬಹುದು ಎಂದು ಹೇಳುತ್ತಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಇವತ್ತು ಅರಣ್ಯಾಭಿವೃದ್ಧಿ ಎಂಬ ದೊಡ್ಡ ಪದ ಉಪಯೋಗಿಸುತ್ತೇವೆ. ಅರಣ್ಯಸಚಿವರಲ್ಲಿ ನನ್ನ ವಿನಂತಿ ಏನೆಂದರೆ ವಿನಿಯೋಗಿಸುವ ಹಣ ಅರಣ್ಯಾಭಿವೃದ್ಧಿಗೆ ಅನ್ನುವ ಹೆಸರನ್ನು ತೆಗೆದುಹಾಕಿ. ಅಕೇಶಿಯಾ ನೆಟ್ಟು 8-10 ವರ್ಷಗಳ ನಂತರ ಅಕೇಶಿಯಾವನ್ನು ಕಡಿಯುವುದು ಅರಣ್ಯಾಭಿವೃದಿಯಾಗುವುದಿಲ್ಲ. ಅರಣ್ಯದ ವ್ಯವಸಾಯ ಆದೀತು, ಅರಣ್ಯದ ಅಭಿವೃದ್ಧಿ ಯಾವರೀತಿ ಆಗಬೇಕಾಗಿತ್ತು, ಇಡೀ ಜೀವಜಾಲವನ್ನು ರಕ್ಷಣೆ ಮಾಡಬೇಕಾಗುತ್ತದೆ. ಪಶ್ಚಿಮಘಟ್ಟಗಳ ಸಾಲುಗಳೇನಿವೆ ಅವು ಏಷ್ಯ ಖಂಡದಲ್ಲೇ ಅತ್ಯಂತ ಸೂಕ್ಷ್ಮ ಸ್ಥಾನಮಾನ ಹೊಂದಿವೆ. ಅಂತಹ ಅರಣ್ಯ ಪಡೆದಿರುವ ರಾಜ್ಯ ಇದು. ಇಂತಹ ಅರಣ್ಯವನ್ನು ಬೇಕಾಬಿಟ್ಟಿ ಕಡಿದಿದ್ದೇವೆ. ಜಲವಿದ್ಯುತ್ ಯೋಜನೆ ಹೆಸರಿನಲ್ಲಿರಬಹುದು, ಒತ್ತುವರಿ ಮಾಡಿರಬಹುದು ಅಥವಾ ಬೇರೆ ಬೇರೆ ಅಭಿವೃದ್ಧಿ ಹೆಸರಿನಲ್ಲಿರಬಹುದು, ಬೇಕಾಬಿಟ್ಟಿ ಕಡಿದಿದ್ದೇವೆ. ಯಾವುದೇ ವೈಜ್ಞಾನಿಕ ಮಾನದಂಡವನ್ನೂ ಉಳಿಸಲಿಲ್ಲ. ಹೀಗಾಗಿ ಇದನ್ನು ಹೇಗೆ ನಿರ್ವಹಿಸುವುದು ಬಹಳ ಮುಖ್ಯ. ಇವತ್ತು ಅರಣ್ಯ ಅಭಿವೃದ್ಧಿ ಮಾಡುತ್ತೇವೆ ಎಂದು ನಮಗೆ ಬೇಡವಾಗಿರುವ ಯಾವ್ಯಾವುದೋ ತಳಿಗಳನ್ನು ತಂದು ಹಾಕಿ ಪರಿಸರದ ಮೇಲೂ ದುಷ್ಪರಿಣಾಮ ಮಾಡುವ ಕೆಲಸವನ್ನು ಹಲವಾರು ವರ್ಷಗಳಿಂದ ಮಾಡುತ್ತಾ ಬಂದಿದ್ದೀರಿ. ನಮ್ಮ ಹಣ ಜೊತೆಗೆ ವಿದೇಶೀ ಸಾಲ, ಅದಕ್ಕೆ ಬಡ್ಡಿ ಕೊಡುತ್ತೇವೆ, ಇದನ್ನೆಲ್ಲ ತಪ್ಪಿಸಬೇಕಾಗಿದೆ. ಅದನ್ನು ಮಾಡಲು ಬಹಳ ಮಹತ್ವದ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕಾಗುತ್ತದೆ. ಕೇವಲ ಅರಣ್ಯಾಧಿಕಾರಿಗಳು ಮಾತ್ರವಲ್ಲ, ಜನಪ್ರತಿನಿಧಿಗಳು ಪರಿಸರವಾದಿಗಳನ್ನೆಲ್ಲಾ ಸಂಘಟಿಸಿ ಒಂದು ದೊಡ್ಡ ಆಂದೋಲನ ನಡೆಯಬೇಕಾಗುತ್ತದೆ. ಕರ್ನಾಟಕದ ಮಾನ್ಯ ಅರಣ್ಯಸಚಿವರು ಇದರ ನೇತೃತ್ವ ವಹಿಸಬೇಕಾದ ಕೆಲಸ ಇದು ಎಂದು ನಾನು ಭಾವಿಸುತ್ತೇನೆ.

ವಿಶೇಷವಾಗಿ ಅರಣ್ಯದೊಳಗೆ ಹೊಸ ಯೋಜನೆಗಳನ್ನು ಮಾಡಬೇಕಾದಾಗ ಎಲ್ಲಿ ಮಾಡಬೇಕು ಹೇಗೆ ಮಾಡಬೇಕು ಪರಿಸರದ ಮೇಲೆ ಏನು ದುಷ್ಪರಿಣಾಮ ಬೀರುತ್ತದೆ ಎಂದು ನೋಡುವುದರ ಜೊತೆಗೆ ಅರಣ್ಯದ ಹತ್ತಿರವಿರುವ ಹಳ್ಳಿಗಳು ವಿಶೇಷವಾಗಿ ಉರುವಲುಕಟ್ಟಿಗೆಯನ್ನು ಉಪಯೋಗಿಸುತ್ತೇವೆ. ಒಂದು ಕಾಲ ಇತ್ತು, ನಾನು ಮಲೆನಾಡಿನಲ್ಲಿ ಹುಟ್ಟಿರುವವನು, ನಾವೆಲ್ಲ ಕಾಡುಗಳಿಗೆ ಹೋಗಿ ಮರಗಳ ಬುಡಗಳನ್ನು ಕಡಿಯುತ್ತಿದ್ದೆವು. ಅದನ್ನುರುಳಿಸಿ ಅಡ್ಡಾದಿಡ್ಡಿಯಾಗಿದ್ದ ರೆಂಬೆಗಳನ್ನು ಬಿಸಾಡಿ ಒಳ್ಳೊಳ್ಳೆಯ ಕಟ್ಟಿಗೆಯನ್ನು ಸಂಗ್ರಹ ಮಾಡಿ ತರುತ್ತಿದ್ದೆವು. ಉಳಿದಿದ್ದವಕ್ಕೆ ಬೆಂಕಿ ಹಚ್ಚಿ ಸುಡುತ್ತಿದ್ದೆವು. ಮಲೆನಾಡಿಗರಿಗೆ 20 ವರ್ಷದ ಹಿಂದೆ ಕಾಡೇ ಒಂದು ಸಮಸ್ಯೆಯಾಗಿತ್ತು. ಇವತ್ತು ಕಾಡಿಲ್ಲದೇ ಇರುವುದೇ ದೊಡ್ಡ ಸಮಸ್ಯೆಯಾಗಿದೆ. ಹೀಗೆ ಬೇಕಾಬಿಟ್ಟಿ ಉರುವಲನ್ನು ಉಪಯೋಗಿಸುವ ಜನರಲ್ಲಿ ಒಂದು ಜಾಗೃತಿಯನ್ನುಂಟು ಮಾಡಬೇಕಾಗುತ್ತದೆ. ಅವರಿಗೆ ಹೇಳಬೇಕಾಗುತ್ತದೆ ಈ ಕಾಡು ನಿನ್ನದು, ಇದನ್ನು ಸರಿಯಾದ ರೀತಿ ಉಪಯೋಗಿಸಿಕೋ, ಬಿದ್ದಂತಹ ಮರಗಿಡಗಳನ್ನು ಮಾತ್ರ ಉಪಯೋಗಿಸಿಕೋ, ಬೇಕಾದಷ್ಟು ಸಿಗುತ್ತದೆ ಆದರೆ ನಿಂತಿರುವ ಹಸಿರು ಮರಗಳನ್ನು ಅಮೂಲ್ಯವಾದ ನಾಟದಸಸಿಗಳನ್ನು ಕಡಿಯಬೇಡ ಎಂದು ಹೇಳಬೇಕಾಗುತ್ತದೆ. ಈಗ ಹೇಗಿದೆ ಅಂದರೆ ನಾನೊಬ್ಬ ಸಣ್ಣ ರೈತ, ಎರಡೂವರೆ ಎಕರೆ ಅಡಿಕೆ ತೋಟವನ್ನು ನಾನು ಮಾಡುತೇನೆ. ನನ್ನ ಮನೆಯಲ್ಲಿ ಒಂದು ತುಂಡುಕಟ್ಟಿಗೆಯನ್ನೂ ನಾನು ಬಳಸುತ್ತಿಲ್ಲ. ನಾನು ಕತ್ತಿಹಿಡಿದು ಕಾಡಿಗೆ ಹೋಗುವುದಿಲ್ಲ, ನನ್ನ ಆಳಿನ ಕೈಲಿ ಕಟ್ಟಿಗೆ ಕಡಿಸುವುದಿಲ್ಲ. ಮಲೆನಾಡ ಮಧ್ಯ ಇದ್ದರೂ ಕಾಡನ್ನು ಬಳಸುವುದಿಲ್ಲ, ನನ್ನಂತಹ ಅನೇಕ ಕುಟುಂಬಗಳು ಮಲೆನಾಡಿನಲ್ಲಿವೆ. ಮೊದಲನೆಯದಾಗಿ ಅಡಿಗೆಗೆ ಗೋಬರ್‌ಗ್ಯಾಸ್ ಒಲೆಯನ್ನು ಪ್ರಾರಂಭ ಮಾಡಿಸಿದ್ದೇನೆ. ಇದಕ್ಕೆ ಹೆಚ್ಚು ಸಬ್ಸಿಡಿಯನ್ನು ಅಥವಾ ನೀವು ಪುಕ್ಕಟ್ಟೆಯಾಗಿ ಇದನ್ನು ಮಾಡಿದರೂ ಚಿಂತೆಯಿಲ್ಲ. ಹೊಸ ಅರಣ್ಯವನ್ನು ನಿರ್ಮಾಣ ಮಾಡಲಿಕ್ಕೆ ಕೋಟಿಗಟ್ಟಲೆ ಹಣವನ್ನು ಬಳಸುತ್ತೀರಿ, ಅದಕ್ಕಿಂತಲೂ ನೀವು ಅರಣ್ಯದ ಪಕ್ಕದಲ್ಲಿರುವ ಗ್ರಾಮಸ್ಥರಿಗೆ ಪುಕ್ಕಟೆಯಾಗಿ ಗೋಬರ್ ಗ್ಯಾಸ್ ವ್ಯವಸ್ಥೆಯನ್ನು ಮಾಡಿಕೊಟ್ಟರೂ ಕೂಡ ಚಿಂತೆಯಿಲ್ಲ. ನಾನು ಇವತ್ತು ಗೋಬರ್‌ಗ್ಯಾಸನ್ನು ಬಳಸುತ್ತೇನೆ. ಹಾಗಾಗಿ ನಾನು ಅಡಿಗೆಗೆ ಉರುವಲನ್ನು ಉಪಯೋಗಿಸುವುದಿಲ್ಲ. ನಾವುಗಳು ಗ್ರಾಮಾಂತರ ಪ್ರದೇಶದಲ್ಲಿರುವ ಜನರು. ಸ್ನಾನವನ್ನು ಮೊದಲು ಬಹಳ ಕಡಿಮೆ ಮಾಡುತ್ತಿದ್ದೆವು. ಈಗ 25-30 ವರ್ಷದ ಹಿಂದೆ ಎಲ್ಲೋ ಶನಿವಾರವೋ ಸೋಮವಾರವೋ ಸ್ನಾನ ಮಾಡಿದರೆ ಆಗುತ್ತಿತ್ತು, ಬಟ್ಟೆ ತೊಳೆದರೆ ಆಗುತ್ತಿತ್ತು. ಇವತ್ತು ಹಾಗೆ ಇಲ್ಲ. ನಾವೆಲ್ಲ ಸ್ವಲ್ಪ ನಾಗರೀಕತೆ, ಆಧುನಿಕ ಯುಗದಲ್ಲಿದ್ದೇವೆ. ಪ್ರತಿ ದಿವಸ ಸ್ನಾನ ಮಾಡಬೇಕು. ಬಹಳ ಕಟ್ಟಿಗೆಗಳು ಖರ್ಚಾಗುತ್ತದೆ. ಹಾಗಾಗಿ ನನ್ನ ಬಚ್ಚಲು ಮನೆಗೆ ಅಡಿಕೆ ತೆಗೆದ ನಂತರ ಬರುವ ಸಿಪ್ಪೆ ಏನಿದೆ, ಅಡಿಕೆಯ ಸಿಪ್ಪೆಯನ್ನು ನಾನು ಉಪಯೋಗಿಸುತ್ತೇನೆ. ಆಧುನಿಕವಾಗಿರುವ ಒಲೆಯನ್ನು ನಮ್ಮ ಸಿಎಫ್‌ಟಿಆರ್‌ಐನವರು ಕಂಡು ಹಿಡಿದು ಅದಕ್ಕೆಲ್ಲಾ ಡಿಸೈನ್ ಮಾಡಿದ್ದಾರೆ. ಅವರು ಕೂಡ ಒಲೆಯನ್ನು ಕಂಡುಹಿಡಿದಿದ್ದಾರೆ. ಬಹಳ ಉತ್ಕೃಷ್ಟವಾಗಿರುವ ಒಲೆ. ಚಿಕ್ಕ ಬುಟ್ಟಿ ಸಿಪ್ಪೆಯನ್ನು ನಾನು ಅದರೊಳಗೆ ಹಾಕಿ ಬೆಂಕಿ ಹಾಕಿದರೆ ಕೇವಲ 5 ರಿಂದ 10 ನಿಮಿಷದೊಳಗಡೆ ನಿಮ್ಮ ಗೀಸರ್‌ನಲ್ಲಿ ಎಷ್ಟು ಸುಲಭವಾಗಿ ನೀರು ಬಿಸಿಯಾಗುತ್ತೋ ಅಷ್ಟು ಸುಲಭವಾಗಿ ನನ್ನ ಮನೆಯ

ಒಲೆಯಲ್ಲಿ ಬಿಸಿಯಾಗುತ್ತದೆ. ಹಾಗೆಯೇ ಅಡಿಕೆಯನ್ನು ಬೇಯಿಸಲಿಕ್ಕಾಗಿ ಬಹಳಷ್ಟು ಕಟ್ಟಿಗೆಯನ್ನು ಉಪಯೋಗಿಸುತ್ತಿದ್ದೆವು. ನಾನು ಮಲೆನಾಡಿಗರು. ಅಡಿಕೆಯನ್ನು ಬೇಯಿಸುವುದು ಸುಮಾರು 3-4 ಗಂಟೆಗಳ ಕಾಲ ಬೇಯಿಸಬೇಕಾಗುತ್ತದೆ. ಹತ್ತು ಕೆಜಿ ಅಡಿಕೆಯನ್ನು ಬೇಯಿಸಲಿಕ್ಕೂ ಬಹಳ ಕಟ್ಟಿಗೆಯನ್ನು ನಾವು ಉಪಯೋಗಿಸುತ್ತಿದ್ದೆವು. ಕೇವಲ ಸಿಪ್ಪೆಯಲ್ಲಿ ಬೇಯಿಸುವ ಒಲೆಗಳನ್ನು ಇವತ್ತು ಕಂಡುಹಿಡಿದಿದ್ದೇವೆ. ಇದೆಲ್ಲದಕ್ಕೂ ಕೂಡ ಸಹಾಯಧನವನ್ನು ಕೊಟ್ಟರೆ ಅಥವಾ ಉಚಿತವಾಗಿ ಅವರಿಗೆಲ್ಲ ಒಲೆಯನ್ನು ಕಟ್ಟಿಸಿ ಕೊಟ್ಟರೆ ಅಥವಾ ಏನು ಇಲ್ಲದಿದ್ದರೂ ಕೂಡ ನಿಮ್ಮ ಅರಣ್ಯಾಧಿಕಾರಿಗಳು ಸೌಹಾರ್ದಯುತವಾಗಿ ಹೋಗಿ ಕುಳಿತು ಆ ರೈತರ ಹತ್ತಿರ ಮಾತನಾಡಿ ನೀನು ಇಷ್ಟು ಕಟ್ಟಿಗೆಯನ್ನು ಉಪಯೋಗಿಸುತ್ತೀಯೆ, ಈ ರೀತಿ ಕಟ್ಟಿಗೆಯನ್ನು ಉಪಯೋಗಿಸುವುದರಿಂದ ಮರಗಳು ಇಷ್ಟು ಹಾಳಾಗುತ್ತಿದೆ. ಪರಿಸರದ ಮೇಲೆ ಇಷ್ಟು ದುಷ್ಪರಿಣಾಮವಾಗುತ್ತಾ ಇದೆ. ಈ ಕಾಡು ನಿನ್ನದು. ಇದನ್ನು ನೀನು ರಕ್ಷಣೆ ಮಾಡಿಕೊಂಡರೆ ನಿನ್ನನ್ನು ಅದು ರಕ್ಷಣೆ ಮಾಡುತ್ತದೆ ಎಂದು ಒಂದು ಒಳ್ಳೆಯ ರೀತಿಯಲ್ಲಿ ಅವರಿಗೆ ಹೇಳಿದರೆ ಖಂಡಿತವಾಗಿಯೂ ಇದನ್ನು ಮಾಡುತ್ತಾರೆ. ಒಂದು ಎಂದರೆ ಬಹಳ ಪ್ರಮುಖವಾಗಿ ಅರಣ್ಯ ಇಲಾಖೆ ನಮ್ಮ ಗಾರ್ಡ್‌ಗಳು ಬಂದರೆ ಹಳ್ಳಿಗಳಿಗೆ ಗಾರ್ಡ್ ಬಂದರೆ, ರೇಂಜರ್ ಬಂದರೆ ಜನರು ಹೆದರಿ ಓಡಿಹೋಗುತ್ತಾರೆ. ಏನೋ ಒಂದು ರೀತಿ ರಾಕ್ಷಸರು ಬಂದಂತೆ ಆಗುತ್ತದೆ. ನಮ್ಮ ಅರಣ್ಯ ಇಲಾಖೆಗೂ, ಸಾಮಾನ್ಯ ಜನರಿಗೂ ಬಾಂಧವ್ಯ ಇಲ್ಲ ವೈರತ್ವದಿಂದ ನೋಡುತ್ತಾರೆ. ಇನ್ನು ನಮ್ಮ ಜನರು ಭಯದಿಂದ ಓಡಾಡುತ್ತಾರೆ. ಇದಲ್ಲ, ಇವತ್ತು ಅರಣ್ಯಾಧಿಕಾರಿಗಳಿಗೆ ದಯ ಮಾಡಿ ಹೇಳಬೇಕು ನಿಮ್ಮ ಗತ್ತು, ಗೈರತ್ವಗಳನ್ನು ಬಿಟ್ಟು ಜನರ ಹತ್ತಿರ ಹೊಗಿ ಕುಳಿತು ಮಾತನಾಡಬೇಕು. ಸೌಹಾರ್ದಯುತವಾಗಿ ಹೋಗಿ ಅವರ ಜೊತೆಯಲ್ಲಿ ಸಂಬಂಧವನ್ನು ಕಾಪಾಡಿಕೊಳ್ಳಬೇಕು. ಇದನ್ನು ನೀವು ಅರಣ್ಯಾಧಿಕಾರಿಗಳಿಗೆ ಇವತ್ತು ಕಲಿಸಿಕೊಡಬೇಕಾಗುತ್ತದೆ. ಜನರು ಓಡಬಾರದು. ಜನರಿಗೂ ಅನಿಸಬೇಕು. ನನ್ನ ಗೆಳೆಯ ಇವನು. ನನಗೊಬ್ಬರು ಮಾರ್ಗದರ್ಶಕರು ಇವರು. ನನಗೆ ಕಾಡನ್ನು ಉಳಿಸುವುದಕ್ಕೆ ಹೇಳುತ್ತಾರೆ, ಪರಿಸರವನ್ನು ಕಾಪಾಡುವುದಕ್ಕೆ ಹೇಳುತ್ತಾರೆ. ನನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಹೇಳುತ್ತಾರೆ. ನನ್ನ ಜೀವನವನ್ನು ಸುಲಲಿತ ಮಾಡುವುದಕ್ಕೆ ಮಾರ್ಗದರ್ಶನವನ್ನು ನೀಡುತ್ತಾರೆ ಎನ್ನುವಂಥ ಒಂದು ಭಾವನೆ ನಿರ್ಮಾಣವಾದ ದಿವಸ ನಿಮಗೆ ಕಾಡಿನ ನಾಶ ಕಡಿಮೆಯಾಗುತ್ತದೆ. ಇದನ್ನು ತಾವು ಮರೆಯಬಾರದು. ಈ ರೀತಿಯಲ್ಲಿ ಅವರನ್ನು ಎಜುಕೇಟ್ ಮಾಡುವ ಪ್ರಯತ್ನ ಇವತ್ತು ನಿಮ್ಮ ಕಡೆಯಿಂದ ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸಾಕಷ್ಟು ಸಾಲವನ್ನು ತಂದಿದ್ದೀರಿ. ಬಹಳ ಸಾಲವನ್ನು ವಿದೇಶಗಳಿಂದ ತರುತ್ತಿದ್ದೀರಿ. ಒಂದು ಚಿಕ್ಕ ಉದಾಹರಣೆಯನ್ನು ಹೇಳುತ್ತಿದ್ದೇನೆ. ಪೂರ್ವ ವಲಯ ಅರಣ್ಯ ಮತ್ತು ಪರಿಸರ ಯೋಜನೆ ಎಂದು ಹೇಳಿ ಇದೆ. ಅದಕ್ಕೆ 17 ಜಿಲ್ಲೆಯ 134 ತಾಲ್ಲೂಕುಗಳನ್ನು ಆ ವ್ಯಾಪ್ತಿಗೆ ಸೇರಿಸುತ್ತಾರೆ. ಅದರ ಗುರಿ 4,70,500 ಹೆಕ್ಟೇರ್ ಪ್ರದೇಶಗಳಲ್ಲಿ ಅರಣ್ಯಾಭಿವೃದ್ಧಿಯನ್ನು ಮಾಡತಕ್ಕಂಥದ್ದು. ಇದರಲ್ಲಿ 3 ಲಕ್ಷ ಹೆಕ್ಟೇರ್ ಖಾಸಗಿ ಭೂಮಿಯಲ್ಲಿ ಅರಣ್ಯವನ್ನು ಬೆಳೆಸುವುದು. 1 ಲಕ್ಷದ 70 ಸಾವಿರ ಹೆಕ್ಟೇರ್ ಕಾದಿಟ್ಟ ಪ್ರದೇಶದಲ್ಲಿ ಅರಣ್ಯವನ್ನು ಅಭಿವೃದ್ಧಿ ಮಾಡುವುದು. ಈ ಹೆಸರಿನಲ್ಲಿ ಜಪಾನ್‌ನಿಂದಾಗಿ 1996-97ರಲ್ಲಿ 508.54 ಕೋಟಿ ರೂಪಾಯಿಗಳನ್ನು ಸಾಲವಾಗಿ

ನಾವು ಪಡೆದಿದ್ದೇವೆ. ಉಳಿದಿರುವುದು ನೀವು ವೆಚ್ಚ ಮಾಡುವುದು 58.01 ಕೋಟಿ ರೂಪಾಯಿಗಳನ್ನು ನೀವು ವೆಚ್ಚ ಮಾಡಬೇಕಾಗಿದೆ. 19-7-96 ಕ್ಕೆ ನೀವು ಒಪ್ಪಂದಕ್ಕೆ ಸಹಿಯನ್ನು ಹಾಕುತ್ತೀರಿ. ಇದರಲ್ಲಿ 40 ಭಾಗ ನೆರವು ಶೇಕಡ 60 ಭಾಗದ ಹಣಕ್ಕೆ ಶೇಕಡ 12 ಪರ್ಸೆಂಟ್ ಬಡ್ಡಿಯನ್ನು ಕೊಡಬೇಕು. ಇದು ಬಹಳ ಮಹತ್ವದ್ದು. ಈ 12 ಪರ್ಸೆಂಟ್ ಬಡ್ಡಿಯಲ್ಲಿ ಹಣವನ್ನು ತಂದು ನೀವು ಏನೇನು ಮಾಡಿದ್ದೀರಿ ಇದನ್ನು 30 ವರ್ಷದ ಅವಧಿಯಲ್ಲಿ ವಾಪಸ್ ಮಾಡಬೇಕಾಗಿದೆ. ಇದರಲ್ಲಿ ಅರಣ್ಯೀಕರಣ ಮಾಡಲಿಕ್ಕೆ ನೀವು ಉಪಯೋಗಿಸುವ ಹಣ, ಇಷ್ಟು ಹಣದಲ್ಲಿ ನಿಮ್ಮ ಅಗ್ರಿಮೆಂಟಿನ ಪ್ರಕಾರವೇ ಮಾಡುವುದು ಎಷ್ಟು ಶೇಕಡ 64.06 ಅರಣ್ಯೀಕರಣಕ್ಕೆ ನೀವು ಉಪಯೋಗಿಸುವ ಹಣ. ಕಟ್ಟಡ, ವಾಹನ ಕೊಳ್ಳುವುದಕ್ಕೆ ತರಬೇತಿಗೆ ಇವೆಲ್ಲದಕ್ಕೂ ನೀವು ಉಪಯೋಗಿಸುವ ಹಣ ಶೇಕಡ 31.68 ಇದರಲ್ಲಿ ಬಹಳ ಮಹತ್ವದ್ದು ನಮ್ಮ ಕೆಲವು ಅರಣ್ಯಾಧಿಕಾರಿಗಳು ಆಯ್ಕೆಯಾದವರು ವಿದೇಶದಲ್ಲಿ ಹೋಗಿ ತರಬೇತಿಯನ್ನು ಪಡೆಯಲಿಕ್ಕೆ, ಜಪಾನ್‌ನಲ್ಲಿ ಹೋಗಿ ಡಾಕ್ಟರೇಟ್ ಪಡೆಯುತ್ತಾರಂತೆ. ಅದಕ್ಕೂ ಕೂಡ 13 ಕೋಟಿ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದ್ದಾರೆ. ಒಟ್ಟು ವಿದೇಶದಲ್ಲಿ ತರಬೇತಿಗೆ 22 ಕೋಟಿ ರೂಪಾಯಿಗಳು ಜಪಾನ್ ನಲ್ಲಿ ಹೋಗಿ ಅರಣ್ಯದ ಬಗ್ಗೆ ಸಂಶೋಧನೆ ಮಾಡಿ ನಮ್ಮ ಅರಣ್ಯಾಧಿಕಾರಿಗಳು ಡಾಕ್ಟರೇಟ್ ಪಡೆಯಲಿಕ್ಕೆ 13 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಬಹುಶಃ ತಮ್ಮ ಗಮನಕ್ಕೆ ಇದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಖಾತೆಯನ್ನು ತಾವು ಇತ್ತೀಚಿಗೆ ವಹಿಸಿಕೊಂಡಿದ್ದೀರಿ. ದಯಮಾಡಿ ಇದರ ಬಗ್ಗೆ ಕೂಲಂಕುಷವಾಗಿ ಆಲೋಚನೆ ಮಾಡಿ. ನಾವು ಅರಣ್ಯ ಪ್ರದೇಶದಲ್ಲಿ ಹುಟ್ಟಿದ್ದೇವೆ. ನಮಗೆ ಅರಣ್ಯವನ್ನು ಬೆಳೆಯುವುದಕ್ಕೆ ಯಾರು ಹೇಳಿಕೊಡಬೇಕಾಗಿಲ್ಲ. ನಮ್ಮಲ್ಲಿ ತಂತ್ರಜ್ಞಾನ ಇದೆ, ನಮ್ಮಲ್ಲಿ ಅನೇಕ ಪರಿಸರ ವಿಜ್ಞಾನಿಗಳು ಇದ್ದಾರೆ. ಅನೇಕ ಅರಣ್ಯಾಧಿಕಾರಿಗಳು ಇವತ್ತು ವಿದೇಶದಲ್ಲಿರುವ ಜನರನ್ನು ಕರೆದುಕೊಂಡು ಬಂದು ತರಬೇತಿ ಕೊಡುವ ಶಕ್ತಿ ಇರುವ ಅರಣ್ಯಾಧಿಕಾರಿಗಳು ಇವತ್ತಿಗೂ ಕೂಡ ಕೆಲಸ ಮಾಡುತ್ತಿದ್ದಾರೆ. ಅಲ್ಲಿರುವವರು ದುಷ್ಟರು, ಭ್ರಷ್ಟರು ಎಂದು ನಾನು ಹೇಳುವುದಿಲ್ಲ. ಇವತ್ತು ಜಪಾನ್‌ಗೆ ಹೋಗಿ ಡಾಕ್ಟರೇಟ್ ಪದವಿ ಪಡೆಯಲಿಕ್ಕೆ 13 ಕೋಟಿ ರೂಪಾಯಿಗಳನ್ನು 12 ಪರ್‌ಸೆಂಟ್ ಬಡ್ಡಿಯ ಹಣದಲ್ಲಿ ನೀವು ಮೀಸಲಾಗಿಡುತ್ತೀರಿ ಎಂದರೆ ಈ ಯೋಜನೆಯನ್ನು ಯಾರು ತಯಾರು ಮಾಡಿದ್ದು? ಇದು ನಿಮ್ಮ ಗಮನಕ್ಕೆ ಬಂದಿದೆಯೇ? ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಜನರ ಪರಿವಾಗಿ ಈ ಸಾಲಕ್ಕೆ ಸಹಿಯನ್ನು ಹಾಕುವ ಮೊದಲು ಕುಳಿತು ಈ ಯೋಜನೆಯ ಬಗ್ಗೆ ಕೂಲಂಕುಷವಾಗಿರುವ ಚರ್ಚೆಯನ್ನು ಮಾಡಿದ್ದೀರಾ? ವಿದೇಶದಿಂದ ತಂದಿರುವ ಈ ಸಾಲ ನಮ್ಮ ಅರಣ್ಯಾಭಿವೃದ್ಧಿಗೆ ಎಷ್ಟರಮಟ್ಟಿಗೆ ಪೂರಕವಾಗುತ್ತದೆ? ಪ್ರಾಜೆಕ್ಟ್ ರಿಪೋರ್ಟ್ ಮಾಡುವಾಗ ಇದನ್ನು ನೋಡಿದ್ದೀರಾ? ಯಾವುದನ್ನೂ ನೋಡಿಲ್ಲ. ಗಮನಿಸಿಲ್ಲ. ನಿಮ್ಮ ಗಮನಕ್ಕೇ ಬರಲಿಲ್ಲ. ಅಧಿಕಾರಿಗಳು ಎಲ್ಲೋ ದಂತಗೋಪುರದ ಕೆಳಗಡೆ ಕುಳಿತು ಪ್ರಾಜೆಕ್ಟನ್ನು ತಯಾರು ಮಾಡುತ್ತಾರೆ. ನಿಮಗೆ ಕನ್‌ವಿನ್ಸ್ ಮಾಡುತ್ತಾರೆ. ನೀವು ಹೋಗಿ ಸಹಿ ಮಾಡುವುದೇ ನಮ್ಮ ಬಹಳ ದೊಡ್ಡತನ ಎಂದು ಹೇಳಿ ಪತ್ರಿಕಾ ಹೇಳಿಕೆಯನ್ನು ಕೊಡುತ್ತೀರಿ. 500 ಕೋಟಿ ರೂಪಾಯಿಯನ್ನು ನಾವು ವಿದೇಶದಿಂದ ನೆರವು ತಂದಿದ್ದೇವೆ. ಅರಣ್ಯವನ್ನು ಬೆಳೆಸುತ್ತೇವೆ ಅರಣ್ಯವನ್ನು

ಉಳಿಸುತ್ತೇವೆ ಎಂದು ಹೇಳಿ ಹೇಳಿಕೆಯನ್ನು ಕೊಟ್ಟು ಜನರನ್ನು ಮಂಪರಿನಲ್ಲಿಡುವ ಕೋಮಾದಲ್ಲಿಡುವ ಕೆಲಸವನ್ನು ಮಾತ್ರ ನಿಮ್ಮ ಕಡೆಯಿಂದ ಮಾಡುತ್ತಿದ್ದೀರಿ. ಪ್ರಚಾರವನ್ನು ಪಡೆಯುತ್ತಿದ್ದೀರಿ. ಪ್ರಾಮಾಣಿಕವಾಗಿ ನೀವೇನು ಈ ಹಣವನ್ನು ಉಪಯೋಗಿಸಿ ಈ ಅರಣ್ಯವನ್ನು ಬೆಳೆಯಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, 1989-90ರಲ್ಲಿ ಎಷ್ಟು ಕೋಟಿ ರೂಪಾಯಿಗಳು ಅರಣ್ಯ ಅಭಿವೃದ್ಧಿ ಮಾಡುವುದಕ್ಕೆ ಗ್ರೇಟ್ ಬ್ರಿಟನ್‌ನಿಂದ ಬಂದಿದೆ? ವೆಸ್ಟರ್ನ್ ಘಾಟ್ಸ್‌ಗೆ. ಆ ಹಣವನ್ನು ಯಾವುದಕ್ಕೆ ಉಪಯೋಗಿಸಿದ್ದಾರೆ? ಅದು ಗೊತ್ತಾಗಬೇಕು. ಆಮೇಲೆ ಮಾನ್ಯ ಜ್ಞಾನೇಂದ್ರರವರು ಹೇಳಿದಂತೆ ಈ ಹಣವನ್ನು ಉಪಯೋಗಿಸಿಕೊಂಡು ಹೊರದೇಶಕ್ಕೆಲ್ಲಾ ಹೋಗಿದ್ದಾರೆ. ಬಿಲ್ಡಿಂಗ್ಸ್ ಮಾಡಿದ್ದಾರೆ. ರಸ್ತೆಗಳನ್ನು ಮಾಡಿದ್ದಾರೆ. ಆದರೆ ಆಕ್ಚುಯಲ್ ಆಗಿ ಮರಗಳನ್ನು ಬೆಳೆಸಬೇಕಾಗಿದ್ದು ಅದನ್ನು ಬೆಳೆಸಿಲ್ಲ. ಇವರುಗಳು ಮರಗಳನ್ನು ಬೆಳೆಸುವುದು ಎಷ್ಟರಮಟ್ಟಿಗೆ ಅಭಿವೃದ್ಧಿಯಾಗುತ್ತಿದೆ, ಅದನ್ನು ತಿಳಿಸಬೇಕು. ಇವತ್ತು ಕಾಡಿನಲ್ಲಿ ಅರಣ್ಯ ಸಂಪತ್ತು ಹಾಳಾಗಿದೆ ಪಕ್ಷಿ ಸಂಪತ್ತು ಹೋಗಿದೆ. ಖನಿಜ ಸಂಪತ್ತು ಹೋಗುತ್ತಿದೆ, ನಮ್ಮ ಸಂಪತ್ತು ಹೋಗುವ ಪರಿಸ್ಥಿತಿಗೆ ಬಂದಿದೆ. ಇದು ಬಹಳ ಮುಖ್ಯವಾದ ವಿಚಾರ. ಇದರ ಬಗ್ಗೆ ಕೂಲಂಕುಷ ಚರ್ಚೆಯಾಗಬೇಕು. 1989-90ರಲ್ಲಿ ಎಷ್ಟು ಕೋಟಿರೂಪಾಯಿಗಳು ಬಂತು ಎಂದು ತಿಳಿಸಬೇಕು. ಆ ಹಣವನ್ನು ಯಾವುದಕ್ಕೆ ಉಪಯೋಗಿಸಿದ್ದಾರೆ, ಅದನ್ನು ತಿಳಿಸಬಬೇಕು.

11.00 ಎ.ಎಂ.

ಶ್ರೀ ಅರಗ ಜ್ಞಾನೇಂದ್ರ : ಈ ಯೋಜನೆಯಲ್ಲಿ ನೀವು ಇದುವರೆವಿಗೂ ಯಾವ ರೀತಿ ಕೆಲಸ ಮಾಡಿದ್ದೀರೆಂಬುವುದರ ಬಗ್ಗೆ ಒಂದು ಚಿಕ್ಕ ಸ್ಯಾಂಪಲ್ ಆಗಿ ಉದಾಹರಣೆ ತೋರಿಸುತ್ತೇನೆ, ಇದು ದೊಡ್ಡ ಉದಾಹರಣೆಯೆಂದು ನಿಮಗೆ ಅನ್ನಿಸದರಿಬಹುದು. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಎಡ್ಡಳ್ಳಿ ಎಂಬಳ್ಳಿ ಆಡುಗಳನ್ನು ಮೇಯಿಸುವುದಕ್ಕೋಸ್ಕರ ಜಾಲಿ ಮರಗಳನ್ನು ಬೆಳೆಸುವ ಪರಿಪಾಠ ಹಳ್ಳಿಗರಿಗೆ ಇದೆ. ಇದರ ಬಗ್ಗೆ ಇನ್ನೊಂದು ಉದಾಹರಣೆ ಕೊಡುವುದಾದರೆ, "ಬಿಜಾಪುರ ಜಿಲ್ಲೆಯ ಕಲ್ಲಳ್ಳಿ ಎಂಬಲ್ಲಿ ಮೂವತ್ತು ವರ್ಷಗಳ ಹಿಂದೆ ಹಳ್ಳಿಗಳು ಬರ ಎಂದು ವಲಸೆ ಹೋಗಲು ಆರಂಭಿಸಿದರು, ಮುಖಂಡರಿಗೆ ಚಿಂತೆಯಾಯಿತು, ಇಪ್ಪತ್ತು ವರ್ಷಗಳ ಹಿಂದೆ ಹಳ್ಳಿಗರೆಲ್ಲರೂ ಸೇರಿಕೊಂಡು ಸುಮಾರು 400 ಹೆಕ್ಟೇರ್‌ಗಳಷ್ಟು ಜಾಗದಲ್ಲಿ ಮನುಷ್ಯರ್‍ಯಾರು ಕೂಡ ಅಲ್ಲಿಗೆ ಹೋಗಬಾರದು, ಮತ್ತು ಒಂದು ಗಿಡವನ್ನೂ ಕೂಡ ಕಡಿಯ ಬಾರದಂದು" ನಿಶ್ಚಯಿಸಿದ ನಂತರ ಈಗ ಆ ಭಾಗದಲ್ಲಿ ಸಾಕಷ್ಟು ಗಿಡ-ಮರಗಳೆಲ್ಲಾ ಬೆಳೆದಿದೆ. ಇಂತಹ ಹಳ್ಳಿಗಳಿಗೆ ನೀವು ಹೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೀರಿ, ಹಳ್ಳಿಯವರನ್ನೆಲ್ಲಾ ಸೇರಿಸಿಕೊಂಡು ಭಾಷಣ ಮಾಡುತ್ತೀರಿ, ಅರಣ್ಯಾಧಿಕಾರಿಗಳಿಗೆ ಹಳ್ಳಿಯವರೇ ತರಬೇತಿ ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ನೀವು ಅರಣ್ಯ ಸಮಿತಿಯೆಂದು ರಚಿಸುತ್ತಿದ್ದೀರಿ, ಸಮಿತಿ ರಚಿಸಿ ಮಜಾ ಮಾಡುವುದಕ್ಕೆಂದು ಒಂದು ಕಾರ್ಯಕ್ರಮಕ್ಕೆ ಐದು ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಅಲ್ಲಿಗೆ ಅರಣ್ಯಾಧಿಕಾರಿಗಳು

ಮತ್ತು ಸ್ಥಳೀಯರೆಲ್ಲರೂ ಹೋಗಿ ಒಂದು ದೊಡ್ಡ ಸಭೆ ನಡೆಸುತ್ತಾರೆ. ಸಭೆಗೆ ಒಂದೂವರೆ ಸಾವಿರ ರೂಪಾಯಿಗಳು ಖರ್ಚಾಗುತ್ತದೆ, ಇನ್ನು ಮೂರುವರೆ ಸಾವಿರರೂಪಾಯಿಗಳು ಉಳಿದುಕೊಂಡಿದೆಯೆಂದು ವರದಿ ಹೇಳುತ್ತದೆ. ಅದು ಎಷ್ಟರಮಟ್ಟಿಗೆ ಇದೆಯೆಂದರೆ, ಈ ರೀತಿಯ ಸಭೆ-ಸಮಾರಂಭಗಳನ್ನು ನಡೆಸಿ ಮೋಜು ಮಾಡುವುದಕ್ಕಾಗಿ ಈ ಹಣವನ್ನು ವಿನಿಯೋಗಿಸಿದರೆ, ವಿದೇಶಿ ಹಣವನ್ನು ತಂದು ಸಾರ್ಥಕಪಡಿಸಿಕೊಳ್ಳಬೇಕಾದರೆ ನಮ್ಮ ಮೇಲೆ ಬಹಳ ದೊಡ್ಡ ಹೊಣೆಗಾರಿಕೆ ಇರಬೇಕಾಗಿತ್ತು. ನಮ್ಮ ಸ್ವಯಾರ್ಜಿತ ಆಸ್ತಿಯಂತಿರುವ ಹಣವನ್ನು ನಾವು ಹೇಗೆ ಬೇಕಾದರೂ ಉಪಯೋಗಿಸಿಕೊಂಡು ಮಜಾ ಮಾಡಬಹುದೆಂದರೆ, ಸಾಲವಾಗಿ ತಂದಿರುವಂಥ ಹಣವನ್ನು ಮೂವತ್ತು ವರ್ಷಗಳ ನಂತರ ಬಡ್ಡಿ ಸಹಿತಿ ಮರುಪಾವತಿ ಮಾಡಬೇಕಾಗಿದೆ. ಇದಕ್ಕಾಗಿ ಈ ರಾಜ್ಯದ ಸಾಮಾನ್ಯ ವ್ಯಕ್ತಿಯನ್ನು ಕೂಡ ಸಾಲಗಾರನನ್ನಾಗಿ ಮಾಡುತ್ತೇವೆ, ಆತನ ತಲೆ ಮೇಲೆ ಬಹಳ ದೊಡ್ಡ ಭಾರವನ್ನು ಹೊರಿಸುತ್ತಿದ್ದೇವೆ. ಆ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದೇ -ವೆಂಬುದಕ್ಕೆ ನಿಮ್ಮ ಜಾಗ್ರತೆಯನ್ನು ಇಲ್ಲಿ ಕಾಣಲು ಸಾಧ್ಯವಿಲ್ಲ. ಸಾಮಾನ್ಯ ಜನರಿಗೆ ಅರಣ್ಯ ನಿನ್ನದಾಗಿದ್ದು, ಇದರಲ್ಲಿ ನಿನ್ನ ಪಾಲು ಇದೆಯೆನ್ನುವ ಬಗ್ಗೆ ಪ್ರಜ್ಞೆ ಬೆಳೆಸಬೇಕಾಗಿದೆ. ಯಾರಾ ಕೂಡ ಲಾಭ ಇಲ್ಲದೆ ಕೆಲಸ ಮಾಡುವುದಿಲ್ಲ. ರಾಜಕಾರಣಿ ಇರಬಹುದು, ಅಧಿಕಾರಿ ಇರಬಹುದು, ವ್ಯಾಪಾರಿ ಇರಬಹುದು, ಎಲ್ಲರಿಗೂ ಲಾಭ ಬರುತ್ತದೆ. ಹಳ್ಳಿಯಲ್ಲಿ ಬದುಕುತ್ತಿರುವ ನನಗೆ ಕಾಡಿನಿಂದ ಲಾಭವಿದೆಯೆಂದು ಬೇಕಾಬಿಟ್ಟಿ ಕಡಿಯುವುದನ್ನು ತಪ್ಪಿಸಬೇಕೆಂದಾದರೆ ಇವೊತ್ತು ಇದರಲ್ಲಿ ಬಂದಿರುವಂಥ ಒಂದು ಯೋಜನೆಯೆಂದರೆ ಗ್ರಾಮ ಅರಣ್ಯ ಸಮಿತಿಗಳು. ನೀವು ಜಂಟಿ ಅರಣ್ಯ ಸಮಿತಿಗಳನ್ನು ರಚಿಸುತ್ತಿದ್ದು, ಇದು ಬಹಳ ಒಳ್ಳೆಯ ಕಾನ್‌ಸೆಪ್ಟ್ ಆಗಿದ್ದು, ನನ್ನ ತಾಲ್ಲೂಕಿನಲ್ಲೂ ಬಹಳ ಮಟ್ಟಿಗೆ ಕೆಲಸ ಮಾಡಬೇಕೆಂದು ಏನು ನಿಶ್ಚಯಸಿದ್ದೆವು, ಅಷ್ಟು ಮಾಡುತ್ತಿಲ್ಲ. ನಿಮ್ಮ ಅರಣ್ಯಾಧಿಕಾರಿಗಳು ಅದಕ್ಕೆ ವಿಶೇಷವಾದ ಪ್ರೋತ್ಸಾಹ ಕೊಡುತ್ತಿಲ್ಲ. ನಾನು ಅರಣ್ಯ ಸಮಿತಿಯಲ್ಲಿದ್ದಾಗಲೂ ಇದರ ಬಗ್ಗೆ ಚರ್ಚಿಸಿ ಅಧಿಕಾರಿಗಳಿಗೆ ಸಾಕಷ್ಟು ಹೇಳಿದರೂ ಕೂಡ ಇದರ ಬಗ್ಗೆ ಜಾಗೃತಿ ನಿರ್ಮಾಣವಾಗಲಿಲ್ಲ. ಏಕೆಂದರೆ, ಜಂಟಿ ಅರಣ್ಯ ಯೋಜನೆ ಎಂದರೆ ಅದರಲ್ಲಿ ಯಾವ ರೀತಿ ಹಣ ವಿನಿಯೋಗಿಸಬೇಕು? ಯಾವ ರೀತಿ ಅರಣ್ಯ ಸಂಪತ್ತನ್ನು ಉಪಯೋಗಿಸಿಕೊಳ್ಳಬೇಕು? ಮುಂತಾದವುಗಳ ಬಗ್ಗೆ ಪ್ಲಾನ್ ತಯಾರಿಸಿ ಮನೆಗಳನ್ನು ಕಟ್ಟುವುದಕ್ಕೆ ಮರಮಟ್ಟುಗಳು, ಜಾಗವನ್ನು ಅತಿಕ್ರಮ ಪ್ರವೇಶ ಮಾಡದಿದ್ದ ಹಾಗೆ ಹೇಗೆ ತಡೆಗಟ್ಟಬೇಕೆಂಬುದರ ಬಗ್ಗೆ ಅರಣ್ಯ ಇಲಾಖೆಯವರು ಮಾಡದಿರುವ ಕೆಲಸವನ್ನು ಜಂಟಿ ಅರಣ್ಯ ಸಮಿತಿಗಳು ಬಹಳ ಶಕ್ತಿಯುತವಾಗಿ ಮಾಡಬಹುದಾಗಿತ್ತು. ಆದರೆ, ಜಂಟಿ ಅರಣ್ಯ ಸಮಿತಿಗಳನ್ನು ಅರಣ್ಯಾಧಿಕಾರಿಗಳು ನಿಷ್ಪ್ರಯೋಜನ ಮಾಡಿರುವುದನ್ನು ತಾವು ಮರೆಯಬಾರದು. ಇವೊತ್ತು ಜಂಟಿ ಸಮಿತಿ ಮಾಡುವುದಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಗಿಸಿ ಈಗ ಶಿವಮೊಗ್ಗಕ್ಕೆ ಕಾಲಿಟ್ಟಿದ್ದೀರಿ. ಎಲ್ಲವನ್ನೂ ಸಭೆ ಸೇರಿಸಿ ಊಟ ಹಾಕಿಸಿದ ನಂತರ ಒಂದು ಪ್ಲಾನ್ ತಯಾರಿಸಿ ಅದರಂತೆ ಅರಣ್ಯ ಬೆಳೆಯಬೇಕು, ಅರಣ್ಯವನ್ನು ಅರಣ್ಯಾಧಿಕಾರಿಗಳೇ ಬೆಳೆಯುವುದು. ಅಲ್ಲದೆ, ಇಂತಹ ಸರ್ವೆ ನಂಬರಿನ ಜಾಗದ ಇಷ್ಟು ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು, ಇಂತಹ ಗಿಡಗಳನ್ನು ನೆಡತಕ್ಕದೆಂದು ಜಂಟಿ

ಅರಣ್ಯ ಸಮಿತಿಯ ಅಧ್ಯಕ್ಷರಿಂದ ನಿರ್ಣಯ ಬರೆಸುತ್ತೀರಿ. ನಿರ್ಣಯ ಅನುಷ್ಠಾನವಾಗಿರುವುದಕ್ಕೆ ಸದರಿ ಸಮಿತಿಯರಿಗೆ ನೀವು ಆದ್ಯತೆ ಕೊಡುವುದಿಲ್ಲ. ಜಂಟಿ ಅರಣ್ಯ ಸಮಿತಿಗೆ ಸರ್ಕಾರದ ಅರಣ್ಯ ಇಲಾಖೆ ವತಿಯಿಂದ ಹಣ ಕೊಡುತ್ತೀರಿ. ಹಣವನ್ನು ಜಂಟಿ ಅರಣ್ಯ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಫಾರೆಸ್ಟರ್ ಇವರ ಜಂಟಿ ಖಾತೆಯಲ್ಲಿ ಇಡಬೇಕೆಂದು ತಿಳಿಸಿದೆ. ಅವರುಗಳು ಅಲ್ಲಿದ್ದುಕೊಂಡು ಪ್ಲಾನ್ ಮಾಡಿ ಕೆಲಸ ಮಾಡಬೇಕೆಂದಿದೆ, ಆದರೂ ಏನೂ ಮಾಡುವುದಿಲ್ಲ. ಏಕೆಂದರೆ, ನಿಮ್ಮ ಅಧಿಕಾರಿಗಳಿಗೆ ಬಹಳ ವರ್ಷಗಳಿಂದ ಒಂದು ಕೆಟ್ಟ ಚಾಳಿ ಇದೆ. ಡಿ.ಎಫ್.ಓ. ಚೆಕ್ ಕೊಡುವಾಗ ತನ್ನ ಪರ್ಸೆಂಟೇಜ್ (ಕಮೀಷನ್) ಮುರಿದು ಕೊಂಡು ಎ.ಸಿ.ಎಫ್.ಗೆ ಕೊಡುವುದು. ಅದೇ ರೀತಿ ಎ.ಸಿ.ಎಫ್. ರೇಂಜರ್‌ಗೆ ಮತ್ತು ರೇಜರ್‌ನಿಂದ ಫಾರೆಸ್ಟರ್‌ಗೆ ತನ್ನ ಪರ್ಸೆಂಟೇಜ್ ಮುರಿದುಕೊಂಡು ಕೊಡುತ್ತಾರೆ. ಹಣವನ್ನು ಜಂಟಿ ಖಾತೆಗೆ ಜಮಾ ಮಾಡಿದರೆ ಪರ್ಸೆಂಟೇಜ್ ವ್ಯವಹಾರಕ್ಕೆ ಧಕ್ಕೆ ಬರುತ್ತದೆಂದು ಇವೊತ್ತು ಕೂಡ ಈ ದಾಳಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆಯೇ ವಿನಾ ಬೇರೇನೂ ಕೆಲಸ ಆಗಿಲ್ಲ. ಜಂಟಿ ಅರಣ್ಯ ಸಮಿತಿಗಳು ನಿಷ್ಪ್ರಯೋಜಕವಾಗುವುದಕ್ಕೆ ಮೊದಲ ಕಾರಣವೇನೆಂದರೆ, ಹಿಂದಿನ ಅರಣ್ಯ ಮಂತ್ರಿಗಳು ಕುವೆಂಪು ಬಯೋ ರಿಸರ್ವ್ಡ್ ಫಾರೆಸ್ಟ್‌ನಲ್ಲಿ ನಾವು ಹಮ್ಮಿಕೊಂಡಿದ್ದ ಒಂದು ಕಾರ್ಯಕ್ರಮಕ್ಕೆ ಬಂದಿದ್ದಾಗ ಅವೊತ್ತಿನ ಸಭೆಯಲ್ಲಿ ನಾನು ಹೇಳಿದೆ. ಆದರೆ, ಇವೊತ್ತು ಒಬ್ಬ ಅರಣ್ಯಾಧಿಕಾರಿಗಳು ಏನು ಹೇಳುತ್ತಾರೆಂದರೆ, ಜಂಟಿ ಅರಣ್ಯ ಸಮಿತಿಯವರು ಮಾಡಿದರೆ ನಷ್ಟವಾಗುತ್ತದಾದ್ದರಿಂದ ನಾವು ಮಾಡುತ್ತೇವೆಂದು. ನಮ್ಮ ಹಳ್ಳಿಯವರಿಗೆ ಹೊಂಡ ತೆಗೆಯುವುದಕ್ಕೆ ಬರುವುದಿಲ್ಲವೇ? ಗಿಡ ನೆಡುವುದಕ್ಕೆ ಬರುವುದಿಲ್ಲವೇ? ನಷ್ಟವಾಗುವುದು ಹೇಗೆ? ನಿಮ್ಮ ಅರಣ್ಯಾಧಿಕಾರಿಗಳು ಬಯಲುಸೀಮೆ ತಾಲ್ಲೂಕುಗಳಿಂದ ಜನರನ್ನು ಕರೆದುಕೊಂಡು ಬಂದು ಹೊಂಡಗಳನ್ನು ತೆಗೆಸಿ ಅದರ ಲಾಭ ಗಿಟ್ಟಿಸಿಕೊಳ್ಳುತ್ತಾರೆ. ಇದರಿಂದ ಲಾಭವಾಗುತ್ತದೆಂದಾದರೆ ನಮ್ಮ ಹಳ್ಳಿಯವರಿಗೆ ಕೊಡಿ, ಸ್ವತಃ ಕೃಷಿ ಕಾರ್ಮಿಕರಾಗಿರುವ ಜಂಟಿ ಅರಣ್ಯ ಸಮಿತಿಯ ಅಧ್ಯಕ್ಷರಿಗೆ ಇದರ ಬಗ್ಗೆ ಪ್ರಜ್ಞೆ ಇಲ್ಲವೆಂಬ ಮಾತನ್ನು ನಿಮ್ಮ ಅರಣ್ಯಾಧಿಕಾರಿಗಳು ಹೇಳುತ್ತಾರೆಂದರೆ ಅವರ ಮಾತುಗಳ ಬಾಲಿಶವಾಗಿದ್ದು ನಮ್ಮನ್ನು ಈ ದಿಸೆಯಲ್ಲಿ ಬಹಳಷ್ಟು ಹಳಿ ತಪ್ಪಿಸುತ್ತಿರುವುದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಮತ್ತು ಜಂಟಿ ಅರಣ್ಯ ಸಮಿತಿಗೆ ವಿಶೇಷವಾದ ಆದ್ಯತೆ ಕೊಡಬೇಕು. ಇನ್ನೊಂದು ವಿಚಾರವೆಂದರೆ, ನಮ್ಮ ಕಾಂಪೌಂಡಿನೊಳಗೆ, ಜಮೀನಿನೊಳಗೆ ನಾನು ಬೆಳೆಸಿರತಕ್ಕಂಥ ರಕ್ಷಿಸಿರತಕ್ಕಂಥ ಮರಗಳು ನನಗೆ ಮನೆ ಕಟ್ಟುವುದಕ್ಕೆ, ನೇಗಿಲು ಕುಂಟೆ ಕಡಿಯುವುದಕ್ಕೆ ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕಾಗಿ ಡಿ.ಎಫ್.ಓ. ಹತ್ತಿರ ಹೋಗಬೇಕು, ಸರ್ವೆಯರ್ ಬರಬೇಕು, ಅದಕ್ಕೆ ಹತ್ತಾರು ದಾಖಲಾತಿಗಳನ್ನು ಒದಗಿಸಬೇಕು, ರೆವಿನ್ಯೂನವರು ಬಂದು ಇನ್ಸ್‌ಪೆಕ್ಷನ್ ಮಾಡಬೇಕು. ಇವೆಲ್ಲಾ ಯಾವ ಸೌಭಾಗ್ಯಕ್ಕೆ? ಅದಕ್ಕೋಸ್ಕರ ಇವೊತ್ತು ನಮ್ಮ ರೈತರು ಏನು ಮಾಡುತ್ತಾರೆಂದರೆ, ನಾವು ಬೆಳೆದಿರುವ, ರಕ್ಷಿಸಿರುವ ಮರ ನಮಗೆ ಸಿಗುವುದಿಲ್ಲವೆಂದಾದರೆ ನಾವು ಬೆಳೆಸುವುದು ಬೇಡವೆಂದು, ಕಾಡಿಗೆ ಹೋಗಿ ಕಡಿದುಕೊಂಡು ಬರುವುದೇ ಅವರಿಗೆ ಮುಖ್ಯವಾಗುತ್ತದೆ. ನಿಮ್ಮ ಇಲಾಖೆಯಲ್ಲಿ ಎಷ್ಟು ಜನ ಗಾರ್ಡ್ ಇದ್ದಾರೆ? ಎಷ್ಟು ಹೆಕ್ಟೇರ್‌ಗಳಿಗೆ ಒಬ್ಬರಂತೆ ಕಾವಲಿಗೆ ಗಾರ್ಡಗಳನ್ನು

ಕೊಡುತ್ತೀರಿ? ಗಾರ್ಡ್ ಅಥವಾ ರೇಂಜರ್ ನಾಲ್ಕು ಕೈಗಳನ್ನು, ಕಣ್ಣುಗಳನ್ನು ಹೊಂದಿರುವ ದೈವಸಂಭೂತ ಮನುಷ್ಯನೇನಲ್ಲ. ಕಾಡಿನ ಯಾವುದಾದರೂ ಮೂಲೆಯಲ್ಲಿ ಕಳ್ಳತನವಾಗುತ್ತಿದೆ, ಮರ ಕಡಿಯುತ್ತಿದ್ದಾರೆಂದರೆ ಇಲ್ಲಿ ಕುಳಿತುಕೊಂಡು ಆತ ಊಹಿಸುವುದಕ್ಕೂ ಸಾಧ್ಯವಿಲ್ಲ. ಆದುದರಿಂದ, ಇದು ನನ್ನ ಆಸ್ತಿ, ನನಗೂ ಇದರಲ್ಲಿ ಲಾಭ ಸಿಗುತ್ತದೆಂದಾದರೆ ಖಂಡಿತವಾಗಿಯೂ ಆತ ಮರ ಬೆಳೆಸುತ್ತಾನೆ. ಇದರಲ್ಲಿ ಎಕ್ಸ್‌ಟ್ರಾ ಸಬ್ಸಿಡಿಯನ್ನು ಆತನಿಗೆ ಕೊಡುವ ಅವಶ್ಯಕತೆಯಿಲ್ಲ, ಆತ ನೆಟ್ಟಂಥ ಮರವನ್ನು ಕಡಿದುಕೊಳ್ಳಲು ಆತನಿಗೆ ಹಿಂಸೆ ಕೊಡದಿದ್ದರೆ ಸಾಕು. ಇವೊತ್ತು ಅತ್ಯಂತ ಚಿತ್ರಹಿಂಸೆಯಾಗುತ್ತಿದೆ, ತಾನು ಬೆಳೆದಂಥ ಮರ ತನ್ನ ವಶಕ್ಕೆ ತೆಗೆದುಕೊಳ್ಳಲು 2-3 ವರ್ಷಗಳು ಬೇಕಾಗುತ್ತದೆ. ನಾನು ಶಾಸಕನಾಗಿದ್ದು ನನ್ನ ತೋಟದಲ್ಲಿ ಬೆಳಸಿರುವ ನಂದಿ, ಮತ್ತಿ, ತೇಗದ ಮರಗಳನ್ನು ಕಡಿದುಕೊಳ್ಳುವುದಕ್ಕೆ ನನಗೆ ಖಂಡಿತವಾಗಿಯೂ ಅವಕಾಶ ಸಿಗುವುದಿಲ್ಲ. ಅದರ ಬಗ್ಗೆ ಒಂದು ಫಾರ್ಮೆಟ್ ಇಟ್ಟು ಕೊಂಡಿದ್ದು ಅರಣ್ಯಾಧಿಕಾರಿಗಳು ಅದನ್ನು ಎಲ್ಲಾ ಜಿಲ್ಲೆಗಳಿಗೂ ಕಳುಹಿಸಿಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್‌ನವರು ಒಂದು ಆದೇಶ ಹೊರಡಿಸಿ ಅದರಲ್ಲಿ 'ನಿಮ್ಮ ಆಸ್ತಿಯಲ್ಲಿ 90 ಸಿಎಫ್‌ಟಿ ನಾಟಾ ತೆಗೆದುಕೊಳ್ಳುವುದಕ್ಕೆ ಬೇಕಾಗಿರತಕ್ಕ ದಾಖಲಾತಿಗಳು ಎಂದು ತಿಳಿಸಿದ್ದಾರೆ. ಇವೆಲ್ಲವನ್ನೂ ನೋಡಿದಾಗ ನನ್ನ ಜೀವಮಾನದಲ್ಲಿ ಕೂಡ ನಾನು ಬೆಳೆದಿರುವಂಥ ಮರಗಳನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ಎಲ್ಲಾ ಕಾಡುಗಳನ್ನು ಗುತ್ತಿಗೆದಾರರಿಗೆ ಕೊಟ್ಟು 500 ರೂಪಾಯಿಗಳಿಗೋ, 1,000 ರೂಪಾಯಿಗಳಿಗೋ ಮರಗಳನ್ನು ಕಡಿದುಕೊಂಡು ಹೋಗೆಂದು ಹೇಳುತ್ತಾರೆ. ನಮ್ಮ ತೋಟಗಳ ಮನೆಗಳ ಮೇಲೆ ಬೀಳುವ ಸ್ಥಿತಿಯಲ್ಲಿರುವ ಕೆಲವು ಮರಗಳನ್ನೂ ಸಹ ಕಡಿಯುವುದಕ್ಕೆ ಅವಕಾಶ ಕೊಡುವುದಿಲ್ಲ. ಯಾವತ್ತಾದರೂ ಗಾಳಿ, ಮಳೆಯಿಂದ ಮರ ಬಿದ್ದು ನಾವು ಸತ್ತು ಹೋಗುವುದಕ್ಕಿಂತ ಯಾರಾದರೂ 500 - 1000 ರೂಪಾಯಿಗಳಿಗೆ ಕಡಿದುಕೊಂಡು ಹೋದರೆ ಸಾಕೆಂದು ಕೊಟ್ಟಷ್ಟು ಹಣ ಪಡೆದುಕೊಂಡು ಸುಮ್ಮನಾಗುತ್ತೇವೆ. ಅರಣ್ಯ ಗುತ್ತಿಗೆದಾರರಿಗೆ ಎನ್‌ಕರೇಜ್ ಮಾಡಬಾರದೆಂದಿದ್ದರೂ ಕೂಡ ನಿಮ್ಮ ಇಲಾಖೆ ಸಹಕಾರ ಕೊಡುತ್ತದೆ. ಅಲ್ಲದೆ, ಯಾವ ಅಧಿಕಾರಿಗಳಿಗೆ, ಅರಣ್ಯ ಸರ್ವೆಯರ್‌ಗೆ , ರೇಂಜರ್‌ಗೆ ಎ.ಸಿ.ಎಫ್.ಗೆ, ಮತ್ತು ಡಿ.ಎಫ್.ಓ.ಗೆ ಎಷ್ಟೆಷ್ಟು ಹಣ ಕೊಡಬೇಕೆಂದು ನಿಗದಿಯಾಗಿರುತ್ತದಾದ್ದರಿಂದ ಗುತ್ತಿಗೆದಾರರಿಗೆ ಹಣ ಕೊಟ್ಟು ಮಾಡಿಸಿಕೊಂಡು ಬರುತ್ತಾನೆ, ಇದರಿಂದಾಗಿ ಆತನಿಗೆ 8-15 ದಿವಸಗಳೊಳಗೆ ನಾಟಾ ಕಡಿದು ಸಾಗಿಸಲು ಪರ್ಮಿಟ್ ಸಿಗುತ್ತದೆಂದಾರೆ ಮರಗಳನ್ನು ಬೆಳೆಸಿರುವ ರೈತನಿಗೆ ಏಕೆ ಪರ್ಮಿಟ್ ಸಿಗುವುದಿಲ್ಲ? ಆದುದರಿಂದ ದಯಮಾಡಿ ವ್ಯವಸ್ಥೆಯನ್ನು ಸರಳೀಕರಿಸಬೇಕು. ಈ ರೀತಿ ಸರಳೀಕರಿಸುವಾಗ ಎಲ್ಲೆಲ್ಲಿ ತಾವು ಗ್ರಾಮ ಜಂಟಿ ಅರಣ್ಯ ಸಮಿತಿಗಳನ್ನು ಮಾಡುತ್ತೀರಿ, ಆ ಸಮಿತಿಗಳಿಗೆ ಒಂದು ಅವಕಾಶ ಕೊಡಬೇಕು.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಇವೊತ್ತು ತಾವು ಜಂಟಿ ಅರಣ್ಯ ಸಮಿತಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟಲ್ಲಿ, ಈಗ ತನ್ನ ಕಾಂಪೌಂಡ್‌ನಲ್ಲಿ ಮರ ಬೆಳೆಸಿರುವುದರಿಂದ, ಅದರ ಅಗತ್ಯವಿರುವುದರಿಂದ ದಾಖಲಾತಿ ಸಲ್ಲಿಸಿದರೆ ಒಂದು ಸರ್ಟಿಫಿಕೇಟ್ ಕೊಡುವ ಬಗ್ಗೆ ಸಮಿತಿಗಳು ನಿಶ್ಚಯಿಸಬೇಕು. ಇದು ನಿಮ್ಮ ಡಿ.ಎಫ್.ಓ

ಅಥವಾ ರೇಂಜರ್ ಲೆವೆಲ್‌ನಲ್ಲಿ ಡಿಸ್‌ಪೋಸ್ ಆಗಬೇಕು. ತೀರ ಹಳ್ಳಿಯಲ್ಲಿರತಕ್ಕ, ಯಾವುದೋ ಮೂಲೆಯ ಹಳ್ಳಿಯಲ್ಲಿರತಕ್ಕ ಬಡ ರೈತ ಕೇಂದ್ರಕ್ಕೆ ಹೋಗಿ ಡಿ.ಎಫ್.ಓ. ನೋಡಿ ಅನುಮತಿ ತೆಗೆದುಕೊಳ್ಳಲು ಆಗುವುದಿಲ್ಲ. ಮೊದಲನೆಯದಾಗಿ ಡಿ.ಎಫ್.ಓ.ರವರು ಕಛೇರಿಯ ಒಳಗೇ ಸೇರಿಸುವುದಿಲ್ಲ. ತಮ್ಮ ಅರಣ್ಯಾಧಿಕಾರಿಗಳ ಮನೋಭಾವನೆ ಸರಿಯಾಗುವವರೆಗೆ ಅರಣ್ಯ ಇಲಾಖೆ ಸರಿಯಾಗುವುದಿಲ್ಲ. ಅರಣ್ಯ ಸರಿಯಾಗಿರುವುದಿಲ್ಲ. ಕಂದಾಯಾಧಿಕಾರಿಗಳನ್ನು, ಬೇರೆ ಬೇರೆ ಅಧಿಕಾರಿಗಳನ್ನು ಹೋಗಿ ಮಾತನಾಡಿಸಬಹುದು ಆದರೆ ತಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಅವರ ಕಛೇರಿಗೆ ಹೋಗಿ ಮಾತನಾಡಿಸಲು ಆಗುವುದಿಲ್ಲ. ಬ್ರಿಟಿಷರ ಕಾಲದ ದವಲತ್ತನ್ನು ಅವರು ಬಿಡಲೇ ಇಲ್ಲ. ನಾನು ಅವರ ಚೇಂಬರ್‌ಗೆ ಹೋಗಬೇಕಾದರೆ ಚೀಟಿ ಕಳಿಸಿ ಎಂದು ಹೇಳುತ್ತಾರೆ. ಇನ್ನು ಸಾಮಾನ್ಯ ಜನರ ಗತಿಯೇನು? ನಾನು ಎಂ.ಎಲ್.ಎ ಆಗಿ ಚೇಂಬರ್‌ಗೆ ಹೋಗಬೇಕಾದರೆ ಭೇಟಿ ಕೊಡಬೇಕೆಂದರೆ ಅವರು ಎಂಥ ಡಿ.ಎಫ್.ಓ.? ತಾವು ಅವರ ಚೇಂಬರ್‌ಗಳನ್ನು ನೋಡಬೇಕು ಅಷ್ಟೊಂದು ವೈಭವದಿಂದಿದೆ. ಅರಣ್ಯ ಅಭಿವೃದ್ಧಿ ನಿಗಮದ ಬಗ್ಗೆ ಏನೇನು ಕೆಲಸಕಾರ್ಯಗಳನ್ನು ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಅದರಲ್ಲಿ ಕೊನೆಯ ಪುಟದಲ್ಲಿ 140 ಲಕ್ಷ ರೂಪಾಯಿ ವೆಚ್ಚದಲ್ಲಿ ನಿಗಮವು ತನ್ನದೇ ಆದಂಥ ಒಂದು ಕಛೇರಿ ಸಂಕೀರ್ಣವನ್ನು ಮಲ್ಲೇಶ್ವರಂ 18ನೇ ಅಡ್ಡ ರಸ್ತೆಯಲ್ಲಿ ನಿರ್ಮಿಸಿಕೊಂಡಿದೆ ಎಂದು ಹೇಳಿದ್ದೀರಿ. ವಿದೇಶದಿಂದ ಸಾಲವನ್ನು ತಂದು 140 ಲಕ್ಷ ರೂಪಾಯಿ ವೆಚ್ಚದಲ್ಲಿ ಕಛೇರಿ ಸಂಕೀರ್ಣವನ್ನು ಕಟ್ಟಿದ್ದೀರಿ. ಇದು ನಿಮ್ಮ ಸಾಧನೆ. ಅರಣ್ಯಾಧಿಕಾರಿಯವರ ಚೇಂಬರ್‌ನಂತೆ ನಮ್ಮ ದೇಶದ ಪ್ರಧಾನ ಮಂತ್ರಿಗಳ ಚೇಂಬರ್ ಸಹ ಇಲ್ಲ. ಏತಕ್ಕೆ ಬೇಕು ಅದು? ಎಲ್ಲರು ಗುಡಿಸಲಿನಲ್ಲಿ ಬದುಕಬೇಕು, ಸರಳ ಜೀವನ ನಡೆಸಬೇಕೆಂದು ಗಾಂಧೀಜಿಯವರು ಹೇಳಿಹೋದರು. ನಾವು ನೀವೆಲ್ಲರೂ ಅದನ್ನು ಅನುಸರಿಸದಿದ್ದ ಮೇಲೆ ಮತ್ಯಾರು ಅನುಸರಿಸುತ್ತಾರೆ? ಅಲ್ಲಿನ ಕುರ್ಚಿಯನ್ನು ನೋಡಬೇಕು, ಮೊನ್ನೆ ತಾವು ಮೈಸೂರು ಅರಮನೆಯನ್ನು ಸ್ವಾಧೀನಪಡಿಸಿಕೊಂಡಿರಿ, ಆ ಸಿಂಹಾಸನವೂ ಇಲ್ಲಿನ ಕುಷನ್ ಚೇರ್ ಮುಂದೆ ಯಾವ ಲೆಕ್ಕಕ್ಕೂ ಇಲ್ಲ. ಸಾಧಾರಣವಾದ ಕುರ್ಚಿಯಲ್ಲಿ ಕುಳಿತು ಕೊಂಡರೆ ಮೊಳೆ ಚುಚ್ಚುತ್ತದೆಯೇ? ಭಾರಿ ದವಲತ್ತು, ಸಾಮಾನ್ಯ ಮನುಷ್ಯನ ಬೆವರಿನ ಹಣ, ವಿದೇಶದಿಂದ ಸಾಲವಾಗಿ ತಂದಿರುವ ಹಣ, ಈ ಹಣದಲ್ಲಿ ಆ ರೀತಿ ಚೇಂಬರ್‌ನಲ್ಲಿ ಕುಳಿತುಕೊಂಡು ಮೋಜು ಮಾಡಲು ನಾಚಿಕೆಯಾಗುವುದಿಲ್ಲವೆ? ಏ.ಸಿ. ಚೇಂಬರ್‌ಗಳು ಏತಕ್ಕೆ ಬೇಕು? ಅಧಿಕಾರಿಗಳು, ಶಾಸಕರು, ಮಂತ್ರಿಗಳು ನಮ್ಮಲ್ಲಿ ಸರಳತನವಿಲ್ಲವೆಂದರೆ ನಾವು ಯಾರಿಗೆ ಉಪದೇಶ ಮಾಡಲು ಸಾಧ್ಯವಾಗುತ್ತದೆ? ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಬೇಕು. ಬ್ರಿಟಿಷರಿಗೆ ಇಲ್ಲಿ ಮನೆ ಮಠಗಳು ಇರಲಿಲ್ಲ. ಅವರು ಮಾಂಸವನ್ನು ತಿನ್ನುತ್ತಾರೆಂದು ಬೇರೆಯವರು ಒಳಕ್ಕೆ ಸೇರಿಸುತ್ತಿರಲಿಲ್ಲ. ಹೈಜೆನಿಕ್ ಆಗಿ ಇಲ್ಲವೆಂದು ಅವರೂ ಮನೆಗಳಲ್ಲಿ ಉಳಿಯುತ್ತಿರಲಿಲ್ಲ. ಆಗ ಬ್ರಿಟಿಷ್ ಅರಣ್ಯಾಧಿಕಾರಿಗಳು ಉಳಿದುಕೊಳ್ಳಲು ಅಲ್ಲಲ್ಲಿ ಅರಣ್ಯದಲಿ ಬಂಗಲೆಗಳನ್ನು ಮಾಡಿದ್ದರು. ಅದು ಸಾಮಾನ್ಯ ಬಂಗಲೆಗಳು. ಆದರೆ ಇವತ್ತು ಅಲ್ಲಿ ಹೋಗಿ ನೋಡಿ, ಬೀಟಿಯ ನಾಟ ಅರ್ಧ ಭಾಗ ಆ ಬಂಗಲೆಗಳಲ್ಲಿ ಅಳವಡಿಸಿದ್ದಾರೆ. ಅಲ್ಲಿಂದ ಮೆತ್ತನೆಯ ಆಸನಗಳೇನು, ಪರ್ನಿಚರ್‌ಗಳೇನು, ಕಾಟ್‌ಗಳೇನು, ಚಿತ್ರವೈಚಿತ್ರ್ಯಗಳೇನು,

ಹೀಗಾದರೆ ಇಲಾಖೆ ಉಳಿಯುತ್ತದೆಯೇ? ಸಾಲವನ್ನು ತಂದು ಈ ರೀತಿ ಮೋಜುಮಾಡಿಕೊಂಡಿದ್ದರೆ ದೇಶ ಉಳಿಯುತ್ತದೆಯೇ? ಫಾರೆಸ್ಟ್ ಬಂಗಲೆಗಳೇಕೆಬೇಕು? ಕುಡಿಯಲು, ಪಾರ್ಟಿ ಮಾಡಲು ಯಾರಾದರೂ ಫಾರೆಸ್ಟ್ ಗುತ್ತಿಗೆದಾರರನ್ನು ಕರೆದುಕೊಂಡು ಹೋಗಿ ಕುಡಿಯಲು ಅವುಗಳನ್ನು ಉಪಯೋಗಿಸುತ್ತಿದ್ದಾರೆ. ತಾವು ಅವರಿಗೆ ವಾಹನಗಳನ್ನು ಕೊಡುತ್ತೀರಿ. ಈ ರೀತಿಯ ವ್ಯವಸ್ಥೆಯನ್ನು ದಯಮಾಡಿ ತಪ್ಪಿಸಬೇಕು. ಸಾಲವಾಗಿ ಬಂದಿರುವ ಹಣ ಸದುಪಯೋಗವಾಗುವಂತೆ ಮಾಡಬೇಕು. ಆ ರೀತಿ ವೈಭವದಿಂದ ಕಟ್ಟಿರುವ ಚೇಂಬರ್‌ನಲ್ಲಿ ಏನು ಮಾಡಬೇಕು? ಅರಣ್ಯ ಅಭಿವೃದ್ಧಿ ನಿಗಮದ ಹೆಸರಿನಲ್ಲಿ ಒಂದು ಲಕ್ಷ ಹೆಕ್ಟೇರ್‌ನಲ್ಲೂ ಸಹ ಗಿಡಗಳನ್ನು ನೆಡಲು ಆಗುವುದಿಲ್ಲ. ಎಷ್ಟು ಜನ ರೇಂಜರ್ಸ್, ಡಿ.ಎಫ್.ಓ., ಎ.ಸಿ.ಎಫ್.ಗಳು, ಜಿಲ್ಲೆಗೆ ಒಬ್ಬೊಬ್ಬರು ಡಿ.ಎಫ್.ಓ.ಗಳು. ಅವರ ಸಂಬಳವೆಷ್ಟು, ಅವರ ವಾಹನದ ವೆಚ್ಚವೆಷ್ಟು, ಅವರ ಟಿ.ಎ. ಡಿ.ಎ. ಗಳೆಷ್ಟು, ಒಂದು ಲಕ್ಷ ಹೆಕ್ಟೇರ್‌ನಲ್ಲಿ ಒಂದು ಸಸಿಯನ್ನೂ ಬೆಳೆಯಲು ತಮ್ಮ ಹತ್ತಿರ ಹಣವಿಲ್ಲದಿದ್ದಾಗ ದಯಮಾಡಿ ಆ ನಿಗಮವನ್ನು ಮುಚ್ಚಿ ಇಲ್ಲದಿದ್ದರೆ ಅದಕ್ಕೆ ಸರಿಯಾಗಿ ಹಣವನ್ನು ಕೊಟ್ಟು ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡಬೇಕು. ಅಷ್ಟೂ ಸಿಬ್ಬಂದಿಯನ್ನು ಸದುಪಯೋಗ ಮಾಡಿಕೊಳ್ಳಬೇಕು. ನಾನು ಮಲೆನಾಡಿನಲ್ಲಿ ಹುಟ್ಟಿರುವುದರಿಂದ ಅರಣ್ಯದ ಹೆಸರಿನಲ್ಲಿ ಏನೇನಾಗುತ್ತಿದೆ ಎಂಬ ಬಗ್ಗೆ ಸರ್ಕಾರದ ಕಣ್ಣನ್ನು ತೆರೆಸಲೇ ಬೇಕಾಗುತ್ತದೆ, ಸರ್ಕಾರ ಎಷ್ಟರಮಟ್ಟಿಗೆ ಕಣ್ಣುತೆರೆಯುತ್ತದೋ ಗೊತ್ತಿಲ್ಲ, ನಾನು ಅದರ ಬಗ್ಗೆ ಹೇಳದಿದ್ದರೆ ಆತ್ಮವಂಚನೆ ಮಾಡಿದಂತಾಗುತ್ತದೆ. ಮಾನ್ಯ ಉಪದಾಧ್ಯಕರೇ, ತಾವು ಕಾಡು ಹೆಚ್ಚಾಗಿ ಇಲ್ಲದಿರುವ ಕಡೆ ನಮಗಿಂತ ತಮ್ಮಲ್ಲಿ ಹೆಚ್ಚು ಒತ್ತಾಸೆ ಇದೆ. ಅ ಒತ್ತಾಸೆಯ ನಿಟ್ಟಿನಲ್ಲಿ ಅರಣ್ಯವನ್ನು ನಿರ್ಮಾಣ ಮಾಡಬೇಕಾಗುತ್ತದೆ. ತಾವು ಒಮ್ಮೆ ನಮ್ಮ ಭಾಗದ ಅರಣ್ಯಕ್ಕೆ ಬಂದು ನೋಡಿ. ಕೇವಲ ನೀಲಗಿರಿ, ಅಕೇಶಿಯ, ಮ್ಯಾಂಜೀಮ್, ಹೈಬ್ರೀಡ್ ತಳಿಗಳನ್ನು ನೆಡುವುದರಿಂದ ಪ್ರಯೋಜನವಾಗುವುದಿಲ್ಲ. ಆ ಮರದ ಮೇಲೆ ಒಂದು ಹಕ್ಕಿ ಕೂರುವುದಿಲ್ಲ, ಗೂಡು ಕಟ್ಟುವುದಿಲ್ಲ. ಏನಿದೆಯೆಂದು ಆ ಮರದ ಮೇಲೆ ಕೂರುತ್ತದೆ? ಆ ಮರದಲ್ಲಿ ಹೂ ಬಂದರೆ ಅಲರ್ಜಿ ಪ್ರಾರಂಭವಾಗುತ್ತದೆ. ಅಂಥ ಸಸ್ಯಗಳನ್ನು ತಂದು ಹಾಕಿದ್ದಾರೆ. ಕಟ್ಟಿಗೆಗೆ, ಉರುವಲಿಗೆ ಅಂಥದನ್ನು ಸ್ವಲ್ಪ ಪ್ರಮಾಣದಲ್ಲಿ ಬೆಳೆಸಿ ಉಳಿದಿರತಕ್ಕದ್ದನ್ನು ನಮ್ಮ ಸ್ಥಳೀಯ ತಳಿಗಳಾದ ಮಾವು, ವಾಟೆ, ನಂದಿ, ನೇರಳೆ, ಹಲಸು, ಹಾಕಬೇಕು. ಅವುಗಳು ಹಣ್ಣು ನಾಟೆ ನೆರಳನ್ನು ಕೊಡುತ್ತಿತ್ತು, ಮಳೆಯ ನೀರನ್ನು ಹೆಚ್ಚಾಗಿ ಇಂಗಿ ಅಂತರ್ಜಲವನ್ನು ಜಾಸ್ತಿ ಮಾಡುತ್ತಿತ್ತು ಇವುಗಳನ್ನು ಎಡಗೈಯಲ್ಲಿ ಹಾಕಿದರೂ ಹುಟ್ಟುತ್ತವೆ, ಗೊಬ್ಬರವನ್ನು ಹಾಕಬೇಕೆಂದಿಲ್ಲ. ಇದನ್ನು ಬಿಟ್ಟು ಹೈಬ್ರೀಡ್ ತಳಿಗಳನ್ನು ಹಾಕಿ ಕಾಡನ್ನು ನಾಶ ಮಾಡುತ್ತಿದ್ದಾರೆ. ನಮ್ಮ ತೀರ್ಥಹಳ್ಳಿ ಮತ್ತು ಆಗುಂಬೆ ಸುತ್ತಮುತ್ತಲಿರುವ ನಿತ್ಯ ಹರಿದ್ವರ್ಣ ಕಾಡುಗಳೇನಿದೆ ಅದರಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು. ಈ ರೀತಿಯಾದ ಸಸ್ಯಗಳನ್ನು ಹೆಚ್ಚಾಗಿ ಬೆಳೆಯಬೇಕು. ಆ ಮೂಲಕ ಸಾಲವನ್ನು ತಂದಿರುವ ಹಣವನ್ನು ಸದುಪಯೋಗ ಮಾಡಿಕೊಳ್ಳಬೇಕು. ಅರಣ್ಯದ ಬಗ್ಗೆ ಸುಪ್ರೀಂಕೋರ್ಟ್‌ನ ಇತ್ತೀಚಿನ ಆದೇಶದ ಬಗ್ಗೆ ನಾವಿಲ್ಲಿ ಮೊನ್ನೆ ಚರ್ಚೆ ಮಾಡಿದ್ದೇವೆ. ಇದುವರೆಗೆ ಆಳ್ವಿಕೆ ಮಾಡಿರುವ ಎಲ್ಲಾ ಸರ್ಕಾರದ ಬೇಜವಾಬ್ದಾರಿಯಿಂದಾಗಿ ಅ ರೀತಿ ಆದೇಶವನ್ನು ಸುಪ್ರೀಮ್ ಕೋರ್ಟ್

ಕೊಡಬೇಕಾಯಿತು. ದೊಡ್ಡ ದೊಡ್ಡ ಹಣವಂತರು ಸಾವಿರಾರು ಎಕರೆ ಅರಣ್ಯವನ್ನು ಸ್ವಾಧೀನಪಡಿಸಿಕೊಂಡು ಬೇಲಿಯಾಕಿ ಕಾಫಿ ಬೆಳೆದು ಎಸ್ಟೇಟ್ ಮಾಡಿಕೊಂಡರೆ ಅದನ್ನು ನೋಡಲು ತಾವು ಹೋಗಲಿಲ್ಲ, ಒಂದು ವೇಳೆ ನೋಡಿದ್ದರೂ ಕಣ್ಣುಮುಚ್ಚಿಕೊಂಡು ಅವರ ಜೊತೆ ಶಾಮೀಲಾದಿರಿ. ಆಡಳಿತ ಪಕ್ಷಗಳೇ ಕಾಡನ್ನು ನಾಶ ಮಾಡಿದರು. ಆದ್ದರಿಂದ ಇದರಲ್ಲಿ ಸುಪ್ರಿಮ್ ಕೋರ್ಟ್ ಕೈಹಾಕಬೇಕಾಗಿ ಬಂತು. ಸುಪ್ರೀಮ್ ಕೋರ್ಟ್ ನಿಯಮ 64 'ಎ' ಸರಿಯಾಗಿ ಜಾರಿಗೆ ತಂದರೆ ನಾವ್ಯಾರು ಮನೆಯಿಂದ ಹೊರಕ್ಕೆ ಬರಲು ಸಾಧ್ಯವಾಗುವುದಿಲ್ಲ. ನಮ್ಮ ಮನೆಗಳೆಲ್ಲಾ ಕಾಡಿನಲ್ಲಿವೆ. ನನ್ನ ಮನೆ ಮೈನರ್ ಫಾರೆಸ್ಟ್‌ನಲ್ಲಿದೆ. ನಮ್ಮ, ಅಪ್ಪ, ಅಜ್ಜ ನಾನು ಹುಟ್ಟಿದ್ದೆಲ್ಲಾ ಅಲ್ಲಿ. ಆ ಕಾನೂನನ್ನು ಜಾರಿಗೆ ತಂದರೆ ನಾನು ಹೊರಕ್ಕೆ ಬರುವುದು ಹೇಗೆ? ಅರಣ್ಯ ಇಲಾಖೆಯವರು ಇದು ನಮ್ಮ ಜಾಗ ನೀವು ಹೊರಕ್ಕೆ ಬರಬೇಡಿ ಎಂದು ಹೇಳುತ್ತಾರೆ. ನಾವೇನು ಮಾಡುವುದು? ಆದ್ದರಿಂದ ಅವರಿಗೆ ಅನಗತ್ಯವಾಗಿ ಹಿಂಸೆ ಕೊಡುವುದು ಬೇಡ. ನಮ್ಮಲ್ಲಿ ಇರತಕ್ಕ ಒಂದು ಬಂಡೆಯನ್ನು ಒಡೆದು ಜಲ್ಲಿಯನ್ನು ತೆಗೆಯುವಂತಿಲ್ಲ. ಒಡೆದರೆ, ಅರಣ್ಯಾಧಿಕಾರಿಗಳು ಬಂದು ಅದನ್ನು ಒಡೆಯಬೇಡ, ಅದು ಅರಣ್ಯದ ಒಳಗಿದೆ ಎಂದು ಹೇಳುತ್ತಾರೆ. ಇದರಿಂದ ಅಭಿವೃದ್ಧಿ ಕೆಲಸಗಳು ನಿಂತುಹೋಗಿದೆ. ಅರಣ್ಯದ ಒಳಗೆ ಅರಣ್ಯೇತರ ಕೆಲಸ ಮಾಡಲು ಆಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಎಚ್ಚರಿಗೆ ವಹಿಸಿ ಮನೆಮಠಗಳಿಗೆ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಶಾಲಾಕಾಲೇಜುಗಳನ್ನು ಕಟ್ಟಲು, ಆಸ್ಪತ್ರೆಗಳನ್ನು ಕಟ್ಟಲು ಬೇಕಾಗಿರುವ ಜಾಗವನ್ನು ಹೇಗೆ ಪಡೆಯಬೇಕೆಂಬ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಬೇಕು. ದೊಡ್ಡ ದೊಡ್ಡವರೇನು ಅರಣ್ಯ ಸ್ವಾಧೀನಪಡಿಸಿಕೊಂಡು ಎಸ್ಟೇಟ್ ಮಾಡಿಕೊಂಡಿದ್ದಾರೆ ಅದರ ಬಗ್ಗೆ ಸರ್ವೆಮಾಡಲು ಕೋರ್ಟ್‌ನವರು ಹೇಳಿದ್ದಾರೆ. ಬಿ.ಎಲ್. ಶಂಕರ್‌ರವರ ಬಗ್ಗೆ ಸಹ ಪ್ರಸ್ತಾಪವಾಗಿದೆ. ತಾವು ಆ ಸರ್ವೆಮಾಡಿಸಿ ಸಮಸ್ಯೆಯನ್ನು ಇತ್ಯರ್ಥಮಾಡದಿದ್ದರೆ, ಇವತ್ತು ಸುಪ್ರೀಮ್ ಕೋರ್ಟ್ ಇದರಲ್ಲಿ ಕೈಹಾಕಿ ಸರ್ವೆ ಮಾಡಿಸಬೇಕೆಂದು ಹೇಳಬೇಕಾದರೆ ನಮಗೆ ನಾಚಿಕೆಯಾಗುತ್ತದೆ. ಕೋರ್ಟ್‌ಗಳು ನಮಗೆ ಆದೇಶವನ್ನು ಕೊಡಬಾರದು, ನಾವೇ ನಮ್ಮ ಕೆಲಸವನ್ನು ಸರಿಯಾಗಿ ಮಾಡಬೇಕಾಗುತ್ತದೆ. ಕೇವಲ ನಿಮ್ಮ ಸರ್ಕಾರ ಮಾತ್ರವಲ್ಲ, ಕಳೆದ 40-50 ವರ್ಷಗಳ ಇಲ್ಲಿನ ಆಡಳಿತದ ಫಲವಾಗಿ ಸುಪ್ರೀಮ್ ಕೋರ್ಟ್ ನಮಗೆ ಆದೇಶವನ್ನು ಕೊಡುವಂತಾಯಿತು. ಇದು ನಾಚಿಕೆಗೇಡು. ತಾವಾದರೂ ಇದನ್ನು ಸರಿಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಗೋವಿಂದೇಗೌಡರ ನೇತೃತ್ವದಲ್ಲಿ ನಮ್ಮ ಶಿಕ್ಷಣ ಇಲಾಖೆ ಒಂದಿಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ನಮ್ಮೆಲ್ಲರಿಗೂ ಇದರಿಂದ ಸ್ವಲ್ಪ ಸಂತೋಷವಾಗಿದೆ. ಏನೂ ಆಗದೇ ಇರುವುದಕ್ಕಿಂತ ಏನೋ ಸ್ವಲ್ಪ ಕೆಲಸವಾಗುತ್ತಿದೆ ಎಂಬ ಬಗ್ಗೆ ಭಾವನೆ ಜನರಲ್ಲಿ ಮತ್ತು ಶಾಸಕರಲ್ಲಿ ಮೂಡಿದೆ. ಅವರ ಕೆಲಸವನ್ನು ನಾವು ಮೆಚ್ಚಿ ಕೊಳ್ಳುತ್ತಿದ್ದೇವೆ. ಆದರೆ ಹಿರಿಯರಾಗಿರತಕ್ಕ ಶಿಕ್ಷಣ ಸಚಿವರಾದ ಮಾನ್ಯ ಗೋವಿಂದೇಗೌಡರು ಒಂದು ವಿಚಾರದ ಬಗ್ಗೆ ಯೋಚನೆ ಮಾಡಬೇಕು. ವಿದ್ಯೆಯ ಗುರಿ ಏನು? ಏತಕ್ಕಾಗಿ ಶಿಕ್ಷಣ ಕೊಡಬೇಕು? ಕುರ್ಚಿಮೇಜುಗಳನ್ನು ಶಿಕ್ಷಕರನ್ನು ಕಟ್ಟಡಗಳನ್ನು ಕೊಟ್ಟ ಮಾತ್ರಕ್ಕೆ ವಿದ್ಯೆ ಕೊಟ್ಟಂತೆ ಆಯಿತೆ? ಈ ದೇಶಕ್ಕೆ, ಇದರ ಸಂಸ್ಕೃತಿಗೆ ಮಾರಕವಾಗಿರತಕ್ಕಂಥ ಪ್ರಜೆಗಳನ್ನು ಯಾವ ರೀತಿ ಕೊಡಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಎಲ್ಲಾ ಸಮಸ್ಯೆಗಳಿಗೆ,

ಸವಾಲುಗಳಿಗೆ ನಾನಿದ್ದೇನೆ ಎಂದು ಹೇಳುವಂಥ ಇಲಾಖೆಯೆಂದರೆ ಶಿಕ್ಷಣ ಇಲಾಖೆ. ಎಲ್ಲಾ ಸಮಸ್ಯೆಗಳಿಗೆ ಉತ್ತರವನ್ನು ಹೇಳಬೇಕಾದ ಇಲಾಖೆ ಶಿಕ್ಷಣ ಇಲಾಖೆಯಾಗಿದೆ. ಸಮಸ್ಯೆಯನ್ನು ಪರಿಹಾರ ಮಾಡತಕ್ಕ ಇಲಾಖೆ ಶಿಕ್ಷಣ ಇಲಾಖೆ. ಅತ್ಯಂತ ಮಹತ್ವವಾದ ಇಲಾಖೆ ಶಿಕ್ಷಣ ಇಲಾಖೆ. ಶಾಲಾಕಟ್ಟಡ, ಕುರ್ಚಿಮೇಜು, ಶಿಕ್ಷಕರು ಎಲ್ಲರನ್ನೂ ಇತ್ತೀಚೆಗೆ ಒದಗಿಸುತ್ತಿದ್ದೀರಿ. ಮರದ ನೆರಳಿನಲ್ಲಿ ಶಾಲೆ ನಡೆಯುತ್ತಿರುವ ಸ್ಥಿತಿ ಇಂದು ಇದೆಯೆಂದು ನಾನು ಭಾವಿಸುವುದಿಲ್ಲ. ಆ ಪರಿಸ್ಥಿತಿ ಇಂದು ಇಲ್ಲ.

ಆದರೆ ನಮ್ಮ ಉಪನಿಷತ್ತುಗಳಲ್ಲಿ ಒಂದು ಕಡೆ, ಲೌಕಿಕವಾಗಿರತಕ್ಕಂಥ ಆದ್ಯತೆಗಳನ್ನು ಪೂರೈಸತಕ್ಕಂಥದ್ದು, ಅದು ವಿದ್ಯೆಯಲ್ಲ, ಅವಿದ್ಯೆ ಎನ್ನುವಂತಹ ಒಂದು ಮಾತನ್ನು ಹೇಳಿದ್ದಾರೆ. ಆದರೆ ಇವತ್ತು ನಾವು ಕಲಿಸತಕ್ಕದ್ದು ಏನು? ನೂರಕ್ಕೆ ನೂರು ಮಾರ್ಕ್ಸ್ ತೆಗೆಯಬೇಕು, ಅವನು ಇಂಜನಿಯರ್ ಆಗಬೇಕು, ಕಬ್ಬಿಣ, ಸಿಮೆಂಟ್ ಅನ್ನು ನುಂಗಿದರೂ ಪರವಾಗಿಲ, ನುಂಗಿ ಜೀರ್ಣ ಮಾಡಿಕೊಳ್ಳುವಂತಹ ಇಂಜನಿಯರ್ ಆಗಬೇಕು, ಡಿಸ್ಟಿಲ್ ವಾಟರ್ ಅನ್ನು ಚುಚ್ಚಿ, ಮನುಷ್ಯನ ಅಂಗಾಂಗಗಳನ್ನೇ ಕದ್ದು ಮಾರಿಕೊಳ್ಳುವಂತಹ ವೈದ್ಯ, ಇವರೆಲ್ಲರನ್ನೂ ಕೂಡ ಅಪೋಶನಕ್ಕೆ ತೆಗೆದುಕೊಳ್ಳುವಂತಹ ರಾಜಕಾರಣಿ ಆಗಬೇಕು ಎಂದು ನಾವು ಬಯಸುತ್ತೇವೆ. ನಾವೆಲ್ಲರೂ ಕೂಡ ವಿದ್ಯಾವಂತರಾಗಿದ್ದೇವೆ. ಇದು ವಿದ್ಯೆಯ ಸಾರ್ಥಕತೆಯಾ? ಹೀಗೆ ಆಲೋಚನೆ ಮಾಡುವಾಗ ನನಗೆ ಒಂದು ಚಿಕ್ಕ ಘಟನೆ ನೆನಪಿಗೆ ಬರುತ್ತದೆ. ಅದನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ದ್ರೋಣಾಚಾರ್ಯರು, ಪಾಂಡವರು ಮತ್ತು ಕೌರವರಿಗೆ ಶಿಕ್ಷಣವನ್ನು ಕೊಡಿಸುತ್ತಾ ಅವರನ್ನು ಒಮ್ಮೆ ಬೇಟೆಗೆ ಕರೆದುಕೊಂದು ಹೋಗಿದ್ದರು. ಆಗ ಅಲ್ಲಿಗೆ ಬಂದಂತಹ ನಾಯಿಯ ಬಾಯಿಯಲ್ಲಿ ಬಾಣದ ಬರೆಯನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಈ ರೀತಿ ಬಾಣವನ್ನು ಬಿಡುವುದರಲ್ಲಿ, ಅತ್ಯಂತ ಶ್ರೇಷ್ಠವಾಗಿರತಕ್ಕ ಬಿಲ್ವಿದ್ಯೆಯನ್ನು ಕಲಿತಿರತಕ್ಕವನು ಎನ್ನುವ ಹೆಗ್ಗಳಿಕೆಗೆ ಅರ್ಜುನ ಪಾತ್ರನಾಗಿದ್ದ. ಅರ್ಜುನನಿಗೆ ಆಶ್ಚರ್ಯವಾಗುತ್ತದೆ, ಈ ಕಾಡಿನಲ್ಲಿ ಯಾರೋ ನನಗೆ ಸರಿ ಸಮಾನವಾಗಿರತಕ್ಕವರು ಅಥವಾ ನನ್ನನ್ನು ಸರಿಗಟ್ಟತಕ್ಕಂಥ ಜನ ಇಲ್ಲಿ ಯಾರೋ ತಯಾರಾಗಿದ್ದಾರೆಂದು ಅವನಿಗೆ ಅನಿಸುತ್ತದೆ. ದ್ರೋಣಾಚಾರ್ಯರ ಮೇಲೆ ಅರ್ಜುನನಿಗೆ ಅನುಮಾನ ಬರುತ್ತದೆ. ಈ ಗುರುಗಳು ನನಗೆ ಏನೋ ಮೋಸ ಮಾಡಿದ್ದಾರೆ, ಬಿಲ್ವಿದ್ಯೆಯಲ್ಲಿ ನೀನೇ ಪರಮ ಶ್ರೇಷ್ಠ ಎಂದು ಹೇಳಿ, ಇನ್ನೊಬ್ಬನನ್ನು ನನ್ನ ಎದುರುಗಡೆ ನನ್ನ ಶತ್ರುವನ್ನು ತಯಾರು ಮಾಡಿದ್ದಾರೆ ಎಂದು ಅರ್ಜುನ ಅನುಮಾನ ಪಡುತ್ತಾನೆ. ಆತ ಇದೇನು ಈ ರೀತಿ? ಎಂದು ತನ್ನ ಗುರುಗಳನ್ನು ಕೇಳುತ್ತಾನೆ. ಯಾರು ಈ ರೀತಿ 'ಶಬ್ದವೇದಿ' ವಿದ್ಯೆಯಿಂದ ನಾಯಿಯ ಬಾಯಿಗೆ ಬಾಣ ಬಿಟ್ಟಿದ್ದಾರೆ ಎಂದು ಎಲ್ಲರೂ ಹುಡುಕಿಕೊಂಡು ಹೋದಾಗ, ತಮ್ಮೆಲ್ಲರಿಗೂ ಗೊತ್ತಿರುವಂತೆ ಬಿಲ್ವಿದ್ಯೆಯನ್ನು ಕಲಿಯುತ್ತಿರುವ ಏಕಲವ್ಯ ಅವರ ಕಣ್ಣಿಗೆ ಬೀಳುತ್ತಾನೆ. ದ್ರೋಣರ ಒಂದು ಮೂರ್ತಿ ಮಾಡಿ ಆತ ಬಿಲ್ವಿದ್ಯೆ ಅಭ್ಯಾಸ ಮಾಡುತ್ತಿರುತ್ತಾನೆ. ಈ ಕಥೆ ತಮಗೆಲ್ಲರಿಗೂ ತಿಳಿದೇ ಇದೆ. ಆಗ ಏಕಲವ್ಯ ದ್ರೋಣರನ್ನು ನೋಡಿ ಗುರುಗಳಾಗಿ ತಾವು ನನಗೆ ಆಶೀರ್ವಾದ ಮಾಡಬೇಕೆಂದು ಕೇಳಿದ. ಆಗ ದ್ರೋಣರು ಏಕಲವ್ಯನಿಗೆ, ನಾನು ನಿನ್ನನ್ನು ನನ್ನ ಶಿಷ್ಯನನ್ನಾಗಿ ಸ್ವೀಕಾರ ಮಾಡಬೇಕೆಂದರೆ, ನನ್ನ ಕೆಲವು ಪರೀಕ್ಷೆಗಳನ್ನು ನಿನಗೆ ಒಡ್ಡುತ್ತೇನೆ, ನೀನು

ಅದರಲ್ಲಿ ತೇರ್ಗಡೆಯಾಗಬೇಕೆಂದು ಎಂದು ಹೇಳಿದರು. ಆತ ಏಕಲವ್ಯ ದ್ರೋಣರ ಸವಾಲನ್ನು ಸ್ವೀಕಾರ ಮಾಡಿ ತಾವು ಒಡ್ಡುವ ಪರೀಕ್ಷೆಗಳಲ್ಲಿ ನಾನು ತೇರ್ಗಡೆಯಾಗುತ್ತೇನೆ ಎಂದು ಹೇಳುತ್ತಾನೆ. ಏಕಲವ್ಯ ಶಬ್ದವೇದಿಯೂ ಸೇರಿದಂತೆ ಎಲ್ಲಾ ರೀತಿಯ ಬಾಣ ಪ್ರಯೋಗಗಳಲ್ಲಿ ಯಶಸ್ವಿಯಾಗುತ್ತಾನೆ. ದ್ರೋಣಾಚಾರ್ಯರು ಕೊನೆಯಲ್ಲಿ ಮೇಲ್ಗಡೆ ಆಕಾಶದಲ್ಲಿರುವ ಒಂದು ಚಿಕ್ಕ ಕಪ್ಪು ಚುಕ್ಕೆಯನ್ನು ತೋರಿಸಿ, ಅದಕ್ಕೆ ನೀನು ಗುರಿಯಿಟ್ಟು ಬಾಣ ಹೊಡೆಯಬೇಕು ಎಂದು ಏಕಲವ್ಯನಿಗೆ ಹೇಳುತ್ತಾರೆ. ಏಕಲವ್ಯ ಅದಕ್ಕೆ ಒಪ್ಪುತಾನೆ. ಬಿಲ್ಲನ್ನು ಗುರಿಯಾಗಿ ಇಡುತ್ತಾನೆ. ಬಹಳಷ್ಟು ಹೊತ್ತು ಕಪ್ಪು ಚುಕ್ಕೆಗೆ ಗುರಿ ಇಡುತ್ತಾನೆ. ಆ ಮೇಲೆ ಏಕಲವ್ಯ ಬಿಲ್ಲು ಬಾಣಗಳನ್ನು ಕೆಳಗಿಟ್ಟು ಗುರುಗಳೇ ನಾನು ಈ ಪರೀಕ್ಷೆಯಲ್ಲಿ ಸೋತೆ ಎಂದು ಹೇಳುತ್ತಾನೆ. ದ್ರೋಣರಿಗೆ ಇಷ್ಟೆಲ್ಲಾ ಪರೀಕ್ಷೆಗಳಲ್ಲಿ ಯಶಸ್ವಿಯಾದ ಈತ ಇದೊಂದು ಚಿಕ್ಕ ಪರೀಕ್ಷೆಗೆ ಏಕೆ ಈ ರೀತಿ ಹೇಳುತ್ತಿದ್ದಾನೆ ಎಂದು ಆಶ್ಚರ್ಯವಾಗುತ್ತದೆ. ಆಕಾಶದಲ್ಲಿ ಹಾರುತ್ತಿದ್ದ ಪುಟ್ಟ ಹಕ್ಕಿಯೊಂದಕ್ಕೆ ದ್ರೋಣರು ಗುರಿ ಇಟ್ಟು ಹೊಡೆಯಲು ಏಕಲವ್ಯನಿಗೆ ತಿಳಿಸಿರುತ್ತಾರೆ. ಏಕಲವ್ಯ ದ್ರೋಣರಿಗೆ ಹೇಳುತ್ತಾನೆ, ಗುರುಗಳೇ, ನಾನೊಬ್ಬ ಬೇಡನ ಮಗ, ಈ ಕಾಡಿನಲ್ಲಿ..........

ಶ್ರೀ ಎಂ.ಪಿ. ಪ್ರಕಾಶ್ : ದ್ರೋಣರು ಏಕಲವ್ಯನಿಗೆ ಹಕ್ಕಿಯ ಕಣ್ಣಿಗೆ ಗುರಿಯಿಟ್ಟು ಹೊಡೆಯಬೇಕೆಂದು ಹೇಳಿದರೆ ವಿನಃ ಹಕ್ಕಿಗೇ ಹೊಡೆಯಬೇಕೆಂದಲ್ಲ.

ಶ್ರೀ ಅರಗ ಜ್ಞಾನೇಂದ್ರ : ಹೌದು, ಹಕ್ಕಿಯ ಕಣ್ಣಿಗೆ ಹೊಡೆಯಬೇಕೆಂದು ಹೇಳಿರುತ್ತಾರೆ. ಕುವೆಂಪುರವರ 'ಬೆರಳ್‌ಗೆ ಕೊರಳ್' ನಲ್ಲಿ ಈ ಘಟನೆ ಪ್ರಸ್ತಾಪಕ್ಕೆ ಬರುತ್ತದೆ ಆಗ ಏಕಲವ್ಯ ಏನು ಹೇಳುತ್ತಾನೆ ಎಂದರೆ, ನಾನೊಬ್ಬ ಬೇಡನ ಮಗ, ಕಾಡಿನಲ್ಲಿ ಕ್ರೂರ ಮೃಗಗಳು, ಸಾಧು ಪ್ರಾಣಿಗಳನ್ನು ಹಿಂಸಿಸಿ ತಿನ್ನುತ್ತಿದ್ದವು, ಅದನ್ನೆಲ್ಲಾ ನೋಡಿದಾಗ ನನಗೆ ಅವುಗಳನ್ನು ಹೊಡೆದು ಈ ಸಾಧು ಪ್ರಾಣಿಗಳನ್ನು ರಕ್ಷಣೆ ಮಾಡಬೇಕು ಎನ್ನುವಂತಹ ಭಾವನೆ ನನ್ನಲ್ಲಿ ನಿರ್ಮಾಣವಾಗಿತ್ತು, ಅದಕ್ಕಾಗಿ ಬಿಲ್ವಿದ್ಯೆ ಕಲಿಯಬೇಕೆಂದು ನಾನು ನಿರ್ಧರಿಸದೆ, ಅದಕ್ಕಾಗಿ ನಾನು ನಿಮ್ಮ ಬಳಿ ಬಂದಾಗ ನೀವು ಬೇಡ ಎಂದು ಹೇಳಿ ನನಗೆ ವಿದ್ಯೆ ಕಲಿಸಲು ಒಪ್ಪಲಿಲ್ಲ, ಆದರೆ ಇವತ್ತು ನಾನು ಅದನ್ನು ಕಲಿತಿದ್ದೇನೆ. ಸ್ವಚ್ಛಂದವಾಗಿ ಹಾರುತ್ತಿರುವ ಹಕ್ಕಿ ಕ್ರೂರ ಮೃಗವಲ್ಲ, ಅದು ನಮಗ್ಯಾರಿಗೂ ಕೂಡ ತೊಂದರೆ ಮಾಡುತ್ತಿಲ್ಲ, ಇಂತಹ ಒಂದು ಸ್ವಚ್ಛಂಧತೆಯ ಪಕ್ಷಿಯ ಬದುಕಿಗೆ ಹಾನಿಕಾರಕವಾಗಿರತಕ್ಕಂಥ ಕೆಲಸವನ್ನು, ಪಾಪವನ್ನು ನಾನು ಮಾಡುವುದಿಲ್ಲ ಎನ್ನುವಂತಹ ಮಾತನ್ನು ಏಕಲವ್ಯ ದ್ರೋಣರಿಗೆ ಹೇಳುತ್ತಾನೆ. ಆಗ ದ್ರೋಣರು ಏಕಲವ್ಯನಿಗೆ ಸೋತಿದ್ದು ನೀನಲ್ಲ, ನಾನು ಎಂದು ಹೇಳುತ್ತಾರೆ. ಹಾಗೆ ವಿದ್ಯೆಯ ಸಾರ್ಥಕತೆ ಎಲ್ಲಾಗಬೇಕು.......

ಉಪಾಧ್ಯಕ್ಷರು : ಇವತ್ತು ಎಲ್ಲರಿಗೂ ಸಮಯ ನಿಗದಿ ಮಾಡಿಯಾಗಿದೆ. ದಯವಿಟ್ಟು ತಾವು ಸ್ವಲ್ಪ ಬೇಗ ತಮ್ಮ ಭಾಷಣ ಮುಗಿಸಿ...

ಶ್ರೀ ಅರಗ ಜ್ಞಾನೇಂದ್ರ : ಈ ರೀತಿಯಾಗಿ ಹೃದಯಕ್ಕೆ ಸಂಸ್ಕಾರವನ್ನು ಕೊಡುವಂತಹ ವಿದ್ಯೆಯನ್ನು ಕಲಿಸುವುದರ ಬಗ್ಗೆ ಅನೇಕ ಶಿಕ್ಷಣ ತಜ್ಞರನ್ನು ಕೂಡಿಸಿ, ಮಾತನಾಡಿ ಈ ಬಗ್ಗೆ

ಶ್ರೀ ಎಂ.ಪಿ. ಪ್ರಕಾಶ್ : ದ್ರೋಣಾಚಾರ್ಯರ ಬಗ್ಗೆ, ಹೃದಯ ಸಂಸ್ಕಾರದ ಬಗ್ಗೆ ತಾವು ಹೇಳಿದಿರಿ. ಆದರೆ ಕೊನೆಗೆ ಏಕಲವ್ಯನಿಗೆ ಏನು ವ್ಯವಸ್ಥೆಯಾಯಿತು ಎನ್ನುವುದು ತಮಗೆ ಗೊತ್ತೇ ಇದೆ. ದ್ರೋಣಾಚಾರ್ಯರ ಪ್ರಶಸ್ತಿ ಅವರ ಹೆಸರಿನಲ್ಲಿ ಕೊಟ್ಟಾಗಲೂ ಕೂಡ ದೊಡ್ಡ ವಿವಾದಗಳೇ ನಡೆಯಿತು. ಅಂತಹ ಒಬ್ಬ ಶಿಷ್ಯನ ಬೆರಳನ್ನು ಕೇಳುವುದರ ಮೂಲಕ ಉಪ್ಪುಂಡವರ ಮನೆಗಾಗಿ ಸಹಾಯ ಮಾಡಿದರೇ ವಿನಃ ಅವರು ಹೃದಯ ವೈಶಾಲ್ಯವನ್ನು ತೋರಿಸಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ನಾನು ಏನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ಅವನು ಕಲಿತಿರತಕ್ಕಂಥ ವಿದ್ಯೆ...........

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಹೇಳಿದ್ದು ಬೇರೆ ಏನಲ್ಲ. ಏಕಲವ್ಯನಿಗೆ ವಿದ್ಯೆಯನ್ನು ನಿರಾಕರಿಸಿದಂತಹ ಆ ಪರಿಸ್ಥಿತಿ ಇವತ್ತೂ ಕೂಡ ನಿರಾಕರಿಸುತ್ತಿದ್ದಾರೆ. ಅಂದರೆ ಅವತ್ತು ಬೇರೆ ಹೆಸರಿನಲ್ಲಿ ನಿರಾಕರಣೆ ಮಾಡಿದರು. ಇವತ್ತು ಇನ್ನೊಂದು ಹೆಸರಿನಲ್ಲಿ ನಿರಾಕರಣೆ ಮಾಡುತ್ತಿದ್ದಾರೆ. ವ್ಯತ್ಯಾಸವೇನೂ ಇಲ್ಲ. ಅದನ್ನು ಶಿಕ್ಷಣದಲ್ಲಿ ಯಾರೂ ಹೇಳುತ್ತಿಲ್ಲ.

ಡಾ: ಎಂ.ಪಿ. ಕರ್ಕಿ : ಮಾನ್ಯ ಅರಗ ಜ್ಞಾನೇಂದ್ರರವರು ಹೇಳತಕ್ಕದ್ದು, ವಿದ್ಯೆ ಹೇಗಿರಬೇಕು, ವಿದ್ಯೆ ಯಾವ ರೀತಿ ಕೊಡಬೇಕು ಎಂದು ಹೇಳುವುದಕ್ಕಷ್ಟೇ ಸೀಮಿತ ಮಾಡಬೇಕೇ ಹೊರತಾಗಿ, ಅದರ ಮುಂದಿನದು ಹೇಳತಕ್ಕಂಥ ಅವಶ್ಯಕತೆ ಇಲ್ಲ.....

ಶ್ರೀ ಬಿ.ವಿ. ಶ್ರೀರಾಮರೆಡ್ಡಿ : ಮುಂದಿನ ವಿಷಯ ಈಗ ಬೇಕಾಗಿಲ್ಲ. ಹಾಗಾಗಿ ಅದನ್ನು ಈಗ ಹೇಳುವುದು ಬೇಡ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಗೆಳೆಯರಾದ ಮಾನ್ಯ ಶ್ರೀ ರಾಮರೆಡ್ಡಿಯವರಿಗೆ ಅವರು ಎಲ್ಲದರಲ್ಲೂ ಎಡಪಂಥ ಮತ್ತು ಬಲಪಂಥ ಹುಡುಕುವುದು ಬೇಡವೆಂದು ಹೇಳುತ್ತೇನೆ. ಔಟ್ ಆಫ್ ಕಾಂಟೆಂಕ್ಸ್ಟ್ ಹುಡುಕುವುದು ಬೇಡ. ಅವರು ಒಂದು ಸೀಮಿತ ಉದ್ದೇಶಕ್ಕಾಗಿ ಉದಾಹರಣೆಯೊಂದನ್ನು ಕೊಟ್ಟರು. ಈಗ ವಾದ ವಿವಾದಗಳು ನಡೆಯುತ್ತವೆ......

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಔಟ್ ಆಫ್ ಕಾಂಟೆಕ್ಸ್ಟ್ ಹೇಳಿಲ್ಲ. ಅವರು ಹೇಳಿದ್ದನ್ನೇ ಹೇಳಿದೆಯಷ್ಟೆ. ಎಡ ಮತ್ತು ಬಲ ಜಗತ್ತಿನ ಎಲ್ಲಾ ಕಡೆಯೂ ಇದೆ..........

ಶ್ರೀ ಎಸ್. ಸುರೇಶ್ ಕುಮಾರ್ : ... ಅವರು ಹೇಳಿದ್ದು ಸೀಮಿತ ಉದ್ದೇಶಕ್ಕೋಸ್ಕರ. ತಾವು ಪೂರ್ತಿಯಾಗಿ ಕೇಳಿಸಿಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಪೂರ್ತಿ ಕೇಳಿಸಿಕೊಂಡೇ ಆ ಮಾತನ್ನು ಹೇಳಿದ್ದು.

ಉಪಾಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರರವರೇ, ತಾವು ಬೇಗ ತಮ್ಮ ಭಾಷಣ ಮುಗಿಸಿ.

ಶ್ರೀ ಅರಗ ಜ್ಞಾನೇಂದ್ರ : ಕುವೆಂಪುರವರು ತಮ್ಮ 'ಬೆರಳ್‌ಗೆ ಕೊರಳ್' ನಲ್ಲಿ ಇದನ್ನು ವಿವರಿಸುತ್ತಾರೆ. ಹೀಗೆ ವಿದ್ಯೆ ಯಾವ ನಿಟ್ಟಿನಲ್ಲಿ ಇರಬೇಕು, ಏನು ಹೃದಯ ಸಂಸ್ಕಾರವನ್ನು

ಕೊಡಬೇಕು ಅನ್ನುವಂತಾದ್ದರ ಬಗ್ಗೆ, ಇವತ್ತು ನಮ್ಮ ವಿದ್ಯಾವಂತರು ಮೃಗೀಯ ಭಾವನೆಯನ್ನು ಕಳೆದು ಮಾನವೀಯ ಗುಣಗಳನ್ನು, ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕಾಗಿತ್ತು. ಆದರೆ ಇವತ್ತು ಹೆಚ್ಚು ಹೆಚ್ಚು ವಿದ್ಯಾವಂತರಾದಷ್ಟೂ ಹೆಚ್ಚು ಹೆಚ್ಚು ಮೃಗೀಯ ಗುಣಗಳು ನಿರ್ಮಾಣವಾಗುತ್ತಾ ಹೋಗಿದೆ. ಇದನ್ನು ತೊಡೆದು ಹಾಕುವಂತಹ ನಿಟ್ಟಿನಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ರೂಪಿತನಾಗಬೇಕು. ಮಾನ್ಯ ಗೋವಿಂದೇಗೌಡರು ಈ ನಿಟ್ಟಿನಲ್ಲಿ ನಮ್ಮ ಶಿಕ್ಷಣ ತಜ್ಞರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿ ಈ ನಿಟ್ಟಿನಲ್ಲಿ ಹೋಗಲಿ ಎಂದು ಹಾರೈಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೇ, ತಾವು ಇನ್ನು 30 ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಬೇಕು.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಇವತ್ತು ಸದನದಲ್ಲಿ ಹಲವಾರು ಇಲಾಖೆಗಳ ಬೇಡಿಕೆಗಳನ್ನು ಮಂಡಿಸಿ ಒಪ್ಪಿಗೆಯನ್ನು ಕೇಳಿದ್ದಾರೆ. ನಾನು ಈ ಬೇಡಿಕೆಗಳನ್ನು ವಿರೋಧಿಸುತ್ತಾ, ಏಕೆ ವಿರೋಧಿಸುತ್ತೇನೆ ಎಂದರೆ, ಈ ಸರ್ಕಾರ ಏನೂ ಕೆಲಸ ಮಾಡೇ ಇಲ್ಲವೆಂದು ಅಲ್ಲ. ಸಾಧನೆಗಳಿಗಿಂತ ವೈಫಲ್ಯಗಳೇ ಜಾಸ್ತಿ. ಜನರ ನಿರೀಕ್ಷೆಯ ಮಟ್ಟಕ್ಕೆ ಅಥವಾ ಅದರ ಹತ್ತಿರಕ್ಕಾದರೂ ಕೂಡ ಏರಲಿಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆ ದಿಕ್ಕಿನಲ್ಲಿ ಈ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಮಾತನಾಡುತ್ತಿದ್ದೇನೆ. ನೀರಾವರಿ ಇಲಾಖೆ, ಭೂ ಕಂದಾಯ ಇಲಾಖೆ, ರಾಜ್ಯ ವಿಧಾನ ಮಂಡಲ, ನ್ಯಾಯ ಪರಿಪಾಲನೆ ಮತ್ತು ಸಾಮಾನ್ಯ ಆಡಳಿತದ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಅದಕ್ಕಾಗಿ ಮಾನ್ಯ ಉಪಾಧ್ಯಕ್ಷರು ದಯವಿಟ್ಟು ಮಾನ್ಯ ನೀರಾವರಿ ಮಂತ್ರಿಗಳನ್ನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರನ್ನು ಸದನಕ್ಕೆ ಕರೆಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅವರುಗಳು ಬರುವವರೆಗೆ ನಾನು ಕಂದಾಯ ಇಲಾಖೆ ಬಗ್ಗೆ ಮಾತನಾಡುತ್ತಿರುತ್ತೇನೆ. ಮಾನ್ಯ ಕಂದಾಯ ಸಚಿವರು ಸದನದಲ್ಲೇ ಇದ್ದಾರೆ.

ಉಪಾಧ್ಯಕ್ಷರು : ಇಬ್ಬರು ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿರಬೇಕು. ಅವರನ್ನು ಕರೆಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈ ಭೂ ಕಂದಾಯ ಇಲಾಖೆ ಬಹಳ ಒಂದು ಪ್ರಮುಖವಾದ ಇಲಾಖೆ. ರೈತರಿಗೆ ನೇರವಾಗಿ ಸಂಪರ್ಕ, ಸಂಬಂಧವನ್ನು ಹೊಂದಿರತಕ್ಕಂಥ ಇಲಾಖೆ ಇದು. ಇದರಲ್ಲಿನ ಸರ್ಕಾರದ ನ್ಯೂನತೆಗಳನ್ನು ಸರ್ಕಾರ ಸರಿಪಡಿಸಿದರೆ ದೊಡ್ಡ ಉಪಕಾರವನ್ನು ರೈತ ಸಮುದಾಯಕ್ಕೆ ಮಾಡಿದಂತಾಗುತ್ತದೆ. ಸನ್ಮಾನ್ಯ ಕಂದಾಯ ಮಂತ್ರಿಗಳು ಯುವಕರಿದ್ದಾರೆ. ಅವರಿಗೆ ಆಸಕ್ತಿಯೂ ಕೂಡ ಇದೆ. ಎಂದು ನಾನು ತಿಳಿದು ಕೊಂಡಿದ್ದೇನೆ. ಪಟ್ಟಭದ್ರ ಹಿತಾಸಕ್ತಿಗಳನ್ನು ಬಲಿ ಹಾಕುವುದಕ್ಕೆ ನನ್ನ ದೃಢ ನಿಲುವು ಎಂಬುದನ್ನೂ ಕೂಡ ಅವರು ಈ ಸದನದಲ್ಲಿ ಹೇಳಿದ್ದಾರೆ. ಆ ಮಾತನ್ನು ಉಳಿಸಿ ಕೊಳ್ಳುತ್ತಾರೆ ಎನ್ನುವಂತಹ ವಿಶ್ವಾಸವನ್ನು ನಾವು ಇಟ್ಟುಕೊಳ್ಳೋಣ. ಕನಿಷ್ಠ ರೈತರಿಗೆ ಪಹಣಿ ಪತ್ರಗಳನ್ನು ಏನು ಕೊಡಬೇಕು, ಅದರಲ್ಲಿ ಆಗುವ ಪ್ರತಿ ತೊಂದರೆಗಳನ್ನು ತಪ್ಪಿಸಬೇಕು. ಒಂದು ಪಹಣಿ ತೆಗೆದುಕೊಳ್ಳುವುದಕ್ಕೆ ಎಷ್ಟು ಕಷ್ಟ ಎಂಬುದು

ನಿಮಗೆ ಗೊತ್ತಿದೆ. ಇದಕ್ಕೆ ತಿಂಗಳಾನುಗಟ್ಟಲೆ ಅಲೆಯಬೇಕಾಗುತ್ತದೆ. ನಿಮ್ಮ ಗ್ರಾಮ ಲೆಕ್ಕಿಗರು ಸ್ಥಳದಲ್ಲಿ ಇರುವುದಿಲ್ಲ. ಅವರಿಗೆ ವಾಸ ಮಾಡಲಿಕ್ಕೆ ಕ್ವಾರ್ಟರ್ಸ್‌ಗಳು ಇಲ್ಲ. ಅವರುಗಳು ಎಲ್ಲೋ ವಾಸ ಮಾಡುತ್ತಿರುತ್ತಾರೆ. ವಾರಕ್ಕೆ ಒಂದು ದಿನವಾದರೂ ಕೂಡ ಬಂದು ಕೇಂದ್ರ ಸ್ಥಾನದಲ್ಲಿದ್ದರೆ ಜನರಿಗೆ ಅನುಕೂಲವಾಗುತ್ತದೆ. ರೈತರು ಅವರನ್ನು ಹುಡುಕಿಕೊಂಡು ಅಲೆದಾಡುವುದನ್ನು ನೋಡಿದರೆ ನಮಗೇ ಕರುಳು ಕಿತ್ತು ಬರುವಂತೆ ಆಗುತ್ತದೆ. ಇನ್ನು ಸರ್ಕಾರ ನಡೆಸುತ್ತಿರುವವರಿಗೆ ಯಾವ ರೀತಿ ತಾವು ಆಲೋಚನೆ ಮಾಡುತ್ತಾರೋ ಆ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಪ್ರತಿ ವರ್ಷ ಪಹಣಿ ಕಾಪಿ ಮುಫತ್ತಾಗಿ ಕೊಡಬೇಕೆಂದು ಇದೆ. ಆದರೆ, ಆ ರೀತಿ ಕೊಡುತ್ತಿದ್ದಾರೆಯೇ ಎಂಬುದನ್ನು ಹೇಳಿ? ಆ ರೀತಿ ಕೊಡದಿದ್ದರೆ ಪಹಣಿ ಕಾಪಿಯನ್ನು ಸುಲಲಿತವಾಗಿ ರೈತರಿಗೆ ತಲುಪಿಸಲಿಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ? ಇದಕ್ಕೇನು ನೀವು ಆಯವ್ಯಯದಲ್ಲಿ ಹಣ ಒದಗಿಸಬೇಕಾಗಿಲ್ಲ. ಆ ದಿಕ್ಕಿನಲ್ಲಿ ದಯಮಾಡಿ ಕ್ರಮ ಕೈಗೊಳ್ಳಬೇಕು.

11.30 ಎ.ಎಂ.

ಖಾತೆ ಮಾಡಲಿ, ಇನ್ನು ಕೂಡ ಅಜ್ಜ ಮುತ್ತಜನ ಹೆಸರಿನಲ್ಲಿ ಇದೆ. ಖಾತೆ ಆಗಿಲ್ಲ. ಖಾತೆ ಮಾಡುವುದಕ್ಕೆ ಯಾರೂ ಕೂಡ ಗ್ರಾಮಕ್ಕೆ ಹೋಗಿ ಖಾತೆ ಮಾಡುವುದಿಲ್ಲ ನಿಮಗೆ ಒಂದು ಉದಾಹರಣೆ ಹೇಳುತ್ತೇನೆ, ನಿಮಗೂ ಕೂಡ ಗೊತ್ತಿದೆ, ನಮ್ಮ ತಾಲ್ಲೂಕಿನಲ್ಲಿ ಒಂದು ಕೆರೆಪುಡಿ ಎಂದು ಒಂದು ಗ್ರಾಮ ಇದೆ. ಆ ಗ್ರಾಮದಲ್ಲಿ ಒಬ್ಬ ಯಜಮಾನನಿಗೆ ಇಬ್ಬರು ಹೆಣ್ಣು ಮಕ್ಕಳು ಒಂದು ಹೆಣ್ಣು ಮಗಳಿಗೆ ಮದುವೆ ಮಾಡಿ ಕೊಟ್ಟ, ಇನ್ನೊಬ್ಬ ಮಗಳಿಗೆ ಮನೆಯಲ್ಲಿಯೇ ಮದುವೆ ಮಾಡಿ ಕೊಟ್ಟರು. ಅಳಿಯನಿಗೂ ಮಾವನಿಗೂ ವ್ಯತ್ಯಾಸ ಬಂದು ಕೆಲವು ದಿವಸ ಆದ ಮೇಲೆ ಮಾವನಿಗೆ ಅಳಿಯ ಹೊರ ಹಾಕಿದ. ಏಕೆ ಹಾಕಿದ ಎಂದರೆ, ಫೌಜಿ ಮಾವ ಆಗಿದ್ದಾನೆಂದು ಖಾತೆ ಅಳಿಯನ ಹೆಸರಿಗೆ ಮಾಡಿಕೊಂಡಿದ್ದ. ನಾನು ನಮ್ಮ ಅಧಿಕಾರಿಗಳನ್ನು ಕರೆದು ಹೇಗೆ ಮಾಡಿದಿರಿ ಎಂದು ಹೇಳಿದೆ, ಮಹಜರ್ ಮಾಡಿಕೊಂಡಿದ್ದಾರೆ, ಊರಿನವರು ಹೇಳಿಕೆ ಕೊಟ್ಟಿದ್ದಾರೆ, ಅವರ ಮಾವ ತೀರಿ ಹೋಗಿದ್ದಾರೆ ಎಂದು ಹೇಳಿದರು ಅದರ ಆಧಾರದ ಮೇಲೆ ಖಾತೆ ಮಾಡಿಕೊಟ್ಟಿದ್ದೇವೆಂದು ಹೇಳಿದರು. ಸತ್ತೇ ಹೋಗಿದ್ದಾನೆಂದು ಹೇಳಿದ್ದಾನೆ, ಮಾವ ಗುಡಿಸಲಿನಲ್ಲಿದ್ದಾನೆ. ಇಂತಹವು ನಮ್ಮ ಇಲಾಖೆಯಲ್ಲಿ ಬಹಳ ಆಗುತ್ತದೆ. ಇಂಥವೇ ನಿಮಗೆ ಅಪೀಲು ಹೋಗುವುದು. ತಹಶಿಲ್ದಾರ್ ಒಂದು ಸಾರಿ ಮಾಡಿದ ಮೇಲೆ ನಾನು ಮತ್ತೆ ಮರು ಪರಿಶೀಲನೆ ಮಾಡುವುದಕ್ಕೆ ಬರುವುದಿಲ್ಲ ಎಂದು ಅಸಿಸ್ಟೆಂಟ್ ಕಮಿಷನರ್‌ಗೆ ಹೋಗಿ ಎಂದು ಹೇಳುತ್ತಾನೆ. ಬಡ ರೈತ ಮತ್ತೆ ಅಪೀಲ್ ಹಾಕಿಕೊಂಡು ಹೋಗಬೇಕು. ಗ್ರಾಮಗಳಿಗೆ ಹೋಗಿ ಅವರು ಖಾತೆಗಳನ್ನು ಮಾಡುತ್ತಾರಾ ನೀವೇ ಹೇಳಿ, ಅಲ್ಲಿಯೇ ಕೂತು ಕರೆದು ಯಾರಿಗೋ ಕರೆದು ಸೈನ್ ಹಾಕಿಸಿ ಖಾತೆ ಮಾಡುತ್ತಾರೆ. ಪ್ರಚುರ ಪಡಿಸುವುದಿಲ್ಲ. ಖಾತೆಗಳನ್ನು ಮಾಡಿದ ಸಂದರ್ಭದಲ್ಲಿ ಆಯಾ ಗ್ರಾಮಗಳಿಗೆ ಹೋಗಿ ಪ್ರಚಾರ ಪಡಿಸಿ ಖಾತೆಗಳನ್ನು ಮಾಡುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಿ. ಇನ್ನು ಅಜ್ಜ ಮುತ್ತಜ್ಜನ ಹೆಸರಿನಲ್ಲಿವೆ, ಆ ಖಾತೆಗಳ ಬದಲಾವಣೆ ಇನ್ನೂ ಆಗಿಲ್ಲ. ಬಹಳಷ್ಟು ಉಳಿದುಕೊಂಡಿವೆ. ಅವುಗಳನ್ನು

ಪಹಣಿ ಬರೆಯುತ್ತಾರೆ ನಿಮಗೆ ಗೊತ್ತಿದೆ, ಅವರೇ ಭೂ ಮಾಲೀಕರಾಗಿರುತ್ತಾರೆ. ಒಂದು ಸಾರಿ ಇಬ್ಬರಿಗೂ ಪಹಣಿ ಬರೆದು ಕೊಟ್ಟಿದ್ದರು; ನಮ್ಮ ತಾಲ್ಲೂಕಿನಲ್ಲಿ ಭೂ ನ್ಯಾಯ ಮಂಡಳಿಗೆ ಬಂದಿತ್ತು. ಹೇಗೆ ಇಬ್ಬರಿಗೂ ಬರೆದು ಕೊಟ್ಟರಿ ಎಂದು, ವಿಲೇಜ್ ಅಕೌಂಟೆಂಟ್‌ಗೆ ನಾನೇ ಕೇಳಿದೆ, ತಹಶಿಲ್ದಾರ್ ಮುಂದೆ ಹೇಳುತ್ತಾರೆ ಅವನು ಮುಂಗಾರು ಬೆಳೆದಿದ್ದ ಅವನಿಗೆ ಬರೆದು ಕೊಟ್ಟೆ, ಇವನು ಹಿಂಗಾರು ಬೆಳೆದಿದ್ದಾನೆ ಇವನಿಗೆ ಬರೆದು ಕೊಟ್ಟೆ ಎಂದು ಹೇಳಿದ. ಇವನು ಹಿಂಗಾರು ಬೆಳೆ ಬೆಳೆದಿದ್ದಾನೆ ಇವನಿಗೆ ಬರೆದು ಕೊಟ್ಟಿದ್ದೇನೆಂದು ಹೇಳುತ್ತಾನೆ. ಎಷ್ಟು ಜನಗಳ ಮೇಲೆ ಈ ತರಹ ಮಾಡುತ್ತಾರೆ, ಪಹಣಿ ತಿದ್ದುತ್ತಾರೆ, ಖಾತೆಗಳು ಬದಲಾವಣೆ ಮಾಡುತ್ತಾರೆ ಎಂಟ್ರಿಗಳು ಬದಲಾವಣೆ ಮಾಡುತ್ತಾರೆ, ವಿಲೇಜ್ ಅಕೌಂಟೆಂಟ್ ಮೇಲೆ, ರೆವಿನ್ಯೂ ಇನ್‌ಸ್ಪೆಕ್ಟರ್ ಮೇಲೆ, ತಹಶೀಲ್ದಾರ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇನ್ನು ಸ್ವಲ್ಪ ದಿವಸ ಹೋದ ಮೇಲೆ ಏನೂ ದಾಖಲೆಗಳು ಸಿಗುವುದಿಲ್ಲ. ಎಷ್ಟರ ಮಟ್ಟಿಗೆ ದಾಖಲೆಗಳು ತಿದ್ದುತ್ತಿದ್ದಾರೆ, ಖಂಡಿತವಾಗಿ ಕ್ರಮ ಕೈಗೊಳ್ಳದೆ ಹೋದರೆ ರೈತನಿಗೆ ನೀವು ಕತ್ತಲೆಗೆ ನೂಕಿದ ಹಾಗೆ ಅನ್ನತಕ್ಕಂತಹ ಕ್ರಮವನ್ನು ಮಾತನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕೃಷಿ ಪಾಸ್ ಬುಕ್ ಮೂರು ಪಾಸ್‌ಬುಕ್ ಕೊಡಬೇಕೆಂದು ಹೇಳಿದರು, ರೈತರಿಗೆ ಒಂದು, ವಿಲೇಜ್ ಅಕೌಂಟ್‌ಗೆ ಒಂದು ಇರಬೇಕು, ಸಬ್ ರಿಜಿಸ್ಟ್ರಾರ್‌ಗೆ ಒಂದು ಇರಬೇಕು ಎಂದು ಮಾಡಿದರು. ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಪಾಸ್ ಬುಕ್ ಇದೆಯಾ? ಕಂಪ್ಲೀಟ್ ಪ್ರತಿ ವರ್ಷದ ಎಂಟ್ರಿ ಕೃಷಿ ಪಾಸ್ ಬುಕ್‌ನಲ್ಲಿ ಆಗುತ್ತಿದೆಯಾ ಕಾಂಗ್ರೆಸ್ ಸರ್ಕಾರ ಇದ್ದಾಗ ಆ ಕೃಷಿ ಪಾಸ್ ಬುಕ್ ವ್ಯವಸ್ಥೆ ಬಂದಿತ್ತು, ಆದರೆ ಅದನ್ನು ಸರಿಯಾಗಿ ಮುಂದುವರಿಸಿಕೊಂಡು ಹೋಗುತ್ತಿಲ್ಲ. ಎಂಟ್ರಿ ಆಗುತ್ತಿಲ್ಲ, ಪಹಣಿ ಸರಿಯಾಗಿ ಬರೆಯುತ್ತಿಲ್ಲ. ಜಮೀನಿನ ಸರ್ವೇ ನಂಬರ್‌ನಲ್ಲಿ ಅಲ್ಲಿ ಅವನಿಗೆ ಒಂದು ಮರ ಇದೆಯಾ? ನೀರಾವರಿ ಸೌಲಭ್ಯ ಇದೆಯಾ, ಮೂಲಗಳು ಏನಿವೆ, ಯಾವ ಬೆಳೆ ಬೆಳೆಯುತ್ತಿದ್ದಾನೆ ಅವೆಲ್ಲವನ್ನೂ ಬರೆಯಬೇಕು. ಸ್ಥಳಕ್ಕೆ ಹೋಗದೆ ಎಲ್ಲೋ ಕೂತು ಬರೆಯುವುದು. ವಿವಾದಗಳನ್ನು ಸೃಷ್ಟಿ ಮಾಡುವುದಕ್ಕೆ ನಮ್ಮ ಇಲಾಖೆಯವರೇ ಕಾರಣ ಕರ್ತರಾಗಿದ್ದಾರೆ. ಆ ದಿಕ್ಕಿನಲ್ಲಿ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮತ್ತೊಂದು ಅತ್ಯಂತ ಗಂಭೀರವಾದ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ರಾಜ್ಯದಲ್ಲಿ ಇರತಕ್ಕಂತಹ ದೊಡ್ಡ ದೊಡ್ಡ ಕುಳಗಳು ಉದಾಹರಣೆಗೆ ಖೋಡೆಯವರು ಈ ರಾಜ್ಯದಲ್ಲಿ ಭೂ ಸುಧಾರಣೆ ಕಾಯಿದೆಗೆ ಕಿಂಚಿತ್ತೂ ಕೂಡ ಕವಡೆ ಕಾಸಿನಷ್ಟು ಬೆಲೆ ಕೊಡದೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಸುಮಾರು 10,000 ಎಕರೆ ಭೂಮಿಯನ್ನು ಕಬಳಿಸಿದ್ದಾರೆ. ಏಕೆ ಅವರಿಗೆ ಭೂ ಸುಧಾರಣೆ ಕಾಯಿದೆ ಅನ್ವಯವಾಗುವುದಿಲ್ಲ ಸರ್ಕಾರಿ ಭೂಮಿಯನ್ನು, ಸರ್ಕಾರಿ ಕೆರೆ ಅಂಗಳವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಒಬ್ಬ ಯಾರೋ ಬಡವ ಸರ್ಕಾರಿ ಜಾಗದಲ್ಲಿ ವಾಸಕ್ಕಾಗಿ ಗುಡಿಸಲನ್ನು ಹಾಕಿ ಕೊಂಡಿದ್ದರೆ ಅವನು ಗುಡಿಸಲನ್ನು ಪೋಲೀಸ್‌ನವರಿಗೆ ಕರೆದುಕೊಂಡು ಹೋಗಿ ಕಿತ್ತು ಎಸೆಯುತ್ತೀರಿ. ಏಕೆ ಖೋಡೆಯವರಿಗೆ ನೀವು ಖಾಲಿ ಮಾಡಿಸುವುದಕ್ಕಾಗುವುದಿಲ್ಲ. ಏಕೆ ಅವರಿಗೆ ಭೂ ಸುಧಾರಣೆ ಕಾನೂನು ಅನ್ವಯವಾಗುವುದಿಲ್ಲ. ಸರ್ಕಾರಿ ಭೂಮಿಯನ್ನು ಸರ್ಕಾರಿ ಕೆರೆ ಅಂಗಳವನ್ನು ಒತ್ತುವರಿ

ಮಾಡಿಕೊಂಡಿದ್ದಾರೆ. ಒಬ್ಬ ಯಾರೋ ಬಡವ ಸರ್ಕಾರಿ ಜಾಗದಲ್ಲಿ ವಾಸಕ್ಕಾಗಿ ಗುಡಿಸಲನ್ನು ಹಾಕಿಕೊಂಡಿದ್ದರೆ ಅವನ ಮನೆಯನ್ನು ಪೋಲೀಸ್‌ನವರಿಗೆ ಕರೆದುಕೊಂಡು ಹೋಗಿ ಕಿತ್ತು ಎಸೆಯುತ್ತೀರಿ. ಏಕೆ ಖೋಡೆಯವರಿಗೆ ನೀವು ಖಾಲಿ ಮಾಡಿಸುವುದಕ್ಕಾಗುವುದಿಲ್ಲ, ಅವರ ಹಂಗಿನಲ್ಲಿ ನಿಮ್ಮ ಆಡಳಿತ ನಡೆಯುತ್ತಿದೆಯಾ? ನಿಮ್ಮ ರಾಜಕೀಯ ವ್ಯವಸ್ಥೆ ಅವರ ಹಂಗಿನಲ್ಲಿ ಇದೆಯಾ? ಇದು ಸರ್ಕಾರದ ಗಮನಕ್ಕೆ ಬಂದಿಲ್ಲ, ಸುಮಾರು 10,000 ಎಕರೆ ಜಮೀನನ್ನು ಅಧಿಕೃತವಾಗಿ ಮತ್ತು ಅನಧಿಕೃತವಾಗಿ ಈ ರಾಜ್ಯದಲ್ಲಿ ಅವರು ಭೂ ಸುಧಾರಣೆ ಕಾಯಿದೆಯ ವ್ಯಾಪ್ತಿಯನ್ನು ಮೀರಿ ಭೂಮಿಯನ್ನು ಅನುಭವಿಸುತ್ತಿದ್ದಾರೆ. ಅವರ ಮೇಲೆ ತಾವು ಕ್ರಮ ಕೈಗೊಳ್ಳುತ್ತೀರಾ? ಕ್ರಮ ಕೈಗೊಳ್ಳತಕ್ಕಂತಹ ರಾಜಕೀಯ ಇಚ್ಛಾ ಶಕ್ತಿ ಅಥವಾ ಧೈರ್ಯ ನಿಮಗೆ ಇದೆಯಾ? ನೀವು ಆತ್ಮ ಶೋಧನೆ ಮಾಡಿಕೊಳ್ಳಬೇಕು. ನಾನು ಒಂದು ಮಾತನ್ನು ಹೇಳಿದೆ, ನೀವು ಹಂಗಿನಲ್ಲಿದ್ದೀರಿ ಎಂದು, ಏಕೆ ಈ ಮಾತನ್ನು ಹೇಳಿದೆ ಎಂದರೆ, ಖೋಡೋಸ್ ಗೆಸ್ಟ್ ಹೌಸ್‌ನಲ್ಲಿ ಇಳಿದುಕೊಂಡರೆ ಹಂಗು ಅಲ್ಲವಾ, ಮಲ್ಯ ಅವರ ಫ್ಲೈಟ್‌ನಲ್ಲಿ ಬಂದರೆ ಹಂಗು ಅಲ್ಲವಾ? ಅವರ ಮೇಲೆ ನೀವು ಕ್ರಮ ಕೈಗೊಳ್ಳುವುದಕ್ಕೆ ತಾಕತ್ತು ಬರುತ್ತಾ, ಆ ದೃಷ್ಟಿಯಿಂದ ನೀವು ನಿಮ್ಮ ರಾಜಕೀಯ ಇಚ್ಛಾ ಶಕ್ತಿಯನ್ನು ನೀವು ಇಲ್ಲಿ ಮರೆಯಬಹುದು. ಏನು ಪಟ್ಟಭದ್ರ ಶಕ್ತಿಗಳನ್ನು ತಲೆ ಎತ್ತುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದೀರಿ. ಆ ಮಾತನ್ನು ನೀವು ಉಳಿಸಿಕೊಳ್ಳಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ತುಂಬ ಗಂಭೀರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀರಾವರಿ ಇಲಾಖೆ ಬಗ್ಗೆ ಹೇಳೋಣವೆಂದರೆ ಅವರು ಇಲ್ಲ, ಇಲ್ಲದೆ ಹೇಳಿದರೆ ಅಷ್ಟೊಂದು ಪರಿಣಾಮವಾಗುವುದಿಲ್ಲ.

ಉಪಾಧ್ಯಕ್ಷರು : ಅವರು ಮೇಲ್ಮನೆಯಲ್ಲಿದ್ದಾರೆ, ಹೇಳಿ ಕಳುಹಿಸಿದ್ದೇನೆ ಬರುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ : ನೀವು ಹಂಗಿನಲ್ಲಿದ್ದೀರೋ, ನಾವು ಹಂಗಿನಲ್ಲಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಹಿಂದಿನ ಸರ್ಕಾರ ಹಂಗಿನಲ್ಲಿತ್ತು, ಈಗ ನೀವು ಹಂಗಿನಲ್ಲಿದ್ದೀರಿ ಎಂದರೆ ನೀವು ಒಪ್ಪಿಕೊಳ್ಳುತ್ತೀರಾ? ನೀವು ನಾವು ಸೇರಿ ಹಂಗಿನಿಂದ ಹೊರಗೆ ಬರೋಣ.

ಶ್ರೀ ಹೆಚ್. ಶಿವಪ್ಪ : ಇನ್ನೊಬ್ಬರಿಗೆ ಬುದ್ಧಿ ಹೇಳಬೇಕಾದರೆ ನಾವು ಏನು ಆಗಿದ್ದೇವೆಂದು ತಿಳಿದುಕೊಳ್ಳಬೇಕು. We must go with clean hands before the court. If you go with filthy hands before the court, how can you place for the justice?

ಶ್ರೀ ಎ.ಟಿ. ರಾಮಸ್ವಾಮಿ : ನಾನು ಸರಿಯಾಗಿದ್ದೇನೆ, ನೀರಾವರಿ ಇಲಾಖೆ ಬಗ್ಗೆ, ತನಿಖೆ ಮಾಡಬೇಕೆಂದು ಸದನದ ಒಳಗೆ, ಸದನದ ಹೊರಗೆ ಶಾಸನ ಬದ್ಧ ಸಮಿತಿ ಮತ್ತು ಸಾರ್ವಜನಿಕ ಪ್ರಮುಖರೂ ಕೂಡ ಸತ್ಯಾಗ್ರಹದ ಮೂಲಕ ಒತ್ತಾಯ ಮಾಡುತ್ತಿದ್ದಾರೆ. ನಾನು ಒಂದು ಮೆಚ್ಚಬೇಕು. ರಾಜ್ಯ ನಿಷ್ಠೆಗಿಂತ ಸ್ವಾಮಿ ನಿಷ್ಠೆ ನಿಮಗೆ ಜಾಸ್ತಿಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಕಾಂಗ್ರೆಸ್‌ನವರಿಗೆ ಎಷ್ಟು ವ್ಯಕ್ತಿ ನಿಷ್ಠೆ ಇದೆ, ಅಷ್ಟು ವ್ಯಕ್ತಿ ನಿಷ್ಠೆ ನಮ್ಮದಾಗುವುದಿಲ್ಲ. ತಾವು ಗಾಂಧಿ ಕುಟುಂಬದವರು ಎಂದರೆ ಅದಕ್ಕೆ ಜೋತು ಬಿದ್ದಿರುತ್ತೀರಿ, ಎಂದೂ ಬದಲಾಗುವುದಿಲ್ಲ. ನಿಮ್ಮಿಂದ ನಾವು ಬಹಳ ಕಲಿಯಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಇಲಾಖೆಯಲ್ಲಿ ಬಹಳ ಗುರುತರವಾದ ದುರುಪಯೋಗ ಆಗಿದೆ. ಆದರ ಬಗ್ಗೆ ತನಿಖೆ ಆಗಬೇಕೆಂದು ಈ ಸದನದ ಒಳಗೆ, ಸದನದ ಹೊರಗೆ ಒಂದು ಶಾಸನ ಬದ್ಧ ಸಮಿತಿ ಮತ್ತು ಸಾರ್ವಜನಿಕ ಪ್ರಮುಖರು ಬಹಳ ಒತ್ತಾಯ ಮಾಡಿದರೂ ಕೂಡ ನೀವು ತನಿಖೆ ಮಾಡುವುದಕ್ಕೆ ಸಿದ್ದರಿಲ್ಲ. ಈಗಲಾದರೂ ಸ್ವಾಮಿ ನಿಷ್ಟೆ ಇದೆ ಎಂದು ಒಪ್ಪಿಕೊಳ್ಳುತ್ತೀರಾ? ಇರಬಾರದು ಎಂದು ಅಲ್ಲ, ಅದಕ್ಕೆ ಮೆಚ್ಚಬೇಕೆಂದು ಹೇಳಿದೆ. ಆದರೆ, ರಾಜ್ಯ ನಿಷ್ಟೆಗಿಂತ ನಿಮ್ಮದು ಸ್ವಾಮಿ ನಿಷ್ಟೆ ಜಾಸ್ತಿಯಾಯಿತು. ಇದು ಎಂತಹ ದುರ್ದೈವ ಎಂದು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಕನಿಷ್ಟ ಇಷ್ಟೆಲ್ಲಾ ಆರೋಪಗಳು ಮಾಡಿದ ಮೇಲೆ ರಾಮಾಯಣದಲ್ಲಿ ನನಗಿಂತ ಹೆಚ್ಚಾಗಿ ತಮಗೆ ಗೊತ್ತಿದೆ, ಸೀತೆ ಪರಿಶುದ್ಧಳಿದ್ದಳು, ರಾಮನಿಗೂ ಕೂಡ ಗೊತ್ತಿತ್ತು. ಆದರೆ ಲೋಕ ಅಪವಾದವನ್ನು ತಪ್ಪಿಸಿಕೊಳ್ಳಬೇಕೆಂದು ಅಗ್ನಿಯ ಪ್ರವೇಶ ಮಾಡಿಸಿದ. ನಿಮಗೆ ಇಷ್ಟೊಂದು ಅಪವಾದ ಇದೆಯಲ್ಲ ಈ ಅಪವಾದವನ್ನಾದರೂ ತಪ್ಪಿಸಿಕೊಳ್ಳೋಣವೆಂದು ಸರಿ ಇದ್ದರೆ ನೀವು ತನಿಖೆಗೆ ಆದೇಶ ಮಾಡುತ್ತಿದ್ದೀರಿ, ಆದರೆ ಅಳುಕಿದೆ, ಆದ್ದರಿಂದ ಆ ತನಿಖೆಗೆ ತಾವು ಮಾಡುತ್ತಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆತರುತ್ತೇವೆ.........

ಶ್ರೀ ಎಂ.ಪಿ. ಪ್ರಕಾಶ್ : ರಾಮಸ್ವಾಮಿಯವರು ಹೇಳಿದಂತೆ ಶ್ರೀರಾಮನಿಗೆ ಸಂಬಂಧಪಟ್ಟಂತೆ ಎರಡು ಇದೆ, ಆತ ಗಂಡನಾಗಿ ಮಾಡುವ ಕರ್ತವ್ಯ, ಒಂದು ಕಡೆ ರಾಜನಾಗಿ ಮಾಡುವ ಕರ್ತವ್ಯ. ಆದ್ದರಿಂದ ಅವನು ರಾಜರಾಮನಾಗಿ ಕರ್ತವ್ಯ ನಿರ್ವಹಿಸಿದನೇ ವಿನಃ ಸೀತಾರಾಮನ ಕರ್ತವ್ಯ ನಿರ್ವಹಿಸಲಿಲ್ಲ. ಆದ್ದರಿಂದ ಸೀತಾ ರಾಮನ ಕರ್ತವ್ಯ ಕೂಡ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಯಾವ ಕಾಲದಲ್ಲೂ ಒಂದು ಅನ್ಯಾಯ. ಯಾವಾಗ ನೋಡಿದರೂ ಮಹಿಳೆಯರ ಶೀಲ ಮಾತ್ರ ಪರೀಕ್ಷೆ ಮಾಡಿದರು, ಪುರುಷರ ಶೀಲ ಪರೀಕ್ಷೆ ಮಾಡಲಿಲ್ಲ.

ಶ್ರೀ ಹೆಚ್. ಶಿವಪ್ಪ : ಮನುಷ್ಯನಿಗೆ ಶೀಲ ಎಂದು ಹೇಳುವುದಿಲ್ಲ. ಮಹಿಳೆಯವರಿಗೆ ಮಾತ್ರ ಶೀಲ ಎನ್ನುವ ಪದ ಸೀಮಿತವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏಕೆ ಶಿವಪ್ಪನವರೇ, ಏಕೆ ಮಾತನಾಡಬಾರದು ಎಂದು ಹೇಳಿ ಅವರಿಗೇ ಮಾತ್ರ ಅದು ಏಕೆ ಸೀಮಿತ?

SRI. SHIVAPPA : Shreema Reddy has no right to speak about this.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಅವರಿಗೆ ಮಾತ್ರ ಸೀಮಿತವಂತೆ. ಅವರಿಗೆ ಏಕಿಲ್ಲ ಎನ್ನುವುದಕ್ಕೆ ಏನಾದರೂ ಸಮರ್ಥನೆ ಇದ್ದರೆ ಇವರು ಹೇಳಲಿ. ಆಗಲೇ ಮಾನ್ಯ ಪ್ರಕಾಶ್‌ರವರು ಸೀತೆಯ ವಿಷಯವನ್ನು ಹೇಳಿದರು. ಸೀತೆಯ ಶೀಲವನ್ನು ಪರೀಕ್ಷೆ ಮಾಡಲು ಬೆಂಕಿಗೆ ಹಾಕಿದಂಥ ನೀವು ಎಂದಾದರೂ ಕನಿಷ್ಟ ನೀರಿಗಾದರೂ ಬಿದ್ದಿದ್ದೀರಾ? ಇವರಿಗೆ ಮಾತ್ರ ಏಕಿಲ್ಲ ಎನ್ನುವುದನ್ನು ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಶೀಲದ ಬಗ್ಗೆ ಹೆಂಗಸರು, ಗಂಡಸರು ಎಂದು ಇಲ್ಲ. ಯಾರ್ಯಾರು ಬ್ರಹ್ಮಚಾರಿಗಳು ಎಂದು ಹೇಳುತ್ತಾರೆ, ಅವರ ಶೀಲವನ್ನು ಪರೀಕ್ಷೆ ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಸೀತೆಯನ್ನು ಬೆಂಕಿಗೆ ಹಾಕಿದಂಥ ಇವರೆಲ್ಲರೂ ಒಂದು ಸಾರಿ ನೀರಿಗೆ ಬೀಳಲಿ. ಆಗ ಎಲ್ಲರೂ ಬೀಳುತ್ತಾರೆ, ಬ್ರಹ್ಮಾಚಾರಿಗಳೂ ಬೀಳುತ್ತಾರೆ, ಅಲ್ಲದವರೂ ಬೀಳುತ್ತಾರೆ. ಕನಿಷ್ಟ ಅದನ್ನಾದರೂ ಸರ್ಕಾರ ಒಪ್ಪಿಕೊಳ್ಳಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಗಂಡಸರು ಪರೀಕ್ಷಾತೀತರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಗಂಡಸರು ಪರೀಕ್ಷಾತೀತರಂತೆ. ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಇವರು ಪರೀಕ್ಷಾತೀತರು.

ಶ್ರೀ ಎ.ಟಿ. ರಾಮಸ್ವಾಮಿ : ನನಗೆ ಕೊಟ್ಟಿರುವ ಸಮಯ ಮುಗಿದು ಹೋಗುತ್ತದೆ. ಇವರು ಮಹಿಳೆಯರ ಬಗ್ಗೆ ಸಹಾನುಭೂತಿ ತೋರಿಸುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾತಂತ್ರ್ಯ ಬಂದ 50 ವರ್ಷಗಳಲ್ಲಿ ಪುರುಷ ಪ್ರಧಾನವಾದ ಈ ದೇಶದಲ್ಲಿ ಈ ರೀತಿ ಒಂದಲ್ಲ ಒಂದು ಕಾರಣಕೋಸ್ಕರ, ತಮ್ಮ ಸ್ವಾರ್ಥಕ್ಕೋಸ್ಕರ ದೇಶವನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿಕೊಂಡು ಈ ದುಃಸ್ಥಿತಿಗೆ ತಂದಿದ್ದಾರೆ. ಅದಕ್ಕಾಗಿ ಮೀಸಲಾತಿಯನ್ನು ತಂದು ಹೆಣ್ಣು ಮಕ್ಕಳಿಗೆ ಹೆಚ್ಚಿನ ಸ್ಥಾನ ಕೊಡುವುದರ ಮೂಲಕ ರಿಪೇರಿಯನ್ನು ಮಾಡುವಂಥ ಕೆಲಸದ ಬಗ್ಗೆ ಇವತ್ತು ಕೇಂದ್ರ ಸರ್ಕಾರ ಚಿಂತನೆ ಮಾಡಲು ಇದೂ ಒಂದು ಬಹಳ ಪ್ರಮುಖವಾದ ಕಾರಣ ಎಂದು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಕೊಡಬೇಕು ಎಂದು ಪಾರ್ಲಿಮೆಂಟ್‌ನಲಿ ಬಿಲ್ ತಂದಾಗ ಅದಕ್ಕೆ ಓಟು ಹಾಕಲು ಹಿಂದೇಟು ಹಾಕಿದಂಥ ಇವರೆಲ್ಲಾ ಆಗ ಎಲ್ಲಿದ್ದರು ಎಂದು ಕೇಳಿ. ಈ ಬಿಲ್ ಪಾರ್ಲಿಮೆಂಟಿನಲ್ಲಿ ಬಂದಾಗ ಇವರೆಲ್ಲಾ ಕಾರಿಡಾರ್‌ನಲ್ಲೇ ಓಡಾಡಿಕೊಂಡಿದ್ದರು. ಯಾರೂ ಪಾರ್ಲಿಮೆಂಟ್ ಹೌಸ್‌ನ ಒಳಗಡೆಗೇ ಬರಲಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿಗೆ ಒಪ್ಪಿಗೆ ಕೊಟ್ಟಂಥ ಸಂದರ್ಭದಲ್ಲಿ ಅಲ್ಲೂ ಸಹ, ಆ ಶೇ.33 ರಲ್ಲೂ ಸಹ ಮೀಸಲಾತಿ ಬೇಕು ಎಂದು ಗೊಂದಲ ಎಬ್ಬಿಸಿದರು. ಈಗಲಾದರೂ ಸರ್ಕಾರ ತರುವಂಥ ಆ ಬಿಲ್ಲಿಗೆ ಕೊಡುವಂಥಾದ್ದನ್ನು ಮಾಡಿ. ಹಿಂದೆ ಮಾಡಿದ ತಪ್ಪನ್ನು ತಿದ್ದಿಕೊಂಡು ಈಗಲಾದರೂ ಬೆಂಬಲ ಕೊಡಲಿ.

ಉಪಾಧ್ಯಕ್ಷರು : ಕಾಲಾವಕಾಶ ಕಡಿಮೆ ಇರುವುದರಿಂದ ಮಾತನಾಡಲು ಅವಕಾಶ ಕೊಡಿ, ಅವರು 30 ನಿಮಿಷಗಳಲ್ಲಿ ಮುಗಿಸಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೀಸಲಾತಿ ಬಗ್ಗೆ ಗೊಂದಲ ಎಬ್ಬಿಸಿದ್ದು ಎಷ್ಟು ನಿಜವೋ, ಅವೇ ರೀತಿ ಅದಕ್ಕೆ ಓಟು ಹಾಕದೇ ಇದ್ದದೂ ಅಷ್ಟೇ ನಿಜ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಶ್ರೀ ರಾಮ ಕೇವಲ ಸೀತೆಯ ಪತಿಯಾಗಿರಲಿಲ್ಲ. ರಾಜನೂ ಕೂಡ ಆಗಿದ್ದ. ಇವತ್ತು ಎಂ.ಪಿ. ಪ್ರಕಾಶ್‌ರವರು ಕೇವಲ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಅಥವಾ ಜೆ. ಹೆಚ್. ಪಟೇಲರು ಕೇವಲ ಮುಖ್ಯ ಮಂತ್ರಿಗಳಾಗಿ ಇಲ್ಲಿ ಕುಳಿತಿಲ್ಲ. ಅವರು ಸರ್ಕಾರದ ಆಡಳಿತವನ್ನು ಹಿಡಿದುಕೊಂಡು ಕುಳಿತಿದ್ದಾರೆ. ಆಡಳಿತ ನೆಡೆಸುತ್ತಿದ್ದಾರೆ. ರಾಮನಿಗೆ ರಾಜನಾಗಿ ಹೇಗೆ ಜವಾಬ್ದಾರಿಕೆ ಇತ್ತೋ ಹಾಗೆಯೇ ಒಂದು ಸರ್ಕಾರದ ನೇತೃತ್ವದಲ್ಲಿ ವಹಿಸಿದ ಮೇಲೆ ನಿಮಗೂ ಸಹ ಅಷ್ಟೇ ನೈತಿಕತೆಯ ಜವಾಬ್ದಾರಿ ಇದೆ, ಹೊಣೆಗಾರಿಕೆ ಇದೆ. ನೀವು ಹೇಳಿದ ಮಾತಿನಂತೆಯೇ ಆ ಹೊಣೆಗಾರಿಕೆಯನ್ನು ಹೊರಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಒತ್ತಾಯ ಮಾಡುತ್ತೇನೆ. ಇನ್ನು ನೀರಾವರಿ ಇಲಾಖೆಗೆ ಹಣ ಕೊಡುತ್ತಾರೆ. ಅಲ್ಲಿ ಏನು ಕೆಲಸ ಆಗಿಲ್ಲ ಎಂದು ನಾನು ಈ ಮೊದಲೇ ಹೇಳಿದೆ. ಏನೂ ಆಗಿಲ್ಲ ಎಂದು ನಾನು ಎಲ್ಲಾ ಇಲಾಖೆಗಳ ಬಗ್ಗೆ ಹೇಳಲು ಹೋಗುವುದಿಲ್ಲ, ಕೆಲಸ ಆಗಿವೆ. ಆದರೆ ಆ ಇಲಾಖೆಯಲ್ಲಿ ಆಗಿರುವಷ್ಟು ಹಣದ ಅವ್ಯವಹಾರ, ದುರುಪಯೋಗಗಳ ವಿಚಾರದಲ್ಲಿ ಎರಡು ಮೂರು ಇಲಾಖೆಗಳನ್ನು ಬಿಟ್ಟರೆ ಈ ಇಲಾಖೆಯೇ ನಂತರದ ಸ್ಥಾನದಲ್ಲಿ ಇದೆ. ಬಹುತೇಕ ಕಳಪೆ ಕಾಮಗಾರಿಗಳು ಆಗುತ್ತಿವೆ. ನೀವು ಎಷ್ಟು ಕಳಪೆ ಕಾಮಗಾರಿಗಳನ್ನು ಗುರುತಿಸಿ, ಎಷ್ಟು ಜನ ಅಧಿಕಾರಿಗಳ ಮೇಲೆ, ಇಂಜಿನಿಯರುಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಕಳಪೆ ಕಾಮಗಾರಿಗಳಾಗಿವೆ ಎಂದು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಲ್ಲವೆ? ಗುಣಮಟ್ಟ ಚೆನ್ನಾಗಿಲ್ಲವೆಂದು ಒಪ್ಪಿಕೊಳ್ಳುತ್ತೀರಲ್ಲವೆ? ಹೀಗೆ ಒಪ್ಪಿಕೊಂಡ ಮೇಲೆ ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆ. ಸರ್ಕಾರ ಜೀವಂತವಾಗಿದೆ, ನಾವು ಕಳಪೆ ಕಾಮಗಾರಿಗಳನ್ನು ಮಾಡಿದರೆ ಸರ್ಕಾರ ನಮ್ಮನ್ನು ಬಿಡುವುದಿಲ್ಲ, ಬಲಿ ಹಾಕುತ್ತದೆ ಎನ್ನುವ ಭಾವನೆ ಬರುವ ದಿಕ್ಕಿನಲ್ಲಿ ಎಷ್ಟು ಜನ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಂಡಿದ್ದೀರಿ? ಆ ದಿಕ್ಕಿನಲ್ಲಿ ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ಮತ್ತು ಎಷ್ಟು ಜನರನ್ನು ಡಿಸ್‌ಮಿಸ್ ಮಾಡಿದ್ದೀರಿ? ಇವುಗಳನೆಲ್ಲಾ ಕೇಳಲೆಂದೇ ನೀರಾವರಿ ಮಂತ್ರಿಗಳು ಸದನದಲ್ಲಿ ಇರಬೇಕಾಗಿತ್ತು ಎಂದು ನಾವು ಹೇಳುವುದು ಇವರ ಜೊತೆ ಸರ್ಕಾರ ಶಾಮೀಲಾಗಿ, ಇಂತಿಷ್ಟು ಪರ್ಸೆಂಟ್ ಎಂದು ಕಮೀಷನ್ ಅನ್ನು ವಸೂಲು ಮಾಡುತ್ತಿದೆಯೇ? ಕೆಲಸವನ್ನು ಎಸ್ಟಿಮೇಟ್ ಮಾಡಿಸಲು ದುಡ್ಡು ಕೊಡಬೇಕು, ಕೆಲಸ ಮಾಡಿಸಲು ದುಡ್ಡು ಕೊಡಬೇಕು. ಎಸ್ಟಿಮೇಟ್ ಮಾಡಿಸಲು ದುಡ್ಡು ಎಸ್ಟಿಮೇಟನ್ನು ಮಂಜೂರಾತಿ ಮಾಡಿಸಲು ದುಡ್ಡು, ಬಿಲ್ ಮಾಡಿಸಲು ದುಡ್ಡು ಮತ್ತು ಹಣ ತೆಗೆದುಕೊಳ್ಳುವುದಕ್ಕೆ ದುಡ್ಡು, ಹೀಗೆ ಎಲ್ಲದಕ್ಕೂ ದುಡ್ಡು ಕೊಡಬೇಕು.

ಶ್ರೀ ಹೆಚ್. ಎಸ್. ಪ್ರಕಾಶ್ : ಇದು ಹಿಂದಿನಿಂದಲೋ ಅಥವಾ ಇವತ್ತಿನಿಂದಲೋ?

ಶ್ರೀ ಎ.ಟಿ. ರಾಮಸ್ವಾಮಿ : ಮೊದಲು ಸತ್ಯ ಹರಿಶ್ಚಂದ್ರರಿದ್ದರು ಎಂದು ನಾನು ಯಾವಾಗಲೂ ಹೇಳಿಯೇ ಇಲ್ಲ. ನಮ್ಮ ಸರ್ಕಾರ ಇದ್ದಾಗಲೂ ಕೂಡ ನಾನು ಮಾತನಾಡಿರುವಂಥ ಭಾಷಣದ ದಾಖಲೆಗಳನ್ನು ತೆಗೆದು ನೋಡಿ. ಅಂದರೆ, ಆಗ ಇತ್ತು, ಈಗ ಇನ್ನೂ ಜಾಸ್ತಿ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಿದ್ದೀರಾ? ನೀವು ಒಪ್ಪಿಕೊಳ್ಳುತ್ತಿದ್ದೀರಲ್ಲ, ಅದಕ್ಕೆ

ಶಹಭಾಸ್‌ಗಿರಿಯನ್ನು ಕೊಡಬೇಕು. ಆಗಲೂ ಇತ್ತು, ಈಗ ನಾವೂ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಲ್ಲ, ಈ ರಾಜ್ಯದ ಜನ ಈ ಮಾತನ್ನು ಒಪ್ಪಬೇಕು. ನಿಮಗೆ ಶಹಭಾಸ್‌ಗಿರಿಯನ್ನು ಕೊಡಬೇಕು. ಆಗಲೂ ಇತ್ತು, ಈಗ ನಾವೂ ಮಾಡಿತ್ತಿದ್ದೇವೆ ಎಂದು ಹೇಳುತ್ತಿದ್ದೀರಲ್ಲಾ, ಈ ರಾಜ್ಯದ ಜನ ಈ ಮಾತನ್ನು ಒಪ್ಪಬೇಕು. ನಿಮಗೆ ಶಹಭಾಸ್‌ಗಿರಿಯನ್ನು ಕೊಡಬೇಕು. ಆಗ ಇರಲಿಲ್ಲವೇ ಎಂದು ಇದನ್ನು ಸಮರ್ಥನೆ ಮಾಡಿಕೊಳ್ಳುವಂಥ ನೀತಿಗೆ ನಾಚಿಕೆಯಾಗಬೇಕು ನಮಗೆ. ನೀವು ಮಾಡುತ್ತಿರಲಿಲ್ಲವೇ, ಈಗ ನಾವು ಮಾಡುತ್ತಿದ್ದೇವೆ ಎಂದು ಹೇಳುವ ಮಟ್ಟಕ್ಕೆ ನಾವು ಹೋಗಿದ್ದೇವಲ್ಲ, ಆಡಳಿತವನ್ನು ಆ ದಿಕ್ಕಿಗೆ ತೆಗೆದುಕೊಂಡು ಹೋಗಿದ್ದೇವಲ್ಲ, ವ್ಯವಸ್ಥೆ ಕೆಟ್ಟು ಹೋಗಿದೆಯಲ್ಲ, ಅದಕ್ಕೆ ನಮ್ಮನ್ನು ನಾವು ಶಪಿಸಿಕೊಳ್ಳಬೇಕು, ನಾಚಿಕೆ ಪಟ್ಟುಕೊಳ್ಳಬೇಕು. ಈ ಉತ್ತರವನ್ನು ನಾವು ನಿಮ್ಮಿಂದ ನಿರೀಕ್ಷೆ ಮಾಡಬೇಕೇ? ಇದು ನಮ್ಮ ಪ್ರಕಾಶ್‌ರವರಿಗೂ ಗೊತ್ತಿದೆ, ಅವರೇ ಹೇಳಲಿ. ಇವತ್ತು ಶೇ. 40-45 ರಷ್ಟು ಹಣ ಪರ್ಸೆಂಟೇಜ್ ರೂಪದಲ್ಲಿ ವಸೂಲಿಯಾಗುತ್ತಿದೆ. ಆ ಇಲಾಖೆಯ ಮಂತ್ರಿಗಳು ಅದನ್ನು ನಿಗ್ರಹ ಮಾಡಲು ಏನು ಕ್ರಮ ಕೈಗೊಂಡಿದ್ದಾರೆ. ಕಣ್ಣು ಮುಚ್ಚಿಕೊಂಡು ಕುಳಿತ್ತಿದ್ದಾರೆಯೇ? ನಾನು ಅದಕ್ಕೇ ಹೇಳಿದ್ದು, ಇವರಿಗೂ ಪರ್ಸೆಂಟೇಜ್ ಬರುತ್ತಿದೆಯೇ? ಹೇಮಾವತಿ ಯೋಜನೆಗೆ 16 ಕೋಟಿ ಮಾಡಿದ್ದರಲ್ಲ, ಇವತ್ತು 800 ಕೋಟಿ ಮಾಡಿದರೂ ಅದು ಏಕೆ ಮುಗಿಯುತ್ತಿಲ್ಲ. ನಿಮಗೇ ಗೊತ್ತಿದೆ, ಹೇಮಾವತಿ ಎಡದಂಡೆ ನಾಲೆಯನ್ನು ಅಗಲ ಮಾಡಬೇಕು ಎಂದು ನಿರ್ಣಯವಾಗಿದೆ. ಅಗಲ ಮಾಡದಿದ್ದರೆ, ತುಮಕೂರಿಗೆ ಮಂಡ್ಯಕ್ಕೆ ನೀರು ಹೋಗುವುದಿಲ್ಲ. ನಾಲೆಯನ್ನು ಅಗಲ ಮಾಡಬೇಕು ಎಂದು ಒಂದು ಕಡೆ ಪ್ರೊಪೋಸಲ್ ಕಳುಹಿಸುತ್ತಾರೆ. ಮತ್ತೊಂದು ಕಡೆ ಲೈನಿಂಗ್, ಕಾಂಕ್ರೀಟಿಂಗ್ ಮಾಡುತ್ತಿದ್ದಾರೆ. ಇದು ಕೊಳ್ಳೆ ಹೊಡೆಯುವುದಲ್ಲವೇ?

ಶ್ರೀ ಹೆಚ್. ಎಸ್. ಪ್ರಕಾಶ್ : ಬಹಳಷ್ಟು ವರ್ಷಗಳಿಂದ ಇದು ನಡೆದಿದೆ. ತುಮಕೂರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದಾಗ ಇವರದೇ ಸರ್ಕಾರವಿತ್ತು. ಆಗ ಏಕೆ ಮಾಡಲಿಲ್ಲ ನೀವು? ಹೇಮಾವತಿಯ ನಾಲೆಯನ್ನು ಜೀರೋನಿಂದ 48 ಕಿ.ಮೀ. ಅಗಲ ಮಾಡಬೇಕಾಗಿತ್ತಲ್ಲ, ಆ ಕೆಲಸವನ್ನು ನಿಲ್ಲಿಸಿ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದು ತಮ್ಮ ಕಾಲದಲ್ಲೇ. ಈಗ ನೀವು ನಮಗೆ ವೇದ ಹೇಳಲು ಬಂದರೆ ನಾವು ಯಾರನ್ನು ಕೇಳಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೇ, ಅವರು ಹೇಳುವ ಮಾತು ಸತ್ಯ. ಏನು ಆಗುತ್ತಿದೆ ಎಂದರೆ, ಯಾರನ್ನೂ ಅಲ್ಲಗಳೆಯಲು ಆಗುವುದಿಲ್ಲ. ಈ ದೇಶ 50ನೇ ಸ್ವಾತಂತ್ರ್ಯೋತ್ಸವದ ದಿವಸ, ಈ ದೇಶದ ರಾಷ್ಟ್ರಾಧ್ಯಕ್ಷರು ದೇಶದಿಂದ ಭ್ರಷ್ಟಾಚಾರವನ್ನು ಹೊಡೆದೋಡಿಸಬೇಕು ಎಂದು ಭಾಷಣ ಮಾಡುವಂಥ ಸ್ಥಿತಿ ನಿರ್ಮಾಣವಾಗಿದೆ. ಅದನ್ನು ಅಲ್ಲಗಳೆಯಲು ಆಗುವುದಿಲ್ಲ. ಆದ್ದರಿಂದ ಅದಕ್ಕೆ ಏನು ಮಾಡಬೇಕು ಎಂದು ಸಲಹೆ ಕೊಡಿ. ಅದು ಬಿಟ್ಟು ಸುಮ್ಮನೆ ಹಾಗೆ ನಡೆಯುತ್ತಿದೆ, ಹೀಗೆ ನಡೆಯುತ್ತಿದೆ ಎಂದರೆ ಹೇಗೆ? ಅದನ್ನು ಹೇಗೆ ನಿಲ್ಲಿಸಬೇಕು ಎಂದು ಸಲಹೆ ಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ : ಹೇಮಾವತಿ ಎಡದಂಡೆ ಕಾಲುವೆಯನ್ನು ಅಗಲ ಮಾಡಬೇಕು ಎಂದು ಸರ್ಕಾರದ ಮುಂದೆ ಪ್ರೊಪೋಸಲ್ ಇದೆ. ಅದು ಮಂತ್ರಿಗಳಿಗೆ ಗೊತ್ತು, ಇಲಾಖೆಯವರಿಗೆ ಗೊತ್ತು, ಶಾಸನ ಸಭೆಯ ಎಲ್ಲಾ ಸದಸ್ಯರುಗಳಿಗೂ ಗೊತ್ತು. ಆ ನಾಲೆಯನ್ನು ಅಗಲ ಮಾಡಬೇಕು ಎಂದು ಗೊತ್ತಿದ್ದ ಮೇಲೆ, ಅದಕ್ಕೆ ಲೈನಿಂಗ್ ಮಾಡುವ ಅವಶ್ಯಕತೆ ಇದೆಯೇ ಇವತ್ತೂ ಕೂಡ ಮಾಡುತ್ತಿದ್ದಾರೆ. ಇದು ಏತಕ್ಕೋಸ್ಕರ. ಅದು ಈ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಅಲ್ಲ, ರೈತರ ಹಿತದೃಷ್ಟಿಯಿಂದ ಅಲ್ಲ ಅವರ ಜೇಬಿನ ಹಿತದೃಷ್ಟಿಯಿಂದ. ಇದು ಗೊತ್ತಿದೆಯಲ್ಲ, ಇದಕ್ಕೆ ಏಕೆ ತನಿಖೆ ಮಾಡಬೇಕು. ಅವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳಿ. ನಾಲ್ಕು ಜನರನ್ನು ಮನೆಗೆ ಕಳುಹಿಸಿ. ಹಾಗೆ ಮಾಡಲು ಆಗುವುದಿಲ್ಲವೇ? ಇಲ್ಲಿ ಭಾಷಣ ಮಾಡಿ ಹೋಗಲು ಬಂದಿದ್ದೇವೆಯೇ? ಇಲ್ಲಿ ಕುಳಿತು ವೇದ ಕೇಳಲು ನಾವು ಇಲ್ಲಿಗೆ ಬಂದಿಲ್ಲ. ಕಾರ್ಯಾಚರಣೆಯಾಗಬೇಕು. ನಮ್ಮ ಕಾಲದಲ್ಲಿ ಏನೂ ಆಗಿಲ್ಲ ಎಂದು ನಾನು ಹೇಳುತ್ತಿಲ್ಲ. ಅದಕ್ಕಾಗಿಯೇ ಇವತ್ತು ನಾವು ಇಲ್ಲಿ ಬಂದು ಕುಳಿತಿರುವುದು. ಜನ ನಿಮ್ಮಿಂದ ಏನನ್ನೋ ನಿರೀಕ್ಷೆ ಮಾಡಿ ಅಲ್ಲಿ ಕೂರಿಸಿದ್ದಾರೆ. ನಾನು ನೀರಾವರಿ ಇಲಾಖೆಯ ಮೇಲೆ ಮಾತನಾಡಿದಾಗ ಏನು ಹೇಳಿದ್ದೇನೆ ಎನ್ನುವುದಕ್ಕೆ ನೀವು ದಾಖಲೆಗಳನ್ನು ತೆಗೆದು ನೋಡಿ. ಅವತ್ತು ಪರ್ಸೆಂಟೇಜ್ ಇರಲಿಲ್ಲ ಎಂದು ಹೇಳಿಲ್ಲ. ಅವತ್ತು ಇತ್ತು. ಆದರೆ ಇವತ್ತು ಅದು ಇನ್ನೂ ಜಾಸ್ತಿಯಾಗುತ್ತಾ ಹೋಗುತ್ತಿದೆ. ಅದಕ್ಕಾಗಿಯೇ ಜನ ನಿರೀಕ್ಷೆ ಇಟ್ಟುಕೊಂಡು, ನಿಮ್ಮನ್ನು ಆಯ್ಕೆಮಾಡಿ ಅಲ್ಲಿಗೆ ತಂದದ್ದು? ನೀವೇ ಹೇಳಿ. ಇವತ್ತು ನೀವು ಹೇಳಿದ ಕೆಲಸವೇ ಮಂಜೂರಾತಿಯಾಗುವುದಿಲ್ಲ. ಆದರೆ ಒಬ್ಬ ಗುತ್ತಿಗೆದಾರ 10 ಎಸ್ಟಿಮೇಟ್‌ಗಳನ್ನು ತೆಗೆದುಕೊಂಡು ಹೋಗಿ ದುಡ್ಡು ಕೊಟ್ಟು ಮಂಜೂರಾತಿ ಮಾಡಿಸಿಕೊಳ್ಳುತ್ತಾನೆ. ಏಕೆಂದರೆ, ಅಲ್ಲಿ ದುಡ್ಡು ಕೊಟ್ಟರೇ ಮಂಜೂರಾತಿಯಾಗುವುದು. ನೀವು ಹೇಳಿದಂಥಾದ್ದಕ್ಕೆ ಕಿಮ್ಮತ್ತಿನ ಕಾಸಿನ ಬೆಲೆಯೂ ಇಲ್ಲ. ಇಂಥ ಆಡಳಿತವನ್ನು ನಡೆಸಿಕೊಂಡು ಹೋಗುವುದು ಸರಿ ಎಂದು ನೀವು ಒಪ್ಪಿಕೊಳ್ಳುವುದಾದರೆ, ನಾನು ಮಾತನಾಡುವುದು ಹೇಳುವುದು ಏನೂ ಉಳಿದಿಲ್ಲ. ದಯಮಾಡಿ ಆ ದಿಕ್ಕಿನಲ್ಲಿ ಗಂಭೀರವಾಗಿ ಯೋಚನೆ ಮಾಡಬೇಕು. ಏಕೆಂದರೆ, ಆ ಇಲಾಖೆಯಲ್ಲಿ ನೂರಕ್ಕೆ 50 ಪೈಸೆ ಹಣವೂ ಕೂಡ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಈ ಪರ್ಸೆಂಟೇಜ್ ವಸೂಲು ಎಲ್ಲರಿಗೂ ಗೊತ್ತಿದೆ. ಇದು ಇವತ್ತಿನದಲ್ಲ. ಹಿಂದಿನಿಂದ ನಡೆದುಕೊಂಡು ಬಂದಿದೆ, ಈಗ ಜಾಸ್ತಿಯಾಗುತ್ತಲೇ ಹೋಗುತ್ತಿದೆ. ಆದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಸರ್ಕಾರವಾಗಲೀ ಇಲಾಖೆಯಾಗಲೀ ಗಮನ ಹರಿಸಿಲ್ಲ. ಎಷ್ಟು ಕಳಪೆ ಕಾಮಗಾರಿಗಳಾಗುತ್ತಿವೆ ಎಂದರೆ ಕಳೆದ ವರ್ಷ ಮಾಡಿದಂಥ ಲೈನಿಂಗ್ ಈ ವರ್ಷ ಇಲ್ಲ. ಅಂಥದ್ದನ್ನು ಇನ್ಸ್‌ಪೆಕ್ಷನ್ ಮಾಡಿ ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿ. ಗುಣ ನಿಯಂತ್ರಣ ವಿಭಾಗ ಎಂದು ಒಂದು ವಿಭಾಗವಿದ್ದು, ಅವರಿಗೆ ಆರ್ಧ ಪರ್ಸೆಂಟೋ, ಒಂದು ಪರ್ಸೆಂಟೋ ಕೊಟ್ಟುಬಿಟ್ಟರೆ ಸರ್ಟಿಫಿಕೇಟ್ ಕೊಡುತ್ತಾರೆ. ಅವರು ಸ್ಥಳಕ್ಕೆ ಹೋಗುವುದೇ ಇಲ್ಲ. ಬರೀ ನಿಮ್ಮ ಕಾಲದಲ್ಲಿ ಆಗುತ್ತಿದೆ ಎಂದು ನಾನು ಹೇಳುತ್ತಿಲ್ಲ. ಹಿಂದಿನಿಂದಲೂ ಕೂಡ ಇದು ನಡೆದುಕೊಂಡು ಬಂದಿದೆ. ಆದರೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಏಕೆ ತೆಗೆದುಕೊಳ್ಳುತ್ತಿಲ್ಲವೆಂದರೆ ಮಾಮೂಲಿ ಬರುತ್ತಿರುವುದರಿಂದ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದಕ್ಕೆ

ನಾನು ಏನು ಹೇಳಬೇಕು. ಆದ್ದರಿಂದ ದಯಮಾಡಿ ಸರ್ಕಾರ ಈ ವಿಷಯದ ಬಗ್ಗೆ ಗಮನ ಹರಿಸಬೇಕು. ಹಣ ದುರುಪಯೋಗವಾಗದಂತೆ ಮಾಡಬೇಕು. ಇದು ಸಾರ್ವಜನಿಕರ ಹಣ. ನೀರಾವರಿ ಹೆಸರಿನಲ್ಲಿ, ಕೃಷಿ ಹೆಸರಿನಲ್ಲಿ ವೆಚ್ಚ ಮಾಡುತ್ತಿರುವ ಹಣ ಹೆಚ್ಚಾಗಿ ಪೋಲಾಗುತ್ತಿದೆ. ಅದು ಸರಿಯಾಗಿ ಸದ್ಬಳಕೆಯಾಗುವಂತೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ನಿಮ್ಮ ಆಡಳಿತದ ವೈಖರಿ ಹೇಗಿದೆ ಎನ್ನುವುದಕ್ಕೆ ನಾನು ಒಂದು ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ನೀರಾವರಿ ಇಲಾಖೆಯಲ್ಲಿ ಕಾವೇರಿ ಜಲಾನಯನ ಆಯಕಟ್ಟು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ಇಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದಿರಿ. ಅಲ್ಲಿ ಒಬ್ಬರು ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಇದ್ದಾರೆ. ಬೆಳಗಾಂ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಶ್ರೀ ನಾಗಬಸವಯ್ಯ ಎನ್ನುವವರು ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಐದು ಕೋಟಿ ರೂಪಾಯಿಗಳ ದುರುಪಯೋಗ ಆಗಿದೆ. ಈ ವಿಷಯ ಗೊತ್ತಾದ ಮೇಲೆ ಸರ್ಕಾರ ಅವರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿ ಒಂದು ವರ್ಷವಾಯಿತು. ಆ ವೇಳೆಯಲ್ಲಿ ಅವರಿಗೆ ಪ್ರಮೋಷನ್ ಆಗಿ ಸೂಪರಿಂಟೆಂಡ್ ಇಂಜಿನಿಯರ್ ಆಗಿ ಮೈಸೂರು ಕಾವೇರಿ ಜಲಾನಯನ ಆಯಕಟ್ಟು ಅಭಿವೃದ್ಧಿ ಪ್ರಾಧಿಕಾರಕ್ಕೆ ಹೋಗಿದ್ದರು. ಆ ಹುದ್ದೆ ಭೂ ಅಭಿವೃದ್ಧಿ ಅಧಿಕಾರಿ ಎಂದು ಅವರನ್ನು ಅಲ್ಲಿಗೆ ವರ್ಗಾಯಿಸಿದರು. ಇದನ್ನು ಆಡಳಿತವೆಂದು ಕರೆಯಲಾ? ಈ ಸರ್ಕಾರಿ ಆದೇಶ ಆದ ದಿನಾಂಕ 6-8-1997ರಿಂದ ಜಾರಿಗೆ ತರಬೇಕೆಂದು ಕಳುಹಿಸಿಕೊಡಲಾಯಿತು. ಅಲ್ಲಿರುವಂತಹ ಅಧಿಕಾರಿಯಾಗಿರುವವರು ಹಾಗೆ ದೇಶವನ್ನು ಪಾಲನೆ ಮಾಡಬೇಕಲ್ಲಾ? ಆದರೆ ಅಲ್ಲಿ ಮೂರುವರೆ ತಿಂಗಳಾದರೂ ಸಸ್ಪೆನ್ಸನ್ ಆರ್ಡರ್ ಅನ್ನು ಜಾರಿ ಮಾಡಲಿಲ್ಲ. ಈ ಅಧಿಕಾರಿ ಮತ್ತೆ ಸರ್ಕಾರವನ್ನು ಇವರು ನಮ್ಮ ಇಲಾಖೆಯವರಲ್ಲ, ಎರವಲು ಸೇವೆಯ ಮೇಲೆ ಇಲ್ಲಿಗೆ ಬಂದಿದ್ದಾರೆ. ಇವರನ್ನು ನಾವು ಸಸ್ಪೆನ್ಸನ್ ಮಾಡುವುದಕ್ಕೆ ಬರುತ್ತದೆಯೇ? ಇಲ್ಲವೇ? ಎಂದು ಕೇಳುವುದು. ಇದು ಸುಮ್ಮನೆ ದಿವಸಗಳನ್ನು ನೂಕುವುದಕ್ಕೆ ಈ ರೀತಿ ಮಾಡಿದ್ದಾರೆ. ಒಬ್ಬ ಸೂಪರಿಂಟೆಂಡ್ ಇಂಜಿನಿಯರ್‌ಗೆ ಸಸ್ಪೆನ್ಸ್‌ನ್ ಆರ್ಡರ್ ಆದೇಶ ಮಾಡಿದ ಮೇಲೆ ಅದೇ ಕಛೇರಿಯಲ್ಲಿ ಸಂಬಳವನ್ನು ತೆಗೆದುಕೊಂಡು ಮೂರೂವರೆ ತಿಂಗಳುಗಳ ಕಾಲ ಸರ್ಕಾರಿ ಕಾರು, ಫೋನು ಸೌಲಭ್ಯವನ್ನು ಉಪಯೋಗಿಸಿಕೊಂಡು ಕೆಲಸ ಮಾಡಿದ್ದಾನೆ. ಈ ರೀತಿಯಾಗಿ ಆಡಳಿತಾತ್ಮಕವಾಗಿ ಏನಾದರೂ ಆಗಿದ್ದರೆ ಅದು ಈ ಭಾರತದ ಇತಿಹಾಸದಲ್ಲಿ ಇಲ್ಲ ಎಂದು ಹೇಳಬಹುದು. ಅದು ಯಾರ ಕಾಲದಲ್ಲಿ ಆಗಿದೆ ಎಂಬುದು ಬೇಕಾ? ಈ ವಿಷಯವನ್ನು ಕುರಿತು ಅಲ್ಲಿಯ ಕಾಡಾ ಅಧ್ಯಕ್ಷರು ಪತ್ರವನ್ನು ಬರೆಯುತ್ತಾರೆ. ನೀವು ಏಕೆ ಅವರನ್ನು ಸಸ್ಪೆಂಡ್ ಮಾಡಲಿಲ್ಲವೆಂದು ಬರೆಯುತ್ತಾರೆ. ಅದಕ್ಕೆ ಅಲ್ಲಿನ ಚೀಫ್ ಇಂಜಿನಿಯರ್ ರವರು ನಾನು ಸರ್ಕಾರಕ್ಕೆ ಈ ವಿಚಾರವಾಗಿ ಸಮಾಜಾಯಿಸಿ ಕೇಳಿ ಪತ್ರ ಬರೆದಿದ್ದೇನೆಂದು ಇವರಿಗೆ ಪತ್ರ ಬರೆಯುತ್ತಾರೆ. ಇವರು ಹೀಗೆ ಹೇಳುತ್ತಾ ಕಾಲ ತಳ್ಳಿಕೊಂಡು ಬರುತ್ತಾರೆ? ಮತ್ತೆ ಕಾರಣವನ್ನು ಕೇಳಿ ಅಧ್ಯಕ್ಷರು ಪತ್ರವನ್ನು ಬರೆಯುತ್ತಾರೆ. ಅದಕ್ಕೆ ಚೀಫ್ ಇಂಜಿನಿಯರ್ ಬರೆದಿರುವಂತಹ ಪತ್ರವನ್ನು ಓದಿದರೆ ಈ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ನಾವು ನಾಚಿಕೆ

ಪಡಬೇಕಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆ ಎನ್ನುವಂಥಾದ್ದು ಏನಾಗಿದೆ. ಈ ಅಧಿಕಾರಶಾಹಿಗಳು ಯಾವ ರೀತಿಯಲ್ಲಿ ದಿಕ್ಕನ್ನು ತಪ್ಪಿಸುತ್ತಿದ್ದಾರೆನ್ನುವಂಥಾದ್ದಕ್ಕೆ ನಿಮಗೆ ಈ ಪತ್ರದ ಸಾರಾಂಶವನ್ನು ಹೇಳುತ್ತೇನೆ. ಅಧ್ಯಕ್ಷರು, ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ, ಮೈಸೂರು, ವಿಷಯ : ಶ್ರೀ ಎನ್. ನಾಗಬಸವಯ್ಯ, ಭೂ ಅಭಿವೃದ್ಧಿ ಅಧಿಕಾರಿಯವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ ಎಂದು ಇದೆ. ಉಲ್ಲೇಖ : ಶ್ರೀ ಎನ್. ನಾಗಬಸವಯ್ಯ, ಭೂ ಅಭಿವೃದ್ಧಿ ಅಧಿಕಾರಿಯವರನ್ನು ಸರ್ಕಾರಿ ಆದೇಶ ಸಂಖ್ಯೆ, ದಿ: 6-8-1997ರಲ್ಲಿ ಅಮಾನತು ಗೊಳಿಸಲು ಆದೇಶಿಸಿದೆ ಎಂದು ಇವರು ದಿ:5-11-1997ರಂದು ಪತ್ರ ಬರೆದಿರುವುದು. ಈ ರೀತಿ ಸದರಿ ಆದೇಶದ ಭಾಗ ಪ್ಯಾರ 1ರ ಬಗ್ಗೆ ಕ್ರಮ ಕೈಗೊಳ್ಳಲು ಆಡಳಿತಾಧಿಕಾರಿ ಕಾಡಾ ಕಾಯಿದೆ ಹಾಗೂ ನಿಯಮ 1980ರಲ್ಲಿ ಬೇರೆ ಇಲಾಖೆಯಿಂದ ಬಂದಿರುವಂತಹ ಬೇರೆ ಅಧಿಕಾರಿಯ ಬಗ್ಗೆ ಯಾವುದೇ ಅಧಿಕಾರವಿಲ್ಲ ಆದುದರಿಂದ ಈ ಬಗ್ಗೆ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನವನ್ನು ಕೋರಿ, ಕಾರ್ಯದರ್ಶಿ, ನೀರಾವರಿ ಇಲಾಖೆ, ಬೆಂಗಳೂರು, ಇವರೊಂದಿಗೆ ಪತ್ರ ವ್ಯವಹಾರವನ್ನು ನಡೆಸಲಾಗುತ್ತಿದೆ. ಆದುದರಿಂದ ಸರ್ಕಾರದಿಂದ ಮುಂದಿನ ಆದೇಶ ಬರುವವರೆಗೆ ಸದರಿ ಅಧಿಕಾರಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಾಧ್ಯವಿರುವುದಿಲ್ಲ. ಸರ್ಕಾರದ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಇದಕ್ಕೆ ಶ್ರೀ ಎನ್. ನಾಗ ಬಸವಯ್ಯನವರು ಸರ್ಕಾರದ ಉನ್ನತ ದರ್ಜೆಯ ಅಧಿಕಾರಿಯಾದ ನನಗೆ ಈ ರೀತಿಯಾಗಿ ಕಾರಣವನ್ನು ಕೇಳುವಂತಹ ಮತ್ತು ನೋಟೀಸ್ ಕೊಡುವಂತಹ ಅಧಿಕಾರ ಸರ್ಕಾರಕ್ಕೆ ಅಲ್ಲದೆ ಬೇರೆ ಯಾರಿಗೂ ಇಲ್ಲವೆಂದು ತಿಳಿಸಿದ್ದಾರೆ. ನೀವು ಕಾರಣವನ್ನು ಕೇಳಿ ಕೊಟ್ಟಿರುವಂತಹ ನೋಟೀಸ್ ಅನ್ನು ನಿಮಗೆ ವಾಪಸ್ಸು ಕಳುಹಿಸುತ್ತಿದ್ದೇನೆ, ಎಂದು ಪತ್ರ ಬರೆಯುತ್ತಾರೆ. ಚೀಫ್ ಇಂಜಿನೀಯರ್ ಕಾವೇರಿ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಾರಣವನ್ನು ಕೇಳಿ ನೋಟೀಸ್ ಕೊಡುವ ಅಧಿಕಾರವಿಲ್ಲವೆಂದು ಅವರಿಗೆ ನೋಟೀಸ್ ವಾಪಸ್ಸು ಕಳುಹಿಸಿದ್ದಾರೆ. ಈ ರೀತಿಯಾಗಿ ಬರೆಯಬೇಕೆಂದರೆ ಅವರಿಗೆ ಎಷ್ಟು ಗಡಸುತನವಿರಬಹುದು, ಇವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಒಬ್ಬ ಅಧ್ಯಕ್ಷನಿಗೆ ನೀನು ನನ್ನನ್ನು ಕೇಳುವಂತಹ ಅಧಿಕಾರವಿಲ್ಲವೆಂದು ಆದಮೇಲೆ ಅಧ್ಯಕ್ಷರನ್ನು ಏಕೆ ಇಟ್ಟಿದ್ದೀರಿ? ಆ ಅಧ್ಯಕ್ಷರಿಗೆ ನಾನು ಹೇಳುವಂಥಾದ್ದು ಏನೆಂದರೆ ಅವರಿಗೆ ಘನತೆ ಗೌರವವೆಂದು ಇದ್ದಿದ್ದರೆ ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಗಿತ್ತು. ಮಾನ್ಯ ನಾಗೇಗೌಡರೇ, ನಾನು ಕೇಳುವುದೇನೆಂದರೆ ಒಬ್ಬ ಅಧ್ಯಕ್ಷರಿಗೆ, ಇದನ್ನು ಕೇಳುವಂತಹ ಅಧಿಕಾರವಿಲ್ಲವೇ? ಇದನ್ನು ನಾನು ದಾಖಲೆಗಳ ಸಹಿತ ಹೇಳುತ್ತಿದ್ದೇನೆ. ಈ ಪತ್ರಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಮತ್ತೆ ಅಧ್ಯಕ್ಷರು ನೀವು ಈ ರೀತಿಯಾಗಿ ಎಲ್ಲ ಬರೆದಿದ್ದೀರಿ, ಇದು ನಿಮ್ಮ ಉದ್ಧಟತನವನ್ನು ತೋರಿಸುತ್ತದೆ, ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ತಿಳಿಸಿದರು. ಆಗ ಮತ್ತೆ ಎರಡನೆಯ ಪತ್ರವನ್ನು ಬರೆದಿದ್ದಾರೆ. ನಾನು ಅದೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಪ್ರಾಧಿಕಾರದ ಕಾಯಿದೆಯ 1980 ಕಲಂ 11(ಎ)ನಂತೆ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯಾಗಿ ಪ್ರಾಧಿಕಾರದ ಮೇಲ್ವಿಚಾರಕನಾಗಿ ಮಾತ್ರ ಕೆಲಸ ಮಾಡಬೇಕು. ಈ ಪ್ರಾಧಿಕಾರವು ಸರ್ಕಾರದಿಂದ ರಚಿಸಲ್ಪಟ್ಟಿರುವುದು, ಸರ್ಕಾರದ

ಆದೇಶ, ಸುತ್ತೋಲೆ ಇವುಗಳನ್ನು ಕೂಡ ಗಮನದಲ್ಲಿ ತೆಗೆದುಕೊಂಡು ಅದರಂತೆ ಕಾರ್ಯ ನಿರ್ವಹಿಸಬೇಕು. ಈ ಪ್ರಾಧಿಕಾರದ ಆಡಳಿತಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಮಾತ್ರ ಕೆಲಸ ಮಾಡಬೇಕಾಗುತ್ತದೆಯೇ ವಿನ: ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿ ಅಲ್ಲವೆಂದು ಹೇಳಿದ್ದಾರೆ. ಅಂದರೆ ಇಲ್ಲಿ ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡಬಾರದೆ? ಹಾಗಿದ್ದಲ್ಲಿ ಅಧ್ಯಕ್ಷರನ್ನು ಏಕೆ ಇಟ್ಟಿದ್ದೀರಿ? ಅಧ್ಯಕ್ಷರನ್ನು ನಾಮಕಾವಸ್ಥೆಗೆ ಕಾರುಗಳನ್ನು ಕೊಟ್ಟು, ಸರ್ಕಾರದ ಬೊಕ್ಕಸದ ಹಣವನ್ನು ಖರ್ಚು ಮಾಡಿಕೊಂಡು ಇಟ್ಟಿದ್ದೀರೇನು? ನಾನು ಹೇಳುವಂಥಾದ್ದು ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದರೆ ನಿಯಮ ಹಾಗೆ ಇದ್ದರೆ ಸರ್ಕಾರದ ಉದ್ದೇಶವೂ ಅದೇ ಆಗಿದ್ದರೆ ಅವರಿಗೆ ಸರ್ಕಾರದ ಕಾರನ್ನು ಕೊಟ್ಟು ಸುಮ್ಮನೆ ವಿಗ್ರಹದಂತೆ ಕೂರಿಸಿದ್ದೀರಿ? ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡುವಂತಹ ಘೋರವಾದಂತಹ ಕೊಲೆ, ಒಬ್ಬ ಅಧ್ಯಕ್ಷರಿಗೆ ಕಾರಣ ಕೇಳಿ ನೋಟೀಸ್ ಕೊಡುವಂತಹ ಅಧಿಕಾರವಿಲ್ಲ, ನಾನು ನಿಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳುವಂತಹ ಉದ್ಧಟತನ ಮಾತುಗಳನ್ನು ಒಬ್ಬ ಅಧಿಕಾರಿ ಬರೆಯುತ್ತಾರೆ. ಇದು ನಿಜಕ್ಕೂ ಕೂಡ ದುರ್ದೈವ, ವಿಪರ್ಯಾಸ ಮತ್ತೊಂದು ಇಲ್ಲವೆಂದು ನಾನು ಹೇಳುತ್ತೇನೆ. ಇದೆಲ್ಲಾ ಆದಮೇಲೆ ಅಧ್ಯಕ್ಷರು ಮನನೊಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ದಿನಾಂಕ 2-12-1997ರಲ್ಲಿ ಈ ಅಧಿಕಾರಿ ಈ ರೀತಿಯಾಗಿ ಉದ್ದಟತನದ ಮಾತುಗಳಲ್ಲಿ ಉತ್ತರ ಕೊಡುತ್ತಾರೆಂದು ಪತವನ್ನು ಬರೆದಿದ್ದಾರೆ. ನಾನು ಅವರನ್ನು ಕೇಳುವ ಹಾಗೆ ಇಲ್ಲಿ ನನಗೆ ನೈತಿಕ ಹಕ್ಕು ಇಲ್ಲವೆಂದು ಹೇಳುತ್ತಾರೆಂದು ಪತ್ರ ಬರೆದಿದ್ದಾರೆ. ಅದಕ್ಕೆ ಅವರು ಚೀಫ್ ಸೆಕ್ರೆಟರಿಯವರಿಗೆ 4-5 ಪುಟಗಳ ಪತ್ರವನ್ನು ಬರೆದರು. ಈ ವಿಷಯದ ಬಗ್ಗೆ ಚೀಫ್ ಸೆಕ್ರೆಟರಿಯವರು ಇದುವರೆಗೂ ಏನು ಕ್ರಮವನ್ನು ತೆಗೆದುಕೊಂಡಿಲ್ಲ. ನಿಮ್ಮ ಚೀಫ್ ಸೆಕ್ರೆಟರಿಯವರ ಕಛೇರಿ ಮಲಗಿದೆಯಾ? ಆ ಚೀಫ್ ಸೆಕ್ರೆಟರಿ ಏನು ಮಾಡುತ್ತಿದ್ದಾರೆ. ಆ ಕಛೇರಿ ಏಕೆ ಬೇಕು ಹೇಳಿ? ತಾವು ಈ ದಿಕ್ಕಿನಲ್ಲಿ ಈಗಲಾದರೂ ಗಮನಹರಿಸಬೇಕು. ಒಬ್ಬ ಅಧಿಕಾರಿ ಸಸ್ಪೆಂಡ್ ಆದಮೇಲೆ ಮೂರುವರೆ ತಿಂಗಳುಗಳು ನೌಕರಿ ಮಾಡಿದ್ದಾನೆ, ಸಂಬಳ ತೆಗೆದುಕೊಂಡಿದ್ದಾನೆ. ಕಾರು, ಫೋನ್ ಸೌಲಭ್ಯ ತೆಗೆದುಕೊಂಡಿದ್ದಾನೆ. ಇದಕ್ಕೆ ಅವಕಾಶವಿದೆಯಾ? ಈ ಅವ್ಯವಹಾರ ಬೆಳಗಾಂನಲ್ಲಿ ಈ ಅಧಿಕಾರಿ ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಐದು ಕೋಟಿ ರೂಪಾಯಿಗಳ ದುರುಪಯೋಗವಾಗಿದೆ. ಇವರನ್ನು ಸಸ್ಪೆಂಡ್ ಮಾಡಿದ್ದರೂ ಪ್ರೊಮೋಷನ್ ಆಗಿ ಭೂ ಅಭಿವೃದ್ಧಿ ಅಧಿಕಾರಿಯಾಗಿ ಹೋಗಿದ್ದಾರೆ. ಅವರಿಗೆ ಸಸ್ಪೆನ್ಸ್‌ನ್ ಆರ್ಡರ್ ಜಾರಿ ಮಾಡಿ ಮೂರೂವರೆ ತಿಂಗಳಾದರೂ ಕ್ರಮ ತೆಗೆದುಕೊಳ್ಳಲಿಲ್ಲ. ಅಂದರೆ ಆಡಳಿತಾತ್ಮಕ ಇತಿಹಾಸದಲ್ಲಿ ಈ ರೀತಿಯಾಗಿ ನಡೆಯುತ್ತದೆಯಾ? ಇನ್ನೊಂದು ವಿಷಯವೇನೆಂದರೆ ಇವರನ್ನು ರೀ ಇನ್‌ಸ್ಟೇಟ್ ಮಾಡಿದರು, ಇವರ ಜೊತೆಗೆ ನಾಲ್ಕು ಜನರನ್ನು ಏಕೆ ರೀ ಇನ್‌ಸ್ಟೇಟ್ ಮಾಡಿ ಕೊಳ್ಳಲಿಲ್ಲ? ಅವರನ್ನು ಕಾರಣ ಕೇಳಿ ಏಕೆ ನೋಟೀಸ್ ಕೊಡಲಿಲ್ಲ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ಮಾಹಿತಿ ಬೇಕಾಗಿದೆ. ಇವರು ಯಾವ ಇಲಾಖೆಯಲ್ಲಿ ಸಸ್ಪೆಂಡ್ ಆಗಿದ್ದರು?

ಶ್ರೀ ಎ.ಟಿ. ರಾಮಸ್ವಾಮಿ : ನಾನು ಇದಕ್ಕೆ ಸಂಬಂಧಪಟ್ಟ ಪೂರ್ಣ ದಾಖಲೆಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ನಾನು ಮಾತನಾಡುವಾಗ ನೀವು ಮಧ್ಯೆ ಬಂದಿದ್ದೀರಿ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ನಿಮಗೆ ಆ ಪೇಪರ್ಸ್‌ಗಳನ್ನು ಕಳುಹಿಸಿ ಕೊಡುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಆಡಳಿತ ಹೀಗೆ ಎಲ್ಲೆ ಮೀರಿ ನಡೆಯುತ್ತಿದೆ. ಎಷ್ಟರಮಟ್ಟಿಗೆ ವ್ಯವಸ್ಥೆ ಕೆಟ್ಟು ಹೋಗಿದೆ ಎಂದು ವ್ಯಥೆಯಾಗುತ್ತಿದೆ. ಈ ರೀತಿ ಒಬ್ಬ ಅಧಿಕಾರಿ ಸಸ್ಪೆಂಡ್ ಆದವರು ಮೂರೂವರೆ ತಿಂಗಳುಗಳು ಕೆಲಸ ಮಾಡುವಂಥಾದ್ದು ಸರಿಯೇ? ಅದು ಅವರು ತನ್ನನ್ನು ಸಮರ್ಥಿಸಿಕೊಂಡಿದ್ದಾರಲ್ಲಾ, ಒಬ್ಬ ಅಧ್ಯಕ್ಷರನ್ನು ನೀವು ಕೇಳುವ ಅಧಿಕಾರವಿಲ್ಲವೆಂದು ಹೇಳಿದಂತಹ, ಈ ರೀತಿಯಾಗಿ ಉದ್ಧಟತನ ತೋರಿದಂತಹ ಅಧಿಕಾರಿಯನ್ನು ಏನು ಮಾಡಬೇಕು ಗೊತ್ತೇನು? ನಿಮಗೆ ನಿಜವಾಗಿಯೂ ರಾಜಕೀಯ ಛಲ ಅಥವಾ ನಿರ್ಧಾರವಿದ್ದರೆ ಬರೀ ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸಬಾರದು. ಅವರಿಗೆ ಬೇರೆ ಕಠಿಣವಾದಂತಹ ಶಿಕ್ಷೆಯನ್ನು ಕೊಡಬೇಕು ಆ ದಿಕ್ಕಿನಲ್ಲಿ ತಾವು ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೆ, ನಿಮಗೆ ನಿಗದಿಪಡಿಸಿದ ಮೂವತ್ತು ನಿಮಿಷಗಳಾಯಿತು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನು ಮಾತನಾಡುವಂತಹ ವಿಷಯಗಳು ಬಹಳವಿದೆ. ನೀವು ಬಿಟ್ಟುಬಿಡಿ ಎಂದರೆ ನಾನು ಇಲ್ಲಿಗೆ ನನ್ನ ಭಾಷಣವನ್ನು ನಿಲ್ಲಿಸಿ ಬಿಡುತ್ತೇನೆ.

ಉಪಾಧ್ಯಕ್ಷರು : ನೀವು ವಿಷಯವನ್ನು ಬಿಟ್ಟುಬಿಡಿ ಎಂದಲ್ಲ, ನಿಮಗೆ ನಿಗದಿ ಪಡಿಸಿದ ಸಮಯದೊಳಗೆ ನೀವು ಭಾಷಣವನ್ನು ಮಾಡಬೇಕು. ಇನ್ನು ಐದು ನಿಮಿಷದೊಳಗೆ ನಿಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ರಾಜ್ಯ ವಿಧಾನಮಂಡಲದ ಒಂದು ಬೇಡಿಕೆಯನ್ನು ಕೂಡ ಸದನದಲ್ಲಿ ಮಂಡಿಸಿದ್ದೀರಿ. ಈ ಸದನದ ಶಾಸಕನಾಗಿ ನನಗೆ ಗೌರವವಿದೆ. ನಾನು ಹೇಳುವಂತಹ ವಿಚಾರದಲ್ಲಿ ತಾವು ಅಪಾರ್ಥ ಮಾಡಿಕೊಳ್ಳಬಾರದು. ಇವತ್ತು ಈ ವಿಚಾರವಾಗಿ ಚಿಂತನೆ ನಡೆಯಬೇಕಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ. ಈ ರಾಜ್ಯದಲ್ಲಿ ಮೇಲ್ಮನೆ ಇರಬೇಕೆ ಬೇಡವೇ ಎಂಬುದು ಆಗಿದೆ. ನಾನು ಈ ಸಿಸ್ಟಂ ಅನ್ನು ವಿರೋಧ ಮಾಡುತ್ತಿಲ್ಲ. ಆದರೆ ಇವತ್ತು ಈ ಸಿಸ್ಟಂ ಕೊಲ್ಯಾಪ್ಸ್ ಆಗಿದೆ. ಈ ಮೇಲ್ಮನೆ ಎಂಬುದು ಹಿರಿಯರ ಮನೆ ಎಂದು ಆಗಿದ್ದು, ಆ ಮೇಲ್ಮನೆಯಿಂದ ಈ ಕೆಳಮನೆಗೆ ಮಾರ್ಗದರ್ಶನ ಮಾಡಬೇಕಾಗುವುದು ಮತ್ತು ಈ ರೀತಿಯಲ್ಲೂ ಕೂಡ ಹಿರಿತನ ಇರಬೇಕಾಗುತ್ತದೆ. ಅದು ಇವತ್ತು ಉಳಿದಿದೆಯೇ?

12.00 ಪಿಎಂ

ಯಾವ ಉದ್ದೇಶಕ್ಕಾಗಿ ರಾಜ್ಯಾಂಗದಲ್ಲಿ ಮೇಲ್ಮನೆಯನ್ನು ರಚನೆ ಮಾಡಬೇಕು, ಹೆಲ್ದರ್ಲಿ,

ಮೆಚ್ಯೂರ್ ಪರ್ಸನ್ಸ್ ಇರಬೇಕು, ಇಂಟಲೆಕ್ಚುಲ್ಸ್ ಇರಬೇಕು. ಗುಡ್ ಪೀಪಲ್ ಇರಬೇಕು, ಅವರು ನಮ್ಮ ಕೆಳಮನೆಗೆ ಮಾರ್ಗದರ್ಶನ ಮಾಡಬೇಕೆಂದು ಏನಿತ್ತು ಆ ಉದ್ದೇಶ ಇವತ್ತು ಸಾರ್ಥಕವಾಗುತ್ತಿದೆಯಾ ಎನ್ನುವುದನ್ನು ಆಲೋಚನೆ ಮಾಡುವ ಪರಿಸ್ಥಿತಿ ಉದ್ಭವವಾಗಿದೆ. ಅದಕ್ಕೆ ನಾನು ಹೇಳಿದ್ದು ಆ ವ್ಯವಸ್ಥೆಯನ್ನು ನಾನು ಟೀಕೆ ಮಾಡುತ್ತಿಲ್ಲ, ವ್ಯವಸ್ಥೆ ಒಳ್ಳೆಯದಿದೆ ಆದರೆ ಇವತ್ತು ಆ ವ್ಯವಸ್ಥೆ ಬಹಳ ಕೊಲ್ಯಾಪ್ಸ್ ಆಗಿದೆ. ಇದನ್ನು ಮುಂದುವರೆಸಿಕೊಂಡು ಹೋಗುವುದರಿಂದ ರಾಜ್ಯದ ಬೊಕ್ಕಸಕ್ಕೆ ಹಾನಿ, ನಷ್ಟ ಜಾಸ್ತಿಯಾಗುತ್ತಿದೆ, ಆ ದಿಕ್ಕಿನಲ್ಲಿ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಬೇಕು. ನಾನು ಮೇಲ್ಮನೆಯ ಉದ್ದೇಶವೇನಿತ್ತು ಅದು ಸರಿಯಾಗಿ ಸಾರ್ಥಕವಾಗಿ ಬಳಕೆಯಾಗುತ್ತಿಲ್ಲ ಇವತ್ತು ರಾಜಕೀಯ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಅತೃಪ್ತರನ್ನು ಅಲ್ಲಿ ತುಂಬುವುದಕ್ಕೆ, ನಮ್ಮ ಹಿಂಬಾಲಕರನ್ನು ಅಲ್ಲಿ ತುಂಬಲಿಕ್ಕೆ, ಯಾರ್ಯಾರು ಪ್ರಭಾವಿಗಳಿರುತ್ತಾರೆ ಅವರನ್ನು ತುಂಬಲಿಕ್ಕೆ ಮಾತ್ರ ಆ ಮನೆಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆಯೇ ಹೊರತು ರಾಜ್ಯಾಂಗದಲ್ಲಿ ಏನು ಹೆಲ್ಡರ್ಲಿ, ಗುಡ್ ಅಥವಾ ಮೆಚ್ಯೂರ್ಡ್ ಪರ್ಸನ್ಸ್ ಅನ್ನು ಅಲ್ಲಿ ತಂದು ಅವರು ಈ ಮನೆಗೆ ಮಾರ್ಗದರ್ಶನ ಮಾಡಬೇಕೆನ್ನುವ ಉದ್ದೇಶವಿತ್ತು ಅದರಿಂದ ನಾವು ದೂರವಾಗುತ್ತಿದ್ದೇವೆ, ಆ ದಿಕ್ಕಿನಲ್ಲಿ ನಾವು ಪುನರ್ ಆಲೋಚನೆ ಮಾಡುವುದು ಒಳ್ಳೆಯದು, It is not serveing the purpose ಎಂದು ಹೇಳುತ್ತಾ ನಾನು ಆ ದಿಕ್ಕಿನಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಇವತ್ತು ರಾಜ್ಯ ವಿಧಾನಮಂಡಲಕ್ಕೆ 23 ಅಥವಾ 24 ಕೋಟಿ ರೂಪಾಯಿಗಳ ಆಯವ್ಯಯವನ್ನು ಇಲ್ಲಿ ಮಂಡಿಸಿದ್ದಾರೆ. ಇಲ್ಲಿ ಒಂದು ಆಶ್ಚರ್ಯವಾಗುತ್ತದೆ, ಅದಕ್ಕೆ ಸಂಸದೀಯ ವ್ಯವಹಾರಗಳ ಸಚಿವರು ಇರಬೇಕೆಂದು ಹೇಳಿದುದ್ದು. ಇವತ್ತು ವಿಧಾನಸಭೆಯ ಕಾರ್ಯಾಲಯವೇ ಬೇರೆ, ವಿಧಾನಪರಿಷತ್ತಿನ ಕಾರ್ಯಾಲಯವೇ ಬೇರೆ ಎಂದು ವಿಭಾಗ ಮಾಡಿದ್ದಾರೆ, ಈ ಬೇಡಿಕೆ ಯಾರಿಂದು ಇತ್ತು? ಸಾಮಾನ್ಯ ಜನರಿಂದ ಇತ್ತೆ? ಶಾಸಕರಿಂದ ಇತ್ತೆ? ಅಥವಾ ಅಧಿಕಾರಿಗಳಿಂದ ಇತ್ತೆ? ಈ ಮನೆ ಹಾಗೂ ಆ ಮನೆಯಲ್ಲೇನಾದರೂ ಚರ್ಚೆಯಾಗಿತ್ತೆ? ಆಡಳಿತದಲ್ಲಿ ಬಹಳ ಬಿಕ್ಕಟ್ಟಾಗಿದೆ ಸಮಸ್ಯೆಯಾಗಿದೆ ಸುಧಾರಣೆಗಾಗಿ ಎರಡನ್ನು ಬೇರ್ಪಡಿಸಬೇಕೆನ್ನುವ ಒಂದು ಅಭಿಪ್ರಾಯ ಎಲ್ಲಿಂದ ಬಂತು? ಏತಕ್ಕೆ ಆಯಿತು? ಇದರ ಅವಶ್ಯಕತೆ ಇರಲಿಲ್ಲವೆಂದು ನನಗನಿಸುತ್ತದೆ. ನಾವ್ಯಾರು ಇದನ್ನು ಕೇಳಿದ ನೆನಪು ನನಗಿಲ್ಲ, ಮೇಲ್ಮನೆ ಇರಬಹುದು, ಕೆಳಮನೆ ಇರಬಹುದು, ವಿಧಾನಮಂಡಲದ ಕಾರ್ಯಾಲಯವನ್ನು ಎರಡು ಭಾಗ ಮಾಡಿ ಎಂದು ಯಾರು ಕೇಳಿರಲಿಲ್ಲ, ಗಡಿಗಳನ್ನು ಗುರುತು ಮಾಡಿ ಎಂದು ಕೇಳಿರಲಿಲ್ಲ, ಅಣ್ಣತಮ್ಮಂದಿರಂತೆ ಒಂದುಗೂಡಿಸಿಕೊಂಡು ಕೆಲಸ ಮಾಡಿಕೊಂಡು ಹೋಗಬೇಕೆನ್ನುವ ಇಚ್ಛೆ ಸರ್ಕಾರಕ್ಕಿದ್ದರೆ ಆ ಭಾವನೆಯಲ್ಲಿ ನಡೆಸಿಕೊಂಡು ಹೋಗಬೇಕಾಗಿತ್ತು. ಇವತ್ತು ಗಡಿ ರೇಖೆಗಳನ್ನು ಹಾಕಿಬಿಟ್ಟಿರಿ, ಇದರ ಹಿಂದಿನ ಉದ್ದೇಶವೇನು ಏತಕ್ಕಾಗಿ ಮಾಡಿದ್ದೀರಿ, ಯಾವ ಸೌಲಭ್ಯಕ್ಕಾಗಿ ಮಾಡಿದಿರಿ ಎನ್ನುವ ಮಾಹಿತಿಯನ್ನು ಸರ್ಕಾರ ಕೊಡಬೇಕು. ಇದನ್ನು ಜನರ ಹಿತಕ್ಕಾಗಿ ಮಾಡಿರುವುದಲ್ಲ ಅಥವಾ ನಮ್ಮ ಹಿತಕ್ಕೂ ಬೇಕಾಗಿರಲಿಲ್ಲ, ನಮಗ್ಯಾರಿಗೂ ಕೂಡ ಕಷ್ಟವಾಗಿರಲಿಲ್ಲ, ನಮಗೆ ಒಂದೇ ಅಕೌಂಟ್ ಸೆಕ್ಷನ್ ಸಾಕಾಗಿತ್ತು, ಎರಡು ಅಕೌಂಟ್ ಸೆಕ್ಷನ್ ಏತಕೆ ಬೇಕಾಗಿತ್ತು? ನಾನು ಒಂದು ಉದಾಹರಣೆಯನ್ನು ನಿಮಗೆ ಹೇಳುತ್ತಿದ್ದೇನೆ. ಇದರಿಂದಲೂ

ಹೆಚ್ಚು ಹೊರೆ ಸರ್ಕಾರಕ್ಕೆ ಹೊರಬೀಳಲಿ ಎಂದು ಮಾಡಿರುವುದು ನೋವಿನ ವಿಷಯ. ಆದ್ದರಿಂದ, ಈ ದಿಕ್ಕಿನಲ್ಲಿ ಸರ್ಕಾರ ಪುನರ್ ಆಲೋಚನೆ ಮಾಡಬೇಕೆನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ನ್ಯಾಯ ಪರಿಪಾಲನೆಯ ವಿಷಯದಲ್ಲಿ, ಇವತ್ತು ನ್ಯಾಯಾಲಯಗಳಲ್ಲಿ ಕಟ್ಲೇಗಳೇನಿದ್ದಾವೆ, ಬಡವರ ಬಗ್ಗೆ, ದೀನದಲಿತರ ಬಗ್ಗೆ ಅಥವಾ ಸರ್ಕಾರಿ ಮೊಕದ್ದಮೆಗಳ ಬಗ್ಗೆ ಸರ್ಕಾರಿ ವಕೀಲರೇ ಇರುತ್ತಾರೆ. ಸರ್ಕಾರ ಈ ಪರ್‌ಫಾರ್‌ಮೆನ್ಸ್ ಅನ್ನು ರಿವ್ಯೂ ಮಾಡಬೇಕು. ಎಂ.ಪಿ.ಪ್ರಕಾಶ್‌ರವರೆ, ನ್ಯಾಯಾಲಯಗಳಲ್ಲಿ ಸರ್ಕಾರದ ವತಿಯಿಂದ ಸರ್ಕಾರಿ ವಕೀಲರುಗಳನ್ನು ಹಿಂದುಳಿದ ವರ್ಗ ಇತರರಿಗೆ ಉಚಿತ ನ್ಯಾಯ ಒದಗಿಸಿಕೊಡಲು ಉಚಿತ ವಕೀಲರನ್ನು ಒದಗಿಸಿಕೊಡುತ್ತೇವೆಂದು ಇಟ್ಟಿದ್ದೀರಿ. ಇದರಲ್ಲಿ ಸರ್ಕಾರದ ವಕೀಲರು ಕೂಡ ಇದ್ದಾರೆ. ಶೇಕಡ 90 ರಷ್ಟು ಬಹುತೇಕ ಸರ್ಕಾರಿ ಮೊಕದ್ದಮೆಗಳು ವಿಫಲವಾಗುತ್ತಿದ್ದಾವೆ. ಅಲ್ಲಿ ನಮ್ಮ ಸರ್ಕಾರಿ ವಕೀಲರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅವರ ಪರ್‌ಫಾರ್‌ಮೆನ್ಸ್ ಅನ್ನು ನಾವು ರಿವ್ಯೂ ಮಾಡುತ್ತಿಲ್ಲ, ಹಾಗಾಗಿ ಇವತ್ತು ಅವರಿಗೆ ಜವಾಬ್ದಾರಿಯೇ ಇಲ್ಲ, ಸರ್ಕಾರಿ ಮೊಕದ್ದಮೆಗಳು ಆ ದಿಕ್ಕಿನಲ್ಲಿ ಹೆಚ್ಚು ವಿಫಲವಾಗುತ್ತಿವೆ. ಬಡವರಿಗೆ ಉಚಿತವಾಗಿ ಕಾನೂನು ನೆರವು ಕೊಡುತ್ತೇವೆಂದು ಅವರಿಗೂ ಕೂಡ ನ್ಯಾಯ ಸಿಗದಂತಾಗಿದೆ; ಏಕೆಂದರೆ, ಸರ್ಕಾರಿ ವಕೀಲರು ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಪರ್‌ಫಾರ್‌ಮೆನ್ಸ್ ಅನ್ನು ರಿವ್ಯೂ ಮಾಡುವುದಕ್ಕೆ, ಅವರು ಸರಿಯಾಗಿ ಕೆಲಸ ಮಾಡದಿದ್ದರೆ ಕಿತು ಎಸೆಯುವುದಕ್ಕೆ ಸರ್ಕಾರ ದಯಮಾಡಿ ಕ್ರಮ ಕೈಗೊಳ್ಳಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಮತ್ತೊಂದು ವಿಷಯ, ಆಡಳಿತದಲ್ಲಿ ವರ್ಗಾವಣೆ ಮಾಡುವುದಕ್ಕೆ ಮಂತ್ರಿಗಳು ಇರುವುದಲ್ಲ. ನಮಗೂ ಕೂಡ ನಿಮ್ಮ ಹತ್ತಿರ ಬರುವುದಕ್ಕೆ ಮುಜುಗರ, ವ್ಯವಸ್ಥೆ ಆ ಮಟ್ಟಕ್ಕೆ ತಂದುಬಿಟ್ಟಿದೆ. ನಾವು ಶಾಸಕರಾಗಿರುವುದು ವರ್ಗಾವಣೆಗಳನ್ನು ಮಾಡಿಸುವುದಕ್ಕಲ್ಲ, ನೀವಾದರೂ ವರ್ಗಾವಣೆಗಳನ್ನು ಮಾಡುವುದಕ್ಕೆ ಮಂತ್ರಿಗಳಾಗಿದ್ದೀರಾ? ಶಾಸಕರು, ನಾವು ಶಿಫಾರಸ್ಸು ಸಾರ್ವತ್ರಿಕವಾಗಿ ಮಾಡಿಬಿಟ್ಟೆವು ಎಂದು ಸಂದೇಶಬರುವ ರೀತಿಯಲ್ಲಿ ಸರ್ಕಾರದಿಂದ ಸಂದೇಶ ಹೋದರೆ, ವ್ಯಾಪಾರ ಮಾಡುವುದಕ್ಕೆ ಅಂಗಡಿ ಬಾಗಿಲು ತೆರೆದುಕೊಂಡು ಕುಳಿತಂತೆ ಆಗುವುದಿಲ್ಲವೇ? ನೀವೇ ಹೇಳಿ, ನಿಮಗೆ ಮೂರ್‍ನಾಲ್ಕು ತಿಂಗಳು ಕೆಲಸ ಮಾಡುವುದಕ್ಕೆ ಬಿಡುವುದೇ ಇಲ್ಲ, ವ್ಯವಸ್ಥೆ ಅಷ್ಟರ ಮಟ್ಟಿಗೆ ಕೆಟ್ಟುಹೋಗಿದೆ. ಇವತ್ತು ನಮ್ಮ ಶಾಸಕರ ಭವನ ವಿಧಾನಸೌಧ ಇವತ್ತು ಬಂದು ನೋಡಿ. ನೀವು ಈ ಒಂದು ಆಡಳಿತದಲ್ಲಿ ವರ್ಗಾವಣೆಯ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ನಿಮಗೆಲ್ಲಾ ಇಲ್ಲ ಅವರು ನಮ್ಮ ಹತ್ತಿರಕ್ಕೆ ಬರಬೇಕೆನ್ನುವ ಅಪೇಕ್ಷೆ ಇದ್ದರೆ ಇದನ್ನೇ ಮುಂದುವರಿಸಿಕೊಂಡು ಹೋಗಿ ಜನರು ಬುದ್ಧಿ ಕಲಿಸುತ್ತಾರೆ. ಇಲ್ಲವೆಂದರೆ, ನಾವು ಆಡಳಿತದಲ್ಲಿ ಬಿಗಿ ತರಬೇಕು, ವರ್ಗಾವಣೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಯಾವ ಅಧಿಕಾರಿಯೇ ಆಗಲಿ, ಶಾಸಕರ ಭವನಕ್ಕಾಗಲಿ, ವಿಧಾನಸೌಧಕ್ಕಾಗಲಿ ಅಥವಾ ಬಹುಮಹಡಿಗಳ ಕಟ್ಟಡಕ್ಕಾಗಲಿ ಅಲೆಯದ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿಕೊಂಡರೆ ನಮ್ಮ ಮೇಲೆ ಹಾಗೂ ಸರ್ಕಾರದ ಮೇಲೆ ಇರುವ ಇದೊಂದು ದೊಡ್ಡ ಹೊರೆ ತಪ್ಪಿದಂತಾಗುತ್ತದೆ. ಆ ದಿಕ್ಕಿನಲಿ ವರ್ಗಾವಣೆಗೆ ಒಂದು ಕಟ್ಟುನಿಟ್ಟಾದ ನೀತಿಯನ್ನು ಜಾರಿಗೆ ತನ್ನಿ, ಇಲ್ಲ ನಾವು ವ್ಯಾಪಾರ ಮಾಡುವುದಕ್ಕೆ ಅಂಗಡಿ

ಬಾಗಿಲು ತೆರೆದುಕೊಂಡಿದ್ದೇವೆ ಬಂದು ವರ್ಗಾವಣೆ ಮಾಡಿಸಿಕೊಳ್ಳಿ ಎನ್ನುವ ಸಂದೇಶ ಸರ್ಕಾರದಿಂದ ಹೋದರೆ ಇನ್ನು ಆಡಳಿತ ಸುಧಾರಣೆಯನ್ನು ನಾವು ಎಷ್ಟರಮಟ್ಟಿಗೆ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಈ ದಿಕ್ಕಿನಲ್ಲಿ ಸಾಧನೆ ಮಾಡಿರುವುದಕ್ಕಿಂತ ಹೆಚ್ಚಾಗಿ ವೈಫಲ್ಯಗಳೇ ಜಾಸ್ತಿಯಾಗಿವೆ. ಆದುದರಿಂದ ನಾನು ಈ ಬೇಡಿಕೆಗಳನ್ನು ವಿರೋಧಿಸುತ್ತಾ ಮಾನ್ಯ ಉಪಾಧ್ಯಕ್ಷರು ಇಲ್ಲಿಯವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಸುರೇಶ್ ಕುಮಾರ್‌ರವರು 30 ನಿಮಿಷ ಮಾತನಾಡಬೇಕಾಗಿತ್ತು, ಅದರಲ್ಲಿ 15 ನಿಮಿಷ ಜಗದೀಶ್ ಶೆಟ್ಟರ್‌ರವರು ಮಾತನಾಡಿ ಪ್ರಮೀಳಾ ನೇಸರ್ಗಿಯವರೆ ಇನ್ನು ಉಳಿದ 15 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ನಾನು ಮೋಟಾರ್ ವೆಹಿಕಲ್ಸ್ ಆ್ಯಕ್ಟ್ ಮತ್ತು ಅದರಲ್ಲಿ ಏನಾಗುತ್ತಿದೆ ಎನ್ನುವುದರ ಬಗ್ಗೆ ಸ್ವಲ್ಪ ಕ್ಷಕಿರಣಬೀರೋಣ ಎಂದು ತಿಳಿದುಕೊಂಡಿದ್ದೇನೆ. ಬೆಂಗಳೂರಿನಲ್ಲಿ ನ್ಯಾಷನಲ್ ಟ್ರಾವೆಲ್ಸ್, ಎಸ್‌ಆರ್‌ಎಸ್ ಟ್ರಾವೆಲ್ಸ್ ಎರಡು ಬಸ್‌ಗಳಿದ್ದಾವೆ ಒಂದೊಂದು ಕೂಡ ನೂರು ಬಸ್‌ಗಳಿಗಿಂತ ಹೆಚ್ಚಾಗಿ ಪ್ರೈವೈಟ್ ಸರ್ವೀಸ್ ವೆಹಿಕಲ್ ಎಂದು ಉಪಯೋಗ ಮಾಡುತ್ತಿದ್ದಾರೆ. ಅವರು ಹೇಗೆ ಉಪಯೋಗ ಮಾಡುತ್ತಿದ್ದಾರೆಂದರೆ ಟ್ಯಾಕ್ಸ್ ಇವೇಡ್ ಮಾಡುವುದಕ್ಕೋಸ್ಕರ, ಬೆಂಗಳೂರಿನಲ್ಲಿ, ಬಹಳಷ್ಟು ಕಾರ್ಖಾನೆಗಳಿದ್ದಾವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಿಸಿದಂತೆ ಯಾವ ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಾರೋ ಅವರು ನೋಟ್ ಮಾಡಿಕೊಂಡರೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು : ಎಂ.ಪಿ. ಪ್ರಕಾಶ್‌ರವರು ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಏಕೆಂದರೆ ಅವರಿಗೆ ಕೊಟ್ಟಿರುವ 15 ನಿಮಿಷ, ಪಿ.ಜಿ.ಆರ್ ಸಿಂಧ್ಯಾರವರು ಬೇರೆ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : 10 ವರ್ಷಗಳಿಂದ ಈ ವ್ಯವಸ್ಥೆ ನಡೆದುಕೊಂಡು ಬಂದಿದೆ. ವೀಡಿಯ, ಹೆಚ್.ಎಂ.ಟಿ, ಬಿ.ಇ.ಎಂ.ಎಲ್, ಇನ್‌ಫೋಸಿಸ್, ಹಿಂದೂಸ್ತಾನ್ ಮೋಟಾರ್ಸ್, ಎನ್.ಕೆ. ಟಿನ್ ಫ್ಯಾಕ್ಟರಿ, ಎಸ್.ಕೆ.ಎಫ್, ಮೈಕ್ರೋಪ್ಯಾಕ್, ಮೈಕೋ, ಗ್ರಾಫೈಟ್ ಇಂಡಿಯಾ, ಸೂರಿ ಅಂಡ್ ನಾಯರ್, ಐ.ಟಿ.ಐ, ಬಿ.ಪಿ.ಎಲ್ ಮುಂತಾದ ಪ್ರೆವೇಟ್ ಫ್ಯಾಕ್ಟರಿಗಳಿಗೆ ಇವರು ಬಸ್‌ಗಳನ್ನು ಕಾಂಟ್ರಾಕ್ಟ್ ಮಾಡಿಕೊಂಡಿದ್ದಾರೆ. ಕಾಂಟ್ರಾಕ್ಟ್ ಮಾಡಿಕೊಂಡು ಬಸ್‌ಗಳನ್ನು ಕಳುಹಿಸುತ್ತಿದ್ದಾರೆ. ಈ ಕಾಂಟ್ರಾಕ್ಟ್ ಮಾಡಿಕೊಂಡಿರತಕ್ಕಂಥಾದ್ದು ಹೇಗೆ ಆಗುತ್ತದೆ ಎಂದರೆ ಅವರು ಆ ಫ್ಯಾಕ್ಟರಿಗಳವರ ಜೊತೆಗೆ ಒಂದು ಕಿ.ಮೀ.ಗೆ ಇಷ್ಟು ದುಡ್ಡು ಎಂದು ಅಗ್ರಿಮೆಂಟ್‌ಗಳನ್ನು ಈ ಬಸ್ಸುಗಳಿಗೆ ಮಾಡಿಕೊಂಡಿದ್ದಾರೆ. ಒಂದು ಸಲ ಅಗ್ರಿಮೆಂಟ್ ಆದರೆ, ಅದು ಕಾಂಟ್ರಾಕ್ಟ್ ಕ್ಯಾರೇಜ್ ಬಸ್ ಆಗುತ್ತದೆ. ಕಾಂಟ್ರಾಕ್ಟ್ ಕ್ಯಾರೇಜ್ ಬಸ್ಸಿಗೆ ಇರತಕ್ಕಂಥ ಟ್ಯಾಕ್ಸೇ ಬೇರೆ. ಅದಕ್ಕೆ ಹೆಚ್ಚು

ಟ್ಯಾಕ್ಸ್‌ನ್ನು ಕೊಡಬೇಕಾಗುತ್ತದೆ. ಇದನ್ನು ಅವಾಯ್ಡ್ ಮಾಡುವುದಕ್ಕೋಸ್ಕರ ಆ ಬಸ್ಸುಗಳನ್ನು ಪ್ರೈವೇಟ್ ಸರ್ವೀಸ್ ವೆಹಿಕಲ್ಸ್ ಎಂದು ಅಗ್ರಿಮೆಂಟ್ ಮಾಡಿ, ಪ್ರೈವೇಟ್ ಓನರ್ಸ್ ಹೆಸರಿನಲ್ಲಿ ರಿಜಿಸ್ಟರ್ ಮಾಡಿಕೊಂಡು, ಆ ಅಗ್ರಿಮೆಂಟನ್ನು ತೆಗೆದುಕೊಂಡು ಒಬ್ಬರನ್ನು ಕನ್‌ವೀನರ್ ಎಂದು ಮಾಡಿಕೊಂಡು ಮೋಟಾರ್ ವೆಹಿಕಲ್ ಆಫೀಸರ್ ಹತ್ತಿರ ಹೋಗಿ, 'I am a convenor of this bus.' ಎಂದು ಎನ್‌ಡಾರ್ಸ್‌ಮೆಂಟ್ ಮಾಡಿಕೊಳ್ಳುತ್ತಾರೆ. ಕನ್‌ವೀನರ್ ಎಂದು ಮಾಡಿಕೊಂಡು, ಪ್ರೈವೇಟ್ ಸರ್ವೀಸ್ ವೆಹಿಕಲ್ಸ್ ಎಂದು ಟ್ಯಾಕ್ಸನ್ನು ಕಟ್ಟುತ್ತಿದ್ದಾರೆ. ಇವತ್ತು ಬೆಂಗಳೂರು ಒಂದರಲ್ಲೇ 200 ಕ್ಕಿಂತ ಹೆಚ್ಚು ಇಂಥ ಬಸ್ಸುಗಳು ಓಡಾಡುತ್ತಿವೆ. ಅದೇ ರೀತಿ ಮಂಗಳೂರು ಮತ್ತು ಬೇರೆ ಕಡೆಗಳಲ್ಲೂ ಓಡಾಡುತ್ತಿವೆ. ಆ ರೀತಿ ಮಾಡಿರುವುದರಿಂದ ಸರ್ಕಾರಕ್ಕೆ ಒಂದು ವರ್ಷಕ್ಕೆ ಒಂದು ಬಸ್ಸಿಗೆ 80 ಸಾವಿರ ರೂಪಾಯಿಗಳು ಲಾಸ್ ಆಗುತ್ತಿದೆ. ಈ ರೀತಿ 500 ಬಸ್ಸುಗಳಿಗಿಂತ ಹೆಚ್ಚು ಬಸ್ಸುಗಳು 10 ವರ್ಷಗಳಿಂದ ಓಡಾಡುತ್ತಿವೆ. ಯಾರು ಈ ರೀತಿ ಬಸ್ಸುಗಳನ್ನು ಪ್ರೈವೇಟ್ ಸರ್ವೀಸ್ ವೆಹಿಕಲ್ಸ್ ಎಂದು ರಿಜಿಸ್ಟರ್ ಮಾಡಿಕೊಂಡು 10 ವರ್ಷಗಳಿಂದ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ, ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳುವಿರಾ? ಕ್ರಮ ತೆಗೆದುಕೊಂಡು 10 ವರ್ಷಗಳಿಂದ ಮೋಸ ಮಾಡಿರತಕ್ಕಂಥ ಹಣವನ್ನು ವಸೂಲು ಮಾಡುವಿರಾ? ಎಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ನಾನು ಅಂದಾಜು ಮಾಡಿರುವ ಪ್ರಕಾರ ಹೆಚ್ಚು ಕಡಿಮೆ 2 ಸಾವಿರ ಕೋಟಿ ರೂಪಾಯಿಗಳು ನಿಮಗೆ ಇದೊಂದೇ ಬಾಬ್ತಿನಲ್ಲಿ ಬರಬೇಕಾಗುತ್ತದೆ. ಇದನ್ನು ನಿಮ್ಮ ಅಧಿಕಾರಿಗಳು ನೋಡಿಲ್ಲ, ನಿಮ್ಮ ಹಣಕಾಸು ಇಲಾಖೆ ಆಕ್ಷೇಪಣೆ ಮಾಡಿಲ್ಲ, ಯಾರೂ ಕೂಡ ಇದರ ಬಗ್ಗೆ ಕಣ್ಣೆತ್ತಿ ಕೂಡ ನೋಡಿಲ್ಲ. ಈ ರೀತಿ ಅನ್ಯಾಯ ನಡೆಯುವುದನ್ನು, ಹಣ ಸೋರಿ ಹೋಗುವುದನ್ನು ನಾವು ನೋಡುತ್ತಿದ್ದೇವೆ. ಇದು ಬಸ್ಸುಗಳ ವಿಚಾರವಾದರೆ, ಇದಕ್ಕಿಂತ ಹೆಚ್ಚಾಗಿ ಮ್ಯಾಕ್ಸಿಕ್ಯಾಬ್‌ಗಳು ಓಡಾಡುತ್ತಿವೆ. ಮ್ಯಾಕ್ಸಿಕ್ಯಾಬ್‌ಗಳವರು ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್ ಎಂದು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಈ ರೀತಿ ರಿಜಿಸ್ಟರ್ ಮಾಡಿಕೊಂಡು ಈ ಫ್ಯಾಕ್ಟರಿಗಳ ಜೊತೆ ಮತ್ತೆ ಕಾಂಟ್ರಾಕ್ಟ್ ಮಾಡಿಕೊಂಡಿದ್ದಾರೆ. ಇದರಿಂದಲೂ ಕೂಡ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್ ಎಂದು ರಿಜಿಸ್ಟರ್ ಮಾಡಿಕೊಂಡು, ಪ್ರೈವೇಟ್ ಸರ್ವೀಸ್ ವೆಹಿಕಲ್ ಎಂದು ಉಪಯೋಗ ಮಾಡುತ್ತಿರುವುದರಿಂದ ಇಲ್ಲಿಯೂ ಕೂಡ ಸರ್ಕಾರದ ಬೊಕ್ಕಸಕ್ಕೆ ಹಣ ನಷ್ಟವಾಗುತ್ತಿದೆ. ಈ ರೀತಿಯಗಿ 500 ಬಸ್ಸುಗಳು ಮತ್ತು 2,000 ಕ್ಕಿಂತಲೂ ಹೆಚು ಮ್ಯಾಕ್ಸಿಕ್ಯಾಬ್‌ಗಳು ರಿಜಿಸ್ಟರ್ ಆಗಿವೆ. ಇದು ನನಗೆ ಗೊತ್ತಿರುವ ಅಂಕಿ ಅಂಶಗಳು. ಇದು ಇನ್ನೂ ಹೆಚ್ಚು ಇರಬಹುದು ಅಥವಾ ಕಡಿಮೆ ಇರಬಹುದು. ಇದರ ಸಂಬಂಧವಾಗಿ ನೀವು ಕ್ರಮ ತೆಗೆದುಕೊಂಡಿದ್ದೇ ಆದರೆ, ನೀವು ಕರ್ನಾಟಕದಲ್ಲಿ ಹಾಕಿರುವ ಎಲ್ಲಾ ಟ್ಯಾಕ್ಸನ್ನು ತೆಗೆದು ಹಾಕಬಹುದು. ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಹಣ ಬರುತ್ತದೆ. ನೀವು ಕೂಡ ಅನುಕೂಲವಾದಂಥ ಸ್ಥಿತಿಯಲ್ಲಿ ಇರಬಹುದಾದಂಥ ಪರಿಸ್ಥಿತಿ ಇದೆ. ಇದು ಎರಡನೇ ಬಾಬತ್ತು. ಮೂರನೇ ಬಾಬತ್ತು ಎಂದರೆ, ಐ.ಟಿ.ಡಿ.ಸಿ ಯಲ್ಲಿ ಕೆಲವು ಬಸ್ಸುಗಳನ್ನು ಟೂರಿಸ್ಟ್ ಬಸ್ಸುಗಳೆಂದು ರಿಜಿಸ್ಟರ್ ಮಾಡಿಕೊಂಡಿದ್ದೀರಿ. ಈ ರೀತಿ ರಿಜಿಸ್ಟರ್ ಮಾಡಿಕೊಂಡ ಬಸ್ಸುಗಳು ಟೂರಿಸ್ಟಾಗಿ ಓಡಾಡಬಹುದು ಎಂದು ಹೇಳಿದ್ದೀರಿ. ಈ ರೀತಿ ಹಲವಾರು ಬಸ್ಸುಗಳನ್ನು

ರಿಜಿಸ್ಟರ್ ಮಾಡಿದ್ದು, ನನ್ನ ಹತ್ತಿರ ಅದರ ಪಟ್ಟಿ ಇದೆ. ಆದರೆ ನೀವು ಕೊಟ್ಟಿರುವಂಥ ಸಮಯ ಬಹಳ ಕಡಿಮೆ ಇರುವುದರಿಂದ ನಾನು ಎಲ್ಲವನ್ನೂ ಹೇಳಲು ಇಷ್ಟಪಡುತ್ತಿಲ್ಲ. ಆದರೆ ಟೂರಿಸ್ಟ್ ಬಸ್ಸುಗಳೆಂದು ರಿಜಿಸ್ಟರ್ ಮಾಡಿರುವುದನ್ನು ಅವರು ವಾಯ್‌ಲೇಟ್ ಮಾಡಿದ್ದಾರೆ. ನೀವು ಯಾವುದೇ ಒಂದು ಬಸ್ಸನ್ನು ಟೂರಿಸ್ಟ್ ಬಸ್ ಆಗಿ ರಿಜಿಸ್ಟರ್ ಮಾಡಬೇಕಾದರೆ, ನಿಯಮಗಳ ಪ್ರಕಾರ ಅವರು ಟಾಯ್‌ಲೆಟ್ ಫೆಸಿಲಿಟಿಯನ್ನು ಕೊಡಬೇಕು, ಟ್ರಾವೆಲಿಂಗ್ ಫ್ಯಾಸೆಂಜರ್ ಕೊಡಬೇಕು, ಇಂಟರ್‌ಪ್ರಿಟರ್ ಕೊಡಬೇಕು ಮತ್ತು ಒಬ್ಬ ಗೈಡನ್ನು ಕೊಡಬೇಕು. ಇವಿಷ್ಟೂ ಇದ್ದಾಗ ಮಾತ್ರ ಟೂರಿಸ್ಟ್ ಬಸ್ ಎಂದು ಐ.ಟಿ.ಡಿ.ಸಿಯಲ್ಲಿ ನೀವು ಅಪ್ರೂವಲ್ ಕೊಡಬಹುದು. ಆದರೆ, ಈ ರೀತಿಯ ನಿಯಮಗಳನ್ನು ಪಾಲಿಸದೇ ಇರತಕ್ಕಂಥ ಸತ್ಯಸಾಯಿ, ಸತ್ಯನಾರಾಯಣ ಟ್ರಾವೆಲ್ಸ್, ಎಸ್.ಆರ್.ಎಸ್, ಸೈಗಲ್ ಇಂಥ ಬೇಕಾದಷ್ಟು ಟ್ರಾವೆಲ್ಸ್‌ಗಳಿಗೆ ಐ.ಟಿ.ಡಿ.ಸಿ. ಅಪ್ರೂವಲ್ ಕೊಟ್ಟಿದ್ದೀರಿ. contrary to the rules and regulations. ಇಲ್ಲಿ ನಿಮಗೆ ಅವರು 12,500 ರೂಪಾಯಿಗಳ ಟ್ಯಾಕ್ಸನ್ನು ಪರ್‌ಕ್ವಾರ್ಟರ್‌ಗೆ ಕೊಡುತ್ತಿದ್ದಾರೆ. ಆದರೆ ಅವರು ಇದಕ್ಕೂ ಹೆಚ್ಚು ಕೊಡಬೇಕಾಗುತ್ತದೆ. ಒಂದು ಕ್ವಾರ್ಟರ್‌ಗೆ, ಒಂದು ಬಸ್‌ಗೆ 24 ಸಾವಿರ ರೂಪಾಯಿಗಳಷ್ಟು ಆದಾಯ ನಷ್ಟವಾಗುತ್ತಿದೆ. ಇದರ ಬಗ್ಗೆ ಯಾರೂ ಕೂಡ ಗಮನಹರಿಸಿಲ್ಲ. ಇದರ ಬಗ್ಗೆ ತಾವು ಏನು ಮಾಡುತ್ತೀರಿ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನನಗೆ ಬಹಳ ಆಶ್ಚರ್ಯವಾಗಿದ್ದು ಏನೆಂದರೆ, ಶುಭಾಷ್ ಭರಣಿ ಮತ್ತು ಇನ್ನೊಬ್ಬರನ್ನು ಅಲ್ಲ ನೀವು ಬಹಳ ವರ್ಷಗಳಿಂದ ಇಟ್ಟಿದ್ದೀರಿ ಏನು ಕಾರಣಕ್ಕೋಸ್ಕರ ಇಟ್ಟಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ಬೆಳಿಗ್ಗೆ ನಾನು ವರ್ಗಾವಣೆಯ ಪಟ್ಟಿ ನೋಡಿದೆ. ಎಲ್ಲರನ್ನೂ ವರ್ಗಾವಣೆ ಮಾಡಿದ್ದೀರಿ. ಆದರೆ ಇವರನ್ನು ಮಾಡಿಲ್ಲ. ಅವರು ಮಾಡಿರತಕ್ಕಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ. ನಾನು ಎಲ್ಲವನ್ನೂ ಹೇಳಲು ಹೋಗುವುದಿಲ್ಲ. ಏಕೆಂದರೆ ಬಹಳ ಸಮಯವಾಗುತ್ತದೆ. ಹೈಕೋರ್ಟಿನ ಜಸ್ಟೀಸ್ ಠಾಕೂರ್‌ರವರ ಆರ್ಡರ್, ಜಸ್ಟೀಸ್ ಸಾಲ್ಡಾನಾರವರ ಆರ್ಡರ್, ಜಸ್ಟೀಸ್ ತಿಲ್‌ಹಾರಿಯವರ ಆರ್ಡರ್, ಜಸ್ಟೀಸ್ ನಾರಾಯಣ್‌ರವರ ಆರ್ಡರ್ ಈ ರೀತಿ ಹಲವಾರು ಜಡ್ಜಮೆಂಟ್‌ಗಳನ್ನು ಕೊಟ್ಟರು ಕೂಡ..... ಎಲ್ಲೆಲ್ಲಿ ಪಾಕೆಟ್ ಸ್ಕೀಂಗಳಿವೆ ಎಂದು ತಮಗೂ ಗೊತ್ತಿದೆ. ಕೋಲಾರ ಪಾಕೆಟ್ ಸ್ಕೀಂನಲ್ಲಿದೆ. ತಮಿಳುನಾಡು ಪಾಕೆಟ್ ಸ್ಕೀಂನಲ್ಲಿದೆ. ಧರ್ಮಪುರಿ ಜಿಲ್ಲೆ ಸ್ಕೀಂನಲ್ಲಿದೆ. ಈ ಸ್ಕೀಂಗಳು ಇರತಕ್ಕಂಥ ಕಡೆ ಪರ್ಮಿಟ್ ಕೊಡಬಾರದು ಎಂದು ಇದೆ. ಆದರೆ ಒಂದೇ ದಿವಸ ಎರಡೇ ಎರಡು ಮೀಟಿಂಗ್‌ಗಳಲ್ಲಿ ದಿನಾಂಕ 27-2-98 ಮತ್ತು 2-3-98ರಂದು 22 ಪರ್ಮಿಟ್‌ಗಳನ್ನು ಆನೇಕಲ್ ಪಾಕೆಟ್ ಸ್ಕೀಂ ತಮಿಳುನಾಡು ಏರಿಯಾದಲ್ಲಿ ಕೊಟ್ಟಿದ್ದಾರೆ. ಅದು ಎಲ್ಲಿಗೆ ಎಂದರೆ ಬೆಂಗಳೂರಿನಿಂದ ಬಕಲೀಪುರ, ಬೆಂಗಳೂರಿನಿಂದ ಬೆಳ್ಳೂರು, ಧರ್ಮಹಳ್ಳಿಯಿಂದ ಬೆಳ್ಳೂರು. ಒಂದೇ ಮೀಟಿಂಗ್‌ನಲ್ಲಿ ಇದನ್ನು ಕೊಟ್ಟಿದ್ದಾರೆ. ಏಕೆ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ ಎಂದರೆ ಜಡ್ಜ್‌ಮೆಂಟ್ ಕೊಟ್ಟರೂ ಅದಕ್ಕೆ ಬೆಲೆಯೇ ಇಲ್ಲ. ಏನಾದರೂ ಜಡ್ಜಮೆಂಟ್ ಕೊಡಲಿ, ತಮಿಳುನಾಡು ಸ್ಕೀಂ ಇದ್ದರೆ ಏನು ಎನ್ನುವ ಭಾವನೆಯಿಂದ ಕೊಟ್ಟರು. ಮೊನ್ನೆ ದಿವಸ ಜಯನಗರದಲ್ಲಿರತಕ್ಕಂಥ

ಆರ್.ಟಿ.ಓ. ನಲ್ಲಿರುವ ನಾರಾಯಣಸ್ವಾಮಿ ಎನ್ನುವ ಸೂಪರಿಂಟೆಂಡೆಂಟ್ ಮತ್ತು ರಾಜಶೇಖರ ಎನ್ನುವ ಆರ್.ಟಿ.ಓ ಇವರುಗಳು ಎರಡು ಆಲ್ ಇಂಡಿಯಾ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಆಲ್ ಇಂಡಿಯಾ ಪರ್ಮಿಟ್ ಕೊಡುವುದಕ್ಕೆ ಕಾನೂನಿನಲ್ಲಿ ಅಧಿಕಾರ ಇಲ್ಲ. ಇಬ್ಬರು ವ್ಯಕ್ತಿಗಳಿಗೆ ಇದನ್ನು ಕೊಟ್ಟಿದ್ದಾರೆ. ಇದರ ಹಿಂದೆ ಏನು ಇದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಇಂಥ ಪರ್ಮಿಟ್‌ಗಳನ್ನು ಕೊಡುವುದಕ್ಕೆ 5 ಸಾವಿರದಿಂದ 30 ಸಾವಿರದವರೆಗೆ ಒಂದೊಂದು ಪರ್ಮಿಟ್‌ಗೆ ಇಷ್ಟು ಎಂದು ಬೆಲೆ ನಿಗದಿಯಾಗಿದೆ. ಮೊನ್ನೆಯ ದಿವಸ ಭಾಷಾ ಮತ್ತು ವೇಣುಗೋಪಾಲ್‌ರವರಿಗೆ ಕೊಟ್ಟಿರತಕ್ಕಂಥ ಆಲ್ ಇಂಡಿಯ ಪರ್ಮಿಟ್‌ಗಳಿಗೆ ಒಂದು ಲಕ್ಷ ರೂಪಾಯಿ ಒಂದು ಪರ್ಮಿಟ್‌ಗೆ ತೆಗೆದುಕೊಂಡಿದ್ದಾರೆ. ಕಾನೂನು ಪ್ರಕಾರ ಆಲ್ ಇಂಡಿಯ ಪರ್ಮಿಟ್‌ನ್ನು ಕೊಡಲೇಬಾರದು, ಕೊಡುವುದಕ್ಕೂ ಅಧಿಕಾರವಿಲ್ಲ. ಆದರೂ ಕೂಡ ಇವರು ಕೊಟ್ಟಿದ್ದಾರೆ. ಇದಲ್ಲದೆ ಟೆಂಪೊರರಿ ಪರ್ಮಿಟ್‌ಗಳು ಎಂದು ಮತ್ತೊಂದು ರೀತಿಯ ಪರ್ಮಿಟ್ ಇದೆ. ಒಂದು ದಿವಸಕ್ಕೆ 500 ಟೆಂಪೊರರಿ ಪರ್ಮಿಟ್‌ಗಳನ್ನು ಕೊಡುತ್ತಾರೆ. ಬೆಂಗಳೂರಿನಲ್ಲಿರುವ ಸೆಂಟ್ರಲ್ ಆರ್.ಟಿ.ಓ, ಜಯನಗರ ಆರ್.ಟಿ.ಓ. ಈ ಮತ್ತು ಸ್ಕ್ವೇರ್ ಆರ್.ಟಿ.ಓ. ಮೂವರು ಸೇರಿಕೊಂಡು ಬೆಂಗಳೂರಿನಲ್ಲಿ ಟೆಂಪೊರರಿ ಪರ್ಮಿಟ್‌ಗಳನ್ನು ಕೇಳಿದವರಿಗೆಲ್ಲಾ ಕೊಟ್ಟಿದ್ದಾರೆ. ಬೆಳಿಗ್ಗೆ ಅಪ್ಲಿಕೇಷನ್ ಹಾಕಿದರೆ ಮಧ್ಯಾಹ್ನ ಒಂದು ಟೆಂಪೊರರಿ ಪರ್ಮಿಟ್ ಸಿಗುತ್ತದೆ. ಇದರಲ್ಲಿ ಕೂಡ ಒಂದು ಪರ್ಮಿಟ್ಟಿಗೆ ಇಷ್ಟು ಹಣ ಎಂದು ನಿಗದಿ ಮಾಡಿದ್ದಾರೆ. ಜಯನಗರದಲ್ಲಿರತಕ್ಕಂಥ ನಾರಾಯಣಸ್ವಾಮಿ ಎನ್ನುವ ಸೂಪರ್‌ರಿಂಟೆಂಡೆಂಟ್ ಅದನ್ನು ವಸೂಲು ಮಾಡುವವರು, ಅಲ್ಲಿರತಕ್ಕಂಥ ಆರ್.ಟಿ.ಓ.ನಲ್ಲಿ ಕೂಡ ಮಾಡುತ್ತಿದ್ದಾರೆ. ಹೀಗಾದರೆ ಇವತ್ತು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ಗೆ ಏನಾಗಿದೆ ಎನ್ನುವುದನ್ನು ನಾವು ಕೇಳಬೇಕಾಗಿದೆ. ಈ ಕಾರಣದಿಂದ, ಎಲ್ಲ ಆರ್.ಟಿ.ಓಗಳಲ್ಲಿ ಮಾಡಿರುವುದನ್ನು ತೆಗೆಸಿ ಪ್ರತಿಯೊಂದನ್ನು ನೀವು ನೋಡಬೇಕಾಗುತ್ತದೆ. ನಾನು ಆರ್.ಟಿ.ಓ.ಮೀಟಿಂಗ್‌ಗಳ ಸರ್ಟಿಫೈಡ್ ಕಾಪಿಗಳನ್ನು ತೆಗೆದುಕೊಂಡಿದ್ದೇನೆ. ನಿಮಗೆ ಎಲ್ಲವನ್ನೂ ಕಳುಹಿಸಿ ಕೊಡಲು ನಾನು ತಯಾರಿದ್ದೇನೆ ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಬಹಳ ದುಃಖವಾಗುತ್ತದೆ, ಇಷ್ಟು ಅನ್ಯಾಯ ಆಗಬಾರದಿತ್ತು, ಈ ರೀತಿಯನ್ನು ಮಾಡಬಾರದಾಗಿತ್ತು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಶುಭಾಷ್ ಭರಣಿಯವರು ಮೊನ್ನೆ ಇನ್ನೂ ಎರಡು ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ನ್ಯಾಷನಲೈಸ್ಡ್ ಸ್ಕೀಂನಲ್ಲಿ ಕೊಡಬಾರದು ಎಂದು ಹೇಳಿದ್ದರೂ ಕೂಡ ಇವರು ಪರ್ಮಿಟ್ ಕೊಟ್ಟರು. ಎಲ್ಲಾ ಮೀಟಿಂಗ್‌ಗಳಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಲಾಯರ್ ಸರ್ಕಾರದ ಪರವಾಗಿ, ಕೆ.ಎಸ್.ಆರ್.ಟಿ.ಸಿ.ಯ ಸ್ಕೀಂ ಇದೆ, ಆದ್ದರಿಂದ ಕೊಡಬಾರದು ಎಂದು ಅಬ್ಜಕ್ಷನ್ ಹಾಕಿದ್ದಾರೆ, ವಾದ ಮಾಡಿದ್ದಾರೆ, ಕೊಡಬಾರದು ಎಂದು ಸರ್ಕಾರದ ಪರವಾಗಿ ಹೇಳಿದ್ದಾರೆ. ಆದರೂ ಸಹ ಅಧಿಕಾರಿಗಳು ಕಾನೂನಿಗೆ ವಿರುದ್ಧವಾಗಿ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಇವರು ಹೇಗೆ ಕೊಟ್ಟರು ಎನ್ನುವುದನ್ನು ಇಲ್ಲಿ ಕೇಳಬೇಕಾಗುತ್ತದೆ. ಅದರ ಬಗ್ಗೆ ಇವರು ವಿವರಣೆಯನ್ನು ಕೇಳಬೇಕಾಗುತ್ತದೆ. ಯಾರ್‍ಯಾರಿಗೆ ಇಂಥ ಅನ್ಯಾಯವಾದಂಥ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ತಕ್ಷಣ

ವಜಾ ಮಾಡುವುದಕ್ಕೆ ಕ್ರಮ ಹಾಕಿಕೊಳ್ಳಬೇಕಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಮತ್ತೊಂದು ವಿಷಯವೆಂದರೆ, ಪ್ರೈವೇಟ್ ಅಪರೇಟರ್‌ಗಳು ನೂರಾರು ಬಸ್‌ಗಳನ್ನು ಇಟ್ಟುಕೊಂಡಿದ್ದಾರೆ.

SRI. M.P. PRAKASH : STA is a Quasi-judicial body. ಎಸ್.ಟಿ.ಎ. ಕ್ವಾಸಿ ಜ್ಯುಡಿಷಿಯಲ್ ಬಾಡಿಯಾಗಿರುವುದರಿಂದ, ಅದು ಇಲ್ಲೀಗಲ್ ಆಗಿ ಆರ್ಡರ್ ಪಾಸ್ ಮಾಡಿದರೂ, government cannot cancel it. There is an appellate authority for that and you know it also. As you rightly pointed out, we will certainly take note of it.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕೆ.ಎಸ್.ಆರ್.ಟಿ.ಸಿಯ ನಿಮ್ಮ ಲಾಯರ್ ಅಬ್ಜಕ್ಷನ್ ಮಾಡಿದ ಮೇಲೆ they should have taken up the matter in appeal. Tney are the parties.

SRI. M.P. PRAKASH : Perhaps STA has not considered it and judiciously has not decided. But, however it does not lie in the hands of the government to cancel that order. It is only and appellate authority that has to do it

ಶ್ರೀ ಮತಿ ಪ್ರಮೀಳಾ ನೇಸರ್ಗಿ : ಕ್ಯಾನ್ಸಲ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಅಂದರೆ ಕಾನೂನು ಪರವಾಗಿ ನಿಮ್ಮ ಅಧಿಕಾರಿಗಳು ಅಪೀಲ್ ಹೋಗಬೇಕಾಗಿತ್ತು, ಸ್ಟೇ ತೆಗೆದುಕೊಳ್ಳಬೇಕಾಗಿತ್ತು. ಇವತ್ತು ಬೆಂಗಳೂರಿನಲ್ಲಿ ಏನು ಮಾಡುತ್ತಿದ್ದಾರೆಂದರೆ, ನ್ಯಾಷನಲ್ ರೂಟ್ ಬರುತ್ತದೆಂದು ಯಶವಂತ್‌ಪುರದಲ್ಲಿ ಪರವಾನಿಗೆ ಕೊಡುತ್ತಿದ್ದರು. ಈಗ ಏನು ಮಾಡಿದ್ದಾರೆಂದರೆ, ಒಟ್ಟಿಗೆ ಮೊದಲು ಕೊಟ್ಟು ನಂತರ ಮಾಡಿಫಿಕೇಷನ್ ಎಂದು ಹಾಕಿ ಬಸ್‌ಸ್ಟ್ಯಾಂಡ್‌ನಿಂದ ಮಾಡಿಫಿಕೇಷನ್ ಕೊಡುತ್ತಾರೆ. ಇದು ಯಾವ ರೀತಿ ಮಾಡುತ್ತಾರೆನ್ನುವುದು ಯಾರಿಗೂ, ನಮಗೂ, ನಿಮಗೂ ಸಾರ್ವಜನಿಕರಿಗೂ ಗೊತ್ತೆ ಆಗಬಾರದು. ಈ ರೀತಿ ಮಾಡುತ್ತಿದ್ದಾರೆ. ಇವತ್ತು ಕೆ.ಎಸ್.ಆರ್.ಟಿ.ಸಿ ಮತ್ತು ಬಿಟಿಎಸ್ ಸ್ಕಿಮ್‌ಗೆ ಲಾಸ್ ಆಗುತ್ತಿರುವ ಬಗ್ಗೆ ನಿಮಗೆ ಗೊತ್ತಿರಬಹುದು. ಇವತ್ತು ಬೆಂಗಳೂರಿನಿಂದ ಆನೇಕಲ್ ಈ ಸ್ಕಿಮ್‌ನಲ್ಲಿ ಕೊಡುವುದಕ್ಕೆ ಬರುವುದಿಲ್ಲ. 1994ರಲ್ಲಿ ವಜಾ ಮಾಡಿರುವ ಅರ್ಜಿಗಳಿಗೆ ಈ ಸ್ಕೀಮ್‌ನಲ್ಲಿ ಕೊಡುವುದಕ್ಕೆ ಬರುವುದಿಲ್ಲವೆಂದು ಮೊನ್ನೆ ಮೀಟಿಂಗ್‌ನಲ್ಲೂ ಹೇಳಿದ್ದಾರೆ. 201 ಅರ್ಜಿಗಳನ್ನು ವಜಾ ಮಾಡಿದ್ದರೂ ಪುನಃ ಲೈಸೆನ್ಸ್ ಕೊಟ್ಟಿದ್ದಾರೆ. ಇದು ಹೇಗೆಂದರೆ ಅವರು ಒಂದು ಟೈಮ್ ಹಾಕಿದ್ದಾರೆ. ಬೆಂಗಳೂರಿನಿಂದ ಅನೇಕಲ್‌ಗೆ 1-30 ನಿಮಿಷ 1-40 ನಿಮಿಷವೆಂದು ಟೈಮ್ಮ ಕೊಟ್ಟಿದ್ದಾರೆ. ಇದು ನ್ಯಾಷನಲ್ ಸ್ಕೀಮ್‌ಗೆ ಹೋಗುವುದಿಲ್ಲವೆನ್ನುವುದಕ್ಕೆ ಏನು ಮಾಡಿದ್ದಾರೆಂದರೆ, ಇದರ ಬಗ್ಗೆ ಪ್ಲಾನ್ ರೂಟ್ಸ್ ಎಲ್ಲಾ ನನ್ನ ಬಳಿ ಇದೆ. ನಾನು ಎಲ್ಲವನ್ನೂ ತಂದಿದ್ದೇನೆ. ಈ ಸ್ಕೀಮ್ ನ್ಯಾಷನಲ್ ರೂಟ್‌ಗೆ ಹೋಗುವುದಿಲ್ಲವೆಂದು ಪಕ್ಕದ ಹಳ್ಳಿಗಳ ರೂಟ್ಸ್ ತೋರಿಸಿದ್ದಾರೆ. ಒಂದು ಬಸ್ಸು ಕೂಡ ಇವತ್ತು ಯಾವ ಹಳ್ಳಿಗೂ ಈ ಸ್ಕೀಮ್‌ನಲ್ಲಿ ಹೋಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಹಳ್ಳಿಗಳಿಗೆ ರಸ್ತೆ ಇದೆಯೇ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಇದನ್ನು ಒಪ್ಪುತ್ತೇನೆ. ಅಲ್ಲಿ ಏನಾಗಿದೆ ಎಂದರೆ, ಹೈಕೋರ್ಟ್ ರೂಲಿಂಗ್ ಪ್ರಕಾರ ರೋಡ್ ಸರ್ವೆ ಮಾಡಬೇಕು, ಸರ್ವೆ ಮಾಡಿದ ನಂತರ ಆ ರೋಡ್ ಮೋಟರ್‌ಬಲ್ ಎಂದು ಹೇಳಿದ ಮೇಲೆ ಕೊಡಬೇಕು ಅವರೇನು ಮಾಡಿದ್ದಾರೆಂದರೆ, ಈ ಸ್ಕೀಮ್‌ನ ಲಾಭ ಪಡೆಯಲು, ಗಾಡಿಗಳನ್ನು ಓಡಿಸಲು ಇವುಗಳನ್ನೆಲ್ಲಾ ರೂಟ್‌ಗಳೆಂದು ತೋರಿಸಿದ್ದಾರೆ. ರೋಡ್ ಸರ್ವೆ ಮಾಡಿ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್ ಇದು ಕೊಡುವುದಕ್ಕೆ ಬರುವುದಿಲ್ಲವೆಂದೂ ಹೇಳಿದ್ದರೂ ಕೂಡ ಕೊಟ್ಟಿದ್ದಾರೆ. ಇದು ಮೋಟಾರ್‌ಬಲ್ ಅಲ್ಲ ಎಂದು ಹೇಳಿದ್ದರೂ ಇವರು ಲೈಸನ್ಸ್ ಕೊಟ್ಟಿರುತ್ತಾರೆ. ಬೆಂಗಳೂರಿನಿಂದ-ಆನೇಕಲ್‌ಗೆ ಹೋಗಿಬರಲು 1.30, 1-45 ನಿಮಿಷ ಎಂದು ತೋರಿಸಿದ್ದಾರೆ, ಇವರು ಹಾಕಿ ಕೊಟ್ಟಿರುವ ರೂಟ್‌ಗಳಲ್ಲಿ ನಾವು ಹೋಗುವುದುದಾದರೆ ಕನಿಷ್ಠ ನಾಲ್ಕು ತಾಸು ಬೇಕಾಗುತ್ತದೆ. ಒಂದು ದಿವಸಕ್ಕೆ ಸುಮಾರು 20-25 ಟ್ರಾವೆಲ್ಸ್ ಟ್ರಿಪ್ ಮಾಡುತ್ತಿದ್ದಾರೆ. ಪ್ರೈವೇಟ್ ಓನರ್ಸ್ ಈ ರೀತಿ ಮಾಡುವುದರಿಂದ ಸರ್ಕಾರಕ್ಕೆ ಕೆಎಸ್‌ಆರ್‌ಟಿಸಿ ಯವರಿಗೆ ಲಾಸ್ ಆಗುತ್ತದೆ. ಇದರಲ್ಲಿ ಅಧಿಕಾರಿಗಳು ಕೂಡ ಷಾಮೀಲಾಗಿದ್ದಾರೆ. ಈ ವಿಷಯವನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನು ಪ್ರೈವೇಟ್ ಓನರ್ಸ್ ಸುಮಾರು ನೂರಾರು ಬಸ್ಸುಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ಒಬ್ಬರಿಗೂ ಕೂಡ ಅವರು ಪಿ.ಎಫ್. ಇಎಸ್‌ಐ ಸ್ಕೀಮ್ ಸೆಕ್ಯೂರಿಟಿಗಾಗಿ ಇವು ಯಾವುದನ್ನೂ ಮಾಡಿಲ್ಲ. ಮೇಲೆ ತಿಳಿಸಿದ ಅಂಶಗಳನ್ನು ಎಂಪ್ಲಾಯಿಗಳಿಗೆ ಮಾಡಬೇಕಾಗುತ್ತದೆ. ಒಂದೊಂದು ಬಸ್‌ಗಳನ್ನು ಬೇರೆ ಬೇರೆ ಬಸ್ಸು ಎಂದು ತೋರಿಸಿ ಕಾರ್ಮಿಕರಿಗೆ ಬೇಕಾಗಿರುವ ಸವಲತ್ತುಗಳನ್ನು ಕೊಡದೇ ವಂಚಿಸುತ್ತಿದ್ದಾರೆ. ಇದರಿಂದಾಗಿ ಅವರಿಗೆ, ಸರ್ಕಾರಕ್ಕೆ, ಜನಗಳಿಗೆ, ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ ತಾವು ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟು ಇದಕ್ಕೇನು ಮಾಡಬೇಕೆಂದು ತಾವು ಯೋಚನೆ ಮಾಡಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ. ಇದನ್ನು ಹೇಗೆ ಸರಿಪಡಿಸುತ್ತೀರೆಂದು ಕೂಡ ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮತ್ತೊಂದು ಈ ರೂಟ್ ವಿಚಾರದ ಬಗ್ಗೆ ಹೇಳುವುದಾದರೆ, ಜಯನಗರ ಸೆಂಟ್ರಲ್ ಸ್ಕ್ವಾಡ್ ಎಂದು ಮಾಡಿದ್ದಾರೆ. ಟೈಮ್ ಯಾವ ರೀತಿ ಹಾಕಿದ್ದಾರೆ ಎನ್ನುವ ಬಗ್ಗೆ ಈಗಾಗಲೇ ತಮಗೆ ಹೇಳಿದ್ದೇನೆ. ಒಂದು ಸಿಂಗಲ್ ಟ್ರಿಪ್‌ಗೆ ಸುಮಾರು ನಾಲ್ಕು ಗಂಟೆ ಬೇಕು. ಆದರೆ ಆ ಟೈಮ್ ಹಾಕಿರುವ ಎಸ್‌ಟಿಎ : ಆರ್‌ಟಿಎ ರವರು ಇಬ್ಬರೂ ಬರಲಿ ಅಲ್ಲಿ ನಿಜವಾಗಿ ಹೋಗಿ ಬರುವುದಕ್ಕೆ ಸಾಧ್ಯವೆ ಎಂಬುದು ಗೊತ್ತಾಗುತ್ತದೆ. ಮಾನ್ಯ ಬೈರೇಗೌಡರೆ ತಮಗೂ ಕೂಡ ಈ ವಿಚಾರ ತಿಳಿದಿರಬಹುದು, ಕೋಲಾರದಲ್ಲಿ ಈ ಸ್ಕೀಮ್‌ನಲ್ಲಿ ಕೂಡ ಸುಮಾರು 30 ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಬಹುಶಃ ತಮಗೆ ಗೊತ್ತಿರಬಹುದು ನ್ಯಾಷನಲ್ ರೂಟ್ ಸ್ಕೀಮ್‌ನಲ್ಲಿ ಕೊಡುವುದಕ್ಕೆ ಬರುವುದಿಲ್ಲವೆಂದರೂ ಇಲ್ಲಿ 30 ಪರ್ಮಿಟ್ ಕೊಟ್ಟಿದ್ದಾರೆ. ಈಗಾಗಲೇ ಅಲ್ಲಿ ಬಸ್ಸುಗಳನ್ನು ಕೂಡ ಓಡಾಡಿಸುತ್ತಿದ್ದಾರೆ. ಅಂಡರ್ ಬೋ ಸರಸ್ಕಮ್‌ಸ್ಟೆನ್ಸ್‌ಸ್ ಕೊಡಬಾರದೆಂದು ಹೈಕೋರ್ಟಿನ ಜಡ್ಜ್‌ಮೆಂಟ್‌ನಲ್ಲಿದ್ದರೂ ಕೂಡ 30 ಪರ್ಮಿಟ್ ಕೊಟ್ಟಿದ್ದಾರೆ. ಮಂಗಳೂರಿನಲ್ಲಿ ಕೂಡ ಈ ರೀತಿ ಕೊಟ್ಟಿದ್ದಾರೆ. ನಾನು ಏಕೆ ಈ

ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಇಡೀ ಕರ್ನಾಟಕದಲ್ಲಿ ಎಷ್ಟು ಈ ರೀತಿ ಆಗಿರಬಹುದು? ಇಂಥ ಪರಿಸ್ಥಿತಿ ಇರುವುದರಿಂದ ಇದರ ಬಗ್ಗೆ ನೀವು ತನಿಖೆ ಮಾಡಿಸುವುದಾದರೆ ಒಂದು ಶ್ವೇತಪತ್ರವನ್ನು ಸದನದ ಮುಂದೆ ಮಂಡಿಸಬೇಕಾಗುತ್ತದೆ. 10 ವರ್ಷಗಳಿಂದ ಅಧಿಕಾರಿಗಳು ಏನು ಮಾಡಿದ್ದಾರೆ ಎಂಬುದನ್ನು ಕೂಡ ತಿಳಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಆಯಿತು, ನಿಮ್ಮ ಸಮಯ ಮುಗಿಯುತ್ತಾ ಬಂತು ಬೇಗ ಮುಗಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಸೂಚಿಸಿರುವ ಸಮಯಕ್ಕೆ ಸರಿಯಾಗಿ ಇನ್ನು ಒಂದೈದು ನಿಮಿಷದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಡಬ್ಲ್ಯೂಪಿ :28,824:97 ವೈಯೋಲೇಟ್ ಆಗಿರುವುದು, ನಾನು ನಂಬರ್‌ಗಳನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ, ಅದೇ ರೀತಿಯಲ್ಲಿ ಐಎಲ್‌ಆರ್: 90:96: ಕರ್ನಾಟಕ 295, ತಮಿಳುನಾಡು ಆ್ಯಕ್ಟ್ 41:92, ತಾವು ದಯವಿಟ್ಟು ಇದನ್ನು ಮಾನ್ಯ ಸಚಿವರು ನೋಟ್ ಮಾಡಿಕೊಳ್ಳಬೇಕು. ಇದರಲ್ಲಿ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಆದರೆ ಅಧಿಕಾರಿಗಳು ಏನು ಮಾಡಿದ್ದಾರೆಂದರೆ, ಆ್ಯಕ್ಟ್ 41:92 ಇದರಲ್ಲಿ ತಮಿಳುನಾಡಿನ ಹೈಕೋರ್ಟಿನಲ್ಲಿ ಇದನ್ನು ಸ್ಟೇ ಮಾಡಿದ್ದಾರೆ, ಅದಕ್ಕಾಗಿ ನಾವು ಕೊಡುತ್ತೇವೆಂದು ಬರೆದಿರುತ್ತಾರೆ. ಸ್ಟೇ ಆಗಿರುವುದು ಕೇವಲ ಲಿಮಿಟೆಡ್ ಪೀರಿಡ್‌ಗೆ ಮಾತ್ರ ಮತ್ತು ಯಾರು ಎಗ್ಸಿಟಿಂಗ್ ಆಪರೇಟರ್ಸ್ ಇದ್ದಾರೆ ಅವರಿಗೆ ಮಾತ್ರ ಎಂದು ಕ್ಲಿಯರ್ ಆಗಿ ಬರೆದಿದ್ದಾರೆ. ಆದರೆ ಇಲ್ಲಿ ಹೊಸ ಪರ್ಮಿಟುದಾರರಿಗೆ ಜಡ್ಜ್‌ಮೆಂಟನ್ನು ಉಪಯೋಗಿಸಿಕೊಂಡು, ಎಂಟ್ರಿ ಮಾಡಿರುವುದನ್ನು ಉಪಯೋಗಿಸಿಕೊಂಡು ಇಲ್ಲಿ ಆರ್ಡರ್ ಮಾಡಿಕೊಟ್ಟಿದ್ದಾರೆ ಇದರ ಬಗ್ಗೆ ತಾವು ತೀವ್ರ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ತಮ್ಮ ಸಮಯ ಮುಗಿಯುತ್ತಾ ಬಂತು, ತಾವು ಬೇಗ ಮುಗಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಈಗಾಗಲೇ ಹೇಳಿದ ಪ್ರಕಾರ ಮುಗಿಸುತ್ತೇನೆ, ಕೇವಲ ಮುಖ್ಯಮಂತ್ರಿಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಮತ್ತೊಂದು ವಿಚಾರ ಏನೆಂದರೆ ಈ ಮೋಟಾರ್ ವೆಹಿಕಲ್ಸ್‌ನ್ನು ಮೈನ್ ಆಫೀಸ್‌ನಲ್ಲಿ ಮತ್ತು ಬ್ರಾಂಚ್ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕೆಎ:01:ಎ, ಎಂದು ಒಂದು ಕಡೆ ರಿಜಿಸ್ಟರ್ ಮಾಡಿಸುತ್ತಾರೆ, ಕೆಎ:01:ಬಿ, ಎಂದು ಮತ್ತೊಂದು ಕಡೆ ಮಾಡಿಸುತ್ತಾರೆ, ಕೆಎ:01:ಸಿ, ಎಂದು ಇನ್ನೊಂದು ಕಡೆ ಮಾಡಿಸುತ್ತಾರೆ. ಇಲ್ಲಿ ಒಟ್ಟಾರೆ ಮೂರು ಬಸ್ಸುಗಳಿಗೆ ಟ್ಯಾಕ್ಸ್ ಕಟ್ಟಬೇಕು. ಆದರೆ ಇವರು ಏನು ಮಾಡುತ್ತಾರೆಂದರೆ, ನಂತರ ಹೋಗಿ ಎರಡು ಬ್ರಾಂಚ್ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸಿರುವುದನ್ನು ಕ್ಯಾನ್ಸಲ್ ಮಾಡಿಸಿ, ಒಂದೇ ಬಸ್ಸಗೆ ಮಾತ್ರ ಟ್ಯಾಕ್ಸ್ ಕಟ್ಟುತ್ತಿದ್ದಾರೆ ಇಂತಹದ್ದನ್ನು ಸಹಸ್ರಾರು ಪ್ರೈವೇಟ್‌ನವರು ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಗಮನಹರಿಸಬೇಕು. ಮೂರು ಕಡೆ ರಿಜಿಸ್ಟರ್ ಮಾಡಿ ನಂತರ ಎರಡು ಕಡೆ ಕ್ಯಾನ್ಸಲ್ ಅಥವಾ ವಿತ್‌ಡ್ರಾ ಮಾಡಿಕೊಂಡು, ಅದೇ ನಂಬರಿನ ಬಸ್ಸುಗಳನ್ನು ಇಟ್ಟುಕೊಂಡು ಮೂರು ಬಸ್ಸುಗಳನ್ನು ಉಪಯೋಗಿಸಿಕೊಂಡು ಕೆಲಸ

ಮಾಡುತ್ತಿದ್ದಾರೆ. ಮತ್ತೊಂದು ವಿಚಾರ ಏನೆಂದರೆ ಈ ಸೇಲ್ಸ್ ಟ್ಯಾಕ್ಸ್ ಹೇಗೆ ಮೋಸ ಮಾಡುತ್ತಾರೆ ಎಂದು ಹೇಳುವುದಾದರೆ, ಲಗೇಜ್‌ನಿಂದ ಕೂಡ ಬಹಳ ಸೇಲ್ ಟ್ಯಾಕ್ಸ್ ಮೋಸ ಮಾಡುತ್ತಿದ್ದಾರೆ. ಲಗೇಜ್‌ಗಳಿಗಾಗಿ ಲಾರಿಗಳಿದ್ದರೂ ಬಸ್ಸುಗಳ ಮೇಲೆ ಬಾಂಬೆ, ಮದ್ರಾಸ್, ಮುಂತಾದ ಕಡೆ ಲಗೇಜ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ.

ಈ ರೀತಿ ಬಸ್‌ಗಳಲ್ಲಿ ಲಗೇಜ್ ತೆಗೆದುಕೊಂಡು ಹೋಗುವುದರಿಂದ ಸರ್ಕಾರಕ್ಕೆ ಎಂಟ್ರಿ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್, ಬರುವುದಿಲ್ಲ ಹಾಗೂ ಚೆಕ್‌ಪೋಸ್ಟ್‌ನಲ್ಲಿ ಚೆಕ್ಕಿಂಗ್ ಆಗುವುದಿಲ್ಲ. ಹಾಗೂ ಸರ್ಕಾರಕ್ಕೆ ಬರಬೇಕಾದ ಸೇಲ್ಸ್ ಟ್ಯಾಕ್ಸ್ ಕೂಡ ಅವೈಡ್ ಆಗುತ್ತಿದೆ. ಅದಕ್ಕೋಸ್ಕರ ಇದನ್ನು ಸರಿಪಡಿಸಲು ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಪಕ್ಕದ ರಾಜ್ಯದಲ್ಲಿ ಅಂದರೆ ಮಹಾರಾಷ್ಟ್ರದಲ್ಲಿ ಈ ರೀತಿ ಆಗದಂತೆ ಒಂದು ಆರ್ಡರನ್ನು ಕೂಡ ತಂದಿರುವುದರಿಂದ ಇದು ಯಾವುದೂ ಆಗುವುದಿಲ್ಲ, ಕರ್ನಾಟಕದಲ್ಲಿ ಇದು ಯಾವುದನ್ನೂ ಮಾಡಿಲ್ಲ, ಆದ್ದರಿಂದ ಈ ಲಗೇಜ್ ತೆಗೆದುಕೊಂಡು ಹೋಗತಕ್ಕಂಥ ಈ ಪ್ರೈವೇಟ್ ವೆಹಿಕಲ್‌ಗಳಿಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಪಾರ್ಕಿಂಗ್ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಬೆಂಗಳೂರಿನ ಎಲ್ಲಾ ರಸ್ತೆಗಳಲ್ಲಿ ಈ ವೆಹಿಕಲ್‌ಗಳು ಪಾರ್ಕಿಂಗ್ ಮಾಡಿರುತ್ತಾರೆ. ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಲಾಸಿಪಾಳ್ಯಂ ಬಸ್ ನಿಲ್ದಾಣದಲ್ಲಿ ಯಾವಾಗಲೂ ಬಸ್‌ಗಳನ್ನು ಪಾರ್ಕಿಂಗ್ ಮಾಡಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಟ್ಯಾಕ್ಸ್ ಹಾಕುವುದಕ್ಕೆ ತಾವು ಏನಾದರೂ ಗಮನಹರಿಸಿದ್ದೀರಾ? ಇದರ ಬಗ್ಗೆ ನಗರಸಭೆಯವರು ಏನಾದರೂ ಗಮನ ಹರಿಸಿದ್ದೀರಾ? ಈ ರೀತಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಟ್ರಾಫಿಕ್ ಪೋಲೀಸ್‌ರವರು ಏನಾದರೂ ಗಮನ ಹರಿಸಿದ್ದೀರಾ? ಈ ರೀತಿ ಪಾರ್ಕಿಂಗ್‌ನಿಂದಾಗಿ ಜನಗಳಿಗೆ ಅನಾನುಕೂಲವಾಗುತ್ತಿರುವುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಎಂದು ನಾನು ಇಲ್ಲಿ ಕೇಳಬಯಸುತ್ತೇನೆ. ಮತ್ತೊಂದು ಡಿಪಿಎಆರ್ ಬಗ್ಗೆ ನಾನು ಇಲ್ಲಿ ಹೇಳಬಯಸುತ್ತೇನೆ. ನವದೆಹಲಿಯಲ್ಲಿ ಸುಮಾರು 11 ಕೋಟಿ ರೂಪಾಯಿಗಳನ್ನು ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಗೆ ಯಾವುದೇ ಅಗ್ರಿಮೆಂಟ್ ಇಲ್ಲದೆ ಕೊಟ್ಟು, ಇನ್ನೊಂದು ಕರ್ನಾಟಕ ಭವನ ಮಾಡುತ್ತೇವೆಂದು ಜಾಗ ಕೊಟ್ಟು ಎಷ್ಟು ವರ್ಷಗಳಾಗಿವೆ? ಹಣ ಏನಾಗಿದೆ? ಇದರ ಬಗ್ಗೆ ಕೂಡ ತಾವು ಹೇಳಬೇಕು. ಇದರ ಜೊತೆಗೆ ನೇಮಕಾತಿಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಸುಮಾರು ದಿವಸಗಳಿಂದ ನೇಮಕಾತಿಯಾಗುತ್ತಿಲ್ಲ, ವೈದ್ಯಕೀಯ, ಶಿಕ್ಷಣ, ಈ ಕಡೆ ನೇಮಕಾತಿ ಮಾಡಿದ್ದೀರಿ, ಆದರೆ ಬೇರೆ ಕಡೆ ಎಲ್ಲೂ ನೇಮಕಾತಿಯಾಗದೇ ಇರುವುದರಿಂದ ಖಾಲಿ ಹುದ್ದೆಗಳ ಸಂಖ್ಯೆ ಜಾಸ್ತಿ ಇದೆ, ನಾವು ಏನು ಅನ್‌ಎಂಪ್ಲಾಯಿಮೆಂಟ್ ಎಂದು ಹೇಳುತ್ತಿದ್ದೇವೆ ಅದನ್ನು ಫಿಲ್‌ಆಫ್ ಮಾಡುವುದಕ್ಕೆ ತಾವು ಹಾಕಿರುವ ಬ್ಯಾನ್ ಆರ್ಡರನ್ನು ತೆಗೆದು ಹಾಕಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಒಟ್ಟು ಇವತ್ತು 50 ಬೇಡಿಕೆಗಳನ್ನು ಮಂಡಿಸಿದ್ದೀರಿ ಇವತ್ತು 10-30ಕ್ಕೆ ಚರ್ಚೆಯನ್ನು ಮುಗಿಸಿ, ಮಧ್ಯಾಹ್ನ 3-00ಕ್ಕೆ ಮಾನ್ಯ

ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೀರಿ. ಇದು ಹೇಗಿದೆ ಎಂದರೆ ಸಿನಿಮಾದಲ್ಲೂ ಕೂಡ ಈ ರೀತಿ ಚಿತ್ರೀಕರಣವಾಗುವುದಿಲ್ಲ. ಚಲನಚಿತ್ರದಲ್ಲೂ ತಕ್ಷಣ ಮಂತ್ರಿಮಂಡಲದ ರಚನೆ, ತಕ್ಷಣ ಆಯವ್ಯಯ ಮಂಡಿಸುವುದು, ಈ ರೀತಿ ಆಗುವುದಿಲ್ಲ.

ಉಪಾಧ್ಯಕ್ಷರು : ಯಾವುದೂ ಆಗುವುದಿಲ್ಲವೋ ಅದನ್ನು ನಾವು ಮಾಡಿ ತೋರಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಒಬ್ಬ ನಿರ್ದೇಶಕ ಪ್ರಜಾತಂತ್ರದ ವ್ಯವಸ್ಥೆಯ ಸಿನಿಮಾವನ್ನು ತೆಗೆದರೆ, ಒಂದೇ ದಿವಸದಲ್ಲಿ ಬೇಡಿಕೆಗಳನ್ನು ಮಂಡಿಸಿ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದು, ಇದು ಸಿನಿಮಾ ಮಾಧ್ಯಮದಲ್ಲೂ ಕೂಡ ಸಾಧ್ಯವಾಗಿಲ್ಲ, ಆದರೆ ಇಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಕೂಡ ದಾಟಿ ಹೋಗಿದೆ.

12.30 ಪಿ.ಎಂ

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ರಾಜ್ಯಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅಧಿವೇಶನದಲ್ಲಿ ಅರ್ಧ ದಿವಸ ಸಮಯವನ್ನು ಇವರೇ ತೆಗೆದುಕೊಳ್ಳುತ್ತಾರೆ, ಸಮಯ ಇಲ್ಲ ಎಂದರೆ ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಇದು ಅತ್ಯಂತ ಭಯಾನಕವಾದದ್ದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಪರಿಸ್ಥಿತಿ ಒಳ್ಳೆಯದಲ್ಲ. ಒಂದು ಕಡೆ ಸರ್ಕಾರ ವಿಷಯ ಸಮಿತಿಯನ್ನು ರದ್ದು ಮಾಡಿದೆ. ವಿಷಯ ಸಮಿತಿಗಳನ್ನು ರದ್ದು ಮಾಡಿ ತಾವು ಏನು ಮಾಡಬೇಕಾಗಿತ್ತು ಎಂದರೆ, ಈ ಸದನವನ್ನು ಕನಿಷ್ಠಪಕ್ಷ 100 ದಿವಸಗಳ ಕಾಲ ನಡೆಸಬೇಕಾಗಿತ್ತು. ಮಾನ್ಯ ಉಪಾಧ್ಯಕ್ಷರೆ ನಾನು 1967ನೇ ಇಸವಿಯಿಂದ ಇಲ್ಲಿ ಇದ್ದೇನೆ ಮತ್ತು ಮಾನ್ಯ ಮಂಜುನಾಥ್‌ರವರು ಸಹ ಆಗ ಇದೇ ಪೀಠದಲ್ಲಿದ್ದರು. ಆಗ ಒಂದೊಂದು ಬೇಡಿಕೆ ಸ್ವಲ್ಪ ಹೆಚ್ಚು ಕಡಿಮೆ ಸುಮಾರು ಮೂರು ದಿವಸಗಳ ಕಾಲ ನಡೆದಿರತಕ್ಕಂಥದ್ದು ಉಂಟು. ಇವತ್ತು ತಾವು ಸಮಗ್ರವಾದ ಚರ್ಚೆ ಆಗುವುದಕ್ಕೆ ಒಪ್ಪಿಕೊಳ್ಳಿ ಈ ರೀತಿ 50 ಬೇಡಿಕೆಗಳ ಮೇಲೆ ಸುಮಾರು ಎರಡು ಗಂಟೆಯೊಳಗೆ ಎಲ್ಲರೂ ಸಾರಾಸಗಟಾಗಿ ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಯವರು ಒಟ್ಟಿಗೆ ಉತ್ತರ ಕೊಟ್ಟು ಹೋಗುವುದಾದರೆ ಅದಕ್ಕೆ ಗೌರವ ಇದೆಯೆ?

ಉಪಾಧ್ಯಕ್ಷರು : ಇದಕ್ಕೆ ನಾವು ಜವಾಬ್ದಾರರಲ್ಲ. ಸದನದಲ್ಲಿರತಕ್ಕಂಥ ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲರೂ ಜವಾಬ್ದಾರಿಯಾಗಿರುತ್ತಾರೆ. ಅಧ್ಯಕ್ಷರು ಜವಾಬ್ದಾರಿ ಆಗಿರುವುದಿಲ್ಲ. ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರ ಮೇಲೆ ನಾನು ಹೇಳುತ್ತಿಲ್ಲ. ಸದನ ಎಷ್ಟು ದಿವಸ ನಡೆದಿದೆ ಎಂದು ತಾವೇ ಹೇಳಿ, ನಿಮಗೆ ನಾನು ನೇರವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ? ಈ ಸದನ ಹಿಂದೆ 75 ದಿವಸ, 80 ದಿವಸ ಮತ್ತು 90 ದಿವಸ ನಡೆದಿರತಕ್ಕಂಥದ್ದು ಉಂಟು. ಆದರೆ, ಸರ್ಕಾರ ಆಯವ್ಯಯ ಮಂಡನೆ ಮತ್ತು ಎಲ್ಲಾ ಬೇಡಿಕೆಗಳನ್ನು ಮಾಡತಕ್ಕಂಥ ವಿಚಾರವನ್ನು

ಕೇವಲ 25 ದಿವಸದಲ್ಲಿ ಎಲ್ಲವನ್ನೂ ಮುಗಿಸಿದೆ ಅಂದರೆ ಇದು ಪ್ರಜಾತಂತ್ರ ವ್ಯವಸ್ಥೆಗಿಂತ ಹೆಚ್ಚಾಗಿ ಬಹುಶಃ ಈ ರೀತಿ ಮಿಲ್ಟ್ರಿ ಪ್ರಭುತ್ವದಲ್ಲಿ, ಮಿಲ್ಟ್ರಿ ಅಧಿಕಾರಿಗಳ ನಡುವೆ ನಡೆಯಬಹುದು. ಇದಕ್ಕೆ ಇನ್ನೊಂದು ಅನುಕೂಲವಾದ ಸಲಹೆ ಏನೆಂದರೆ, ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುದ್ದಾದ ಅಕ್ಷರದಲ್ಲಿ ಅವರವರ ಭಾಷೆಗಳಲ್ಲಿ ಬರೆದು ಅದನ್ನು ಆಯಾಯ ಇಲಾಖೆಗಳಿಗೆ ಒಪ್ಪಿಸುವಂತೆ ಎಲ್ಲಾ ಸದಸ್ಯರಿಗೆ ಹೇಳಬೇಕು. ಈ ಸಲಹೆಯನ್ನು ಮಾನ್ಯ ಉಪಾಧ್ಯಕ್ಷರ ಮೂಲಕ ಕೊಡುತ್ತಿದ್ದೇನೆ

ಉಪಾಧ್ಯಕ್ಷರು : ಬಿ.ಎ.ಸಿ.ಯಲ್ಲಿ ಈ ವಿಷಯದ ಮೇಲೆ ಚರ್ಚೆಯಾದಾಗ ಎಲ್ಲರೂ ಒಪ್ಪಿಕೊಂಡ ಪ್ರಕಾರ ಈ ಸದನ ನಡೆಯುತ್ತಿದೆ. ಆದರೆ ತಾವು ಅಲ್ಲಿ ಒಪ್ಪಿಗೆ ಕೊಟ್ಟು, ಇಲ್ಲಿ ಈ ರೀತಿ ಹೇಳಿದರೆ ನಾವು ಸದನವನ್ನು ಹೇಗೆ ನಡೆಸಬೇಕು?

ಶ್ರೀ ವಾಟಾಳ್ ನಾಗರಾಜ್ : ಬಿ.ಎ.ಸಿ. ಯಲ್ಲಿ ನಾವು ಯಾರೂ ವಿಷಯ ಸಮಿತಿಯನ್ನು ರದ್ದು ಮಾಡಿ ಎಂದು ಹೇಳಲಿಲ್ಲ.

ಉಪಾಧ್ಯಕ್ಷರು : ಬಿ.ಎ.ಸಿ. ಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಯಡಿಯೂರಪ್ಪನವರೂ ಸಹ ಇದ್ದರು, ಅಲ್ಲಿ ಈ ವಿಷಯದ ಮೇಲೆ ಚರ್ಚೆಯಾಗಿದೆ. ನಿಮಗೆ ಕೊಟ್ಟಿರುವ ಸಮಯವನ್ನು ಏಕೆ ವ್ಯಯ ಮಾಡುತ್ತಿದ್ದೀರಿ?

ಶ್ರೀ ಕೆ.ಎಸ್. ಈಶ್ವರಪ್ಪ : ಬಿ.ಎ.ಸಿ. ಯಲ್ಲಿ ವಿಷಯ ಸಮಿತಿಯನ್ನು ಮುಂದುವರಿಸಿಕೊಂಡು ಹೋಗಲಿ ಎಂದು ಹೇಳಿದ್ದೇವೆ, ರದ್ದು ಮಾಡಬೇಕೆಂದು ಹೇಳಲಿಲ್ಲ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆ ನಡೆದಿಲ್ಲವೆಂದು ಹೇಳುತ್ತಿದ್ದಾರೆ. ನಾನು ಅಲ್ಲಿ ನಡೆದಿರತಕ್ಕಂಥ ಚರ್ಚೆ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ, ನಿರ್ಣಯದ ಬಗ್ಗೆ ನಾನು ಮಾತನಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ನಾನು ಸ್ಪಷ್ಟವಾಗಿ ಒಪ್ಪಿಕೊಂಡಿಲ್ಲ. ನಾನು ಏಕೆ ಇದನು ಕೇಳುತ್ತಿದ್ದೇನೆಂದರೆ, ನಿಮ್ಮ ಮನಸ್ಸಿಗೆ ಈ ಸದನ ನಡೆಸತಕ್ಕಂಥ ವ್ಯವಸ್ಥೆ ಒಪ್ಪಿಗೆ ಆಗುತ್ತದೆಯೇ? ಇದಕ್ಕೆ ನನ್ನದೇನು ತಕರಾರು ಇಲ್ಲ.

ಉಪಾಧ್ಯಕ್ಷರು : ನಿಮ್ಮೆಲ್ಲರ ಒಪ್ಪಿಗೆಯೇ ನನ್ನ ಒಪ್ಪಿಗೆ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಆಗಬಾರದಿತ್ತು. ಈ ಸಭೆಗೆ ಮಹತ್ತರವಾದ ಒಂದು ಶಕ್ತಿ ಇದೆ; ಇದಕ್ಕೆ ನಿಜವಾಗಿಯೂ ಅಪಾಯ ಒದಗತಕ್ಕಂಥ ಸೂಚನೆ ಇದೆ ಎನ್ನತಕ್ಕಂಥ ಮಾತನ್ನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇವತ್ತು ಮಂತ್ರಿಮಂಡಲದಲ್ಲಿ ಅನೇಕ ಜನ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ. ರಾಜೀನಾಮೆ ಕೊಟ್ಟಿರತಕ್ಕಂಥ ಮಂತ್ರಿಗಳ ಮುಖ್ಯ ಖಾತೆಗಳೆಲ್ಲಾ ಇವತ್ತು ಮಾನ್ಯ ಮುಖ್ಯಮಂತ್ರಿಗಳೇ ವಹಿಸಿಕೊಂಡಿದ್ದಾರೆ. ನನಗನ್ನಿಸಿದ ಮಟ್ಟಿಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಇಲಾಖೆಯ ಹೊರೆಯನ್ನು ಹೊತ್ತುಕೊಂಡು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಮಂತ್ರಿಮಂಡಲವನ್ನು ಜಾಸ್ತಿ ಮಾಡಬೇಕು, ಇಲ್ಲದಿದ್ದರೆ

ಮಂತ್ರಿಮಂಡಲವನ್ನು ಹಂಚಿಕೆಯನ್ನಾದರೂ ಮಾಡಬೇಕು. ಇದು ಮಾನ್ಯ ಮುಖ್ಯಮಂತ್ರಿಯವರಿಗೆ ಸೇರಿದ್ದು. ಇವತ್ತು ಮಾನ್ಯ ಮುಖ್ಯಮಂತ್ರಿಗಳು 8-10 ಖಾತೆಗಳನ್ನು ಉಳಿಸಿಕೊಂಡು ಒಟ್ಟಿಗೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಹೋದರೆ ನನಗನ್ನಿಸಿದ ಮಟ್ಟಿಗೆ ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ; ಆಡಳಿತ ಸುಭದ್ರವಾಗಿರುವುದಿಲ್ಲ. ಒಂದು ರೀತಿ ಹೆಪ್ಪು ಕಟ್ಟಿದ ಹಾಗೆ ಅಥವಾ ಮೋಡ ಕವಿದ ವಾತಾವರಣ ಇಲ್ಲಿ ಆಗಿದೆ. ಕೆಲವು ಪ್ರಮುಖವಾದಂಥ ಇಲಾಖೆಗಳು ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿ ಕೇಂದ್ರಿಕೃತವಾಗಿದೆ. ಇದರ ಬಗ್ಗೆ ನನ್ನದೇನು ತಕರಾರು ಇಲ್ಲ. ಆದರೆ ಅದನ್ನು ಬೇರೆಯವರಿಗೆ ವಹಿಸಬೇಕು ಅಥವಾ ಮಂತ್ರಿಮಂಡಲದ ರಚನೆ ಮಾಡಬೇಕು. ಮಂತ್ರಿಮಂಡಲ ರಚನೆ ಮಾಡುತ್ತೇವೆಂದು ಈಗಾಗಲೇ ಮೂರು ಬಾರಿ ಹೇಳಿಕೆಯನ್ನು ಕೊಟ್ಟಿದ್ದೀರಿ.

ಶ್ರೀ ಸಿ. ಬೈರೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಮಂತ್ರಿಮಂಡಲದ ರಚನೆ ಅಲ್ಲ, ಪುನರ್ ರಚನೆ ಮಾಡುವುದಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಅದು ತಿಳಿದಿರಲಿಲ್ಲ, ತಾವು ತಿಳಿಸಿದ್ದಕ್ಕೆ ಬಹಳ ಸಂತೋಷ ಮತ್ತು ಧನ್ಯವಾದಗಳು. ಇವತ್ತು ಯಾರನ್ನಾದರೂ ಮಂತ್ರಿಗಳನ್ನಾಗಿ ಮಾಡಲಿ ಅಥವಾ ಕೈಬಿಡಲಿ ನನ್ನದೇನು ಅಭ್ಯಂತರ ಇಲ್ಲ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಂತ್ರಿಮಂಡಲದಲ್ಲಿ ಕೆಲಸಕ್ಕೆ ಬರುವವರು ಯಾರು? ಕೆಲಸಕ್ಕೆ ಬರುವಂತವರನ್ನು ಅಳೆಯುವುದಕ್ಕೆ ಏನಾದರೂ ಅಳತೆ ಕೋಲು ಇದೆಯಾ? ಕೆಲಸಕ್ಕೆ ಬಾರದೆ ಇರತಕ್ಕಂಥವರು ಯಾರು ಅದನ್ನು ನಿರ್ಧಾರ ಮಾಡುವುದಕ್ಕೆ ಅಳತೆಕೋಲು ಇದೆಯೆ? x x x ಇದನ್ನು ತಾವು ದಯವಿಟ್ಟು ತಿಳಿಸಬೇಕು. ಸಾರಾಸಗಟಾಗಿ ಕೆಲಸಕ್ಕೆ ಬಾರದವರು ಎಂದು ಹೇಳಿದರೆ ಅದು ಈ ಅಳತೆಗೋಲು ಇಲ್ಲದೇ ಇರತಕ್ಕಂಥದ್ದೇ ಕಾರಣವಾಗಿರಬಹುದು, ಆದ್ದರಿಂದ ಕೆಲಸಕ್ಕೆ ಬಾರದ ಮಂತ್ರಿಗಳು ಇದ್ದಾರೆ ಎಂಬ ಪದವನ್ನು ಕಡತದಿಂದ ತಾವು ದಯವಿಟ್ಟು ತೆಗೆಸಬೇಕು.

ಉಪಾಧ್ಯಕ್ಷರು : ಆ ಪದವನ್ನು ಕಡತದಿಂದ ತೆಗೆಸೋಣ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಯಾರು ಹಿಂದೆ ಈ ಪದವನ್ನು ಹೇಳಿದ್ದರು ಅವರೇ ಇದಕ್ಕೆ ಕಾರಣವನ್ನು ಹೇಳಬೇಕಾಗುತ್ತದೆ, ಆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಕಾರಣ ಹೇಳಬೇಕಾಗಿಲ್ಲ.

ಶ್ರೀ ಟಿ.ವಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಯಾವುದೇ ಸರ್ಕಾರದಲ್ಲಿ ಮಂತ್ರಿಮಂಡಲ ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂಬುದಕ್ಕೆ ಅಳತೆಕೋಲು ಇದ್ದೇ ಇರುತ್ತದೆ. ಅದು ಯಾವುದೆಂದರೆ, ಚುನಾವಣೆಯ ಸಮಯ. ಮೊನ್ನೆ ನಡೆದಂತಹ ಚುನಾವಣೆಯ ಸಂದರ್ಭ ನೋಡಿದರೆ ಕೆಲವರು ಅಲ್ಲ, ಎಲ್ಲರೂ ಮನೆಗೆ ಹೋಗುವಂತಹ ಪರಿಸ್ಥಿತಿ ಇದೆ.

---

x x x ಈ ಪದಗಳನ್ನು ಉಪಾಧ್ಯಕ್ಷರ ಆದೇಶದ ಮೇರೆಗೆ ಕಡಿತದಿಂದ ತೆಗೆದು ಹಾಕಲಾಗಿದೆ.

ಶ್ರೀ ಸಿ. ಬೈರೇಗೌಡ : ಹಿಂದೆ ನಡೆದಂತಹ ಚುನಾವಣೆಯಲ್ಲಿಯೂ ಅಳತೆ ಕೋಲು ಇತ್ತಲ್ಲವಾ? ನಿಮ್ಮ ಹಿತದೃಷ್ಟಿಯಿಂದ ಈ ವಿಚಾರವನ್ನು ಮಾತನಾಡುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬೈರೇಗೌಡರು ನನ್ನ ಪಕ್ಕದಲ್ಲಿಯೇ ಕುಳಿತುಕೊಂಡು, ಕೈಲಾಗದ ಮಂತ್ರಿಗಳನ್ನು ಇಟ್ಟುಕೊಂಡು ನಾವು ಏನು ಮಾಡುವುದೆಂದು ಅವರೇ ಹೇಳಿದ್ದಾರೆ. ಇದರ ಬಗ್ಗೆ ಪಟ್ಟಿಯನ್ನು ಅವರಿಗೆ ಕೇಳಿ, ಅವರಿಗೆ ಗೊತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ಯಾರ್ಯಾರು ಎಂದು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಈ ವಿಚಾರದಲ್ಲಿ ಮಧ್ಯೆ ತರುವುದು ಸರಿಯಲ್ಲ, ಆದ್ದರಿಂದ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಮಂತ್ರಿಮಂಡಲದಲ್ಲಿ ಅಧ್ಯಕ್ಷ ಮಂತ್ರಿಗಳು ಇದ್ದಾರೆಂದು ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರೆ ಅನೇಕಬಾರಿ ಹೇಳಿದ್ದಾರೆ. ಇದನ್ನು ನಾನು ಹೇಳತಕ್ಕಂಥ ಮಾತಲ್ಲ. ಇದನ್ನು ತೆಗೆಯುವುದು, ಬಿಡುವುದು ಅವರಿಗೆ ಬಿಟ್ಟಿದ್ದು, ಇದಕ್ಕೆ ನನ್ನದೇನು ಅಭ್ಯಂತರ ಇಲ್ಲ. ಸುಮಾರು 40 ಸೂತ್ರಗಳನ್ನು ಹಾಕಿಕೊಂಡಿದ್ದೇವೆ, ಆ ಸೂತ್ರಗಳ ಆಧಾರದ ಮೇಲೆ ನಾವು ಆಡಳಿತವನ್ನು ನಡೆಸುತ್ತೇವೆಂದು ತಿಪ್ಪಗೊಂಡನ ಹಳ್ಳಿಯಲ್ಲಿ ಸಭೆ ಸೇರಿದಾಗ ತಾವು ಹೇಳಿದ್ದೀರಿ. ಆದರೆ ಈ ಸೂತ್ರಗಳು ಏಕೋ ಕಾಣುತ್ತಿಲ್ಲ. ಈ ಸೂತ್ರಗಳೆಲ್ಲಾ ಏನು ಆಯಿತು? ಇವೆಲ್ಲಾ ತಿಪ್ಪಗೊಂಡನ ಹಳ್ಳಿಯಲ್ಲಿಯೇ ನಡೆಯುತ್ತಿದೆಯೆ? ನಾನು ತಮಗೆ ಮುಖ್ಯವಾಗಿ ಹೇಳುವುದೇನೆಂದರೆ, ತಾವು ಆಶಾಢಭೂತಿಯಾಗಿರಬಾರದು. ಈ ಆಶಾಢಭೂತಿಯಿಂದ ಏನು ಪ್ರಯೋಜನ ಆಗುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಯಾವತ್ತು ಮುಖ್ಯಮಂತ್ರಿಗಳು ಅಧಿಕಾರಿಗಳ ಮೇಲೆ ಹಿಡಿತವನ್ನು ಇಟ್ಟುಕೊಳ್ಳುವ ಒಂದು ಚೈತನ್ಯವನ್ನು ಇಟ್ಟುಕೊಳ್ಳದೇ ಹೋದರೆ ರಾಜ್ಯದಲ್ಲಿ ಆಡಳಿತ ಕುಸಿದು ಬೀಳುತ್ತದೆ, ಇದು ಸ್ಪಷ್ಟ. ಇದರ ಬಗ್ಗೆ ನಾವು ಪಕ್ಷಾತೀತವಾಗಿ ಮಾತನಾಡಬೇಕು. ಮುಖ್ಯಮಂತ್ರಿಯವರು ಅಧಾಕಾರಿಗಳ ಮೇಲೆ ಸ್ಪಷ್ಟವಾದ ಕಡಿವಾಣ ಇಟ್ಟು ಕೊಳ್ಳದಿದ್ದರೆ ಆಡಳಿತ ಕುಸಿದು ಬೀಳುತ್ತದೆ ಇದರ ಬಗ್ಗೆ ಅನುಮಾನವೇ ಇಲ್ಲ. ಇವತ್ತು ಅಧಾಕಾರಿಗಳ ಮತ್ತು ಸರ್ಕಾರದ ನಡುವೆ ಒಂದು ರೀತಿ ಸೇತುವೆ ಮುರಿದು ಬಿದ್ದಂತೆ ಆಗಿದೆ. ಇವತ್ತು ಅಧಿಕಾರಿಗಳಿಗೆ ಲಂಗುಲಗಾಮ್ ಇಲ್ಲ ನಾನು ಎಲ್ಲಾ ಅಧಿಕಾರಿಗಳ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಲಗಾಮ್ ಇಲ್ಲದೆ ಇರತಕ್ಕಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಕಾರಣ ಏನು? ಆಡಳಿತದಲ್ಲಿ ದಕ್ಷತೆಯಿಂದ ಕೆಲಸ ಮಾಡುವುದು ಅಧಿಕಾರಿಗಳ ಪಾತ್ರ ಬಹಳ ಪ್ರಾಮುಖ್ಯ. ನಾವು ಅಧಿಕಾರಿಗಳನ್ನು ಯಾವುದು ಲಗಾಮು ಹಾಕಿ ಹಿಡಿದುಕೊಳ್ಳುವುದಿಲ್ಲ. ಇದರಿಂದ ಸರ್ಕಾರ ಅಪಾಯದಿಂದ ಅಂಚಿಗೆ ಹೋಗುತ್ತದೆಂದು ನಾನು ಹೇಳುತ್ತೇನೆ. ನಮ್ಮಲ್ಲಿ ಅನೇಕ ಜನ ಅಧಿಕಾರಿಗಳಿದ್ದಾರೆ. ನಾನು ಮೊನ್ನೆ ಒಂದು ಸಭೆಗೆ ಹೋಗಿದ್ದೆ, ಮುಖ್ಯ ಮಂತ್ರಿಗಳ ಗೈರು ಹಾಜರಿಯಲ್ಲಿ ಮಾನ್ಯ ಸಣ್ಣ ಕೈಗಾರಿಕೆಯ ಸಚಿವರಾದ ಮೊಯಿದ್ದೀನ್ ರವರು ಅಲ್ಲಿ ಇದ್ದರು. ಅಂತಹ ನೂರಾರು ವಿಚಾರ ಹೇಳುತ್ತೇನೆ. ಅಲ್ಲಿ 12 ಜನ ಐ.ಎ.ಎಸ್ ಅಧಿಕಾರಿಗಳು ಕುಳಿತುಕೊಂಡಿದ್ದರು. ನಾವು ಶಾಸಕರು ಎನ್ನುವುದನ್ನು ಅವರ ಗಮನದಲ್ಲಿಲ್ಲ. ಅವರು ಒಬ್ಬ ಮಂತ್ರಿಯನ್ನೂ ಗಮನಿಸಲಿಲ್ಲ ಅವರಿಗೆ ಕಣ್ಣು ಕಾಣುತ್ತಾ ಇರಲಿಲ್ಲ. ಕಿವಿ ಕೇಳುತ್ತಾ ಇರಲಿಲ್ಲ.

ಮತ್ತು ಸ್ಪಂಧನೆ ಇರಲಿಲ್ಲ. ಒಂದು ರೀತಿಯ ಶರೀರವನ್ನು ಮರೆತು ಕುಳಿತಿದ್ದರು. ಅಂದರೆ ಒಬ್ಬ ಮಂತ್ರಿ, ಮುಖ್ಯ ಮಂತ್ರಿಗಳ ಅಧ್ಯಕತೆಯಲ್ಲಿ ಸಭೆ ಸೇರಿದಾಗ ಬಂದಂಥ 8-10 ಜನ ಅಧಿಕಾರಿಗಳು ಇದ್ದಾಗ ಅವರ ಪರಿಸ್ಥಿತಿ ಏನು? ಅವರಿಗೆ ಮಂತ್ರಿಗಳು ಏನು? ಶಾಸಕರು ಏನು, ಅವರು ಏನು ಮಹಾ, ಎಷ್ಟು ದಿವಸ ಇರುತ್ತಾರೆ, ಎನ್ನುವಂಥ ಪರಿಸ್ಥಿತಿ ಅವರಲ್ಲಿ ಇದೆ. ಕರ್ನಾಟಕದಲ್ಲಿ ಬಹುತೇಕ ಅಧಿಕಾರಿಗಳು ಇದ್ದಾರೆ. ಅವರ ಈ ಪರಿಸ್ಥಿತಿಯ ಪ್ರತಿಷ್ಠೆಯನ್ನು ನಾವು ಹೋಗಲಾಡಿಸಲಿಲ್ಲವೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಅನೇಕ ಸಲ ನಾವು ಇಂತಹ ವಿಷಯವನ್ನು ಬಹಳ ನೋವಿನಿಂದ, ನಾನು ಮತ್ತು ಯಡಿಯೂರಪ್ಪನವರು ಮಾತನಾಡಿದ್ದೇವೆ. ಕೆಲವು ಮಂತ್ರಿಗಳು ಹೋದರೆ ಆರಾಮವಾಗಿ ಕುಳಿತುಕೊಂಡಿರುತ್ತಾರೆ. ಕೆಲವು ಮಂತ್ರಿಗಳು ಹೋದಾಗ ಎದ್ದು ನಿಂತುಕೊಂಡು ಮಾತನಾಡುತ್ತಾರೆ. ಕೆಲವು ಮಂತ್ರಿಗಳು ಹೋದರೆ ಅವರು ಗಮನಿಸುವುದಿಲ್ಲ ಇದು ಒಳ್ಳೆಯದು ಅಲ್ಲ. ಒಬ್ಬ ರಾಜ್ಯ ಮಂತ್ರಿ ಇರಬಹುದು, ಅಥವಾ ಸಚಿವ ಸಂಪುಟದ ಮಂತ್ರಿ ಇರಬಹುದು, ಯಾರೇ ಮಂತ್ರಿಗಳು ಇರಲಿ ಅಧಿಕಾರಿಗಳು ಅವರಿಗೆ ಪ್ರಾಮಾಣಿಕವಾಗಿ, ಅವರ ಕರ್ತವ್ಯವನ್ನು ಈ ವ್ಯವಸ್ಥೆಯಲ್ಲಿ ಹೊತ್ತುಕೊಂಡು ಹೋಗಬೇಕು. ಅದನ್ನು ಬಿಟ್ಟು ತಮ್ಮ ಧಾಟಿಯಲ್ಲಿ, ಪ್ರಶ್ನೆ ಏನು ಇದೆ? ಇದಕ್ಕೆ ನಿಜವಾಗಿಯೂ ಕಡಿವಾಣ ಹಾಕಬೇಕು. ಇದಕ್ಕಾಗಿ ಪ್ರತಿ ತಿಂಗಳು ಐ.ಎ.ಎಸ್. ಮತ್ತು ಐ.ಪಿ.ಎಸ್ ಅಧಿಕಾರಿಗಳ ಸಭೆ ಕರೆಯಬೇಕು. ಅವರು ಎಲ್ಲೆಲ್ಲಿ ಹೋಗುತ್ತಾರೆ, ಏನೇನು ಕೆಲಸಗಳನ್ನು ಮಾಡಿದ್ದಾರೆ, ನಿಮ್ಮ ಕೆಲಸ ಏಷ್ಟು ಎಂದು ಕೇಳಬೇಕು. ಅಧಿಕಾರಿಗಳು ವಿದೇಶಕ್ಕೆ ಎಷ್ಟು ಸಲ ಹೋಗುತ್ತಾರೆ. ಹೆಚ್ಚು ಕಡಿಮೆ 280 ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳು 8-10 ಸಲ ವಿದೇಶಕ್ಕೆ ಹೋಗಿ ಬರುತ್ತಾರೆ. ಯಾರೋ ಒಬ್ಬ ರಾಜಕಾರಣಿ ಹೋಗಿ ಬರಲಿ, ಮಂತ್ರಿಗಳು ಹೋಗಲಿ, ಅದು ದಿನಪತ್ರಿಕೆಯ ಮುಖ ಪುಟದಲ್ಲಿ ಭ್ರಷ್ಟಾಚಾರ ಎಂದು ಬರುತ್ತದೆ. ಮಂತ್ರಿಗಳು, ಶಾಸಕರು ವಿದೇಶಕ್ಕೆ ಹೋಗಿ ಬಂದರೆ ಪತ್ರಿಕೆಗಳಲ್ಲಿ ಟೀಕೆ ಟಿಪ್ಪಣಿಗಳು ಬರುತ್ತವೆ, ಮತ್ತು ಸಾರ್ವಜನಿಕರಿಂದ ಕೂಡ ಟೀಕೆಗಳು ಬರುತ್ತದೆ. ಆದರೆ ಅಧಿಕಾರಿಗಳು ಎಷ್ಟು ಸಲ ಹೋಗಿ ಬಂದಿದ್ದಾರೆ. ಅಧಿಕಾರಿಗಳು ಎಷ್ಟು ಮಂಡಲಿಗೆ ನಿರ್ದೇಶಕರು. ಅವರು ಎಷ್ಟು ಮಂಡಳಿಗೆ ಅಧ್ಯಕ್ಷರು, ಅವರನ್ನು ಯಾರು ಕೇಳುವವರು. ಈ ರಾಜ್ಯದ, ದೇಶದ ಪ್ರಜಾತಂತ್ರ ವ್ಯವಸ್ಥೆಯೇ ಅಥವಾ ಅಧಿಕಾರಿಗಳ ವ್ಯವಸ್ಥೆಯೇ ಇದು ಬದಲಾವಣೆ ಆಗಬೇಕು, ಇದು ಇದೇ ರೀತಿ ಬೆಳೆದರೆ ಅಧಿಕಾರಿ ಶಾಹಿಗಳಲ್ಲಿ ಕೆಲವರು ಎಲ್ಲಿಯವರೆಗೆ ಮಾತನಾಡುತ್ತಾರೆ ಅಂದರೆ ಎಷ್ಟು ದಿವಸ ಇರುತ್ತದೆ. ಸರ್ಕಾರ ಅಂತಾರೆ, ನಾವು ಎಷ್ಟು ದಿವಸ ಇರಲಿ, ಅದನ್ನು ಕೇಳುವುದಕ್ಕೆ ಹೇಳುವುದಕ್ಕೆ ಇವರು ಯಾರು? ಈ ರೀತಿ ಅವರು ಭಾವಿಸುವುದು ಅತ್ಯಂತ ಅಪಾಯಕಾರಿ. ಈ ದೇಶದಲ್ಲಿ ನಾನು ಹೇಳುತ್ತೇನೆ ಒಬ್ಬ ಮಂತ್ರಿ ಅಥವಾ ಶಾಸಕರನ್ನು ತನಿಖೆ ಮಾಡಿ ಮತ್ತು ಮುಖ್ಯಮಂತ್ರಿಗಳನ್ನು ತನಿಖೆ ಮಾಡಿ. ಅದರ ಜೊತೆಗೆ ಐ.ಎ.ಎಸ್ ಐ.ಪಿ.ಎಸ್. ಅಧಿಕಾರಿಗಳು ಈ ರಾಜ್ಯದಲ್ಲಿರತಕ್ಕಂಥವರನ್ನು ಸಮರ್ಪಕವಾಗಿ ತನಿಖೆ ಮಾಡಿ. ಸಮರ್ಪಕವಾದಂಥ ತನಿಖೆ ನಡೆದು ಒಂದು ಹೋಲಿಕೆ ನಡೆಯಲಿ, ರಾಜಕಾರಣಿಗಳು ಎಷ್ಟು ಜನ ಭ್ರಷ್ಟಾಚಾರಿಗಳು ಇದ್ದಾರೆ. ಅಧಿಕಾರಿಗಳು ಎಷ್ಟು ಭ್ರಷ್ಟಾಚಾರಿಗಳು ಇದ್ದಾರೆ ಎಂಬುದಕ್ಕೆ

ಹೋಲಿಕೆ ನಡೆಯಲಿ. ಈ ಹೋಲಿಕೆಯ ಸತ್ಯಾಂಶ ಹೊರಗೆ ಬರಲಿ. ಪ್ರಾಮಾಣಿಕವಾದ ಅಧಿಕಾರಿಗಳು ಇದ್ದವರಿಗೆ ನಾನು ಗೌರವ ಕೊಡುತ್ತೇನೆ. ಮತ್ತು ಪ್ರಾಮಾಣಿಕವಾದ ಅಧಿಕಾರಿಗಳಿಗೆ ನಾನು ಶರಣು ಎನ್ನುತ್ತೇನೆ. ಶಾಸನ ಸಭೆಯಲ್ಲಿ ಒಬ್ಬ ಶಾಸಕನಿಗೆ ಒಂದು ಕಾನೂನು ಇದೆ. ಅದರ ಒಂದು ಶಿಷ್ಟಾಚಾರ ಇದೆ. ಒಬ್ಬ ಶಾಸಕ ಹೋದರೆ, ಒಬ್ಬ ಐ.ಎ.ಎಸ್ ಅಧಿಕಾರಿ ಎದ್ದು ನಿಂತು ಮಾತನಾಡಿಸಿ, ಅವರು ಹೇಳುವ ಕೆಲಸ ಕೈಲಾದರೆ ಆಗುತ್ತದೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುವ ಅಧಿಕಾರ ಇದೆ. ಶಾಸಕರಿಗೆ ಗೌರವ ಇಲ್ಲ. ಅವರಿಗೆ ಮಂತ್ರಿಗಳು ಎಂದರೆ ಗೌರವ ಇಲ್ಲ. ಈ ವ್ಯವಸ್ಥೆ ನಿರ್ಮಾಣ ಆದರೆ ಇದು ನಿಜವಾಗಿಯೂ ಅಪಾಯಕಾರಿ. ಅದಕ್ಕಾಗಿ ನಾನು ಹೇಳುತ್ತೇನೆ: ಮುಖ್ಯಮಂತ್ರಿಗಳು ಇದಕ್ಕೆ ನಿಜವಾಗಿಯೂ ಅಪಾಯಕಾರಿ. ಅದಕ್ಕಾಗಿ ನಾನು ಹೇಳುತ್ತೇನೆ: ಮುಖ್ಯಮಂತ್ರಿಗಳು ಇದಕ್ಕೆ ಬದ್ಧರಾಗಬೇಕು. ಮುಖ್ಯಮಂತ್ರಿಗಳು ಈ ಆಡಳಿತದ ವ್ಯವಸ್ಥೆಯಲ್ಲಿ ಬದ್ಧರಾಗಬೇಕು. ಒಂದು ಹಂತದಲ್ಲಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಸಭೆ ಇತ್ತು. ಅಲ್ಲಿ ಉಪ ಮುಖ್ಯಮಂತ್ರಿಗಳ ಧ್ವನಿ ಬಹಳ ಜೋರಾಗಿ ಇತ್ತು. ಅಲ್ಲಿ ಮುಖ್ಯಮಂತ್ರಿಗಳು ಕೂಡ ಇದ್ದರು. ಈ ಧ್ವನಿ ನಮ್ಮಲ್ಲಿ ಇಲ್ಲದಿದ್ದರೆ ಅಪಾಯಕಾರಿ ಆಗುತ್ತದೆ. ನಾವು ಸಿದ್ದವೀರಪ್ಪನವರನ್ನು ಮತ್ತು ಚನ್ನಬಸವಪ್ಪನವರನ್ನು ನೆನೆಸಿಕೊಳ್ಳಬೇಕು. ಮತ್ತು ಬಸವಲಿಂಗಪ್ಪನವರನ್ನು ನೆನೆದುಕೊಳ್ಳಬೇಕು. ಅವರು ಆ ರೀತಿ ದಕ್ಷತೆಯಿಂದ ಕೆಲಸ ಮಾಡಿದ್ದಾರೆ, ಅವರಂತೆ ಮಾಡದಿದ್ದರೆ ನನಗನಿಸುತ್ತದೆ ಇದು ಒಳ್ಳೆಯ ವ್ಯವಸ್ಥೆ ಆಗುವುದಿಲ್ಲ. ಸರ್ಕಾರದಲ್ಲಿ ಕೆಲಸ ಮಾಡುವಾಗ ಒಬ್ಬ ಅಧಿಕಾರಿ ಎಷ್ಟು ಜೋರಾಗಿ ಇರುತ್ತಾರೆ. ಆ ಅಧಿಕಾರಿ ನಿವೃತ್ತಿಯಾದ ಮೇಲೆ ಎಲ್ಲೋ ಒಂದು ಕಡೆ ಕೆಲಸಕ್ಕೆ ಸೇರುತ್ತಾರೆ. ಅಪವಿತ್ರವಾದ ಕಾರ್ಖಾನೆಯಲ್ಲಿ, ಡಿಸ್ಟಿಲರಿ ತಯಾರು ಮಾಡತಕ್ಕಂಥದ್ದರಲ್ಲಿ ಕಾರ್ಯದರ್ಶಿಗಳಾಗಿದ್ದವರು ಈ ರಾಜ್ಯದ ಒಬ್ಬ ಹಿರಿಯ ಐ.ಎ.ಎಸ್ ಅಧಿಕಾರಿ ಅಲ್ಲಿ ಕಾರಕೂನನಾಗಿ ಸೇರುತ್ತಾನೆ. ಇದು ನಿಜವಾಗಿಯೂ ಒಳ್ಳೆಯದು ಅಲ್ಲ. ಯಾವ ಕಾರಣಕ್ಕಾಗಿ ಹೋಗಬೇಕು, ಒಂದು ಕಡೆ ಅಧಿಕಾರ ಇಲ್ಲ, ಮೊದಲು ಅಧಿಕಾರವನ್ನು ನಡೆಸಿ, ಅಲ್ಲಿ ಕೆಲಸಕ್ಕೆ ಸೇರತಕಂಥದ್ದು ನಿಜವಾಗಿಯೂ ಒಳ್ಳೆಯ ಲಕ್ಷಣವಲ್ಲ ಮತ್ತು ಒಳ್ಳೆಯ ನೀತಿ ಅಲ್ಲವೆನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ಈ ಸದನದಲ್ಲಿ ಮಂತ್ರಿಗಳು ಭರವಸೆಯನ್ನು ಕೊಡುತ್ತಾರೆ. 10 ವರ್ಷಗಳ ಭರವಸೆಯನ್ನು ತಾವು ತೆಗೆಸಿ ನೋಡಿ. ಅದನ್ನು ತನಿಖೆ ನಡೆಸಿ. ಆ ಭರವಸೆಯನ್ನು ಸಮಿತಿ ನಮ್ಮಲ್ಲಿ ಇದೆ. ಆ ಸಮಿತಿಯನ್ನು ಇಟ್ಟಿದ್ದಾರೋ ಗೊತ್ತಿಲ್ಲ. ಆ ಭರವಸೆಯ ಸಮಿತಿಯಲ್ಲಿ ಮಹಾಭಾರತ, ರಾಮಾಯಣ ತುಂಬಿರುವಂಥ ಈ ಭರವಸೆಯ ಸಂಪುಟ ಸುಮ್ಮನೆ ಕೊಳೆಯುತ್ತಾ ಬಿದ್ದಿದೆ. ನಿಮಗೆ ಹೇಳುವುದಾದರೆ ಭರವಸೆಯನ್ನು ಕೊಟ್ಟಿರತಕ್ಕಂಥ ಮಂತ್ರಿಗಳು ಅನೇಕರು ಇಲ್ಲಿಯೇ ಇದ್ದಾರೆ. ಅನೇಕ ಮಂತ್ರಿಗಳು ಮಾಜಿಗಳಾಗಿದ್ದಾರೆ. ನಾವು ಎಲ್ಲವನ್ನು ಲೆಕ್ಕ ಹಾಕಿದರೆ ಮತ್ತು ಅದಕ್ಕೆ ಹಕ್ಕುಚ್ಯುತಿಯನ್ನು ತಂದರೆ ನೂರಾರು ಮಂತ್ರಿಗಳ ಮೇಲೆ ವಿಚಾರಣೆ ತರಬೇಕು, ಆ ಸಮಿತಿ ಆಗಬೇಕು, ಆ ಭರವಸೆ ಏಕೆ ಕೊಡಬೇಕು. ಭರವಸೆ ಕೊಡುವುದು, ನಾಳೆ ಮಾಡೋಣ, ನೋಡೋಣ, ಪರಿಶೀಲನೆ ಮಾಡೋಣ, ತಕ್ಷಣ ಯಾವಾಗ ಬೇಕು, ಆಗ ಮಾಡಿಸೋಣ, ಇದೊಂದು ಭರವಸೆಯ ಮಾಯಮಂತ್ರವಾಗಿದೆ. ಇದಕ್ಕೆ ಏನು ಬೆಲೆ ಬೇಡವೆ. ಒಂದು ಭರವಸೆಯನ್ನು ಒಬ್ಬ ಮಂತ್ರಿ ಸದನದಲ್ಲಿ ನಿಂತು ಭರವಸೆ ಕೊಟ್ಟರೆ ಆ

ಭರವಸೆಯ ಮಾತು ಬಹಳ ಪ್ರಾಮುಖ್ಯವಾದುದು ಇರುತ್ತದೆ. ನಾನು ಕೊಡುವ ಮಾತು, ಅದಕ್ಕೆ ತಕ್ಕಂತೆ ನಾನು ನಡೆಯಬೇಕೆಂದು ಮಂತ್ರಿಗಳಿಗೆ ಇರಬೇಕು. ಆ ಪರಿಸ್ಥಿತಿ ಇಲ್ಲದಿದ್ದರೆ ಈ ವ್ಯವಸ್ಥೆ ಅಪಾಯಕಾರಿ. ಸಮಯಕ್ಕೆ ಒಂದು ಸುಳ್ಳು ಹೇಳುವುದು.

ಶ್ರೀ ಟಿ.ಬಿ. ಜಯಚಂದ್ರ : ಕೊಡತಕ್ಕಂಥ ಭರವಸೆ ಕೆಲಸ ಆಗುತ್ತದೆಂದು ಅಲ್ಲ. ವಾಟಾಳ್‌ರವರನ್ನು ಪ್ರಶ್ನೆ ಕೇಳಿದಾಗ ಕೂಡಿಸುವುದನ್ನು ಮಾಡುವುದಕ್ಕೆ ಉಪಯೋಗಿಸತಕ್ಕಂಥ ಒಂದು ಸಾಧನ.

ಶ್ರೀ ವಾಟಾಳ್ ನಾಗರಾಜ್ : ಸಮಯಕ್ಕೆ ಒಂದು ಸುಳ್ಳು ಹೇಳತಕ್ಕಂಥದ್ದನ್ನು ಹೇಳುವುದು ಬೇಡ. ಹಿಂದೆ 1967ರಿಂದ ನಾನು ಈ ಸದನದಲ್ಲಿ ಇದ್ದೇನೆ, ನಾನು ಅದನ್ನು ತಿಳಿದಿದ್ದೇನೆ. ಕೆಲವು ಮಂತ್ರಿಗಳ ಭರವಸೆಯನ್ನು ನಿಜವಾಗಿಯೂ ನೋಡಿ. 6 ತಿಂಗಳಾದರೂ ಪ್ರಾಮಾಣಿಕವಾಗಿ ಭರವಸೆಯ ಬಗ್ಗೆ ಮಾಡಿದ್ದಾರಾ? ಭರವಸೆಯ ಬಗ್ಗೆ ಮಂತ್ರಿಗಳು ಗಮನಹರಿಸಬೇಕು. ಪ್ರತಿ ಸಲ ಕೊಟ್ಟಿರುವ ಭರವಸೆಯು ಕಡತದಲ್ಲಿ ಹೋಗುತ್ತದೆ. ಯಾವ ಭರವಸೆಯೂ ಇವತ್ತು ಈಡೇರಿಲಿಲ್ಲ. ಕೊಟ್ಟ ಯಾವ ಭರವಸೆಯೂ ಪ್ರಾಮಾಣಿಕವಾಗಿ ಈಡೇರಲಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಂತ್ರಿಗಳಾಗಿ ಇರುತ್ತಾರೆಂದು ಅವರಿಗೆ ಭರವಸೆ ಇಲ್ಲ. ಇನ್ನು ನಿಮ್ಮ ಭರವಸೆಗಳನ್ನು ಹೇಗೆ ಈಡೇರಿಸಿಕೊಳ್ಳುತ್ತಾರೆ?

ಶ್ರೀ ಕೆ.ಎನ್. ನಾಗೇಗೌಡ : ಸಗೀರ್ ಅಹಮದ್‌ರವರು ಹೇಳಿದರು. ಮಂತ್ರಿಗಳಿಗೆ ಭರವಸೆ ಇಲ್ಲವೆಂದು, ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಮ್ಮ ಸಗೀರ್ ಅಹಮದ್ ರವರು ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಯಾವ ಭರವಸೆಗಳು ಈಡೇರಿದೆ ಎನ್ನುವ ಬಗ್ಗೆ ತನಿಖೆ ಮಾಡಿಸಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನನ್ನದು ನಡೆಯಬೇಕು, ಮತ್ತು ಅದರ ಜೊತೆಗೆ ನಾಗೇಗೌಡರ ಭರವಸೆಯ ಬಗ್ಗೆಯೂ ತನಿಖೆ ನಡೆಯಬೇಕು.

ಶ್ರೀ ಕೆ. ಎನ್. ನಾಗೇಗೌಡ : ಇಬ್ಬರ ಭರವಸೆಯ ಬಗ್ಗೆ ತನಿಖೆ ನಡೆಯಲಿ. ನಾನು ಭರವಸೆಯ ಸಮಿತಿಯ ಅಧ್ಯಕ್ಷನಾಗಿ ನೋಡಿದ್ದೇನೆ. ನಾನು ಏನು ಹೇಳುತ್ತೇನೆ, ಸಮಗ್ರವಾಗಿ ಯಾವುದಾದರೂ ಎರಡು ಇಲಾಖೆಯ ಬಗ್ಗೆ, ಯಾವ ವರ್ಷ ಭರವಸೆ ಕೊಟ್ಟಿದ್ದಾರೆ. 10, 20 ವರ್ಷದ್ದು ಇವೆ. ಎರಡು ಇಲಾಖೆಯ ಬಗ್ಗೆ ಎಷ್ಟು ಭರವಸೆಗಳು ಈಡೇರಿವೆ, ಇದಕ್ಕೆ ತನಿಖೆ ನಡೆಸಿ ಉಪಾಧ್ಯಕ್ಷರೆ, ನಿಮಗೆ ಅಧಿಕಾರ ಇದೆ. ಅದನ್ನು ಈ ಸದನದಲ್ಲಿ ತಾವು ಹೇಳಿಬಿಡಿ. ಸಗೀರ್ ಅಹಮದ್ ಮತ್ತು ನನ್ನ ಇಲಾಖೆಯ ಬಗ್ಗೆ ಎರಡು ಭರವಸೆಯ ಬಗ್ಗೆ ತನಿಖೆ ನಡೆಯಲಿ. ಕೂಡಲೇ ಭರವಸೆಯ ಸಮಿತಿಗೆ ತಿಳಿಸೋಣ, ಅದನ್ನು ಫಿಕ್ಸ್ ಮಾಡೋಣ, ಈ ಸದನಕ್ಕೆ ರಿಪ್ಲೈ ಕಳುಹಿಸಿಕೊಡಬೇಕೆಂದು ಹೇಳಿದರೆ ಅದನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರೆ, ಇದಕ್ಕೆ ನನ್ನ ಒಪ್ಪಿಗೆ ಇದೆ.

ಉಪಾಧ್ಯಕ್ಷರು : ಇಬ್ಬರ ಒಪ್ಪಿಗೆ ಇರುವುದರಿಂದ ತರಿಸಿ ನೋಡೋಣ.

ಶ್ರೀ ಎಂ.ಪಿ. ಪ್ರಕಾಶ್ : ಉಪಾಧ್ಯಕ್ಷರೆ, ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ.

SRI K.N. NAGEGOWDA : Sir, he should accept. Sir, give a direction. Your have got all the power. ಒಂದು ಸಲ ಸದನಕ್ಕೆ ಬಂದರೆ ಎಲ್ಲರಿಗೂ ಎಚ್ಚರಿಕೆಯಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾನು, ಕೇವಲ ಒಂದು ವರ್ಷಕ್ಕೆ ಮಂತ್ರಿಯಾಗಿದ್ದೇನೆ. ತಾವು ಏಳೂವರೇ ವರ್ಷ ಮಂತ್ರಿಯಾಗಿದ್ದೀರಿ?

ಶ್ರೀ ಕೆ.ಎನ್. ನಾಗೇಗೌಡ : ಸರ್ ತಮಾಷೆ ಎಂದು ಹೇಳುವುದು ಬೇಡ. ಈ ಸದನದಲ್ಲಿ ಭರವಸೆ ಕೊಟ್ಟಿರುತ್ತಾರೆ. ನಾನು ಭರವಸೆ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅವರು ಹೇಳತಕ್ಕಂಥದ್ದಕ್ಕೆ ಅರ್ಥ ಇದೆ.. ಅಶ್ಯೂರೆನ್ ಕಮಿಟಿಯವರು ಪ್ರಿವಿಲೇಜ್ ಮೂವ್ ಮಾಡಿದರೆ. 1992 ರಿಂದ ಇಲ್ಲಿಯವರೆಗೆ ಎಲ್ಲರ ಮೇಲೆ ಪ್ರಿವಿಲೇಜ್ ಬರುತ್ತದೆ. ಆದ್ದರಿಂದ ಎರಡು ಇಲಾಖೆಯ ಬಗ್ಗೆ ರೆಫರ್ ಮಾಡಿ. ತಾವು ಇದನ್ನು ಖಂಡಿತವಾಗಿ ಮಾಡಿ, ಅಶ್ಯೂರೆನ್ಸ್‌ಗೆ ಕಮಿಟಿಗೆ ತಾವು ಡೈರೆಕ್ಷನ್ ಕೊಡಿ.

ಉಪಾಧ್ಯಕ್ಷರು : ಮಾನ್ಯ ನಾಗೇಗೌಡರ ಕಾಲದಲ್ಲಿ 2 ವರ್ಷದ್ದು, ಮಾನ್ಯ ಸಗೀರ್ ಅಹಮದ್‌ರವರ ಕಾಲದಲ್ಲಿ 2 ವರ್ಷದ್ದು, ಅವರುಗಳು ಏನು ಭರವಸೆಯನ್ನು ಕೊಟ್ಟಿದ್ದಾರೋ ಅದರ ಕಡತಗಳನ್ನು ಭರವಸೆ ಸಮಿತಿಯಿಂದ ತರಿಸಿ ಪರಿಶೀಲನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಗೇಗೌಡರ ಕಾಲದ್ದು ಮತ್ತು ಮಾನ್ಯ ಸಗೀರ್ ಅಹಮದ್‌ರವರ ಕಾಲದ್ದು ಇಬ್ಬರದ್ದೇ ಅಲ್ಲ. ಇದರ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡುವುದಕ್ಕೆ ತಾವು ತಕ್ಷಣದಿಂದ ಇದಕ್ಕೊಂದು ವ್ಯವಸ್ಥೆ ಮಾಡಬೇಕು. ಇದುವರೆಗೂ ಎಷ್ಟು ಜನ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಆ ಭರವಸೆಗಳು ಈಡೇರಿಲ್ಲ. ತಮ್ಮ ನಾಯಕತ್ವದಲ್ಲಿ ಅಧ್ಯಕ್ಷರ ನಾಯಕತ್ವದಲ್ಲಿ, ಅಧ್ಯಕ್ಷರ ಮುಖಂಡತ್ವದಲ್ಲಿ ಈ ಸದನದ ಮುಂದೆ ಮಂಡಿಸಲಿ ಅದು ದೇಶಕ್ಕೆ ಗೊತ್ತಾಗಲಿ. ಯಾರ್ಯಾರೋ ಏನೇನು ಭರವಸೆಯನ್ನು ಕೊಟ್ಟಿದ್ದಾರೆ, ಎಷ್ಟೆಷ್ಟನ್ನು ಈಡೇರಿಸಿದ್ದಾರೆ. ಇದೊಂದು ರೀತಿ ನಾಟಕೀಯವಾಗಿದೆ. ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ನನಗೆ ಮತ್ತೊಂದು ನೋವಿನ ಪ್ರಸಂಗವೆಂದರೆ, ಈ ಶಾಸನಸಭೆಯನ್ನು ಎರಡು ಭಾಗವಾಗಿ ಮಾಡಿರುವುದು ನನಗೆ ಹಿಡಿಸಲಿಲ್ಲ. ತಾವು ಇದರ ಬಗ್ಗೆ ಕೊಡುತ್ತೀರಾ?

ಉಪಾಧ್ಯಕ್ಷರು : ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ನಾನಾಗಲಿ ಅಥವಾ ನಾಗೇಗೌಡರಾಗಲಿ, ಇತರೆ ಮಂತ್ರಿಗಳಾಗಲಿ ಅವರು ಹಕ್ಕುಚ್ಯುತಿಗೂ ಸಹ ತಯಾರಾಗಿರಬೇಕು. ಏಕೆಂದರೆ ಇದರ ಬಗ್ಗೆ ತನಿಖೆಯೂ ನಡೆಯುತ್ತದೆ. ಹಕ್ಕುಚ್ಯುತಿಯನ್ನು ಸಹ ಅವರು ಎದುರಿಸಬೇಕಾಗುತ್ತದೆ. ಇದರ ಬಗೆ ನಿರ್ಣಯವಾಗಬೇಕು

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಗೇಗೌಡರು 7 $^{1}/_{2}$ ವರ್ಷಗಳ ಕಾಲ ಮಂತ್ರಿಗಳಾಗಿದ್ದರು. ಅವರು ಎಷ್ಟು ಭರವಸೆಯನ್ನು ಕೊಟ್ಟಿದ್ದರು. ಮಾನ್ಯ ಸಗೀರ್ ಅಹಮದ್‌ರವರು 1 $^{1}/_{2}$ ವರ್ಷ ಮಂತ್ರಿಯಾಗಿದ್ದರು. ಇವರಿಬ್ಬರೂ ಕೊಟ್ಟಂತಹ ಭರವಸೆಗಳ ಬಗ್ಗೆ ತಾಳೆ ಮಾಡಿ ನೋಡಿ ಶೇಕಡ ಎಷ್ಟು ಎಂದು ತೆಗೆದುಕೊಳ್ಳಬೇಕು. ಏಳುವರೆ ವರ್ಷಕ್ಕೆ ಎಷ್ಟು? ಒಂದೂವರೇ ವರ್ಷಕ್ಕೆ ಎಷ್ಟು? ಎಂದು ಪರ್ಸೆಂಟೇಜನ್ನು ತೆಗೆದುಕೊಳ್ಳಬೇಕು. ಆಗ ನೋಡಿದರೆ ಮಾನ್ಯ ಸಗೀರ್ ಅಹಮದ್‌ರವರದೇ ಜಾಸ್ತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇದು ರಾಜ್ಯದ ಜನತೆಗೆ ಗೊತ್ತಾಗಲಿ ಇವರುಗಳು ಇಷ್ಟು ಭರವಸೆಯಚನ್ನು ನೀಡಿದ್ದಾರೆ. ಯಾವ ಯಾವ ಸಂದರ್ಭದಲ್ಲಿ ಭರವಸೆಯನ್ನು ನೀಡಿದ್ದಾರೆ. ಇದು ಏನಾಗುತ್ತದೆಂದರೆ, ನಾಳೆ ದಿವಸ ನಮ್ಮ ಊರಿನಲ್ಲಿ ಕರೆಯಲಾಗಲಿಲ್ಲ ಎಂದು ಕೇಳಿದರೆ ಆಯಿತು ಕೆರೆಯನ್ನು ಮುಂದಿನ ತಿಂಗಳಲ್ಲಿ ಮಾಡುತ್ತೇನೆಂದು ಹೇಳುತ್ತಾರೆ. ನೀರಿನ ಬಗ್ಗೆ ಕೇಳಿದರೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ರಸ್ತೆಗಳ ಬಗ್ಗೆ ಎಂದು ಹೇಳಿದರೆ, ಮಾಡುತ್ತಾ ಇದ್ದೇವೆ. ಈ 'ಆದಷ್ಟು ಬೇಗ' ಎಂದು ಹೇಳುವುದು ಭರವಸೆ 12 ಕೋಟಿ ಇದೆ.

ಉಪಾಧ್ಯಕ್ಷರು : ಪ್ರತಿ ವರ್ಷ ಭರವಸೆ ಸಮಿತಿಗಳು ತಮ್ಮ ವರದಿಯನ್ನು ಒಪ್ಪಿಸುವಾಗ ಯಾರು ಮಂತ್ರಿಗಳು ಎಷ್ಟು ಜನ ಮಂತ್ರಿಗಳು ಎಷ್ಟೆಷ್ಟು ಭರವಸೆಯನ್ನು ಕೊಟ್ಟಿದ್ದಾರೆ ಅದು ಕಡತದಲ್ಲಿದೆ. ಅದನ್ನು ತರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಭರವಸೆ ಸಮಿತಿಯ ವರದಿಯನ್ನು ನಾನು ತರಿಸಿದ್ದೇನೆ. ಅದು ನನ್ನ ಹತ್ತಿರ ಇದೆ. ಅದರಲ್ಲಿ 100 ಭರವಸೆಗಳಿಗೆ 90 ಭಾಗ ಭರವಸೆಗಳು ಈಡೇರಿಲ್ಲ. ನಾನು ತಮಗೆ ಹೇಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ವಾಟಾಳ್ ನಾಗರಾಜ್‌ರವರೇ ಒಂದೇ ಒಂದು ನಿಮಿಷ ನಾನು ಮಾತನಾಡುತ್ತೇನೆ. ಮಾನ್ಯ ಉಪಾಧ್ಯಕ್ಷರಿಗೂ ವಿಚಾರ ಗೊತ್ತಿದೆ. ನಿನ್ನೆ ತಾನೇ ಅವರಿಗೆ ಭರವಸೆಯನ್ನು ಕೊಟ್ಟಿದ್ದಾರೆ. 25 ಪರ್ಸೆಂಟ್ ಎಪಿಎಂಸಿನಲ್ಲಿ ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆ, ಅದರ ಬಗ್ಗೆ ನಾವು ವಿಚಾರ ಮಾಡಿದ್ದೇವೆಂದು ಹೇಳಿದ್ದಾರೆ. ಅವರು ಏನು ಮಾಡುತ್ತಾರೆಂದು ನಾವು ನೋಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಭರವಸೆಗಳಲ್ಲಿ ಆದಷ್ಟು ಬೇಗ ಎನ್ನುವ ಭರವಸೆ ಲಕ್ಷಾಂತರ, ಶೀಘ್ರದಲ್ಲಿ ಎನ್ನುವ ಭರವಸೆ ಲಕ್ಷಾಂತರ, ಅವುಗಳ ಭರವಸೆಗಳಲ್ಲ.

ಶ್ರೀ ಕೆ.ಎನ್. ನಾಗೇಗೌಡ (ನೀರಾವರಿ ಸಚಿವರು) : ಆದರೂ ಸಹ ಅದು ಪ್ರೋಸೀಜರ್‌ನಲ್ಲಿದೆ ಯಾವ ಭರವಸೆಯನ್ನು ಕನ್ಸಿಡರ್ ಮಾಡುವುದಕ್ಕೆ ನಮ್ಮ ಲೆಜಿಸ್ಲೇಚರ್ ಒಳಗಡೆ ಕಾಲ್ ಅಂಡ್ ಶೆಡ್ಡರ್‌ನಲ್ಲಿ ಕ್ಲಿಯರ್ ಆಗಿ ಮೆನ್‌ಷನ್ ಮಾಡಿದ್ದಾರೆ. ಭರವಸೆಗಳು ಎಂದರೆ ಏನು? ಮಾನ್ಯ ವಾಟಾಳ್ ನಾಗರಾಜ್‌ರವರು ನೋಡಿದರು. ನಾನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುವುದು

ಭರವಸೆಗಳಾಗುವುದಿಲ್ಲ. Consideration is an assurance. what do you say, consideration is an assurance. ನಾನು ಭರವಸೆಗಳ ಸಮಿತಿಯಲ್ಲಿದ್ದಾಗ, If there is a positive direction, it is called an assurance. ನೋಡುತ್ತೇನೆ, ಪರಿಶೀಲನೆ ಮಾಡುತ್ತೇನೆ ಎಂದರೆ ಅದು ಭರವಸೆಗಳಾಗುವುದಿಲ್ಲ.

ಉಪಾಧ್ಯಕ್ಷರು : ಯಾವುದೇ ಒಂದು ಕೆಲಸವನ್ನು ನಾವು ಮಾಡಿಕೊಡುತ್ತೇನೆಂದರೆ ಅದು ಭರವಸೆಗಳಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತೇನೆಂದರೆ ಅದು ಭರವಸೆಯ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರೆ, ಪರಿಶೀಲನೆ ಮತ್ತು ಆದಷ್ಟು ಜಾಗ್ರತೆ ಎಂಬ ಪದಗಳನ್ನು ಏತಕ್ಕೆ ಇಲ್ಲಿ ಉಪಯೋಗಿಸಬೇಕು.

ಶ್ರೀ ಎಸ್. ಕೃಷ್ಣಪ್ಪ : ತಾವು ಪರಿಶೀಲನೆ ಮಾಡುತ್ತೇನೆಂದರೆ ಅದು ಭರವಸೆಗಳಾಗುವುದಿಲ್ಲ. ಎಷ್ಟು ದಿವಸದಲ್ಲಿ ಮುಗಿಸುತ್ತೇನೆಂದು ಹೇಳಿದರೆ ಅದು ಭರವಸೆಗಳಾಗುತ್ತದೆ. ಪರಿಶೀಲನೆ ಎಂಬುದು ಯಾವಾಗಲೂ ಇದ್ದೇ ಇರುತ್ತದೆ. It always continues. ಆದರೆ ಭರವಸೆ ಎಂದರೆ ಸ್ಪೆಸಿಫಿಕ್ ಆಗಿ ಕೊಡುತ್ತೇವೆಂದು ಹೇಳುವುದು ಭರವಸೆಗಳಾಗುತ್ತದೆ.

ಉಪಾಧ್ಯಕ್ಷರು : ಕಾಯಿದೆಯ ವ್ಯಾಪ್ತಿಯಲ್ಲಿ ಬರತಕ್ಕಂತಹ ಕೆಲಸಗಳನ್ನ ....

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರೆ, ಆ ವಿಷಯವನ್ನು ತಮಗೆ ಬಿಟ್ಟಿದ್ದೇನೆ. ತಾವು ಏನು ಬೇಕಾದರೂ ಮಾಡಬಹುದು. ಭರವಸೆಯ ಬಗ್ಗೆ ಮತ್ತೆ ಮತ್ತೆ ಹೇಳುತ್ತಾ ಹೋದರೆ ಅದು ಒಳ್ಳೆಯದಲ್ಲ ಒಂದು ತರಹ ಆಷಾಢಭೂತಿಯಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಾವು ಏನು ಬೇಕಾದರೂ ಆಗಬಹುದೆಂದು ಹೇಳಿದರೆ ನಿಮ್ಮ ಭರವಸೆಯನ್ನು ಇದರಲ್ಲಿ ಸೇರಿಸಿಕೊಳ್ಳುತ್ತೀರಾ?

ಉಪಾಧ್ಯಕ್ಷರು : ನಮ್ಮ ಭರವಸೆಗಳು ಆ ರೀತಿ ಆಗುವುದಿಲ್ಲ. ನಿಮ್ಮ ಭರವಸೆಗಳಿಗೂ ನಮ್ಮ ಭರವಸೆಗಳಿಗೂ ಬಹಳ ವ್ಯತ್ಯಾಸವಿದೆ.

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ,. ಭರವಸೆಗಳ ಬಗ್ಗೆ ಸರ್ಕಾರ ಬಹಳ ಎಚ್ಚರಿಕೆಯಿಂದಿರಬೇಕು; ಎಂಬುದೇ ತಮ್ಮ ವಾದ. ಲೋಕಸಭೆಯಲ್ಲಿ ಭರವಸೆಗಳನ್ನು ಕೊಡುವಾಗ ಬಹಳ ಎಚ್ಚರಿಕೆಯಿಂದ ಮಂತ್ರಿಗಳಿರುತ್ತಾರೆ. ನೀವು ಬಿಸಿಯನ್ನು ಮುಟ್ಟಿಸಿದರೆ ನಮಗೇನು ಅಭ್ಯಂತರವಿಲ್ಲ. ನಿಮ್ಮ ಕಡೆಯಿಂದು ಏನು ಮಾಡಬೇಕು ಅದನ್ನು ಮಾಡಿ. ಮುಂದಿನ ದಿನಗಳಲ್ಲಿ ತಾವು ಭರವಸೆಯನ್ನು ಕೊಡುವಾಗ ಬಹಳ ಎಚ್ಚರಿಕೆಯಿಂದಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಒಳ್ಳೆಯದು, ಭರವಸೆಯನ್ನು ಕೊಡುವಾಗ ಅದು ಬಹಳ ಮಹತ್ವವಾದುದು. ಒಬ್ಬ ಸದಸ್ಯರು ಕೇಳಿದಂತಹ ಪ್ರಶ್ನೆಗಳಿಗೆ ಪ್ರಾಮುಖ್ಯವಾದ ಭರವಸೆಯನ್ನು

ಕೊಡುವಾಗ, ನಾವು ಹಾರಿಕೆಯಾದ ಭರವಸೆಯನ್ನು ಕೊಟ್ಟು, ಅದು ಈಡೇರಲಿಲ್ಲ ಎಂದರೆ ಅದಕ್ಕೆ ಏನು ಬೆಲೆ ಬರುವುದಿಲ್ಲ. ಆ ವಿಷಯವನ್ನು ತಮಗೆ ಬಿಟ್ಟಿದ್ದೇನೆ. ತಾವು ಯಾವಾಗಲಾದರೂ ಮಾಡಿ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆಂದರೆ ಇತಿಹಾಸ ಪ್ರಸಿದ್ಧವಾದ ಶಾಸನ ಸಭೆಯನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಎಂದು ಎರಡು ಭಾಗವಾಗಿ ಮಾಡಿದ್ದಾರೆ. ಇದು ನನಗೇನು ವೈಯಕ್ತಿಕವಾಗಿ ಹಿಡಿಸಲಿಲ್ಲ. ಇಲ್ಲಿರುವ ಎಷ್ಟು ಜನ ಸದಸ್ಯರಿಗೆ ಹಿಡಿಸಿದೆಯೋ ನನಗೆ ಗೊತ್ತಿಲ್ಲ ಇದಕ್ಕೊಂದು ಇತಿಹಾಸವಿದೆ. ನಾನು ಇದನ್ನು ವೈಕುಂಠಬಾಳಿಗರ ಕಾಲದಿಂದಲೂ ನೋಡಿಕೊಂಡು ಬಂದಿದ್ದೇನೆ. ನಾನು ಕೆ.ಟಿ. ಭಾಷ್ಯಂರವರ ಕಾಲವನ್ನು ವಿಧಾನಪರಿಷತ್ತಿನಲ್ಲಿ ಕೇಳಿದ್ದೇನೆ. ಆದರ ಈ ಸದನದ ಕಾರ್ಯಕಲಾಪಗಳ ಬಗ್ಗೆ ಎರಡು ಭಾಗವಾಗಿದೆ ಎಂದರೆ ಸಾರ್ವಜನಿಕವಾಗಿ ಮನೆಗಳು ಹಂಚಿಕೆಯಾಗುತ್ತದೆ. ಈ ಮನೆ ನಿಮಗೆ, ಆ ಮನೆ ಅವರಿಗೆ ಮಧ್ಯೆ ಗೋಡೆಯನ್ನು ಹಾಕಿಬಿಡಿ ಎನ್ನುತ್ತಾರೆ. ವಿಧಾನಸಭೆಗೆ ಒಬ್ಬ ಕಾರ್ಯದರ್ಶಿಯವರು, ವಿಧಾನ ಪರಿಷತ್ತಿಗೆ ಒಬ್ಬಕಾರ್ಯದರ್ಶಿಗಳು ಇದು ಶಾಸನ ಸಭೆಗೆ ಒಳ್ಳೆಯ ಲಕ್ಷಣವಲ್ಲ. ಈ ವಿಚಾರದ ಬಗ್ಗೆ ಯಾರು ಸದಸ್ಯರು ಮಾತನಾಡಲಿಲ್ಲ. ಅದರ ಬಗ್ಗೆ ಅಗೌರವವನ್ನು ತೋರಿಸಬೇಕಂತಲ್ಲ. ಪ್ರಾಮಾಣಿಕವಾಗಿ ಬಹಳ ನೋವಿನಿಂದ ಹೇಳುತ್ತಿದ್ದೇನೆ. ವಿಧಾನ ಸಭೆ ಮತ್ತು ವಿಧಾನಪರಿಷತ್ತು ಒಂದೇ ಇರಬೇಕು. ಒಂದೇ ಸೇತುವೆ, ಒಂದೇ ಭಾಗ ಎರಡು ಭಾಗವಾಗಿರತಕ್ಕಂಥದ್ದು ಸರಿಯಲ್ಲ. ಇದರ ಬಗ್ಗೆ ತಾವು ಯಾವ ತರಹ ಬೇಕಾದರೂ ತೀರ್ಮಾನ ಮಾಡಿ, ಇದರ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯವನ್ನು ತಮ್ಮಲ್ಲಿ ಹೇಳುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಶಾಸಕರ ಭವನವೇ ಹಂಚಿಕೆಯಾಗಿ ಹೋಗಿದೆ.

ಶ್ರೀ ವಾಟಾಳ್ ನಾಗರಾಜ್ : ಶಾಸಕರ ಭವನ ಮತ್ತು ಕಾರುಗಳು ಹಂಚಿಕೆಯಾಗಿದೆ ಕೊಠಡಿಗಳು ಮತ್ತು ಎಲ್ಲವೂ ಹಂಚಿಕೆಯಾಗಿ ಹೋಗಿದೆ. ಅದು ತಮಗೆ ಸೇರಿದ್ದುದು, ಎರಡು ಭಾಗವಾಗಿರುವ ಭಾಗವನ್ನು ಮತ್ತೆ ಕೂಡಿಸಿ ಸೇರಿಸುವುದು ಮತ್ತೇ ಇತಿಹಾಸಕ್ಕೆ ಸೇರಿಸುವುದು ನಿಮಗೆ ಸೇರಿರುವ ವಿಚಾರ. ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ ಅದರಲ್ಲಿ ಸಮಗ್ರ ಬದಲಾವಣೆಯಾಗಬೇಕು. ಇದು ಯಾವುದೋ ಒಂದು ಓಬಿರಾಯನ ಕಾಲದ ರೀತಿನೀತಿಗಳು, ಕಾನೂನು ಕಟ್ಟಳೆಗಳು, ಅದೇ ಬೈಯ್ಯುವ ಭಾಷೆ, ಅದೇ ವ್ಯವಸ್ಥೆ, ಅದೇ ಬಂದೂಕ, ಅದೇ ಲಾಕಪ್ಪು, ಅವುಗಳು ಯಾವುದೇ ಬದಲಾವಣೆಯಾಗಿಲ್ಲ. ಮತ್ತೆ ಅದೇ ಪೋಲೀಸ್ ಭಾಷೆ, ಅದು ಬದಲಾವಣೆಯಾಗಿಲ್ಲ.

ಇದರ ಬಗ್ಗೆ ನಾನು ತಮಗೆ ಹೇಳುವುದೇನೆಂದರೆ, ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಪೊಲೀಸ್ ಇಲಾಖೆ ಸಮಗ್ರವಾಗಿ ಬದಲಾವಣೆಯಾಗಲಿಲ್ಲ ಎಂದು ಹೇಳಿದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಇಲಾಖೆ ಅತ್ಯಂತ ಬಹಳ ಮುಖ್ಯವಾದುದು. ಈ ಇಲಾಖೆಯಲ್ಲಿ ಬದಲಾವಣೆಯಾಗಲಿಲ್ಲ ಎಂದರೆ ಇದು ಬಹಳ ಒಳ್ಳೆಯದಲ್ಲವೆಂದು. ನನಗನ್ನಿಸುತ್ತದೆ. ಪೋಲೀಸ್ ಇಲಾಖೆಯಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ನಿಂದ ಹಿಡಿದು ಪೋಲಿಸ್ ಕಾನ್‌ಸ್ಟೇಬಲ್‌ವರೆಗೆ ದಿನದ 24 ಗಂಟೆಗಳಲ್ಲೂ

ದುಡಿಯುವಂತಹ ವರ್ಗದ ಬಗ್ಗೆ ನಾವು ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡಬೇಕು. ಬೇರೆ ಸರ್ಕಾರಿ ನೌಕರರಿಗೂ ಈ ಪೊಲೀಸ್ ವ್ಯವಸ್ಥೆಗೂ ಬಹಳ ವ್ಯತ್ಯಾಸವಿದೆ. ಪೋಲೀಸ್ ಇಲಾಖೆಯ ನೌಕರರು, ಸತ್ಯಾಗ್ರಹ, ಧರಣಿ, ಗಲಾಟೆ ಹಾಗೂ ಮೆರವಣಿಗೆಗಳನ್ನು ಮಾಡುವ ಹಾಗಿಲ್ಲ. ಪೋಲೀಸರಿಗೆ ಇದರ ಬಗ್ಗೆ ನಿರ್ಬಂಧವಿದೆ. ಆದರೆ ಬೇರೆ ಇಲಾಖೆಯ ಸರ್ಕಾರಿ ನೌಕರರುಗಳ ಅವರಿಗೆ ಟಿ.ಎ. ಬಗ್ಗೆ ಅಥವಾ ಯಾವುದೇ ಭತ್ಯೆಯ ಬಗ್ಗೆ ಹೋರಾಟ ಮಾಡುವುದಕ್ಕೆ ಅವರುಗಳಿಗೆ ಅವಕಾಶವಿದೆ. ಆದರೆ ಪೋಲೀಸ್‌ನವರಿಗೆ ಅವಕಾಶವಿಲ್ಲ. ಇದರ ಬಗ್ಗೆ ಪಕ್ಷಾತೀತವಾಗಿ, ಒಂದು ವ್ಯವಸ್ಥಿತವಾಗಿ ತೀರ್ಮಾನ ಮಾಡಿ, ಪೋಲೀಸ್ ಇಲಾಖೆಯ ನೌಕರರುಗಳಿಗೆ ಸಂಬಳ ಸಾರಿಗೆಗಳನ್ನು ವ್ಯವಸ್ಥೆಯಲ್ಲಿ ಹೆಚ್ಚಿನ ಅನುಕೂಲವನ್ನು ಮಾಡಿಕೊಡುವ ಬಗ್ಗೆ ಒಂದು ನೀತಿ, ನಿರೂಪಣೆಯನ್ನು ಮಾಡಬೇಕು. ನಾವು ಬೇರೆ ನೌಕರರ ತರಹ ಪೊಲೀಸ್ ಇಲಾಖೆಯ ಸಿಬ್ಬಂದಿಯವರಿಗೆ ಸಂಬಳವನ್ನು ಕೊಟ್ಟರೆ ಅದು ಆಗುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಮಾತನಾಡಲು ಶುರು ಮಾಡಿ 30 ನಿಮಿಷವಾಯಿತು, ಇನ್ನು 5 ನಿಮಿಷದಲ್ಲಿ ಭಾಷಣವನ್ನು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನನಗೇನು ತಾವು ಈಗಲೇ ಭಾಷಣವನ್ನು ಮುಗಿಸಿ ಎಂದು ಹೇಳಿದರೆ ಮುಗಿಸಿಬಿಡುತ್ತೇನೆ. ನನಗೆ ಮಾತನಾಡುವ ಹುಚ್ಚು ಹೋಗಿಬಿಟ್ಟಿದೆ. ಈ ಸದನದಲ್ಲಿ ಮಾತನಾಡತಕ್ಕಂತಹ ಶಕ್ತಿ ಪ್ರಾಮಾಣಿಕವಾಗಿ ಹೋಗಿಬಿಟ್ಟಿದೆ. ಸುಮ್ಮನೆ ನಾವು ಒಣಮರದ ಮುಂದೆ ಕುಳಿತುಕೊಂಡಂತೆ ಆಗಿದೆ. ಈಗಲೇ ತಾವು ಭಾಷಣವನ್ನು ನಿಲ್ಲಿಸಿ ಎಂದು ಹೇಳಿದರೆ ನಾನು ಸಂತೋಷವಾಗಿ ನಿಲ್ಲಿಸಿಬಿಡುತ್ತೇನೆ. ನಾನು 1967 ರಿಂದ ಭಾಷಣ ಮಾಡಿ ಗದ್ದಲ ಮಾಡಿದ್ದೇನೆ ಆ ಚಿತ್ರಗಳೇ ನಮ್ಮ ಮುಂದೆಯೇ ಉಳಿದಿಲ್ಲ. ಈ ವ್ಯವಸ್ಥೆಯಲ್ಲಿ ಅದರ ಬಗ್ಗೆ ಆಸೆಯನ್ನು ಇಟ್ಟುಕೊಂಡಿಲ್ಲ. ಏನೋ ಮಾತನಾಡಬೇಕು ಅದಕ್ಕೆ ನಾನು ಮಾತನಾಡುತ್ತಿದ್ದೇನೆ.

1.00 ಪಿ.ಎಂ.

ಈ ಪೋಲೀಸ್ ಎಂಬ ಪದ ಆರಕ್ಷಕ ಎಂದು ಬದಲಾವಣೆಯಾಯಿತು. ತಾವೆಲ್ಲ ಬಹಳ ಬುದ್ಧಿವಂತರಿದ್ದೀರಿ; ಈ ಪದ ಇರಬೇಕೆ? ಆರಕ್ಷಕ ಎಂದು ಇದ್ದರೆ ಅದಕ್ಕೆ ಶಕ್ತಿ ಇದೆಯೆ? ಆರಕ್ಷಕ ಎಂಬ ಪದಕ್ಕೆ ಶಕ್ತಿ ಇಲ್ಲ. ಆದ್ದರಿಂದ ಪೋಲೀಸ್ ಎಂಬ ಪದಕ್ಕೆ ಮಹತ್ತರ ಶಕ್ತಿ ಇದೆ. ಆ ಶಕ್ತಿ ತರುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಪೋಲೀಸ್ ಸ್ಟೇಷನ್‌ಗಳು. ಪೋಲೀಸ್ ಸ್ಟೇಷನ್‌ಗಳ ಎಂದರೆ ಏನು? ಪೋಲೀಸ್ ಸ್ಟೇಷನ್ ಅಂದರೆ ಏನು ರೂಪ? ಪೋಲೀಸ್ ಸ್ಟೇಷನ್ನಿಗೆ ಹೋದತಕ್ಷಣ ಮೊದಲು ಕಾಣತಕ್ಕದ್ದು ಕಳ್ಳಬಟ್ಟಿ ತುಂಬಿದಂಥ ಟೈರುಗಳು. ಹಳೆಯ ಮುರಿದು ಬಿದ್ದಿರತಕ್ಕ ಸೈಕಲ್‌ಗಳು ನೆಲ ಕಚ್ಚಿರತಕ್ಕ ಕಾರುಗಳು. ಒಂದು ಕಡೆ ಹಳೆಯ ಗಂಧದ ಮರದ ತುಂಡುಗಳು, ಮತ್ತೊಂದು ಕಡೆ ಹೆಣ್ಣುಮಕ್ಕಳನ್ನು ಆಚೆಯಿಂದ ಹಿಡಿದುಕೊಂಡು ಬಂದಿರತಕ್ಕ ಒಂದು ಕೊಠಡಿ. ಇನ್ನೊಂದು ಕಡೆ ತೀರಾ ಕುಲಗೆಟ್ಟಿರತಕ್ಕ ಲಾಕ್‌ಅಪ್ ವ್ಯವಸ್ಥೆ, ಇನ್ನೊಂದು ಕಡೆ ಹಳೆಯ ಕಾಲದ ಬಂದೂಕುಗಳು

ಚಿತ್ರ. ಇದು ಪೋಲೀಸ್ ಸ್ಟೇಷನ್. ಇವೆಲ್ಲವನ್ನೂ ನೋಡಿದಾಗ ಒಳಗಡೆ ಹೋಗತಕ್ಕ ದೃಷ್ಟಿಯಲ್ಲಿ ಒಂದು ರೀತಿ ಕೆಟ್ಟ ಪರಿಣಾಮ ಬೀರುತ್ತದೆ. ಆದುದರಿಂದ ಇಷ್ಟು ವರ್ಷವಾದರೂ ಪೋಲೀಸ್ ಸ್ಟೇಷನ್ ಚಿತ್ರ ಅದೇ ಇದೆ, ಅದು ಬದಲಾವಣೆಯಾಗಿಲ್ಲವೆಂದರೆ ನಾವು ಎಲ್ಲಿಗೆ ಹೋಗಬೇಕು? ಅದರ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಬೇಕು. ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತೇನೆ, ಸರ್ಕಾರ ಕೊಟ್ಟಿರತಕ್ಕ ವರದಿಯ ಪ್ರಕಾರ 1995-96, 96-97, 97-98ರ ಕೊಲೆ ಪ್ರಕರಣಗಳು, ರಸ್ತೆ ಡಕಾಯಿತಿ, ಸುಲಿಗೆಗಳು ಕಳ್ಳತನಗಳು, ಲಾಕ್‌ಅಪ್ ಸಾವುಗಳು ಎಷ್ಟು? ಕೊಲೆ ಪ್ರಕರಣಗಳು 1995-96ರಲ್ಲಿ 1576, 96-97ರಲ್ಲಿ 1573, 97-98ರಲ್ಲಿ 1564. ರಸ್ತೆ ಡಕಾಯಿತಿಗಳು ಕ್ರಮವಾಗಿ 62, 48 ಮತ್ತು 44. ಸುಲಿಗೆಗಳು 968, 896 ಮತ್ತು 1165. ಸುಲಿಗೆ ಜಾಸ್ತಿ ಆಯಿತು. ಕಳ್ಳತನಗಳು 25,878, 21,375 ಮತ್ತು 24,071. ಲಾಕ್‌ಅಪ್ ಸಾವುಗಳು 4, 6 ಮತ್ತು 5 ಏತಕ್ಕೆ ನಾನು ಈ ಮಾತು ಹೇಳುತ್ತಿದ್ದೇನೆಂದರೆ, ಮತ್ತು ಮಾನ್ಯ ಗೃಹ ಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಈ ಅಂತರ ಒಂದೆರಡು ಪರ್ಸೆಂಟ್‌ಗಳಲ್ಲಿ ವ್ಯತ್ಯಾಸ ಇದೆಯೇ ಹೊರತು ಪರಿಣಾಮಕಾರಿಯಾಗಿ ಇದನ್ನು ನಿಲ್ಲಿಸತಕ್ಕ ವ್ಯವಸ್ಥೆ ಆಗಲಿಲ್ಲ. ಈ ಅಂತರ 5 ಇರಬಹುದು, 2 ಇರಬಹುದು. ಇಷ್ಟರಲ್ಲಿ ಇದೆಯೇ ಹೊರತು ಇದನ್ನು 50 ಭಾಗ ನಿಲ್ಲಿಸಿದ್ದೇವೆ, 30 ಭಾಗ ನಿಲ್ಲಿಸಿದ್ದೇವೆಂದು ಹೇಳಿಕೊಳ್ಳತಕ್ಕದ್ದು ಆಗುತ್ತಿಲ್ಲ. ಕಾರಣ ಏನು? ಸಿಬ್ಬಂದಿ ಕೊರತೆ ಇದೆಯೆ? ಪೋಲೀಸ್ ಕೊರತೆ ಇದೆಯೇ ಅಥವಾ ನಿಮ್ಮಲ್ಲಿ ದಕ್ಷತೆಯ ಕೊರತೆ ಇದೆಯೇ? ಯಾವ ಕೊರತೆಯ ಮೇಲೆ ನಿರ್ಧಾರವಾಗಿದೆ ಎಂದು ತಾವು ತಮ್ಮ ಉತ್ತರದಲ್ಲಿ ತಿಳಿಸಬೇಕು. ಲಾಕ್‌ಅಪ್ ಸಾವಿನ ಬಗ್ಗೆ ಒಂದು ಪರಿಣಾಮಕಾರಿಯಾದ ನೀತಿ ಬೇಕು. ಹಿಂದೆ ತಾವು ಹೇಳಿದಿರಿ, ಲಾಕ್‌ಅಪ್ ಸಾವಿಗೆ ಅವರನ್ನು ಹೊಣೆ ಮಾಡುತ್ತೇವೆ ಎಂದು. ಇದು ಸೂಕ್ತವೆಂದು ನನಗನ್ನಿಸುತ್ತದೆ. ಈ ಬಗ್ಗೆ ನಾವು ಚಿಂತನೆ ಮಾಡುವಾಗ, ನಿಮ್ಮಲ್ಲಿ ಹೊಯ್ಸಳ ಎಂದು ಏನು ಬೆಂಗಳೂರು ನಗರದಲ್ಲಿ ಬಿಟ್ಟಿದ್ದೀರಿ ಅದಕ್ಕೆ ನಾನು ಅಭಿನಂದಿಸುತ್ತೇನೆ. ಇದರಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಇರಬಹುದು. ಈಗ ಏನು 50 ಪಡೆಗಳನ್ನು ಬಿಟ್ಟಿದ್ದೀರಿ ಅದನ್ನು 100 ಮಾಡಬೇಕು. ಪ್ರತಿ ನಗರಪಾಲಿಕೆಯ ಕ್ಷೇತ್ರಕ್ಕೆ ಒಂದೊಂದು ಹೊಯ್ಸಳ ಪಡೆಯನ್ನು ಮಾಡಬೇಕು. ಮಾಡಿದರೆ ನಿಜವಾಗಿ ಅನುಕೂಲಗಳು ಇವೆ. ರಸ್ತೆ ದರೋಡೆಗೆ ಗರುಡ ಎಂಬ ಪಡೆಯನ್ನು ಬಿಟ್ಟಿದ್ದೀರಿ. ಬಹುಶಃ ಇದು ಮೈಸೂರಿನಲ್ಲಿದೆ ಎಂದು ಕಾಣುತ್ತದೆ. ರಸ್ತೆ ದರೋಡೆ ನಿಲ್ಲುವುದಕ್ಕೆ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳಲ್ಲಿ ಈ ರೀತಿಯಾಗಿ ವಾಹನಗಳ ವ್ಯವಸ್ಥೆ ಮಾಡುವುದು ಒಳ್ಳೆಯದು. ಖರ್ಚು ಎಷ್ಟೇ ಜಾಸ್ತಿಯಾದರೂ ಚಿಂತೆ ಇಲ್ಲ; ಈ ವಾಹನಗಳ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮಾಡಬೇಕು. ಕಾರಣವೇನೆಂದರೆ, ಈ ಕಡೆ ಪೋಲೀಸ್ ಜೀಪು ಬರುತ್ತದೆ, ವಾಹನ ಬರುತ್ತದೆ, ಪೊಲೀಸರು ಬರುತ್ತಾರೆಂಬ ಭಯಭೀತಿ ಹುಟ್ಟುತ್ತದೆ. ಅದನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡಬೇಕು. ಈ ಪರಿಸ್ಥಿತಿಯಲ್ಲಿ ತಾವು ಈ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ನಾನು ಅನೇಕ ಬಾರಿ ತಮಗೆ ಹೇಳಿದ್ದೇನೆ. ಧರ್ಮವೀರ ಸಮಿತಿಯ ವರದಿ ಬಹಳ ಚೆನ್ನಾಗಿದೆ, ನಾನು ಅದನ್ನು ನೋಡಿದ್ದೇನೆ. ಬಹಳ ಪರಿಣಾಮಕಾರಿಯಾಗಿದೆ, ಉತ್ತಮವಾಗಿದೆ. ಆ ವರದಿಯನ್ನು ತಾವು ಜಾರಿಗೆ ತಂದಿದ್ದೀರಿ,

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತಿದ್ದೇನೆ ಎಂದರೆ..........

ಉಪಾಧ್ಯಕ್ಷರು : ಮುಗಿಸಿಬಿಡಿ. ಇನ್ನು ಹೇಗೆ ಹೇಳಬೇಕು ನಿಮಗೆ?

ಶ್ರೀ ವಾಟಾಳ್ ನಾಗರಾಜ್ : ಅವರು ಲೀಲಾದೇವಿ ಅವರು ಇರಬಹುದು, ಯಾರೇ ಇರಬಹುದು. ಕನ್ನಡ ಸಂಸ್ಕೃತಿ ಇಲಾಖೆ ರಾಜ್ಯದ ಪ್ರತ್ಯೇಕವಾದ ಇಲಾಖೆ. ಕನ್ನಡ ಭಾಷೆಯ ಬೆಳವಣಿಗೆ ಸಂಬಂಂಧಪಟ್ಟಂತೆ, ಸಂಸ್ಕೃತಿ, ಸಾಹಿತ್ಯದ ಇಲಾಖೆ. ಈ ಇಲಾಖೆಗೆ ಸಚಿವಸಂಪುಟ ದರ್ಜೆಯ ಮಂತ್ರಿ ಇರಬೇಕು. ಕನ್ನಡದ ಬಗ್ಗೆ ನಿಮ್ಮ ಸರ್ಕಾರ ಕೈಗೊಂಡಿರುವ ಈ ದುರಾಡಳಿತ, ದುರಾಭಿಮಾನದ ಬಗ್ಗೆ ಇದನ್ನು ಇಂಗ್ಲೀಷ್ ಪ್ರತಿಯನ್ನು ಹರಿದು ನನ್ನ ಭಾಷಣವನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಶ್ರೀರಾಮರೆಡ್ಡಿಯವರೇ, ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಲಂಚ್ ಬ್ರೇಕ್ ನಂತರ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಎರಡು ಗಂಟೆ ತನಕ ಮಾತನಾಡಿ ಎರಡು ಗಂಟೆಗೆ ಊಟಕ್ಕೆ ಬಿಟ್ಟು ಬಿಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದೂವರೆ ಗಂಟೆಗೆ ಶ್ರೀಮತಿ ರಾಣಿ ಸತೀಶ್ ಅವರು ಊಟದ ವ್ಯವಸ್ಥೆ ಮಾಡಿದ್ದಾರೆ.

ಉಪಾಧ್ಯಕ್ಷರು : ಆಯಿತು. ಈಗ ಸಭೆಯನ್ನು ಮುಂದೂಡಿ ಒಂದು ಗಂಟೆ ನಂತರ ಮತ್ತೆ ಸೇರೋಣ.

(1-30 ಗಂಟೆಗೆ ಸಭೆ ಮುಕ್ತಾಯ ಗೊಂಡು ಪುನಃ 2.30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ 2-40 ನಿಮಿಷಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

+ ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉಪಾಧ್ಯಕ್ಷರೆ ಇವತ್ತು ಈ ಒಂದು ಬೇಡಿಕೆಗಳ ಮೇಲೆ ನಾನು ಮಾತನಾಡಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ನಾನು ಮೊದಲೇ ಹೇಳಿದಂತೆ ಒಂದೆರಡು ಇಲಾಖೆಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಕಳೆದ ಅಧಿವೇಶನದಲ್ಲಿ ನಾನು ನಗರಾಭಿವೃದ್ಧಿ ಇಲಾಖೆಯ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆ್ಯಕ್ಟ್ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಅದೊಂದು ನಿರುಪಯುಕ್ತವಾದ ಕಾನೂನು ಎಂದು ಹೇಳಿದ್ದೆ. ಇವತ್ತು ಕೇಂದ್ರ ಸರ್ಕಾರ ಆ ನಿರುಪಯುಕ್ತವಾದ ಕಾನೂನನ್ನು ರಿಫೀಲ್ ಮಾಡುವುದಕ್ಕೆ ಕ್ಯಾಬಿನೆಟ್ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಕೇಂದ್ರ ಸರ್ಕಾರವನ್ನು ಈ

ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಬಹಳ ಪ್ರಮುಖವಾದ ನಗರಗಳಲ್ಲಿ ಇರತಕ್ಕಂಥ ಕುಡಿಯುವ ನೀರಿನ ಸಮಸ್ಯೆಯನ್ನು ನೋಡಿದಾಗ ಕಳೆದ 50 ವರ್ಷಗಳಲ್ಲಿ ನಾವು ನಮ್ಮ ಜನತೆಗೆ ಸರಿಯಾದ ಸ್ವಚ್ಛವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗಲಿಲ್ಲ. ಇವತ್ತು ಹುಬ್ಬಳ್ಳಿ ಧಾರವಾಡ ಮಹಾನಗರಗಳು ಇರಬಹುದು, ಬೆಂಗಳೂರು ಮಹಾನಗರ ಇರಬಹುದು ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಯಾಗಿ ಮಾಡುವುದಕ್ಕೆ ಆಗಿಲ್ಲ. ಪ್ರತಿಯೊಬ್ಬರಿಗೂ ನಾವು ಪ್ರತಿ ದಿವಸ ಹೋಗಲಿ ಎರಡು ದಿವಸಕ್ಕೆ ಒಂದುಸಾರಿ, ಮೂರು ದಿವಸಕ್ಕೆ ಒಂದು ಸಾರಿಯಾದರೂ ಕುಡಿಯುವ ನೀರು ಕೊಡಲಿಕ್ಕೆ ಆಗುತ್ತಿಲ್ಲ. ಉದಾಹರಣೆಗೆ ನಾನು ನಮ್ಮ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರವನ್ನು ತೆಗೆದುಕೊಂಡರೆ ಮೊದಲು ಪ್ರತಿ ದಿವಸ ನೀರು ಕೊಡುತ್ತಿದ್ದರು. ಆದರೆ ಕಳೆದ 10 ವರ್ಷಗಳಿಂದ ಕುಡಿಯುವ ನೀರನ್ನು ಪ್ರತಿ ದಿವಸ ಹೋಗಿ ಎರಡು ದಿವಸಕ್ಕೆ ಒಂದು ಸಾರಿ ಮೂರು ದಿವಸಕ್ಕೆ ಒಂದು ಸಾರಿ ಕುಡಿಯುವ ನೀರನ್ನು ಕೊಡಲು ಪ್ರಾರಂಭವಾಯಿತು. ಆದರೆ ಕಳೆದ ಎರಡು ವರ್ಷಗಳಿಂದ 3 ದಿವಸಕ್ಕೆ ಒಮ್ಮೆ ನೀರು ಕೊಡುವುದಕ್ಕೆ ಪ್ರಾರಂಭವಾಯಿತು, ಆಕಸ್ಮಾತ್ ನೀರು ಬಾರದಿದ್ದರೆ ಹುಬ್ಬಳ್ಳಿಯಲ್ಲಿ ಒಂದು ಫ್ಯಾಮಿಲಿಗೆ, ಒಂದು ಏರಿಯಾಕ್ಕೆ 8-10 ದಿವಸಗಳಿಗೆ ಒಮ್ಮೆ ಆದರೂ ನೀರು ಬರುವುದಿಲ್ಲ. ಈ ರೀತಿ ಆದರೆ ನಾವು ಯಾವ ರೀತಿ ಮಾಡುವುದು? ನಮ್ಮ ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಮಾಡುವುದು ನೀರುಸಾಗರ, ಮತ್ತು ಮಲಪ್ರಭಾದಿಂದ ಹಾಗೂ ಉಣಕಲ್ ಕೆರೆಯಿಂದ. ನೀರಸಾಗರದಿಂದ 7 ಎಂಜಿಡಿ ನೀರು ಬರುತ್ತಿತ್ತು. ಮಲಪ್ರಭಾದಿಂದ 11 ಎಂಜಿಡಿ ನೀರು ಬರುತ್ತಿದೆ. ಉಣಕಲ್ ಕೆರೆ ಮತ್ತು ದೂಮ್ಮವಾಡ ನೀರು ಸಾಗರ ಇವೆರಡೂ ಮಾತ್ರ ನಮಗೆ ನೀರು ಪೂರೈಸುವ ಸಾಗರಗಳು. ಉಣಕಲ್ ಕೆರೆ ಕಲುಷಿತವಾಗಿದೆ, ಅದು ಕುಡಿಯಲು ಯೋಗ್ಯವಿಲ್ಲವೆಂದು ಮಹಾನಗರಪಾಲಿಕೆ ನಿರ್ಣಯಿಸಿದೆ. ಆದರೆ ಆ ಕಲುಷಿತ ನೀರನ್ನು ಯೋಗ್ಯ ರೀತಿಯಲ್ಲಿ ಮಾರ್ಪಡಿಸಿ ಕುಡಿಯುವ ನೀರನ್ನಾಗಿ ಪರಿವರ್ತಿಸಲು ಯಾವ ಕ್ರಮವನ್ನೂ ನಗರಪಾಲಿಕೆಯಾಗಲೀ, ಸರ್ಕಾರವಾಗಲೀ ಇವತ್ತಿನವರೆಗೆ ತೆಗೆದುಕೊಳ್ಳಲಿಲ್ಲ. ಅಷ್ಟೊಂದು ನೀರು ವೇಸ್ಟಾಗುತ್ತಿದೆ. ಸರ್ಕಾರವು ಉಣಕಲ್ ಕೆರೆ ನೀರಿನ ಬಗ್ಗೆ ದಯಮಾಡಿ ಗಮನಹರಿಸಬೇಕಾಗಿರುತ್ತದೆ. ಮಹಾನಗರದಲ್ಲಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಲ್ಬಣವಾಗುತ್ತದೆ. ಆಗ ಯಾವ ಭಾಗದಲ್ಲಿ ನೀರು ಬರುವುದಿಲ್ಲವೋ ಆ ಭಾಗದ ಜನರು ರಸ್ತೆಗಿಳಿಯುತ್ತಾರೆ. ರಸ್ತೆ ರೊಕೋ, ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಘೆರಾವ್ ಮಾಡುವ ಕೆಲಸವೂ ನಡೆಯುತ್ತಿದೆ. ಆದ್ದರಿಂದ ಇವತ್ತು ನೀರಿನ ಸಮಸ್ಯೆ ಉಂಟಾಗಲು ಕಾರಣಗಳ ಕಡೆ ನಾವು ಗಮನಹರಿಸಬೇಕಾಗಿರುತ್ತದೆ. ಸರ್ಕಾರ ವಾಟರ್‌ಬಿಲ್ ಜಾಸ್ತಿಮಾಡಿದರೂ ಅದನ್ನು ತೆರಲು ಬಳಕೆದಾರ ತಯಾರಿದ್ದಾನೆ. ಆದರೆ ಅವನಿಗೆ ನಿತ್ಯ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿಲ್ಲ, ಒಂದು ತಾನು ಬರುತ್ತದೆ. ಅದೂ ಜಿನುಗುತ್ತ ಬರುತ್ತದೆ.

ಶ್ರೀ ಸಿ. ಭೈರೇಗೌಡ : ಸರಬರಾಜಾಗಿರುವ ನೀರಿಗಾದರೂ ವಾಟರ್‌ಚಾರ್ಜನ್ನು ಸರ್ಕಾರಕ್ಕೆ ಕಟ್ಟಬೇಕಲ್ಲ, ಅದರ ಮೇಲೆ ಸ್ವಲ್ಪ ಬೆಳಕು ಚೆಲ್ಲಿ.

ಶ್ರೀ ಜಗದೀಶ್ ಶೆಟ್ಟರ್ : ಕಳೆದ ಐದು ಹತ್ತು ವರ್ಷಗಳಿಂದ ಈ ಸಮಸ್ಯೆ ಇದೆ. ಜನರಿಗೆ ವಿಶ್ವಾಸವೇ ಹೋಗಿಬಿಟ್ಟಿದೆ. ಬಾಕಿ ವಸೂಲು ಮಾಡುವುದಾಗಲಿ ವಾಟರ್ ಚಾರ್ಜ್ ವಸೂಲು ಮಾಡುವುದಾಗಲಿ ನಾನು ಬೇಡ ಎನ್ನುವುದಿಲ್ಲ. ಸರ್ಕಾರ ಅದಕ್ಕೆ ಯೋಗ್ಯ ಕ್ರಮಗಳನ್ನು ಕೈಗೊಳ್ಳಲಿ, ಅದಕ್ಕೆ ಶಾಸಕರಾರ್ಯರು ಪ್ರವೇಶಿಸುವುದಿಲ್ಲ. ಆದರೆ ಅದರ ಜೊತೆಗೆ ನಾಗರೀಕರಿಗೆ ಸರಿಯಾದ ನೀರಿನ ವ್ಯವಸೆಯನ್ನೂ ಮಾಡಬೇಕು. ಅದೂ ಜವಾಬ್ದಾರಿ ಇದೆ. ಆ ಸೌಕರ್ಯ ಕೊಡದೆ ಬಿಲ್ ವಸೂಲು ಮಾಡುತ್ತೇವೆಂದರೆ ಜನರಿಗೆ ಅದರಿಂದ ಒಳ್ಳೆಯ ವಾತಾವರಣ ನಿರ್ಮಾಣವಾದಂತಾ -ಗುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : 8 ಲಕ್ಷ ಜನಸಂಖ್ಯೆ ಇದೆ ಸ್ವಾಮಿ, ಎರಡನೇ ದೊಡ್ಡ ನಗರ ರಾಜ್ಯದಲ್ಲಿ. ನಾವು ಹಾಲಿ 16 ಎಂಜಿಡಿ ನೀರು ಸರಬರಾಜು ಮಾಡುತ್ತಿದ್ದೇವೆ. ಅಲ್ಲಿ ವಿತರಣಾ ವ್ಯವಸ್ಥೆ ಸರಿಯಿಲ್ಲ, ಅದನ್ನು ಅಲ್ಲಿನ ಕಾರ್ಪೋರೇಷನ್ ಮಾಡಬೇಕು. ಕರ್ನಾಟಕ ನಗರ ನೀರು ಸರಬರಾಜು ಸಂಸ್ಥೆ ಬಲ್ಕ್ ಸಪ್ಲೈಯರ್ಸ್. ಸಚಿವರಾದ ಭೈರೇಗೌಡರು ತಿಳಿಸಿದಂತೆ ಇವರು ನಮಗೆ 30 ಕೋಟಿ ರೂಪಾಯಿ ಬಾಕಿ ಕೊಡಬೇಕು. 20 ಕೋಟಿ ರೂಪಾಯಿಗಳನ್ನು ನಾವು ಪವರ್‌ಸಪ್ಲೈಯರ್ಸ್‌ಗೆ ಕೊಡಬೇಕಾಗಿದೆ, ಇದಿಷ್ಟು ಆ ಒಂದು ಕಾರ್ಪೋರೇಷನ್ನಿಂದಲೇ ಬರಬೇಕಾಗಿದೆ. ಒಟ್ಟು 120 ಕೋಟಿರೂಪಾಯಿಗಳನ್ನು ಕೆಇಬಿಗೆ ಕಟ್ಟಬೇಕಾಗಿದೆ. ನಾವು ಯಾರನ್ನು ನೀರಿನ ದರ ಕೊಡಿ ಎಂದು ಕೇಳಿದರೂ ಅವರು ಹೇಳುವುದು ನೀವು ಸಮರ್ಪಕವಾಗಿ ನೀರು ಕೊಡಿ, ನಾವು ನಿಮಗೆ ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ ಇದು ಆಗಿರುವುದು, ಎಲ್ಲಿಯೂ ವಸೂಲು ಮಾಡುವುದಕ್ಕೇ ಆಗುತ್ತಿಲ್ಲ ಸ್ವಾಮಿ.

ಶ್ರೀ ಜಗದೀಶ್ ಶೆಟ್ಟರ್ : ಅಸಮರ್ಪಕ ನೀರಿನ ಪೂರೈಕೆ ಕಾರಣವೆಂದರೆ ಅಲ್ಲಿನ ಅಧಿಕಾರಿಗಳಲ್ಲಿ ಯಾವುದೆ ಸಹಮತ ಇಲ್ಲ. ಒಳಚರಂಡಿ ಇಲಾಖೆ ಅಧಿಕಾರಿಗಳಿಗೂ ಮಹಾನಗರಪಾಲಿಕೆ ಅಧಿಕಾರಿಗಳಿಗೂ ಹೊಂದಾಣಿಕೆ ಇಲ್ಲ. ಮತ್ತೊಂದು ವಿದ್ಯುತ್ ಇಲಾಖೆಗೂ ಹೊಂದಾಣಿಕೆ ಇಲ್ಲ. ಈ ರೀತಿ ಹಲವಾರು ಸಮಸ್ಯೆಗಳು ಉದ್ಭವವಾಗುವುದಕ್ಕೆ ಕಾರಣವಾಗುತ್ತವೆ. ಮಲಪ್ರಭಾ ನದಿಯಿಂದ ನೀರೆತ್ತುವ ಜಾಗದಲ್ಲಿ 23 ತಾಸೂ ವಿದ್ಯುತ್ ಸರಬರಾಜಾಗಬೇಕು. ಯಾವಾಗಲೋ ಎರಡು ತಾಸು ಶೆಟ್‌ಡೌನ್ ಅಥವಾ ಯಾವುದೇ ಕಾರಣದಿಂದ ನಿಂತುಬಿಟ್ಟಿತು ಅಂದರೆ ಮುಂದೆ 8-10 ತಾಸು ನೀರಿನ ಸಂಗ್ರಹ ಆಗಲಿಕ್ಕೆ ಸಾಧ್ಯವಿಲ್ಲ. ಇದರಿಂದ ಎರಡು ದಿವಸ ನೀರಿನ ಸಮಸ್ಯೆ ಉದ್ಭವವಾಗುತ್ತದೆ. ಅದಕ್ಕೆ ಕೆಇಬಿಗೂ ಸರ್ಕಾರ ಸೂಚನೆ ಕೊಡಬೇಕು. ನೀರೆತ್ತುವ ಕಡೆ ಯಾವುದೇ ಅಡೆತಡೆ ಇಲ್ಲದಂತೆ ವಿದ್ಯುತ್ ಸರಬರಾಜು ಇರಬೇಕಾಗುತ್ತದೆ. ನಗರಪಾಲಿಕೆ ಮತ್ತು ಒಳಚರಂಡಿ ಮಂಡಲಿ ಅಧಿಕಾರಿಗಳು ಸಹಮತದಿಂದ ತಮ್ಮ ಕೆಲಸ ನಿರ್ವಹಣೆ ಮಾಡಿದರೆ ಮಾತ್ರ ನೀರು ಪೂರೈಕೆ ಸರಿಯಾಗಲು ಸಾಧ್ಯವಾಗುವುದು. ಏಕೆಂದರೆ ಸಮಸ್ಯೆಗಳು ಹುಟ್ಟಿಕೊಳ್ಳುವುದು ಅಸಮರ್ಪಕ ನೀರು ಪೂರೈಕೆಯಾಗುವುದು ಅಧಿಕಾರಿಗಳ ಬೇಜವಾಬ್ದಾರಿತನದಿಂದ. ಅವರು ಮನಸ್ಸು ಮಾಡಿದರೆ ಎಷ್ಟೋ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ಕೊಡುವುದು ಮತ್ತು ಕ್ರಮ ತೆಗೆದುಕೊಳ್ಳುವುದು ಅತಿ ಅವಶ್ಯವಿದೆ ಎಂದು ನಾನು ಈ

ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅಲ್ಲದೆ ಮಲಪ್ರಭಾದಲ್ಲೂ ನೀರಿನ ಸಂಗ್ರಹಣೆ ಕಡಿಮೆಯಾಗುತ್ತಿದೆ ಎಂದು ತಿಳಿದುಬರುತ್ತಿದೆ. ಅದರಿಂದ ನೀರು ಪೂರೈಕೆಗೆ ತೊಂದರೆಯಾಗುತ್ತಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಹೂಳು ತೆಗೆಯಲು ಮಲಪ್ರಭಾಕ್ಕೆ 1.75 ಕೋಟಿ ಕೊಡಲಾಗುತ್ತಿದೆ.

ಉಪಾಧ್ಯಕ್ಷರು : ಮುಖ್ಯವಾಗಿ ಸವದತ್ತಿಯಿಂದ ಹುಬ್ಬಳ್ಳಿಗೆ ಬರುವ ಪೈಪಲೈನ್ ರಿಪ್ಲೇಸ್ ಆಗಬೇಕು. ಅದು ಮಾಡುವವರೆಗೆ ಸರಿಹೋಗುವುದಿಲ. ಅಲ್ಲಿ ಕುಡಿಯುವ ನೀರನ್ನು ಕೃಷಿಗೆ ಬಳಸುತ್ತಿದ್ದಾರೆ ಅದರ ಬಗ್ಗೆ ಹೇಳಿರಿ.

ಶ್ರೀ ಜಗದೀಶ್ ಶೆಟ್ಟರ್ : ಸವದತ್ತಿಯಿಂದ ಧಾರವಾಡ ಮಧ್ಯದ ಪೈಪಲೈನ್ ಏನಿದೆ ಅದು ಅಲ್ಲಲ್ಲಿ ಒಡೆದಿದೆ. ಅವಾಗವಾಗ ಅವನ್ನು ರಿಪೇರಿ ಮಾಡುತ್ತಾರೆ ಅಥವಾ ರಿಪ್ಲೇಸ್ ಮಾಡುತ್ತಾರೆ ಆದರೆ ಇದರಿಂದ ಇವತ್ತಿನವರೆಗೂ ಒಂದು ಶಾಶ್ವತ ಪರಿಹಾರ ಸಿಕ್ಕುತ್ತಲೇ ಇಲ್ಲ. ಭೂಮಾಲೀಕರು ನೀರನ್ನು ಅಲ್ಲಿ ಕೃಷಿಗೆ ಬಳಸುತ್ತಿದ್ದಾರೆ. ಹೀಗಾಗಿ 11 ಎಂಜಿಡಿ ನೀರು ಹುಬ್ಬಳ್ಳಿಗೆ ಬರುತ್ತಿದೆ ಎನ್ನುವುದನ್ನು ಕೇವಲ ಪೇಪರ್‌ನಲ್ಲಿ ಮಾತ್ರ. ಅಷ್ಟು ಬರುತ್ತಿಲ್ಲ. ಏಕೆಂದರೆ ಮಧ್ಯದಲ್ಲೆಲ್ಲ ಸೋರಿಕೆ ಇದೆ. ಆದ್ದರಿಂದ ಪೈಪ್‌ಗಳನ್ನು ರಿಪೇರಿ ಅಥವಾ ರಿಪ್ಲೇಸ್ ಮಾಡುವ ಕೆಲಸ ಮಾಡಬೇಕಾಗಿರುತ್ತದೆ. ಮುಂದಿನ ಯೋಜನೆಗಳಲ್ಲಿ ಈ ಕೆಲಸ ಮಾಡಬೇಕಾಗಿದೆ.

ಶ್ರೀ ಅಶೋಕ ಕಾಟ್ವೆ : ಅಲ್ಲಿ ಒಟ್ಟು 180 ರಿಂದ 200 ಕಡೆ ಸೋರಿಕೆ ಇದೆ. ಒಂದೇ ಸಲ ಇಷ್ಟನ್ನೂ ಮಾಸ್ ಆಗಿ ರಿಪೇರಿ ಮಾಡಿದರೆ ಆ ಪ್ರಾಬ್ಲಂ ಸಾಲ್ವ್ ಆಗುತ್ತದೆ, ಹಿಂದೆ ಸಚಿವರು ಅದರ ಬಗ್ಗೆ ಹೇಳಿದ್ದರು.

ಶ್ರೀ ಬಿ.ಎನ್. ಬಚ್ಚೇಗೌಡ : ಅದು ಕಪ್ಪು ಎರೆಮಣ್ಣು ಸ್ವಾಮಿ, ತಮಗೆ ಗೊತ್ತಿರುವಂತೆ ಸವದತ್ತಿಗೆ ಹೋಗುವ ರಸ್ತೆ ಪಕ್ಕದಲ್ಲೇ ಹಾಕಿದ್ದಾರೆ. ಮೊದಲ ಸಲ ನಾವು ಪಿಎಸ್‌ಸಿ ಪೈಪನ್ನು ಟೆಸ್ಟ್ ಮಾಡಿ ಹಾಕಿದ್ದು, ಅದರ ಮೇಲೆ ಹೆವಿ ಟ್ರಾಫಿಕ್ ಹೋದಾಗಲೆಲ್ಲ ಶೇಕ್ ಆಗಿ ಪ್ರೆಷರ್‌ಗೆ 160-180 ಸ್ಥಳಗಳಲ್ಲಿ ಲೀಕೇಜ್ ಇದೆ. ಮಧ್ಯೆ ಅಮೀನಬಾವಿ ಎಂದು ಒಂದು ಪಂಪಿಂಗ್ ಸ್ಟೇಶನ್ ಇದೆ, ಅದರಿಂದಾಚೆಗೆ ಈ ಸಮಸ್ಯೆ ಸ್ವಾಮಿ. ಅದಕ್ಕೇನಿದ್ದರೂ ನಾವು ಸ್ಟೀಲ್ ಎಂಎಸ್ ಪೈಪ್ಸ್ ಹಾಕಿ ಮಾಡಬೇಕಾಗುತ್ತದೆ. ಅದಕ್ಕೆ ಪ್ರಾವಿಜನ್ ಮಾಡಿಕೊಂಡು ಮುಂದೆ ಮಾಡುತ್ತೇವೆ. ಸವದತ್ತಿ ಗುಡ್ಡದ ಮೇಲಿನಿಂದ ಅಮೀನಬಾವಿಗೆ ಗ್ರಾವಿಟಿಯಿಂದ ಬರುವಂಥದ್ದು.

ಶ್ರೀ ಚಂದ್ರಕಾಂತ್ ಬೆಲ್ಲದ್ : 1985ರಲ್ಲಿ ನಾನು ಎಂಎಲ್‌ಎ ಆಗಿ ಬಂದಾಗಲೇ ನಾನು ಹೇಳುತ್ತಿದ್ದೇನೆ. ಆಗ ಕೇವಲ ಮೂರ್ನಾಲ್ಕು ಕಡೆ ಲೀಕೇಜ್ ಇತ್ತು, ಇವತ್ತು ಜಾಸ್ತಿ ಆಗಿದೆ. ಅದರಲ್ಲಿ ಕಳಪೆ ಕೆಲಸ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೇ, ಈ ಒಂದು ಪರಿಸ್ಥಿತಿಯನ್ನು ನೋಡಿದರೆ ನಾವು ಇನ್ನೂ ಮುಂದಿನ ವರ್ಷಗಳನ್ನು ಪರಿಗಣನೆಗೆ ನಾವು ತೆಗೆದುಕೊಂಡರೆ ಇನ್ನು ಹೆಚ್ಚಿನ

ಒಂದು ಪ್ರಿಕಾಷನರಿ ಮೆಷರ್ಸ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಇನ್ನು ಬರುವ ವರ್ಷಗಳಲ್ಲಿ ಇವತ್ತು ಮಹಾನಗರದಲ್ಲಿ ಕುಡಿಯುವ ನೀರಿನ ಬಗ್ಗೆ ಭೀಕರ ವ್ಯವಸ್ಥೆ ಬರಬಹುದು. ಅದಕ್ಕಾಗಿ ಪ್ರತಿ ವರ್ಷ ನಾವು ಮಲಪ್ರಭಾದಿಂದ ಎರಡು ಟಿಎಂಸಿ ನೀರನ್ನು ಕುಡಿಯುವುದಕ್ಕೆ ಉಪಯೋಗ ಮಾಡುತ್ತೇವೆ. ಮತ್ತೆ ಮಲಪ್ರಭಾದಿಂದ ಸವದತ್ತಿ ನಗರಕ್ಕೂ ಆ ಲಿಫ್ಟ್ ಇರಿಗೇಷನ್‌ಗೂ ನೀರನ್ನು ಕೊಡುತ್ತೇವೆ. ಮತ್ತೆ ಬೇಲೂರು ಕೈಗಾರಿಕಾ ವಸಾಹತಿಗಾಗಿ 5 ಎಂಜಿಡಿ ನೀರನ್ನು ಕೊಡುವ ಯೋಜನೆ ಇದೆ. ಹೀಗಾಗಿ ಮುಂದೆ ಬರುವ ವರ್ಷಗಳಲ್ಲಿ ನಮಗೆ ನೀರಿನ ಕೊರತೆ ಉಂಟಾಗಬಹುದು. ಮುಂದೆ ಯಾವ ಯೋಜನೆಗಳನ್ನು ಕೈಗೊಳ್ಳಬೇಕೋ ಅದನ್ನು ಗಂಭೀರವಾಗಿ ಕೈಗೊಳ್ಳಬೇಕಾಗಿದೆ. ಏಕೆಂದರೆ ಮುಂದೆ ಆಲಟರ್‌ನೇಟೀವ್ ಆಗಿ ತೆಗೆದುಕೊಳ್ಳುವುದು ಈಗ ನಮ್ಮ ನಗರದಿಂದ 60 ಕಿಲೋಮೀಟರ್ ದೂರ ಇರುವ ಕಾಳಿ ನದಿಯಿಂದಲೂ ಸಹಾ ನೀರನ್ನು ತರಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಂಡರೆ ಮುಂಬರುವ ವರ್ಷಗಳಲ್ಲಿ ಇನ್ನು 20-30 ವರ್ಷಕ್ಕೆ ಕಾಳಿ ನದಿಯಿಂದಲೂ ತೆಗೆದುಕೊಳ್ಳುವ ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಮತ್ತೆ ಈಗಾಗಲೇ ಚಿಂತನೆ ನಡೆದಿರುವ ರೀತಿಯಲ್ಲಿ ಮಲಪ್ರಭಾಗೆ ಮಹದಾಯಿ ನದಿಯನ್ನು ಕೂಡಿಸುವ ಯೋಜನೆ ಇದೆಯಲ್ಲ, ಅದು ಫಲಪ್ರದವಾದರೆ ಅದರಿಂದ ನಮ್ಮ ಮಹಾನಗರಕ್ಕೆ ಒಂದಿಷ್ಟು ಕುಡಿಯುವ ನೀರಿನ ಸಂಗ್ರಹ ಹೆಚ್ಚಿಗೆ ಆಗಿ ಹೆಚ್ಚಿನ ನೀರು ಪೂರೈಕೆಯಾದೀತು.

ಉಪಾಧ್ಯಕ್ಷರು : ಅಲ್ಲಿಯ ಜಮೀನಿಗೆ ಸಾಕಾಗುವುದಿಲ್ಲ. ಅದನ್ನು ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರು ಅದಕ್ಕೆ ಬೇರೆ ವ್ಯವಸ್ಥೆಯನ್ನೇ ಮಾಡಬೇಕೇ ಹೊರತು ಅದು ಸಾಧ್ಯವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಹಾನಗರದಿಂದ ಕಾಳಿನದಿ 60 ಕಿಲೋಮೀಟರ್‌ನಲ್ಲಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಕಾಳಿ ನದಿಯ ಸಾಧ್ಯತಾ ವರದಿಯನ್ನು ಸಿದ್ಧಮಾಡುತ್ತಿದ್ದೇವೆ. 60 ಕಿಲೋಮೀಟರ್ ಇದೆ, ಇದು 40 ಕಿಲೋ ಮೀಟರ್ ಇದೆ. ಈಗಾಗಲೇ ಸುಮಾರು 60 ಕೋಟಿ ರೂಪಾಯಿ ಅಂದಾಜಿನಲ್ಲಿ ಸಾಧ್ಯತಾ ವರದಿಯನ್ನು ಸಿದ್ಧ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮೊದಲು ನಾನು ಏನು ಹೇಳಿದೆ ಎಂದರೆ ಅಧಿಕಾರಿಗಳು ಮನಸ್ಸು ಮಾಡಬೇಕು ಮತ್ತು ಇವತ್ತು ಏನಾಗಿದೆ ಎಂದರೆ

ಉಪಾಧ್ಯಕ್ಷರು : ಸರ್ಕಾರ ಮನಸ್ಸು ಮಾಡಬೇಕೆಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಹಾನಗರಸಭೆಯಲ್ಲಿ ಏನು ಅಧಿಕಾರಿವರ್ಗ, ಇಂಜಿನಿಯರ್ಸ್‌ಗಳು ಇದ್ದಾರೆ, ಅವರು ಕಳೆದ 15-20 ವರ್ಷಗಳಿಂದಲೂ ಅಲ್ಲೇ ಇದ್ದಾರೆ. ಅವರಿಗೆ ವರ್ಗಾವಣೆ ಎನ್ನುವ ಹೆದರಿಕೆ ಇಲ. ಅಲ್ಲಿ ಖಾಯಂ ತಳವೂರಿದ್ದಾರೆ. ಮತ್ತೆ ಇವರನ್ನು ಧಾರವಾಡಕ್ಕೂ ವರ್ಗ ಮಾಡಿದರೆ ಇಲ್ಲಿಗೆ ಮತ್ತೆ ಮಾಡಿಸಿಕೊಂಡು ಬರುತ್ತಾರೆ. ಅದಕ್ಕೆ ಈ ಒಂದು ಅಧಿಕಾರವರ್ಗವನ್ನು ಇಂಜಿನಿಯರ್ಸ್ ಇರಲಿ, ಬೇರೆ ಆಫೀಸರ್ಸ್ ಇರಲಿ, ಅವರನ್ನು ಒಂದು ಮಹಾನಗರಸಭೆಯಿಂದ ಮತ್ತೊಂದು ಮಹಾನಗರಸಭೆಗೆ ವರ್ಗಾವಣೆ ಮಾಡುವ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತೇನು

ಪೋಲಿಸ್ ಇಲಾಖೆಯಲ್ಲಿ ಹುಬ್ಬಳ್ಳಿ-ಧಾರವಾಡದಲ್ಲಿ ಕಳೆದ 15-20 ವರ್ಷಗಳಿಂದ ಅದೇ ಅಧಿಕಾರಿಗಳು ಇದ್ದಾರೆ. 30 ವರ್ಷದ ರೆಕಾರ್ಡ್ಸ್‌ನ್ನು ತೆಗೆದುನೋಡಿದರೆ 10 ಜನ ಆಫೀಸರ್ ಆದರೂ ಸಿಗುತ್ತಾರೆ. ಹುಬ್ಬಳಿ-ಧಾರವಾಡದಲ್ಲಿಯೇ ಅವರು ಸರ್ವೀಸನ್ನು ಮಾಡಿದ್ದಾರೆ. ಇವತ್ತಿನವರೆಗೂ ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಲಿಕ್ಕೆ ಯಾವುದೇ ಸರ್ಕಾರ ಇವತ್ತು ಮನಸ್ಸು ಮಾಡುತ್ತಿಲ್ಲ. ಅದಕ್ಕೆ ಹಲವಾರು ಪ್ರಯತ್ನವನ್ನೂ ಮಾಡುತ್ತಿದ್ದಾರೆ. ನಾನು ಮೂರು ಜನ ಶಾಸಕರ ಪರವಾಗಿ ಮಾತನಾಡುತ್ತಿದ್ದೇನೆ. ಅಲ್ಲಿ ಒಬ್ಬ ಯಾರೇ ಪೋಲಿಸ್ ಆಫೀಸರನ್ನು ತೆಗೆದುಹಾಕಿ, ಅಲ್ಲಿ 3 ವರ್ಷಕ್ಕಿಂತ ಜಾಸ್ತಿ ಸರ್ವೀಸ್ ಮಾಡಿರುವವರನ್ನು ತೆಗೆದುಹಾಕಿ. ನಾವು ಯಾವುದಕ್ಕೂ ಇಂಟರ್‌ಫಿಯರ್ ಮಾಡುವುದಿಲ್ಲ. ಯಾರೇ ಹೊಸಬರು ಬಂದರೂ ನಾವು ಯಾರು ಅದಕ್ಕೆ ಇಂಟರ್‌ಫಿಯರ್ ಮಾಡುವುದಿಲ್ಲ. ಅದಕ್ಕೆ ಆ ದಿಶೆಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು. ಮೊನ್ನೆ ನಾನು 351ರ ನಿಯಮದಡಿಯಲ್ಲಿ ಪ್ರಶ್ನೆ ಮಾಡಿದಾಗ ಅಲ್ಲಿರುವ ಮೂರು ಅಧಿಕಾರಿಗಳು ಅವರು ನಿವೃತ್ತಿಯಾಗಿದ್ದಾರೆ. ಆ ಅಧಿಕಾರಿಯವರನ್ನು ಮತ್ತೆ ಒಂದು ವರ್ಷಕ್ಕೆ ಸೇವಾವಧಿ ಹೆಚ್ಚು ಮಾಡುವ ರೀತಿಯಲ್ಲಿ ಇವತ್ತು ಮಹಾನಗರಸಭೆ ಮುಂದುವರಿಸಲಿಕ್ಕೆ ಪ್ರಯತ್ನ ಮಾಡುತ್ತಿರುವ ಬಗ್ಗೆ ಉತ್ತರ ಬಂದಿದೆ. ಮಹಾನಗರಸಭೆ ಬಗ್ಗೆ ಇಷ್ಟು ಆಯಿತು. ಹೈಕೋರ್ಟಿನ ಬಗ್ಗೆ ಮಾತನಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಇವತ್ತು ಉತ್ತರ ಕರ್ನಾಟಕ ಅದರಲ್ಲಿ ನಮ್ಮ ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟು ಪೀಠವಾಗಬೇಕು ಎನ್ನುವುದು ಅಲ್ಲಿಯ ಜನರ ಬಹಳ ವರ್ಷಗಳಿಂದ ಇಚ್ಚೆ ಇದೆ. ಅದಕ್ಕಾಗಿ ಜಸ್ವಂತಸಿಂಗ್‌ರವರ ಆಯೋಗವಾಯಿತು. ಜಸ್ವಂತಸಿಂಗ್ ಆಯೋಗದವರು ಸದ್ಯಕ್ಕೆ ಹುಬ್ಬಳ್ಳಿ-ಧಾರವಾಡ ಇಲ್ಲಿ ಹೈಕೋಟು ಪೀಠ ಆಗಲಿಕ್ಕೆ ಯೋಗ್ಯವಾದ ಸ್ಥಳ ಇದೆ ಎಂದು ಅವರ ವರದಿಯಲ್ಲಿ ಅವರು ಕಾಣಿಸಿದ್ದಾರೆ. ಆದರೆ ಹಲವಾರು ಸಾರಿ ಇಲ್ಲಿ ಎರಡು ಮೂರು ವರ್ಷಗಳಲ್ಲಿ ನನ್ನ ಮಿತ್ರಶಾಸಕರು ಈ ಹೈಕೋರ್ಟ್ ಪೀಠದ ಬಗ್ಗೆ ಪ್ರಸ್ತಾವನೆ ಮಾಡಿದಾಗ ಸರ್ಕಾರ ಉತ್ತರ ಕೊಟ್ಟಿದೆ. ಹೈಕೋರ್ಟು ಪೀಠವನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಸ್ಥಾಪನೆ ಮಾಡುವ ವಿಚಾರ ನಮಗೆ ಇದೆ, ಅದರ ಪರವಾಗಿ ನಾವು ಇದ್ದೇವೆ. ಆದರೆ ಕರ್ನಾಟಕ ಹೈಕೋರ್ಟಿನ ಒಂದು ಸಹಮತಿ ಬೇಕು ಎನ್ನುವ ವಿಚಾರವನ್ನು ಅವರು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಒಂದು ವಿಚಾರವನ್ನು ವ್ಯಕ್ತ ಪಡಿಸುತ್ತಿದ್ದೇನೆ. ಇವತ್ತು ಸರ್ಕಾರಕ್ಕೆ ಅಲ್ಲಿ ಹೈಕೋರ್ಟು ಪೀಠ ಮಾಡಲಿಕ್ಕೆ ಮನಸ್ಸು ಇದೆ. ಆದರೆ ಹೈಕೋರ್ಟಿನ ಒಂದು ಒಪ್ಪಿಗೆ ಇಲ್ಲ ಎಂದು ಹೇಳುವ ಪ್ರಸಂಗದಲ್ಲಿ ನಾನೊಂದು ಕಿವಿ ಮಾತನ್ನು ಹೇಳಬಯಸುತ್ತೇನೆ. ಅಟ್‌ಲೀಸ್ಟ್ ಸರ್ಕ್ಯೂಟ್ ಬೆಂಚಾದರೂ ನಮ್ಮ ಹುಬ್ಬಳ್ಳಿ-ಧಾರವಾಡದಲ್ಲಿ ಸ್ಥಾಪನೆಯಾಗಲಿ. ಅದೊಂದು ಪ್ರಾರಂಭವಾಗಲಿ. ಯಾವ ರೀತಿ ಮಹಾರಾಷ್ಟ್ರದ ನಾಗಪುರದಲಿ ಸರ್ಕೀಟಬೆಂಚ್ ಇದೆ ಬಾಂಬೆ ಹೈಕೋರ್ಟಿನ ಸರ್ಕ್ಯೂಟ್ ಬೆಂಚ್ ನಾಗಪುರದಲ್ಲಿದೆ ಮತ್ತು ಉತ್ತರಪ್ರದೇಶದ ಲಕ್ನೋದಲ್ಲಿದೆ ಎಂದು ನಾನು ಕೇಳಿದ್ದೇನೆ. ಅದಕ್ಕಾಗಿ Mysore High Court Act of 1884, ಅದರಲ್ಲಿ ಪ್ರಾವಿಷನ್ ಸೆಕ್ಷನ್ 17ನ್ನು ಇದು ಸ್ವಲ್ಪ ಸಣ್ಣದು ಇದೆ. ಇದನ್ನು ಓದಿಬಿಡುತ್ತೇನೆ. ಸರ್ಕಾರಕ್ಕೆ ಯಾವ ರೀತಿ ಪವರ್ ಇದೆ ಎಂದು ಹೇಳುತ್ತಿದ್ದೇನೆ: place of sitting of High Court.

The High Court shall hold its sittings at such place as the State Government may, from time to time, appoint in that behalf.

"Whenever it appears to the State Government convenient that the jurisdiction and powers vested in the High Court by this Act, or any other law for the time being in force, should be exercised in any place othter than the place appointed under paragraph 1 of this section, or at several of other places by way of circuit, the State Government may by order authorize and direct any one or more of the judges of such Court to hold sittings in such place of places as by such order may be directed, and the Judge or same Judges acting under such order shall have and exercise the jurisdiction and authority as would be had and exercised by a Judge or Judges of the High Court, as the case may be, in its ordinary place of sitting' ಇವತ್ತು ಸರ್ಕಾರಕ್ಕೆ ಮನಸ್ಸು ಇದೆ ಅಲ್ಲಿ ಹೈಕೋರ್ಟ್ ಬೆಂಚನ್ನು ಮಾಡುವುದು. ತಾಂತ್ರಿಕವಾಗಿ ಕಾನೂನು ರೀತಿಯಿಂದ ಅದಕ್ಕೆ ಅಡೆತಡೆ ಇದ್ದರೆ ಒಂದು ಸರ್ಕ್ಯೂಟ್ ಬೆಂಚನ್ನಾದರೂ ತಕ್ಷಣ ಅಲ್ಲಿ ಪ್ರಾರಂಭ ಮಾಡಲಿಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕು. ಅಂದರೆ ಬಹಳ ವರ್ಷಗಳಿಂದ ಏನು ಇವತ್ತು ನಮ್ಮ ಹುಬ್ಬಳ್ಳಿ-ಧಾರವಾಡದ ಮಹಾನಗರದ ಜನತೆ, ಉತ್ತರ ಕರ್ನಾಟಕದ ಜನತೆ ಏನು ಕನಸನ್ನು ಕಾಣುತ್ತಿದ್ದಾರೆ, ಆ ಕನಸು ನನಸಾಗುವುದಕ್ಕೆ ಸಾಧ್ಯ ಇದೆ. ಮತ್ತು ಉತ್ತರ ಕರ್ನಾಟಕದ ಜನತೆಯ ಆಸೆಯನ್ನು ಈಡೇರಿಸಲಿಕ್ಕೆ ಸಾಧ್ಯ ಇದೆ. ದಯವಿಟ್ಟು ಸರ್ಕಾರ ಈ ಬಗ್ಗೆ ಕಾನೂನಿನ ಸಲಹೆಯನ್ನು ತೆಗೆದುಕೊಂಡು ಕಾನೂನಿನ ಅಡೆತಡೆಗಳನ್ನು ನಿವಾರಿಸಿ ಈ ಸರ್ಕ್ಯೂಟ್ ಬೆಂಚನ್ನಾದರೂ ತಕ್ಷಣ ಪ್ರಾರಂಭ ಮಾಡಿದರೆ ಸರ್ಕ್ಯೂಟ್ ಬೆಂಚನ್ನು ಮೊದಲು ಮಾಡಿದರೆ ಕೆಲಸ ಪ್ರಾರಂಭವಾಯಿತೆಂದರೆ ನಂತರ ಹೈಕೋರ್ಟು ಬೆಂಚ್ ಮಾಡಲಿಕ್ಕೆ ನಾವು ಒತ್ತಡ ತರಲಿಕ್ಕೆ ಬರುತ್ತದೆ. ಹೈಕೋರ್ಟಿನವರೆಗೂ ಹೇಳುವುದಕ್ಕೆ ಬರುತ್ತದೆ. ನಾಳೆ ಕೇಂದ್ರಸರ್ಕಾರಕ್ಕೂ ಹೇಳುವುದಕ್ಕೆ ಬರುತ್ತದೆ. ಮತ್ತು ಸುಪ್ರೀಂ ಕೋರ್ಟಿಗೂ ಹೇಳುವುದಕ್ಕೆ ಬರುತ್ತದೆ. ಅದಕ್ಕೆ ತಕ್ಷಣ ಇದರ ಬಗ್ಗೆ ಗಂಭೀರವಾಗಿ ಸರ್ಕಾರ ಪರಿಶೀಲನೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡಿ ಇನ್ನು ಹಲವಾರು ವಿಷಯಗಳು ಮಾತನಾಡುವುದಕ್ಕೆ ಇದ್ದರೂ ಇನ್ನೊಂದು ಈ ಕಲುಷಿತ ನೀರಿನಿಂದ ನಮ್ಮ ಹುಬ್ಬಳ್ಳಿ-ಧಾರವಾಡದಲ್ಲಿ ವಾಂತಿಭೇದಿ ಪ್ರಕರಣಗಳು ಆಗುತ್ತಿವೆ. ಹಿಂದೆ ಸನ್ಮಾನ್ಯ ಅಶೋಕ್ ಕಾಟವೆಯವರು ಪ್ರಸ್ತಾಪಮಾಡಿದಾಗ ಯಾವುದೇ ವಾಂತಿಭೇದಿ ಪ್ರಕರಣಗಳು ವರದಿಯಾಗಿಲ್ಲವೆಂದು. ಮೊನ್ನೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿಯೇ ಬಂದಿದೆ. ವಾಂತಿಭೇದಿಯಿಂದ 50 ಜನ ಆಸ್ಪತ್ರೆಗೆ ಎಂದು. ಒಬ್ಬ ಹುಡುಗ ಮೃತಪಟ್ಟಿದ್ದಾನೆಂದು ಹೇಳಿ ರಿಪೋರ್ಟ್ ಬಂದಿದೆ. ಅದಕ್ಕೆ ಸರ್ಕಾರದವರು ಇದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾರು ಅದರಿಂದ ನೊಂದಿದ್ದಾರೆ ಅವರಿಗೆ ತಕ್ಷಣ ಪರಿಹಾರ ಕೊಡುವ ಯೋಜನೆ ಮಾಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ : (ಬಾಗೇಪಲಿ) : ಮಾನ್ಯ ಉಪಾಧ್ಯಕ್ಷರೇ, ಇವತ್ತು 50 ಬೇಡಿಕೆಗಳ ಮೇಲೆ ಚರ್ಚೆಯಾಗಬೇಕಾಗಿದೆ. ಇದನ್ನು ಯಾವ ರೀತಿ ಸರ್ಕಾರ ಸಮರ್ಥನೆ ಮಾಡಿಕೊಳ್ಳುತ್ತೆ ಎಂದು ಹೇಳಿ ನನಗಂತೂ ಅರ್ಥವಾಗುತ್ತಿಲ್ಲ. ಆದರೂ ಚರ್ಚೆ ಮಾಡಬೇಕಾದ ಕರ್ತವ್ಯ ಇದೆ. ಹಾಗಾಗಿ ಕೆಲವು ವಿಷಯಗಳನ್ನಷ್ಟೇ ನಾನು ಚರ್ಚೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಶಿಕ್ಷಣ ಇಲಾಖೆ. ಅದರಲ್ಲಿ ಇವತ್ತು ಅತೀ ದೊಡ್ಡ ಇಲಾಖೆ 1,600 ಕೋಟಿ ರೂಪಾಯಿಗಳನ್ನು ಶಿಕ್ಷಣ ಇಲಾಖೆಗೆ ಇವತ್ತು ಒದಗಿಸಬೇಕಾಗುತ್ತದೆ. ಅಂಥ ಒಂದು ಪ್ರಮುಖವಾದ ಇಲಾಖೆ. ಇಲ್ಲಿ ಶಿಕ್ಷಣದ ಬಗ್ಗೆ ಹೆಚ್ಚು ಚರ್ಚೆಯಾಗುವುದೇ ಕಡಿಮೆಯಾಗಿದೆ. ಶಿಕ್ಷಣದ ಬಗ್ಗೆ ಚರ್ಚೆಯಾಗುವುದು ಬಹಳ ಅಪರೂಪವಾಗಿ ಆಗಿಂದಾಗ್ಗೆ ಚರ್ಚೆಯಾಗುತ್ತೆ. ಇವತ್ತು ನಮ್ಮ ಮಾನ್ಯ ಸದಸ್ಯರುಗಳೆಲ್ಲರೂ ಮಾತನಾಡುವಾಗ ಹಲವಾರು ಸಮಸ್ಯೆಗಳನ್ನು ಹಲವಾರು ಗಂಭೀರವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಭ್ರಷ್ಟಾಚಾರ ಬೇರೆ ಬೇರೆ ವಿಷಯಗಳಲ್ಲಿ. ಇವೆಲ್ಲಕ್ಕೂ ಕೂಡ ಬಹಳ ಪ್ರಮುಖವಾಗಿರುವುದು ಶಿಕ್ಷಣ. ಒಂದು ಸಮಾಜ ಹೇಗೆ ಹೋಗುತ್ತೆ ಎನ್ನುವುದನ್ನು ಪ್ರಮುಖವಾಗಿ ನಿರ್ಧಾರ ಮಾಡತಕ್ಕಂಥದ್ದು ಶಿಕ್ಷಣದ ವ್ಯವಸ್ಥೆ.

3.10 ಪಿ.ಎಂ.

ಒಂದು ಸಮಾಜ ಹೇಗೆ ಸಾಗುತ್ತದೆನ್ನುವುದರ ಬಗ್ಗೆ ಪ್ರಮುಖವಾಗಿ ನಿರ್ಧರಿಸುವುದು ಶಿಕ್ಷಣದ ವ್ಯವಸ್ಥೆ. ಶಿಕ್ಷಣದ ವ್ಯವಸ್ಥೆಯಿಂದ ಒಂದು ರಾಜ್ಯ, ದೇಶ ಹಾಗೂ ಸಮಾಜ ಹೇಗೆ ಇರುತ್ತದೆಂಬುದು ನಿರ್ಧಾರವಾಗುತ್ತದೆ ಶಿಕ್ಷಣವನ್ನು ಕುರಿತು 'ಎಜುಕೇಷನ್ ಈಸ್ ದಿ ಬ್ರೈನ್ ಆಫ್ ದಿ ಸೊಸೈಟಿ' ಎಂದು ಒಬ್ಬ ಶಿಕ್ಷಣ ತಜ್ಞರು ಹೇಳುತ್ತಾರೆ. ಶಿಕ್ಷಣವೆನ್ನುವುದು ಸಮಾಜದ ಮೆದುಳಿದ್ದಂತೆ. ಆ ಮೆದುಳಿಗೆ ಏನಾದರೂ ಹೆಚ್ಚು-ಕಡಿಮೆಯಾಗಿದೆಯೇ? ಎನ್ನುವುದರ ಬಗ್ಗೆ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಒಂದು ಸಲವಾದರೂ ನೋಡುವುದಕ್ಕೆ ಹೋಗಲಿಲ್ಲ. ಅವರು ಶಿಕ್ಷಣಕ್ಕಾಗಿ ಸುಮಾರು 2,200 ಕೋಟಿ ರೂಪಾಯಿಗಳಷ್ಟು ಹಣ ಕೊಡುತ್ತಿದ್ದಾರೆ. ಇವೊತ್ತು ಶಿಕ್ಷಣ ಏನಾಗಿದೆ? ಎತ್ತ ಸಾಗುತ್ತಿದೆ? ಇದರಿಂದ ಯಾರಿಗೆ ಉಪಯೋಗವಾಗುತ್ತಿದೆ? ಎಂಬುದರ ಬಗ್ಗೆ ಅವರು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಗಮನಿಸತಕ್ಕಂಥ ವ್ಯವಧಾನವಾದರೂ ಇದೆಯೋ ಇಲ್ಲವೋ ಅದೂ ಸಹ ಗೊತ್ತಿಲ್ಲ. ಶಿಕ್ಷಣಕ್ಕಾಗಿ ಒದಗಿಸುತ್ತಿರುವ 2,200 ಕೋಟಿ ರೂಪಾಯಿಗಳಷ್ಟು ಹಣ ಎಲ್ಲಿಗೆ ಹೋಗುತ್ತಿದೆ ಎನ್ನುವ ಬಗ್ಗೆ ಯಾವತ್ತೂ ಆಲೋಚಿಸುವುದಕ್ಕೆ ಹೋಗುವುದಿಲ್ಲ. ನೌಕರರುಗಳ ಸಂಬಳಕ್ಕೆ ಬಹಳಷ್ಟು ಹಣ ವೆಚ್ಚವಾದರೆ ಶಿಕ್ಷಣದ ಗತಿ ಏನಾಗುತ್ತದೆಂದು ಆಲೋಚಿಸುವುದಿಲ್ಲ. ಶಿಕ್ಷಣವೆಂದರೆ ಸಮಾಜದ ಮೆದುಳು ಎಂದು ನೀವು ಒಪ್ಪುತ್ತೀರಿ, ಆದರೆ, ಇವೊತ್ತು ಶಿಕ್ಷಣಕ್ಕೆ ಎಷ್ಟು ಪ್ರಾಧಾನ್ಯತೆ ಸಿಗಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲವೆಂದು ಹೇಳುತ್ತಾ, ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯಕ್ಕೆ ಒಂದು ವಿಶಿಷ್ಟವಾದ ಇತಿಹಾಸವಿದೆ. ಇಡೀ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಶಿಕ್ಷಣವನ್ನು ವ್ಯಾಪಾರಕ್ಕಿಟ್ಟಂಥ ರಾಜ್ಯ ಕರ್ನಾಟಕ ಖಾಸಗಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸುವುದರ ಮುಖಾಂತರ ಇಡೀ ದೇಶದಲ್ಲಿ ಅತಿ ಹೆಚ್ಚಿನ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಶಿಕ್ಷಣ ಕಾಲೇಜುಗಳಿರುವ ರಾಜ್ಯ

ಕರ್ನಾಟಕವಾಗಿದ್ದು, ಸದರಿ ಕಾಲೇಜುಗಳನ್ನು ಖಾಸಗಿಯವರೇ ನಡೆಸುತ್ತಿದ್ದಾರೆ. ಅವರಿಂದಲೇ ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಶಿಕ್ಷಣದ ವ್ಯಾಪಾರೀಕರಣ ಪ್ರಾರಂಭವಾಯಿತು. ಹೀಗಾಗಿ ಶಿಕ್ಷಣವನ್ನು ವ್ಯಾಪಾರಕ್ಕಿಟ್ಟಂಥ ಮೊದಲ ರಾಜ್ಯವೆಂಬ ಹೆಗ್ಗಳಿಕೆಗೆ ಕರ್ನಾಟಕದ್ದಾಗಿದೆ. ಈ ಕುರಿತ ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಹೋಗದೆ, ಇದರಲ್ಲಿ ಮುಖ್ಯವಾಗಿ ನಾವೆಲ್ಲರೂ ಆತಂಕ ಪಡುವ ವಿಷಯವೇನೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಶಿಕ್ಷಣದ ಪರಿಸ್ಥಿತಿ ಏನಾಗಿದೆ ಎಂಬುದರತ್ತ ಗಮನ ಹರಿಸಬೇಕಾಗಿದೆ. ಇವೊತ್ತು ಉನ್ನತ ಶಿಕ್ಷಣವೆಂದರೆ, ಸರ್ಕಾರಕ್ಕೆ ಹಾಗೂ ಜನರಿಗೆ ಏನು ಅನ್ನಿಸಿದೆಯೆಂದರೆ, ಬರೀ ಎಂ.ಬಿ.ಬಿ.ಎಸ್. ಇಂಜಿನಿಯರಿಂಗ್ ಮಾಡುವುದು ಉನ್ನತ ಶಿಕ್ಷಣವೆಂಬ ಅಭಿಪ್ರಾಯಕ್ಕೆ ನಾವೆಲ್ಲರೂ ಬಂದಿದ್ದೇವೆ. ಇವೆರಡು ಡಿಗ್ರಿಗಳನ್ನು ಮಾಡಿದರೆ ನಮಗೆಲ್ಲರಿಗೂ ಒಳ್ಳೆಯ ಪ್ರತಿಷ್ಠೆ ಬಂದು ದೇಶಕ್ಕೆ ಬಹಳ ಪ್ರಯೋಜನವಾಗುತ್ತದೆಂದು ತಿಳಿದುಕೊಂಡಿದ್ದೇವೆ. ಈಗ ಹೊಸದಾಗಿ ಕಂಪ್ಯೂಟರ್ ಶಿಕ್ಷಣ ಇಂಟ್ರಡ್ಯೂಸ್ ಆಗಿದೆ. ಈ ಮೂರನ್ನೂ ಮಾಡಿದರೆ ಈ ದೇಶ ಸುಭಿಕ್ಷಿತವಾಗಿರುತ್ತದೆ, ನಾವು ಹೆಚ್ಚೆಚ್ಚು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿರುವುದರಿಂದ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದೇವೆಂದು ತಿಳಿದಿರುವಂತಿದೆ. ಆದರೆ, ಸರ್ಕಾರದವರು ಮರೆತಿರುವಂಥ ಒಂದು ಮೂಲಭೂತ ಅಂಶವೇನೆಂದರೆ, ಮುಖ್ಯವಾಗಿ ಉನ್ನತ ಶಿಕ್ಷಣದ ಉದ್ದೇಶ ಮತ್ತು ಗುರಿ ಏನೆಂದರೆ, ಸಂಶೋಧನೆ ಮಾಡುವುದು. ಆದರೆ, ಇವೊತ್ತು ಉನ್ನತ ಶಿಕ್ಷಣದಲ್ಲಿ ಸಂಶೋಧನೆಯ ಪ್ರಶ್ನೆ ಸಂಪೂರ್ಣವಾಗಿ ಇಲ್ಲದಂತಾಗಿರುವ ಪರಿಸ್ಥಿತಿಯುಂಟಾಗಿದೆ. ಬಿ.ಎ., ಬಿ.ಎಸ್.ಸಿ. ಡಿಗ್ರಿಗಳೆಂದರೆ ಅದನ್ನು ಕಸದ ಬುಟ್ಟಿಗೆ ಹಾಕಿ, ಅದರಿಂದ ಏನೂ ಪ್ರಯೋಜನವಿಲ್ಲವೆನ್ನತಕ್ಕ ಅಭಿಪ್ರಾಯಕ್ಕೆ ನಾವೆಲ್ಲರೂ ಬಂದಿದ್ದೇವೆ. ನಾವು ಪ್ರಮುಖವಾಗಿ ಗಮನಿಸಬೇಕಾಗಿರುವುದೇನೆಂದರೆ, ನ್ಯಾಚುರಲ್ ಸೈನ್ಸ್‌ನಲ್ಲಿ ಅಥವಾ ಸಮಾಜ ವಿಜ್ಞಾನದಲ್ಲಿ ಸಂಶೋಧನೆ ಮತ್ತು ಸಾಮಾನ್ಯ ವಿಜ್ಞಾನದಲ್ಲಿ ಸಂಶೋಧನೆ. ಇವೆರಡೂ ಇಲ್ಲದೆ ಹೋದರೆ ಒಂದು ಸಮಾಜ ವೈಜ್ಞಾನಿಕವಾಗಿ, ತಾಂತ್ರಿಕವಾಗಿ, ಸಾಮಾಜಿಕವಾಗಿ ಬೆಳವಣಿಗೆಯಾಗಲು ಖಂಡಿತಾ ಸಾಧ್ಯವಿಲ್ಲ. ಅಂತಹ ಒಂದು ಉದಾಹರಣೆ ಕೊಡುತ್ತೇನೆ. ಇವೊತ್ತು ಎಲ್ಲರೂ ತಾವು ಡಾಕ್ಟರ್, ಇಂಜಿನಿಯರ್ ಮತ್ತು ಟೆಕ್ನೋಕ್ರಾಟ್‌ಗಳಾಗಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಆದರೆ, ಅದಕ್ಕೆ ಸಿಗಬೇಕಾದ ಪ್ರೋತ್ಸಾಹ ಸಿಗುತ್ತಿಲ್ಲ. Are we under the impression that only the tecnocrats can build this country or this society? Even if we agree that point, ಅತ್ಯುನ್ನತವಾದ ವಿಜ್ಞಾನ ಮತ್ತು ತಾಂತ್ರಿಕತೆಗೆ ಬೇಕಾಗಿರತಕ್ಕಂಥ ಮೂಭೂತ ಸಂಶೋಧನೆಯನ್ನು ನಾವು ಮಡೆಸದೆ ಹೋದರೆ ತಾಂತ್ರಿಕ ವಿಜ್ಞಾನ ಮತ್ತು ಉನ್ನತ ವಿಜ್ಞಾನವನ್ನು ವಿಶಾಲಗೊಳಿಸುವುದಕ್ಕೆ ಸಾಧ್ಯವಿಲ್ಲ. ಆದರೆ, ಇವೊತ್ತು ನಾವು ಏನು ಮಾಡುತ್ತಿದ್ದೇವೆಂದರೆ, ಹೊಸ ಶಿಕ್ಷಣ ನೀತಿ, ಅದರ ಪರಿಣಾಮ ಮತ್ತು ವರ್ಲ್ಡ್ ಟ್ರೇಡ್ ಆರ್ಗನೈಜೇಶನ್‌ನ ಭಾಗಿಗಳಾಗಿ ಸಂಶೋಧನೆಯನ್ನು ಸಂಪೂರ್ಣವಾಗಿ ಕೈಬಿಡತಕ್ಕಂಥ ಪರಿಸ್ಥಿತಿಗೆ ಬಂದಿದ್ದೇವೆ. ಏಕೆಂದರೆ, ಸಂಶೋಧನೆಗೆ ಮೂಲಭೂತವಾಗಿ ಸರ್ಕಾರ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಆದರೆ, ಖರ್ಚು ಮಾಡತಕ್ಕಂಥ ಅವಶ್ಯಕತೆಬೇಡ, ವಿದೇಶದಿಂದ ಎಲ್ಲಾ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳೋಣವೆಂಬ ಸ್ಥಿತಿಗೆ ತಲುಪಿ, ಸಮಾಜ

ವಿಜ್ಞಾನದಲ್ಲಿ ಸಂಶೋಧನೆಗಾಗಲಿ ಅಥವಾ ಸಾಮಾನ್ಯ ವಿಜ್ಞಾನದಲ್ಲಿ ಸಂಶೋಧನೆಗಾಗಲಿ ಪ್ರಾಶಸ್ತ್ಯ ಕೊಡುವಂತಾದ್ದರ ಕಡೆ ನಾವು ಗಮನ ಕೊಡುತ್ತಿಲ್ಲ. ಇದರಿಂದಾಗಿ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ ಮಾಡುವ ವಿಧ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅಷ್ಟೇ ಅಲ್ಲ, ಇವೊತ್ತು ಹಲವಾರು ವಿಜ್ಞಾನಿಗಳು, ತಜ್ಞರು ಒಂದು ಅಭಿಪ್ರಾಯ ಹೇಳುತ್ತಾರೆ. ಏನೆಂದರೆ, ಮೊದಲನೆಯದಾಗಿ, 'The trend has set off alarm bells in the academic and scientific circles. Said Bangalore University Vice-Chancellor N.R. Shetty: "The day is not far off when our automic energy will collapse because there will be no one to pursue research work. What will happen to the national laboratories and research institutes, if no student wants to take up research in pure sciences?"

And Prof. Rajesh Kocchar of the Indian Institute of Astro-physics agrees with Mr. Shetty. ``The fact that brighter students are not taking up research is a matter of serious concern. If there is such a drastic fall at the under-graduate level, who will come for higher studies" he asks.

And their fear is not unfounded. The student enrolment for research at the Indian Institute of Science (IISc), one of the premier research institutes in the world has also come down over the years. Said IISc Director G. Padmanabhan: "We are able to fill only 75 per cent of the total intake and the quality of students is also going down. Very few students do research in engineering. After BE they take up management course. It is a bad situtation. At this rate, how will we develop technology? he asked. Lack of job opportunities compled with a boring syllabus has perhaps led to this scenario, "We cannot blame students. The practicals and theory is some subjects are very bad. We need to make it more attractive to the student. Besides, employment is a major factor. Students ensure that they get a job at the end of the course and B.sc. degree does not guarantee them one," VVS College Principal, V.G.Karjagi said.

And Prof. Padmanabhans agree with him. "There should be monetary compensation. A middle level scientist earns only half the salary that a fresh BE graduate earns. This must change". So, why should a student having BE degree should get more salary than a scientist? ಇವೊತ್ತು ವಿಜ್ಞಾನಿಗಳಿಗೆ ಯಾವುದೇ ರೀತಿಯ ಸೌಲಭ್ಯಗಳಿಲ್ಲ. ಹಾಗಾಗಿ, ಇವೊತ್ತು ಉನ್ನತ ಶಿಕ್ಷಣ ಎಷ್ಟು ಅಪಾಯಕ್ಕೊಳಗಾಗಿದೆಯೆಂಬ

ಬಗ್ಗೆ ನಮ್ಮನ್ಯಾರನ್ನೂ ಕಾಡಿಸುತ್ತಿಲ್ಲ. ಬಿ.ಎ., ಬಿ.ಎಸ್.ಸಿ. ಯೂಸ್‌ಲೆಸ್ ಎಂದು, ಎಂ.ಎ., ಎಂ.ಎಸ್.ಸಿ.ಗೆ ಯಾರೂ ಹೋಗಬೇಡಿ ಎಂದರೆ ಹಾಗಾದರೆ ಸಂಶೋಧನೆ ಮಾಡುವುದಕ್ಕೆ ಮೂಲಭೂತವಾಗಿ ಬೇಕಾಗಿರತಕ್ಕಂಥ ಅವಶ್ಯಕತೆಯೇನು? ಸರ್ಕಾರ ಇದರ ಬಗ್ಗೆ ಸ್ಪಷ್ಟಪಡಿಸಬೇಕಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ನೀವು 2,200 ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೀರಿ, ಅಲ್ಲದೆ, ಒದಗಿಸುತ್ತಿರುವ ಹಣದಲ್ಲಿ ಹೆಚ್ಚು ಭಾಗ ಸಂಬಳಕ್ಕೆ ಹೋಗುತ್ತಿದೆಯೆಂತಲೂ ಹೇಳುತ್ತಿದ್ದೀರಿ, ಅದುದರಿಂದ, ಶಿಕ್ಷಣದ ಅದರಲ್ಲೂ ಉನ್ನತ ಶಿಕ್ಷಣದ ನೀತಿ ಏನೆಂಬುದನ್ನು ನೀವು ಸ್ಪಷ್ಟಪಡಿಸಬೇಕಾಗಿದೆ. ಇವೊತ್ತು ತಮಗೆ ಒಂದು ಅಂಕಿ-ಅಂಶಗಳ ವಿವರ ಹೇಳುತ್ತೇನೆ. ನ್ಯಾಷನಲ್ ಕಾಲೇಜಿನಲ್ಲಿ ಬಿ.ಎ, ಬಿ.ಎಸ್.ಸಿ. ಅಡ್ಮಿಶನ್ 200 ಸಂಖ್ಯೆ ಇದ್ದುದು 50ಕ್ಕೆ ಇಳಿದಿದೆ, ಅದೇ ರೀತಿ ಎಸ್.ಜೆ.ಆರ್.ಸಿ.ಯಲ್ಲಿ 75ರಿಂದ 30ಕ್ಕೆ ಇಳಿದಿದ್ದರೆ ಮೌಂಟ್ ಕಾರ್ಮೆಲ್ ಕಾಲೇಜ್‌ನಲ್ಲೂ ಇದೇ ಪರಿಸ್ಥಿತಿಯುಂಟಾಗಿದೆ. ಇದನ್ನು ತಾವು ಲಘುವಾಗಿ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಛೇರ್ಮನ್‌ರಾದ ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ಪೀಠವನ್ನಲಂಕರಿಸಿದರು)

ಶ್ರೀ ಸಿದ್ದರಾಮಯ್ಯ : ಬೇರೆ ಬೇರೆ ಹೊಸ ಕೋರ್ಸ್‌ಗಳೆಲ್ಲ ಈಗ ಬಂದಿವೆ. ಹೊಸ ತಾಂತ್ರಿಕ ಕೋರ್ಸ್‌ಗಳೆಲ್ಲ ಪ್ರಾರಂಭವಾಗಿದೆ. ಹೀಗಿದ್ದಮೇಲೆ ಬಿ.ಎ. ಬಿ.ಎಸ್.ಸಿ.ಗೆ ಹೋಗುವವರು ಕಡಿಮೆಯಾಗುತ್ತಾರೆ. ಹಿಂದಿನ ವರ್ಷಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಇರುತ್ತಿದ್ದರೋ ಅಷ್ಟೇ ಈಗಲೂ ಇರಬೇಕೆಂದು ತಮ್ಮ ಉದ್ದೇಶವೋ? ಹೊಸದಾಗಿ ಬಂದಿರುವ ತಾಂತ್ರಿಕ ಕೋರ್ಸ್‌ಗಳನ್ನು ವ್ಯಾಸಂಗ ಮಾಡುವುದನ್ನು ಬಿಟ್ಟು ಟ್ರೆಡಿಷನಲ್ ಕೋರ್ಸ್‌ಗಳನ್ನೇ ಓದಬೇಕೆಂದು ಹೇಳುತ್ತೀರೋ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಏನು ಹೇಳಿದೆ ಅದನ್ನು ಮಾನ್ಯ ಸಿದ್ದರಾಮಯ್ಯನವರು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಸ್ಪೇಸ್ ರೀಸರ್ಚ್, ಟೆಕ್ನಾಲಜಿ ಕೋರ್ಸ್‌ಗಳಿಗೆ ಹೋಗಬೇಕಾದರೆ ಬಿ.ಎಸ್ಸಿ. ಮೂಲ ಕ್ವಾಲಿಫಿಕೇಷನ್ ಇದಿಲ್ಲದೆ ಆ ಕೋರ್ಸ್‌ಗಳಿಗೆ ಹೋಗಲು ಆಗುವುದಿಲ್ಲ. ಆದ್ದರಿಂದ ಈ ಬಿ.ಎಸ್ಸಿ. ಕೋರ್ಸ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೇಗೆ ಕಡಿಮೆಯಾಗುತ್ತಿದೆ ಎಂಬ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಸರ್ಕಾರ ಉನ್ನತ ಶಿಕ್ಷಣದ ಬಗ್ಗೆ ತನ್ನ ಧೋರಣೆಯನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ದೇಶ, ರಾಜ್ಯ ಸ್ವಾತಂತ್ರ್ಯವಾಗಿ ಯಾವುದೇ ಸಂಶೋಧನೆ ಮಾಡುವ ಬಗ್ಗೆ ಅರ್ಹತೆಯೂ ಉಳಿಯುವುದಿಲ್ಲ ಪ್ರತಿಯೊಂದರ ಸಂಶೋಧನೆಗೆ ವಿದೇಶವನ್ನು ಆಶ್ರಯಿಸಬೇಕಾಗುತ್ತದೆ. ಇನ್ನು ಶಿಕ್ಷಣ ರಂಗದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಅವ್ಯವಹಾರದ ಬಗ್ಗೆ ಹೇಳುವುದಾದರೆ, ಪ್ರಮುಖವಾಗಿ malpractices in the examinations ಎಂಬುದು ಒಂದು ಪೀಡೆಯಾಗಿಬಿಟ್ಟಿದೆ. ಪರೀಕ್ಷೆಗಳಲ್ಲಿ ಕಾಪಿ ಹೊಡೆಯತಕ್ಕದ್ದು accepted norms ಎನ್ನತಕ್ಕ ಆತಂಕಕಾರಿಯಾದ ಸ್ಥಿತಿಗೆ ಬಂದುಬಿಟ್ಟಿದೆ. ತನ್ನ ಮಗ ಕಾಪಿ ಹೊಡೆಯುವುದನ್ನು ಪೋಷಕರೇ ಸಮರ್ಥನೆ ಮಾಡತಕ್ಕ ಸ್ಥಿತಿಗೆ ನಾವಿಂದು ಬಂದಿದ್ದೇವೆ. ಉದಾಹರಣೆಗೆ, ಒಂದು ಹೈಸ್ಕೂಲ್‌ನಲ್ಲಿ ಪರೀಕ್ಷೆ ನಡೆಯುತ್ತಿದ್ದಾಗ ಅಲ್ಲಿನ ಶಿಕ್ಷಕರು ಬಹಳ

ಕಟ್ಟುನಿಟ್ಟಾಗಿ ಪರೀಕ್ಷೆಯನ್ನು ನಡೆಸುತ್ತಿದ್ದಾಗ, ಕಾಪಿಯನ್ನು ಹೊಡೆಯಲು ಬಿಡದಿದ್ದಾಗ ಐದುನೂರು ಜನರ ಗುಂಪನ್ನು ತೆಗೆದುಕೊಂಡು ಹೋಗಿ ಶಿಕ್ಷಕರ ಮೇಲೆ ಹಲ್ಲೆ ಮಾಡಿ ಪೋಲೀಸರು ಮಧ್ಯಪ್ರದೇಶ ಮಾಡಿ ಪೋಲೀಸ್‌ನವರು ಶಿಕ್ಷಕರನ್ನು ಇನ್‌ವಿಜಿಲೇಟರ್ಸನ್ನು ವ್ಯಾನ್‌ನಲ್ಲಿ ಮನೆಗೆ ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇದು ಕರ್ನಾಟಕ ರಾಜ್ಯದಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಇದರಲ್ಲಿ ಶಿಕ್ಷಕರ ಪಾತ್ರವೂ ಇದೆ. ಕೆಲವು ಖಾಸಗಿ ಕಾಲೇಜಿನವರು, ಶಾಲೆಗಳವರು ಕಾಪಿ ಹೊಡೆಯುವುದನ್ನು ಪ್ರೋತ್ಸಾಹ ಮಾಡುತ್ತಾರೆ. ನಮ್ಮ ಶಾಲೆಗೆ ಹೈಯಸ್ಟ್ ರಿಸಲ್ಟ್ ಬರಬೇಕು ಎಂಬ ಉದ್ದೇಶದಿಂದ ಆ ರೀತಿ ಮಾಡುತ್ತಾರೆ. ನಮ್ಮ ಶಾಲೆಗೆ ಹೆಚ್ಚಿನ ವಿದ್ಯಾರ್ಥಿಗಳು ಪಾಸಾಗಿದ್ದಾರೆ ಎಂಬ ಪ್ರತಿಷ್ಠೆ ಬರಬೇಕೆಂದು ಉದ್ದೇಶದಿಂದ ಆ ರೀತಿ ಮಾಡುತ್ತಾರೆ. ಉಪಾಧ್ಯಾಯರ ಮೂಲಕ ಕಾಪಿ ಹೊಡೆಯಲು ಖಾಸಗಿ ಶಾಲಾಕಾಲೇಜಿನವರು ಪ್ರೋತ್ಸಾಹ ಕೊಡುತ್ತಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಎಸ್.ಎಸ್.ಎಲ್.ಸಿ, ಪಿ.ಯು.ಸಿ. ಗಳಲ್ಲೇನು ಕಾಪಿ ಪಿಡುಗು ಇತ್ತು, ಅದರ ಬಗ್ಗೆ ಒಂದು ಸ್ಕ್ವಾಡನ್ನು ಮಾಡಿದ್ದೇವೆ. ಅದರಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾತ್ರವಲ್ಲದೆ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ಜಿಲ್ಲೆಗಳಲ್ಲೂ ಮಾಡಿದ್ದೇವೆ. ಆ ಸಮಿತಿಯಲ್ಲಿ ಜಿಲ್ಲಾಧಿಕಾರಿಯವರು, ಪೋಲೀಸ್ ವರಿಷ್ಠರು, ಇತರೆ ಇಲಾಖೆಗಳ ಅಧಿಕಾರಿಗಳು ಇರುತ್ತಾರೆ. ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಅವರು ಅನಿರೀಕ್ಷಿತ ಭೇಟಿಯನ್ನು ಪರೀಕ್ಷೆ ಕೇಂದ್ರಗಳಿಗೆ ಕೊಡಬೇಕೆಂದು ಮಾಡಿದ್ದೇವೆ. ಈ ರಾಜ್ಯದಲ್ಲಿ 160 ಸೆನ್‌ಸಿಟೀವ್ ಪರೀಕ್ಷಾಕೇಂದ್ರಗಳು ಇತ್ತು.

ಶ್ರೀ ಯು.ಹೆಚ್. ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ಕಾಲೇಜುಗಳಲ್ಲಿ ನೂರಕ್ಕೆ ಅರವತ್ತು ಪರ್‌ಸೆಂಟ್ ಕಾಪಿ ನಡೆಯುತ್ತದೆ. ಇದರಲ್ಲಿ ಮಕ್ಕಳ ವಿದ್ಯಾಭ್ಯಾಸ ಮಾಡಿಸುವ ಹೊಣೆ ಹೊತ್ತಿರುವ ಪಾಲಕರು, ಇತರರು ಸಹ ಪಾಲುಗೊಳ್ಳುತ್ತಿದ್ದಾರೆ. ಶಿಕ್ಷಣ ಸಂಸ್ಥೆಯವರೂ ಮತ್ತು ಸರ್ಕಾರದ ಅಧಿಕಾರಿಗಳೂ ಭಾಗಗಳಾಗಿರುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವೇನು ಸ್ಕ್ವಾಡನ್ನು ಮಾಡಿ ಉತ್ತಮವಾದ ವ್ಯವಸ್ಥೆ ಮಾಡಿದ್ದೀರೋ ಅಲ್ಲೂ ಸಹ ಲೋಪದೋಷವಿದೆ. ತಾವೇನು ಜಾಗೃತಿ ದಳವನ್ನು ಮಾಡಿದ್ದೀರಿ ಅವರು ತಪಾಸಣೆಗೆ ಹೊರಟಕೂಡಲೇ ಇಂಥ ಶಾಲೆಗೆ ತಪಾಸಣೆಗೆ ಬರುತ್ತಿದ್ದಾರೆಂಬ ಮುನ್ಸೂಚನೆಯನ್ನು ಕೊಡುವ ಕೆಲಸವಾಗುತ್ತಿದೆ. ಕಾಪಿಯ ಪಿಡುಗು ಅತೀ ಹೆಚ್ಚು ಖಾಸಗಿ ಶಾಲೆಗಳಲ್ಲಿ ನಡೆಯುತ್ತಿದೆ. ಖಾಸಗಿ ಶಾಲೆಗಳವರಿಗೆ ಹೆಚ್ಚಿನ ಫಲಿತಾಂಶ ಮತ್ತು ರ್‍ಯಾಂಕ್ ಬೇಕಾಗಿದೆ: ಹಳ್ಳಿಗಾಡಿಗಿಂತ ನಗರಪ್ರದೇಶಗಳಲ್ಲಿ ಇದರ ಹಾವಳಿ ಜಾಸ್ತಿ ಇದೆ. ಇದನ್ನು ತಡೆಗಟ್ಟಲು ಸಮರ್ಥವಾದಂಥ ಅಧಿಕಾರಿಗಳನ್ನು ದಯಮಾಡಿ ನೇಮಕ ಮಾಡಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ 160 ಸೆನ್‌ಸಿಟೀವ್ ಕೇಂದ್ರಗಳನ್ನು ಮುಚ್ಚಿದ್ದೇವೆ. ಎಂಥದ್ದೇ ಶಿಫಾರಸ್ಸು ಬಂದಿದ್ದರೂ ಅದಕ್ಕೆ ನಾವು ಶರಣಾಗದೆ ಆ ಕೇಂದ್ರಗಳನ್ನು ಮುಚ್ಚಿದ್ದೇವೆ. ನಾವು ಮಾಡಿರುವ ಸ್ಕ್ವಾಡ್‌ನಲ್ಲಿ ಎಲ್ಲಾ ಇಲಾಖೆಗಳ

ಉನ್ನತಾಧಿಕಾರಿಗಳು ಇರುತ್ತಾರೆ. ಅವರು ಅನೇಕ ಪರೀಕ್ಷಾ ಕೇಂದ್ರಗಳಿಗೆ ಭೇಟಿ ಕೊಟ್ಟು ಹಲವಾರು ಕೇಸುಗಳನ್ನು ಹಿಡಿದಿದ್ದಾರೆ. ಈ ಕಾಪಿ ನಿಯಂತ್ರಣವನ್ನು ಮಾಡಲು ಎಲ್ಲರೂ ಸಹಕಾರ ನೀಡಬೇಕಾಗುತ್ತದೆ, ಕೇವಲ ಸರ್ಕಾರವೇ ಎಲ್ಲವನ್ನೂ ಮಾಡಲು ಹೇಗೆ ಸಾಧ್ಯವಾಗುತ್ತದೆ. ಆದ್ದರಿಂದ ತಮ್ಮ ಸಹಕಾರವೂ ಬೇಕಾಗುತ್ತದೆ. ಸಾರ್ವಜನಿಕರೂ ಕಾಪಿ ಮಾಡಲು ಪ್ರೋತ್ಸಾಹ ನೀಡುತ್ತಿದ್ದಾರೆ, ಶಿಕ್ಷಕರಿಗೆ ಇನ್‌ವಿಜಿಲೇಟರ್‌ಗಳಿಗೆ ಹಲ್ಲೆ ಮಾಡುತ್ತಿದ್ದಾರೆಂದು ಹೇಳಿದ್ದೀರಿ, ಇದನ್ನೆಲ್ಲಾ ತಡೆಗಟ್ಟುವ ಕೆಲಸವನ್ನು ಸರ್ಕಾರ ಮಾಡಲು ಆಗುತ್ತದೆಯೇ? Everybody should take interest. It is the responsibility of the common man. ಎನ್ನತಕ್ಕ ಮಾತನ್ನು ತಾವು ಹೇಳಿದಿರಿ ಅದನ್ನು ಮೆಚ್ಚುತ್ತೇನೆ. ಎಲ್ಲಾ ಕೆಲಸವನ್ನು ಸರ್ಕಾರವೇ ಮಾಡಬೇಕು ಎಂಬುದರಲ್ಲಿ ಅರ್ಥವಿಲ್ಲ. ಜನರು ಜೀಪನ್ನು ಸುಟ್ಟುಹಾಕುತ್ತಿದ್ದಾರೆ, ಅಟ್ಯಾಕ್ ಮಾಡುತ್ತಿದ್ದಾರೆಂದು ತಾವು ಮೊದಲೇ ಹೇಳಿದ್ದೀರಿ. ಇದನ್ನೆಲ್ಲಾ ಸರ್ಕಾರ ಟಾಲರೇಟ್ ಮಾಡಲು ಆಗುತ್ತದೆಯೇ? Are you tolerating these things.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಶಿಕ್ಷಣದಲ್ಲಿ ಮೌಲ್ಯಗಳು ಹೇಗೆ ಕುಸಿತವಾಗುತ್ತಿದೆ ಎಂಬ ಬಗ್ಗೆ ನಾನು ಅಂಶವನ್ನು ಹೇಳಿದ್ದು. ಇದರಲ್ಲಿ ಸರ್ಕಾರ, ಶಿಕ್ಷಕರು ಅಥವಾ ಯಾರೋ ಒಬ್ಬರು ಜವಾಬ್ದಾರರು ಎಂದು ನಾನು ಹೇಳುತ್ತಿಲ್ಲ. ಕೆಲವು ಖಾಸಗಿ ವಿದ್ಯಾ ಸಂಸ್ಥೆಗಳು ಹೆಚ್ಚಿನ ಪರ್ಸೆಂಟನ್ನು ತೆಗೆದುಕೊಳ್ಳಬೇಕು ಎಂಬ ಒಂದೇ ಒಂದು ಉದ್ದೇಶದಿಂದ ಕಾಪಿ ಮಾಡುವ ಕೆಲಸಕ್ಕೆ ಪ್ರೋತ್ಸಾಹ ಕೊಡುತ್ತವೆ. ಹೆಚ್ಚು ಪರ್ಸೆಂಟ್ ರಿಸಲ್ಟ್ ಬಂದರೆ ಹೆಚ್ಚಿನ ಅಡ್ಮಿಷನ್ ಸಿಗುತ್ತದೆಂದು ಅವರು ಆ ಕೆಲಸ ಮಾಡುತ್ತಾರೆ. ಪೋಷಕರೂ ಹೆಚ್ಚಿನ ಅಂಕವನ್ನು ಪಡೆಯಲು ಮಕ್ಕಳಿಗೆ ಕಾಪಿ ಮಾಡಲು ಉತ್ತೇಜನ ನೀಡುತ್ತಿದ್ದಾರೆ. ಇಲ್ಲಿ ಒಬ್ಬರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿಲ್ಲ. ಇದರಲ್ಲಿ ನಾವು ನೀವೆಲ್ಲರೂ, ಪೋಷಕರನ್ನೂ ಒಳಗೊಂಡಂತೆ ಜವಾಬ್ದಾರರರು. ಹೆಚ್ಚಿನ ಅಂಕ ಬಂದರೆ ಸೀಟು ಸಿಗುತ್ತದೆ ಎಂಬ ಉದ್ದೇಶಕ್ಕಾಗಿ. ಆ ಕೆಲಸ ನಡೆಯುತ್ತಿದೆ. ಬೋರ್ಡ್‌ಗಳಲ್ಲಿ ಹೋಗಿ ಮಾರ್ಕ್ಸ್ ಕಾರ್ಡುಗಳನ್ನೇ ಮ್ಯಾನ್ಯುಪುಲೇಟ್ ಮಾಡುವ ಮಟ್ಟಕ್ಕೆ ಪರಿಸ್ಥಿತಿ ಹೋಗಿದೆ. ಆ ಮಟ್ಟಕ್ಕೆ ಪರ್ಸೆಂಟೇಜ್ ಸಮಸ್ಯೆ ಹೋಗಿದೆ. ಎಂದೂ ಬಾಗಿಲೇ ತೆರೆಯದಿರುವ ಬೋಗಸ್ ಕಾಲೇಜ್‌ನ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಗೋವಿಂದೇಗೌಡರೇ ಅದನ್ನು ಪತ್ತೆ ಮಾಡಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಂಡು ಮುಚ್ಚಿಸಿದ್ದೀರಿ. ತಾವೇನು ಮಾಡಿಲ್ಲವೆಂದು ಹೇಳುತ್ತಿಲ್ಲ, ಆದರೆ ಶಿಕ್ಷಣದಲ್ಲಿ ಮೌಲ್ಯಗಳು ಹೇಗೆ ಕುಸಿಯುತ್ತಿದೆ, ಸಮಸ್ಯೆಗಳು ಹೇಗೆ ಬರುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದೇನೆ. ಆ ಬೋಗಸ್ ಕಾಲೇಜು 16 ಫೇಕ್ ಹಾಲ್‌ಟಿಕೆಟನ್ನು ಇಶ್ಯೂ ಮಾಡಿದೆ. ಇದನ್ನೆಲ್ಲಾ ತಾವು ಪತ್ತೆ ಮಾಡಿದ್ದೀರಿ. ಆದರೆ ಈ ಎಲ್ಲಾ ಸಮಸ್ಯೆ ಏಕೆ ಬರುತ್ತಿದೆಯೆಂದರೆ ನಾವ್ಯಾರು ಶಿಕ್ಷಣದ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುತ್ತಿಲ್ಲ. ಶಿಕ್ಷಣದ ವ್ಯವಸ್ಥೆ ಎಲ್ಲಿಯವರೆಗೆ ಸುಧಾರಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಬೇರೆ ವಿಭಾಗಳಲ್ಲಿ ಸುಧಾರಣೆಯನ್ನು ನಿರೀಕ್ಷೆ ಮಾಡಲು ಸಾಧ್ಯವಾಗುವುದಿಲ್ಲ. ಇವತ್ತು The intellectual bankruptcy of the country and the state has come down to very low. That is the major problem. From where does that intellectual bankruptcy come? One of the

root cause is education. ವಿಧ್ಯಾಭ್ಯಾಸವನ್ನು ಪಡೆಯುವುದು ಜ್ಞಾನಕೋಸ್ಕರವೆಂದು ಹಿಂದೆ ಭಾವನೆ ಇತ್ತು. ಆದರೆ ಇವತ್ತು ವಿದ್ಯಾಭ್ಯಾಸವನ್ನು ಜೀವನಕೋಸ್ಕರ, ಉದ್ಯೋಗಕ್ಕೋಸ್ಕರ, ವ್ಯಾಪಾರಕೋಸ್ಕರ ಪಡೆಯತಕ್ಕದೆಂದು ಆಗಿದೆ. ಮೊದಲು ಶಿಕ್ಷಣವನ್ನು ಕೊಡುವ ಕೆಲಸ ಪವಿತ್ರವಾದ ಕೆಲಸವಾಗಿತ್ತು. ಆದರೆ, ಇಂದು ಅದು ವ್ಯಾಪಾರಕ್ಕೆ ಇಳಿದಿದೆ. ಎಲ್ಲಾ ಸಮಸ್ಯೆಗಳಿಗೂ ಬೇರಾಗಿರುವ ಶಿಕ್ಷಣ ಕ್ಷೇತ್ರಗಳಲ್ಲಿ ಆಮೂಲಾಗ್ರವಾದ ಬದಲಾವಣೆಯಾಗದಿದ್ದರೆ ತೊಂದರೆಯಾಗುತ್ತದೆ. ಆದ್ದರಿಂದ, ಆ ಬದಲಾವಣೆಯನ್ನು ತರುವಲ್ಲಿ ಸರ್ಕಾರ ಮುಂದಾಗಬೇಕಾಗುತ್ತದೆ. ಸರ್ಕಾರ ಅದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿದ ತಕ್ಷಣ ಸರಿಯಾಗುತ್ತದೆಂದು ನಾನು ಹೇಳುವುದಿಲ್ಲ. ಶಿಕ್ಷಣದಲ್ಲಿ ನಮ್ಮ ದೃಷ್ಟಿಕೋನ ಬದಲಾವಣೆಯಾಗದಿದ್ದರೆ ನಾವು ಅದರಲ್ಲಿ ಮೂಲಭೂತ ಬದಲಾವಣೆಯನ್ನು ತರಲು ಸಾಧ್ಯವಾಗುವುದಿಲ್ಲ. ಇವತ್ತು ಉನ್ನತ ಶಿಕ್ಷಣ ಅಧೋಗತಿಗೆ ಹೋಗುತ್ತಿದೆ. ಅದರಲ್ಲೂ ಮುಖ್ಯವಾಗಿ ಸಂಶೋಧನೆ ಅಧೋಗತಿಗೆ ಹೋಗುತ್ತಿದೆ. ಸಂಶೋಧನೆಗಳಿಲ್ಲದೆ ಯಾವುದೇ ಸಮಾಜ ಮುಂದುವರಿಯಲು ಸಾಧ್ಯವಾಗುವುದಿಲ್ಲ. ಆ ಸಂಶೋಧನೆಗೆ ಹೆಚ್ಚು ಒತ್ತು ಕೊಡಬೇಕಾಗಿದೆ, ಸಂಶೋಧನೆಯ ಬಗ್ಗೆ ಸರ್ಕಾರದ ಧೋರಣೆಯೇನು ಎಂಬುದನ್ನು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ನಮ್ಮ ಆಡಳಿತ ಯಂತ್ರದ ಬಗ್ಗೆ ಅವರು ಹಲವಾರು ಸಲ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಆಡಳಿತ ಯಂತ್ರ ಸಂಪೂರ್ಣವಾಗಿ ಸರಿಯಾಗಿದೆಯೆಂದು ಅವರು ಯಾವಾಗಲೂ ಒಪ್ಪಿಕೊಂಡಿಲ್ಲ. ಈ ಆಡಳಿತ ಯಂತ್ರದಲ್ಲಿ ಏನಾದರೂ ಮೂಲಭೂತ ಬದಲಾವಣೆ ತರಲಿಕ್ಕೆ ಸಾಧ್ಯವಿದೆಯೇ? ಎಂದು ಇವತ್ತು ಈ ರಾಜ್ಯದ ಮುಖ್ಯಮಂತ್ರಿಯಾಗಿ ಅವರು ಸ್ವಲ್ಪ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಆದರೆ ಮೊದಲನೆಯದಾಗಿ ಇವತ್ತು ನಮ್ಮ ಆಡಳಿತ ಯಂತ್ರದಲ್ಲಿ ಇರತಕ್ಕಂಥ ದೋಷ ಏನೆಂದರೆ, lack of commitment towards the society. The whole administration, ninty percent ಶೇಕಡ 10 ರಷ್ಟು ಒಳ್ಳೆಯವರಿದ್ದಾರೆ. ಒಳ್ಳೆಯವರು ಇಲ್ಲವೇ ಇಲ್ಲ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. 90% of the bureaucracy today have no commitment at all towards the society and the common man. ಅವರು ಹಲವಾರು ಸಂದರ್ಭಗಳಲ್ಲಿ ಮರೆತು ಹೋಗಿ ಬಿಟ್ಟಿರುತ್ತಾರೆ, ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೆ, We should have a basic commitment towards the common man and a basic commitment towards the society ಎನ್ನತಕ್ಕಂಥದ್ದನ್ನು ಅವರು ಮರೆತ್ತಿದ್ದಾರೆ. ಇವತ್ತು ಪರಿಸ್ಥಿತಿ ಹೇಗಾಗಿದೆ ಎಂದರೆ, ಅಧಿಕಾರಶಾಹಿ ವರ್ಗದಿಂದಾಗಿ ಇಡೀ ಆಡಳಿತ ಯಂತ್ರ ಜಿಡ್ಡುಗಟ್ಟಿ ಕುಳಿತಿದೆ. ಅದು ಎಷ್ಟರಮಟ್ಟಿಗೆ ಜಿಡ್ಡುಗಟ್ಟಿದೆ ಎಂದರೆ, ಹಲವಾರು ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ಇದು ಅವರ ಅನುಭವಕ್ಕೂ ಕೂಡ ಬಂದಿದೆ, ಅವರು ಏನಾದರೂ ಒಂದು ಆರ್ಡರ್ ಮಾಡಿದರೆ ಅದನ್ನು ಜಾರಿ ಮಾಡಲಿಕ್ಕೆ ಕನಿಷ್ಟವೆಂದರೂ 2-3 ತಿಂಗಳು ತೆಗೆದುಕೊಳುತ್ತಾರೆ. ಒಬ್ಬ ಮಂತ್ರಿ ಒಬ್ಬ ಅಧಿಕಾರಿಗೆ ಇಂತಹ ಕ್ರಮ ತೆಗೆದುಕೊಳ್ಳಬೇಕು, ಈ ಕೆಲಸ ಮಾಡಬೇಕೆಂದು ಒಂದು ಪತ್ರ ಬರೆದರೆ, 2-3 ತಿಂಗಳು ಆ ಪತ್ರಕ್ಕೆ ಬೆಲೆಯೇ ಇರುವುದಿಲ್ಲ. ಅಷ್ಟರಮಟ್ಟಿಗೆ ಆಡಳಿತ ಯಂತ್ರ ಜಿಡ್ಡುಗಟ್ಟಿದೆ. ಇನ್ನು ಸಾಮಾನ್ಯ ಮನುಷ್ಯನೊಬ್ಬನ ಪರಿಸ್ಥಿತಿ ಏನಾಗಬಹುದು? ನಾನು

ಶಾಸಕನಾಗಿ ನನ್ನ ಅನುಭವವನ್ನು ಹೇಳುತ್ತೇನೆ, ಇವತ್ತು ಕಛೇರಿಗಳಲ್ಲಿ ಏನಾದರೂ ಒಂದು ಕಾರ್ಯಕ್ರಮವನ್ನು ಜಾರಿಗೊಳಿಸಬೇಕಾದರೆ ಕಿಟಕಿ, ಬಾಗಿಲು, ಕಂಬ ಎಲ್ಲಾ ಸುತ್ತಬೇಕಾಗುತ್ತದೆ. ಫೋನ್ ಮಾಡಿದರೆ ಮೀಟಿಂಗ್‌ಗೆ ಹೋಗಿದ್ದಾರೆ ಎನ್ನುತ್ತಾರೆ. ಯಾವ ಮೀಟಿಂಗ್‌ಗೆ ಹೋಗಿರುತ್ತಾರೋ ಗೊತ್ತಿಲ್ಲ. ಯಾವಾಗ ಫೋನ್ ಮಾಡಿದರೂ ಮೀಟಿಂಗ್‌ನಲ್ಲಿದ್ದಾರೆ, ಆ್ಯಂಟಿ ಛೇಂಬರ್‌ನಲ್ಲಿದ್ದಾರೆ, ಊಟ ಮಾಡುತ್ತಿದ್ದಾರೆ, ಊಟಕ್ಕೆ ಹೋಗಿದ್ದಾರೆ ಎಂಬ ಉತ್ತರಗಳೇ ಶಾಸಕರಿಗೆ ಸಿಗುತ್ತವೆ. ಮಂತ್ರಿಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವೇನೂ ಇರಲಿಕ್ಕೆ ಸಾಧ್ಯವಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅವರಿಗೂ ಇದೇ ರೀತಿ ಪರಿಸ್ಥಿತಿ ಬಂದಿರಬಹುದು. ಇದರ ಜೊತೆಗೆ ಆಡಳಿತದಲ್ಲಿ ಇನ್-ಸಬಾರ್ಡಿನೇಷನ್ ಆಗಿದೆ. ಇನ್-ಸಾಬಾಡಿನೇಷನ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹೇಗಾಗಿದೆ ಎಂದರೆ, ಒಬ್ಬ ಅಧಿಕಾರಿ, ಆ ಅಧಿಕಾರಿ ಕೈಕೆಳಗೆ ಇರತಕ್ಕಂಥ ಇನ್ನೊಬ್ಬ ಅಧಿಕಾರಿ, ಆತನ ಕೈ ಕೆಳಗಿರತಕ್ಕಂಥ ಇನ್ನೊಬ್ಬ ಅಧಿಕಾರಿ ಒಬ್ಬರಿಗೊಬ್ಬರು ಸಬಾರ್ಡಿನೇಷನ್ ಇಲ್ಲವೇ ಇಲ್ಲ. ಹೇಗೆ ನೀವು ಇವರನ್ನು ಅಡ್ಮಿನಿಸ್ಟ್ರೇಷನ್‌ನಲ್ಲಿ ಇನ್‌ವಾಲ್ವ್ ಮಾಡುತ್ತೀರಿ? ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಮಾನ್ಯ ಕಂದಾಯ ಮಂತ್ರಿಗಳು ಇಲ್ಲೇ ಕುಳಿತಿದ್ದಾರೆ. ಇವತ್ತು ಕಂದಾಯ ಇಲಾಖೆಯಲ್ಲಿ ಎಂತಹ ಪರಿಸ್ಥಿತಿ ಇದೆ ಎಂದರೆ, ಒಬ್ಬ ವಿಲೇಜ್ ಅಕೌಂಟೆಂಟ್ ಏನಾದರೂ ತಪ್ಪು ಮಾಡಿದರೆ, ಅವನು ಕೆಲಸ ಮಾಡಲಿಲ್ಲ ಎಂದು ಹೇಳಿದರೆ, ಅವನನ್ನು ಕನಿಷ್ಟ ಸಸ್ಪೆಂಡ್ ಮಾಡುವ ಅಧಿಕಾರವೂ ಕೂಡ ಇವತ್ತು ತಹಸಿಲ್ದಾರ್‌ಗೆ ಇಲ್ಲ. ಅವನಿಗೆ ಸ್ಯಾಲರಿ ನಿಲ್ಲಿಸತಕ್ಕಂಥ ಅಧಿಕಾರ ಎರಡು ತಿಂಗಳಿಗೆ ಮಾತ್ರ ಇದೆ. ಅದರ ಮೇಲೆ ತಹಸಿಲ್ದಾರರಿಗೆ ಏನೂ ಅಧಿಕಾರ ಇಲ್ಲ. ಇವತ್ತು ಹಲವಾರು ರೆವಿನ್ಯೂ ಸೆಕ್ರೆಟರಿಗಳು ನೂರರಲ್ಲಿ ತೊಂಬತ್ತರಷ್ಟು ಭಾಗ ಯಾವ ಹಳ್ಳಿಯಲ್ಲೂ ಕೂಡ ಇದ್ದು ಕೆಲಸ ಮಾಡುವುದಿಲ್ಲ, ಯಾವ ರೈತರ ಕೈಗೂ ಅವರು ಸಿಗುವುದಿಲ್ಲ. ನನ್ನ ಜಮೀನಿನ ಪಹಣಿಯನ್ನು ಸುರೇಶ್ ಕುಮಾರ್‌ರವರಿಗೆ ಬರೆಯುತ್ತಾರೆ, ಸುರೇಶ್ ಕುಮಾರ್‌ರವರ ಜಮೀನನ್ನು ವಾಟಾಳ್ ನಾಗರಾಜ್‌ರವರಿಗೆ ಬರೆಯುತ್ತಾರೆ, ಸಾಲ ತೆಗೆದುಕೊಳ್ಳುವುದಕ್ಕಾಗಿ ಬ್ಯಾಂಕ್‌ಗಳಿಗೆ ಫೋರ್ಜರಿ ಮಾಡಿದ ಪಹಣಿ ಕಾಪಿಗಳನ್ನು ಕೊಡುತ್ತಿದ್ದಾರೆ. ಅಂತಹವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಇವತ್ತು ತಹಸಿಲ್ದಾರ್‌ಗೆ ಅಧಿಕಾರಿ ಇಲ್ಲ. ರೆವಿನ್ಯೂ ಸೆಕ್ರೆಟರಿ ಒಬ್ಬ ತಪ್ಪು ಮಾಡಿದಂತಹ ಸಂದರ್ಭದಲ್ಲಿ, ಅವನ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಕ್ಕೆ ತಹಶಿಲ್ದಾರ್ ಒಬ್ಬರಿಗೆ ಅಧಿಕಾರ ಇಲ್ಲವೆಂದು ಹೇಳಿದರೆ, ಆ ತಹಶಿಲ್ದಾರ್ ಹೇಗೆ ಆ ರೆವಿನ್ಯೂ ಸೆಕ್ರೆಟರಿ ಕೈಯಲ್ಲಿ ಕೆಲಸ ಮಾಡಿಸುತ್ತಾನೆ? ಇದನ್ನೆಲ್ಲಾ ನಾವು ಆಲೋಚನೆ ಮಾಡಬೇಕು. ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ತಹಶೀಲ್ದಾರ್‌ಗೆ ಅಧಿಕಾರ ಇಲ್ಲ. ವಿಲೇಜ್ ಅಕೌಂಟೆಂಟ್ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಒಬ್ಬ ತಹಶಿಲ್ದಾರ್‌ಗೆ ಅಧಿಕಾರ ಇಲ್ಲ, ತಹಶಿಲ್ದಾರ್ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಅಸಿಸ್ಟೆಂಟ್ ಕಮೀಷನರ್‌ಗೆ ಇಲ್ಲ ಅಸಿಸ್ಟೆಂಟ್ ಕಮೀಷನರ್ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಡಿ.ಸಿ.ಗೆ ಅಧಿಕಾರ ಇಲ್ಲ. ಎಲ್ಲದಕ್ಕೂ ವಿಧಾನ ಸೌಧದ 3ನೇ ಮಹಡಿಗೇ ಬರಬೇಕು. ಈವಾಗಿನ ಟ್ರಾನ್ಸ್‌ಫರ್ ಸಮಯದಲ್ಲಿ ಪರಿಸ್ಥಿತಿ ಹೇಗಿದೆ ಎಂಬುದು ನಿಮಗೆ ಗೊತ್ತಿದೆ. ನಮಗೂ ಜೀವ ತಿನ್ನುತ್ತಿದ್ದಾರೆ. ವಿಲೇಜ್ ಅಕೌಂಟೆಂಟ್‌ನೊಬ್ಬ ನಮಗೆ ಟ್ರಾನ್ಸ್‌ಫರ್‌ಗಾಗಿ ಮಂತ್ರಿಗಳ ಲೆಟರ್ ಬೇಕು ಎಂದು

ಇಲ್ಲಿಗೆ ಬರುತ್ತಾನೆ. ಮಿನಿಷ್ಟು ಒಬ್ಬ ವಿಲೇಜ್ ಅಕೌಂಟೆಂಟ್ ಅನ್ನು ಟ್ರಾನ್ಸ್‌ಫರ್ ಮಾಡುವುದಾದರೆ, ತಹಶಿಲ್ದಾರ್‌ಗೆ ಆತ ಹೇಗೆ ಕೇರ್ ಮಾಡುತ್ತಾನೆ? ರೆವಿನ್ಯೂ ಇನ್ಸ್‌ಪೆಕ್ಟರ್‌ನನ್ನು ರೆವಿನ್ಯೂ ಮಿನಿಷ್ಟು ಟ್ರಾನ್ಸ್‌ಫರ್ ಮಾಡುವುದಾದರೆ, ಅಥವಾ ಬೇರೆ ಯಾರಾದರೂ ಅಧಿಕಾರಿಯನ್ನು ಮಿನಿಷ್ಟೇ ಟ್ರಾನ್ಸಫರ್ ಮಾಡುವುದಾದರೆ, ಸಬಾರ್ಡಿನೇಷನ್ ಪ್ರಶ್ನೆ ಎಲ್ಲಿ ಬರುತ್ತದೆ? ನೀವು ಆ ಅಧಿಕಾರಿಗಳಿಂದ ಹೇಗೆ ಕೆಲಸವನ್ನು ತೆಗೆದುಕೊಳ್ಳುತ್ತೀರಿ? ಅದು ನಿಮಗೆ ಹೇಗೆ ಸಾಧ್ಯವಾಗುತ್ತದೆ? ಅನ್ನುವುದನ್ನು ಇವತ್ತು ನೀವು ಆಲೋಚನೆ ಮಾಡಬೇಕು. ಕೆಲವೇ ರೆವಿನ್ಯೂ ಇಲಾಖೆಯಲ್ಲಿ ಮಾತ್ರ ಈ ರೀತಿ ಆಗುತ್ತಿದೆ ಎಂದಲ್ಲ. ಯಾವುದೇ ಒಂದು ಇಲಾಖೆಯಲ್ಲಿ ಇವತ್ತು ಇನ್‌ಸಾಬರ್ಡಿನೇಷನ್ ಎನ್ನುವುದೇ ಮುಖ್ಯ ಸಮಸ್ಯೆಯಾಗಿದೆ. ಯಾರಿಗೆ ಯಾರು ಕೇರ್ ಮಾಡುವುದಿಲ್ಲ. ತಹಶಿಲ್ದಾರ್ ಒಬ್ಬರು ಏಕೆ ನೀನು ಅಟೆಂಡೆನ್ಸ್ ರಿಜಿಸ್ಟರ್ ಸೈನ್ ಮಾಡಲಿಲ್ಲ ಎಂದು ಒಬ್ಬ ವಿಲೇಜ್ ಅಕೌಂಟೆಂಟ್ ಅನ್ನು ಕೇಳಿದರೆ ನೀನ್ಯಾವನು ಕೇಳುವುದಕ್ಕೆ? ಎಂದು ಆತ ಹೇಳುತ್ತಾನೆ. ಯಾವ ಹಳ್ಳಿಯಲ್ಲಿ, ಯಾವ ಪಂಚಾಯಿತಿ ವ್ಯಾಪ್ತಿಯಲ್ಲಿ ಆತ ಇರಬೇಕೋ ಅಲ್ಲಿ ಆತನ ಅಡ್ರಸ್ಸೇ ಇರುವುದಿಲ್ಲ. ಅವನನ್ನು ಏನು ಮಾಡಲು ಸಾಧ್ಯವಾಗುತ್ತಿಲ್ಲ. ಅದೇ ರೀತಿ ಕೆಳಗಡೆಯಿಂದ ಮೇಲ್ಗಡೆಯವರೆಗೂ ಅಡ್ಮಿನಿಸ್ಟ್ರೇಷನ್ ಇನ್‌ಸಾಬರ್ಡಿನೇಷನ್ ಅನ್ನುವುದು ತುಂಬಿ ತುಳುಕಾಡುತ್ತಿದೆ. ಹಾಗಾದರೆ ಹೇಗೆ ನೀವು ಆಡಳಿತ ಯಂತ್ರವನ್ನು, ಈ ಜಿಡ್ಡುಗಟ್ಟಿರತಕ್ಕಂಥ ವ್ಯವಸ್ಥೆಯನ್ನು ಚುರುಕುಗೊಳಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಇವತ್ತು ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹೆಚ್ಚಾಗಿದೆ. ನಮ್ಮ ಇಡೀ ರಾಜ್ಯದ ಸಂಪತ್ತಿನಲ್ಲಿ ಅತೀ ಹೆಚ್ಚಿನ ಭಾಗ ಇವತ್ತು ಸಂಬಳ ಸಾರಿಗೆ, ಸಿಬ್ಬಂದಿ ವ್ಯವಸ್ಥೆಗೆ ಹೋಗುತ್ತಿದೆ. ಇದು ನಮ್ಮೆಲ್ಲರ ಕಷ್ಟ. ಏಕೆ ಅಭಿವೃದ್ಧಿ ಕಾರ್ಯಗಳಿಗೆ ಹಣ ದೊರಕುತ್ತಿಲ್ಲ ಎಂದರೆ, ಕರ್ನಾಟಕ ರಾಜ್ಯದ ಒಟ್ಟು ಆದಾಯ ಎಷ್ಟಿದೆಯೋ ಅದರಲ್ಲಿ ಶೇಕಡ 90 ಭಾಗ, ಹೆಚ್ಚು ಕಡಿಮೆ, ಬರೀ ಸಂಬಳ ಸಾರಿಗೆಗಳಿಗೇ ಹೋಗುತ್ತಿದೆ. ಅಂದರೆ ಇವರೆಲ್ಲಾ ಇರತಕ್ಕಂಥದ್ದು ಜನಸಂಖ್ಯೆಯ ಶೇಕಡ 1.5ರಷ್ಟು ಮಾತ್ರ. ಮಾನ್ಯ ಪ್ರಕಾಶ್‌ರವರು ಶೇಕಡ 90 ಭಾಗವಲ್ಲ, ಶೇಕಡ 60 ರಷ್ಟು ಭಾಗ ಎಂದು ಹೇಳುತ್ತಿದ್ದಾರೆ. ಆಯಿತು, ಅವರ ಲೆಕ್ಕದ ಪ್ರಕಾರವೇ ಶೇಕಡ 60 ಭಾಗ ಎಂದು ಇಟ್ಟುಕೊಳ್ಳೋಣ.

ಡಾ: ಎಂ.ಪಿ. ಕರ್ಕಿ : ಕಳೆದ ವರ್ಷ ಶೇಡಕ 66 ರಷ್ಟು ಸಂಬಳ ಸಾರಿಗೆಗಳಿಗೆ ಹೋಗುತ್ತಿತ್ತು. ಈ ವರ್ಷ ಸರ್ಕಾರದವರು ಸ್ಯಾಲರಿ ರಿವೈಸ್ ಮಾಡಿದ್ದಾರೆ. ಇದರಿಂದಾಗಿ ಶೇಕಡಾವಾರು ಪ್ರಮಾಣ 70-72ಕ್ಕೆ ಮುಟ್ಟಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಜನಸಂಖ್ಯೆಯ ಶೇಕಡ 1.5-2 ರವರೆಗೆ ಇರುವವರಿಗೆ ರಾಜ್ಯದ ಆದಾಯದ ಒಟ್ಟು ಶೇಕಡ 60 ರಷ್ಟು ಸಂಬಳ ಸಾರಿಗೆಗಳಿಗೆ ಹೋಗುತ್ತಿದೆ. ಇನ್ನುಳಿದ ಶೇಕಡ 40 ರಷ್ಟು ಆದಾಯ ಇತರ ಶೇಕಡ 98ರಷ್ಟು ಜನರಿಗೆ ಹೋಗಬೇಕಾಗಿದೆ. ಸರ್ಕಾರವೇ ಒಪ್ಪಿಕೊಂಡಿರುವ ಅಂಕಿ ಅಂಶ ಇದು. ಇದರ ಬಗ್ಗೆ ನೀವೊಬ್ಬರೇ ಆಲೋಚನೆ ಮಾಡಬೇಕಾಗಿಲ್ಲ, ನಾವೆಲ್ಲರೂ ಕೂಡ ಸೇರಿ ಇವತ್ತು ಆಲೋಚನೆ ಮಾಡಬೇಕಾಗಿದೆ. ಅದನ್ನು ಕಡಿಮೆ ಮಾಡಬೇಕು.

ಅನಾವಶ್ಯಕವಾದಂತಹ ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆಂಡಿಚರ್ಸ್ ಏನಿವೆ, ಅವುಗಳನ್ನು ಏಕೆ ನಾವಿವತ್ತು ಕಡಿಮೆ ಮಾಡಬಾರದು?

ಶ್ರೀ ಹೆಚ್. ಶಿವಪ್ಪ : ಮಾನ್ಯ ಸದಸ್ಯರು ಇದಕ್ಕೆ ಪರ್ಯಾಯವಾದ ವ್ಯವಸ್ಥೆ ಬಗ್ಗೆ ಕೂಡ ಸಲಹೆಗಳನ್ನು ನೀಡಬೇಕು. ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕಾದರೆ, How it should be reduced? ಎಂಬುದನ್ನು ಪ್ರಾಕ್ಟಿಕಲ್ಲಾಗಿ ತಿಳಿಸಿದರೆ ಮಾತ್ರ ಸಾಧ್ಯವಾಗುತ್ತದೆ. How to plug the leakages where are the leakages? To what extent leakages are there? What are the positive alternatives?

ಡಾ: ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಇದೇ ಸರ್ಕಾರ ಡಿವಿಷನಲ್ ಕಮಿಷನರ್ ಹುದ್ದೆ ರದ್ದು ಮಾಡುತ್ತೇವೆ ಎಂದು ಹೇಳಿತು. ಡಿವಿಷನಲ್ ಕಮೀಷನರ್ ಹೋದ್ರಾ? ಇಲ್ಲ. ಅದರ ಬದಲಿಗೆ ಬಿ.ಇ.ಓ., ಎಗ್ಸಿಕ್ಯೂಟೀವ್ ಆಫೀಸರ್ಸ್ ಹುದ್ದೆಗಳನ್ನು ಸೃಷ್ಟಿ ಮಾಡಿದ್ದಾರೆ. ಅವರಿಗೆ ಏನೂ ಕೆಲಸವೇ ಇಲ್ಲ. ಕೆಲಸವೇ ಇಲ್ಲದಂತಹ ಹುದ್ದೆಗಳನ್ನು ಸರ್ಕಾರ ಸೃಷ್ಟಿಸಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಹೇಳಿದರು. ಬಜೆಟ್ ಮಂಡಿಸತಕ್ಕಂಥ ಸಂದರ್ಭದಲ್ಲಿ ನಾನೂ ಕೂಡ ಹೇಳಿದ್ದೇನೆ. ಈಗ ಡಿವಿಷನಲ್ ಕಮೀಷನರ್, ಅಸಿಸ್ಟೆಂಟ್ ಕಮೀಷನರ್ ಪೋಸ್ಟ್ಸ್ ವಿಷಯ ಬಿಡಿ. ಈಗ ಸೆಕ್ರೆಟರಿಯೇಟ್‌ನಲ್ಲಿ ನೋಡಿ, ಅಲ್ಲಿ ಜಾಯಿಂಟ್ ಸೆಕ್ರೆಟರೀಸ್, ಜಾಯಿಂಟ್ ಡೈರೆಕ್ಟರ್ಸ್, ಡೆಪ್ಯುಟಿ ಸೆಕ್ರೆಟರೀಸ್ ಅಂಡರ್ ಸೆಕ್ರೆಟರೀಸ್ ಎಷ್ಟೆಷ್ಟು ಜನ ಇದ್ದಾರೆ ಎಂಬುದನ್ನು ನೋಡಿ. ಅಲ್ಲಿ ಎಷ್ಟೊಂದು ಜನಗಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಒಂದು ಕಛೇರಿಯಲ್ಲಿ ಎಷ್ಟು ಜನ ಹೆಚ್ಚು ಅಧಿಕಾರಿಗಳನ್ನು ನೀವು ಹಾಕುತೀರೋ ಅಷ್ಟು ಕೊಕ್ಕೆಗಳನ್ನು ಅವರು ಅಭಿವೃದ್ಧಿ ಕಾರ್ಯಗಳಿಗೆ ಹಾಕುತ್ತಾರೆ. ಇದು ನಮ್ಮೆಲ್ಲರ ಗಮನಕ್ಕೆ ಬಂದಿರತಕ್ಕ ವಿಷಯ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ಅದು ನಿಮ್ಮ ಅನುಭವಕ್ಕೂ ಬಂದಿದೆ. ಒಂದು ಆಫೀಸ್‌ಗೆ ಒಂದು ಫೈಲ್ ಹೋದರೆ, ಅದು ಮೊದಲಿಗೆ ಸಂಬಂಧಿಸಿದ ಕೇಸ್ ವರ್ಕರ್‌ನಿಂದ ಹಿಡಿದು, ಆಫೀಸ್ ಸೂಪರಿಂಟೆಂಡೆಂಟ್, ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಮತ್ತು ಜಾಯಿಂಟ್ ಸೆಕ್ರೆಟರಿಗಳನ್ನು ದಾಟಿ ಅದು ಕಡೆಗೆ ಸೆಕ್ರೆಟರಿ ಹತ್ತಿರ ಬರುತ್ತದೆ. ಒಂದು ಫೈಲ್ ಇಷ್ಟು ಹಂತಗಳನ್ನು ದಾಟಿ ಬರಬೇಕಾದರೆ ಕನಿಷ್ಟ ಮೂರು ತಿಂಗಳು ಬೇಕಾಗುತ್ತದೆ. ಆ ಮೂರು ತಿಂಗಳಿನಲ್ಲಿ ಏನು ಆಗುತ್ತದೆ ಗೊತ್ತೆ? ಆ ಕಡತಕ್ಕೆ ಸಂಬಂಧಪಟ್ಟವರು ಪೀವನ್‌ನಿಂದ ಬೆನ್ನು ಹತ್ತಿದರೆ ಸೆಕ್ರೆಟರಿ ಹತ್ತಿರ ಫೈಲ್ ಹೋಗುತ್ತದೆ. ಮತ್ತೆ ಅದೇ ರೀತಿಯಲ್ಲಿ ಅಷ್ಟೇ ಹಂತಗಳಲ್ಲಿ ಅದು ವಾಪಾಸ್ ಬರಬೇಕು. ಅದು ವಾಪಾಸ್ ಬರಬೇಕಾದರೆ ಅದನ್ನು ನಾನು ಹೇಳಿದರೆ ನಿಮಗೆ ಬೇಸರವಾಗಬಹುದು. ಸರ್ಕಾರದ ಕ್ಯಾಬಿನೆಟ್ ಸಚಿವರೊಬ್ಬರು ರೈಟಿಂಗ್‌ನಲ್ಲಿ ಆರ್ಡರ್ ಮಾಡಿದ್ದನ್ನು ಎಂಟು ತಿಂಗಳಾದರೂ

ಅಧಿಕಾರಿಗಳು ಇಂಪ್ಲಿಮೆಂಟ್ ಮಾಡಿಲ್ಲ. ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ, ಹೆಸರೇಳಿದರೆ ಅಭಾಸವಾಗುತ್ತದೆ. ಅದರಿಂದ ಕೆಲವರಿಗೆ ಎಂಬ್ರಾಸಿಂಗ್ ಆಗುತ್ತದೆ. ಇದು ಇರುವ ಪರಿಸ್ಥಿತಿ. ಈ ಇಲಾಖೆಗಳಲ್ಲಿನ ಅಧಿಕಾರಿಗಳಿಗೆ ಸರ್ಕಾರ ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಮೊನ್ನೆ ನಮ್ಮ ಜಿಲ್ಲೆಯಲ್ಲಿ ನಡೆದ ಕೆ.ಡಿ.ಪಿ. ಮೀಟಿಂಗ್ ಸಮಯದಲ್ಲಿ ಅಲ್ಲಿದ್ದ ಮಾನ್ಯ ಬೈರೇಗೌಡರಿಗೆ ನಾನು ಈ ಮಾತು ಹೇಳಿದೆ. ಅಧಿಕಾರಿಗಳಿಗೆ ಸರ್ಕಾರ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಟ್ಟಿದೆ. ಮೀಟಿಂಗ್‌ಗಾಗಿ ಅಗತ್ಯವಾಗಿರತಕ್ಕಂಥ ಕನಿಷ್ಟ ಮಾಹಿತಿಯನ್ನೂ ಕೂಡ ಅವತ್ತು ಅಧಿಕಾರಿಗಳು ನಮಗೆ ಒದಗಿಸಲಿಲ್ಲ. ಮಾನ್ಯ ಬೈರೇಗೌಡರೂ ಸಹಾ ಅಲ್ಲಿದ್ದರು, ಬೇಕಾದರೆ ಅವರನ್ನೇ ಕೇಳಿ ಮಾನ್ಯ ಬೈರೇಗೌಡರು ಒಬ್ಬ ಅಧಿಕಾರಿಯನ್ನು ನಿಲ್ಲಿಸಿ ಬಿಟ್ಟಿದ್ದರು, ಅದು ಪತ್ರಿಕೆಯಲ್ಲೂ ಕೂಡ ಬಂದಿತ್ತು. ಅವತ್ತು ಮೀಟಿಂಗ್‌ಗೆ ಬೇಕಾಗಿದ್ದಂತಹ ಕನಿಷ್ಟ ಮಾಹಿತಿಯನ್ನೂ ಸಹಾ ಒದಗಿಸಲಿಕ್ಕೆ ಇಡೀ ಜಿಲ್ಲೆಯಲ್ಲಿರತಕ್ಕ ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಅಧಿಕಾರಿಗಳಿಗೆ ಕಾರು, ಜೀಪು ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನೂ ಒದಗಿಸಲಾಗಿದೆ. ಅಧಿಕಾರಿಗಳು ಹೆಜ್ಜೆ ಇಟ್ಟರೆ ಟಿ.ಎ. ಡ್ರಾ ಮಾಡುತ್ತಾರೆ, ಡಿ.ಎ. ಡ್ರಾ ಮಾಡುತ್ತಾರೆ, ಎಲ್ಲಾ ಮೀಟಿಂಗ್‌ಗಳನ್ನೂ ಮಾಡುತ್ತಾರೆ. ಇಷ್ಟೆಲ್ಲಾ ಸವಲತ್ತುಗಳಿದ್ದರೂ ಕೂಡ ಕನಿಷ್ಟ ಮಾಹಿತಿಯನ್ನು ಒದಗಿಸಲಿಕ್ಕೆ ಅವರಿಗೆ ಸಾಧ್ಯವಿಲ್ಲ. ಕ್ಲಾಸ್-1 ಮತ್ತು 2 ಆಫೀಸರ್ಸ್, ಐ.ಎ.ಎಸ್. ಅಧಿಕಾರಿಗಳಿಗೆ ಇವತ್ತೇನು ಸವಲತ್ತುಗಳು ಕಡಿಮೆ ಇವೆ? ಅವರಿಗೆ ಇವತ್ತು ಏನೇಲ್ಲಾ ಸವಲತ್ತುಗಳಿವೆ. 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಏನಾದರೂ ನೀವು ಎಂಪ್ಲಿಮೆಂಟ್ ಮಾಡಲಿಕ್ಕೆ ಒಪ್ಪಿ ಬಿಟ್ಟರೆ, ಒಬ್ಬ ಐ.ಎ.ಎಸ್. ಆಫೀಸರ್‌ಗೆ ತಿಂಗಳಿಗೆ 60 ಸಾವಿರ ರೂಪಾಯಿ ಸಂಬಳ ಆಗುತ್ತದೆ.

3-40 ಪಿಎಂ

ಕ್ಲಾಸ್ ಒನ್ ಆಫೀಸರ್ಸ್ ಮತ್ತು ಕ್ಲಾಸ್ ಟು ಆಫೀಸರ್ಸ್‌ಗೆ ಏನು ಫೆಸಿಲಿಟೀಸ್ ಕಡಿಮೆ ಇದೆ, ಐದನೇ ವೇತನ ಆಯೋಗವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನೀವು ಒಪ್ಪಿದರೆ ಒಬ್ಬ ಐ.ಎ.ಎಸ್. ಆಫೀಸರ್‌ಗೆ 60,000 ರೂಪಾಯಿ ಪ್ರತಿ ತಿಂಗಳಿಗೆ ಬರುತ್ತದೆ ಹೀಗಾದರೆ ಸರ್ಕಾರದ ಗತಿ ಏನಾಗಬೇಕು? ಇಷ್ಟೆಲ್ಲಾ ಫೆಸಿಲಿಟೀಸ್ ಕೊಟ್ಟು ಅವರಿಂದ ದೇಶಕ್ಕೆ ಆಗುತ್ತಿರತಕ್ಕಂತಹ ಮಹಾನ್ ಸೇವೆ ಏನು? ಅದಾದರೂ ನಾವು ತಿಳಿದುಕೊಳ್ಳಬೇಕು. ಇಷ್ಟೆಲ್ಲಾ ಸಾವಿರಾರು ಕೋಟಿ ರೂಪಾಯಿ ಅವರಿಗೆ ಖರ್ಚು ಮಾಡಿ ಏನು ಪ್ರಯೋಜನವಾಗುತ್ತಿದೆ, ಎಲ್ಲಾ ಫೈಲ್‌ಗಳಿಗೆ ಒಂದೊಂದು ಕೊಕ್ಕೆ ಹಾಕಿ ಕಳುಹಿಸುವುದು ಎಲ್ಲಾ ಫೈಲುಗಳಿಗೂ ಒಂದೊಂದು ರಿಮಾರ್ಕ್. ಹಾಗಾದರೆ ಇವರನ್ನು ನಾವು ಏಕೆ ಇಟ್ಟುಕೊಳ್ಳಬೇಕು? ಇವರನ್ನು ಇಟ್ಟುಕೊಂಡಿರುವುದು ಅಭಿವೃದ್ಧಿ ಕಾರ್ಯಗಳಿಗೆ ಕೊಕ್ಕೆ ಹಾಕುವುದಕ್ಕೋ ಅಥವಾ ಅಭಿವೃದ್ಧಿ ಕಾರ್ಯಗಳನ್ನು ಜಾರಿ ಮಾಡುವುದಕ್ಕೋ 250 ಜನ, 280 ಜನ ಐಎಎಸ್ ಆಫೀಸರ್ಸ್ ಇದ್ದಾರೆ. ನನಗೆ ಯಾರ ಮೇಲೆ ವೈಯಕ್ತಿಕ ದ್ವೇಷ ಇಲ್ಲ, ಯಾರ ಹತ್ತಿರ ನನಗೆ ಅವಶ್ಯಕತೆನೂ ಇಲ್ಲ. ನನಗೆ ಪ್ರೀತಿಯೂ ಇಲ್ಲ, ದ್ವೇಷನೂ ಇಲ್ಲ. ನಾವು ವಾಸ್ತವಿಕವಾಗಿ ಓಪನ್ ಮೈಂಡ್‌ನಲ್ಲಿ ನೋಡೋಣ. ನಮಗೆ ಎಷ್ಟು ಅವಶ್ಯಕತೆ ಇದೆ, ಮೊನ್ನೆ ಗ್ರಾಮೀಣ

ಅಭಿವೃದ್ಧಿ ಇಲಾಖೆಯ ಮೇಲೆ ಚರ್ಚೆ ಮಾಡುವಾಗ ಪ್ರಕಾಶ್‌ರವರಿಗೆ ಹೇಳಿದೆ, ಕನಿಷ್ಠ ಜಿಲ್ಲಾ ಪಂಚಾಯಿತಿಗಳಿಗಾದರೂ ಐಎಎಸ್ ಅಧಿಕಾರಿಗಳನ್ನು ಹಾಕಬೇಡಿ ನಿಮ್ಮ ಯೂನಿವರ್ಸಿಟಿಯಲ್ಲಿ ಎಮ್‌ಎಸ್‌ಡಬ್ಲ್ಯು ಎಂದು ಒಂದು ಕೋರ್ಸ್ ಇದೆ, ರೂರಲ್ ಡೆವಲಪ್‌ಮೆಂಟ್‌ಗೆ ಒಂದು ಪೋಸ್ಟ್ ಗ್ರಾಜ್ಯುಯೇಷನ್ ಕೋರ್ಸ್ ಮಾಡಿದ್ದೀರಿ. ಅವರನ್ನು ತೆಗೆದು ಐಎಎಸ್‌ಗಳಿಗೆ ಕೊಟ್ಟ ಹಾಗೆ ಟ್ರೈನಿಂಗ್ ಕೊಟ್ಟು ಅವರನ್ನು ಜಿಲ್ಲಾ ಪಂಚಾಯಿತಿಗಳಿಗೆ ಹಾಕಿ. ರೂರಲ್ ಡೆವಲಪ್‌ಮೆಂಟ್‌ನಲ್ಲಿ ಪೋಸ್ಟ್ ಗ್ರಾಜ್ಯುಯೇಷನ್ ಪಡೆದವರಿಗೆ ಕನಿಷ್ಠ ನಮ್ಮ ಹಳ್ಳಿ, ನಮ್ಮ ರಾಜ್ಯ, ನಮ್ಮ ದೇಶ ಗೊತ್ತಿದೆ. ಹೆಸರು ಹೇಳಿದರೆ ಬೇಸರವಾಗುತ್ತದೆ, ಒಬ್ಬ ಡಿ.ಎಸ್. ಒಬ್ಬರು ಬಂದಿದ್ದಾರೆ ಬಹಳ ಒಳ್ಳೆಯ ಮನುಷ್ಯ, ನಮ್ಮ ಭಾಷೆ ಗೊತ್ತಿಲ್ಲ, ನಮ್ಮ ಹಳ್ಳಿ ಗೊತ್ತಿಲ್ಲ, ನಮ್ಮ ರಾಜ್ಯ ಗೊತ್ತಿಲ್ಲ, ನಮ್ಮ ಹಳ್ಳಿ ಜನ ಗೊತ್ತಿಲ್ಲ, ಅವರಿಗೆ ಏನು ಮಾಡುವುದಕ್ಕಾಗುತ್ತದೆ, ಐಎಎಸ್ ಕೇಡರ್ ಉತ್ತರ ಪ್ರದೇಶ, ಬಿಹಾರದವರಿಗೆ ಕರ್ನಾಟಕ ರಾಜ್ಯದಲ್ಲಿ ಹಾಕಿದರೆ, ಕರ್ನಾಟಕ ರಾಜ್ಯದವರೇ ಐಎಎಸ್ ಆಫೀಸರ್ ಆಗಬಹುದು. ಅದು ಆಗುವುದಿಲ್ಲ. ಕೇಂದ್ರ ಸರ್ಕಾರದ ಮೇಲೆ ಹಾಕುತ್ತೀರಿ. ಕೇಂದ್ರ ಸರ್ಕಾರ ಡಿವಿಷನ್ ಮಾಡುತ್ತದೆ ಎಂದು ಹೇಳುತ್ತೀರಿ ನನಗೆ ಗೊತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಏನಾದರೂ ವ್ಯವಸ್ಥೆ ಬೇಕು. ನಿಮಗೆ ಅವರಿಗೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ, ಐಎಎಸ್ ಅಧಿಕಾರಿಗಳನ್ನು ಕಡಿಮೆ ಮಾಡಿ. ನಮ್ಮ ರಾಜ್ಯಕ್ಕೆ 252 ಜನ ಐಎಎಸ್ ಅಧಿಕಾರಿಗಳ ಅವಶ್ಯಕತೆ ಇಲ್ಲ. 60 ಪರ್ಸೆಂಟ್ ಬೊಕ್ಕಸವನ್ನು ಅಡ್ಮಿನಿಸ್ಟ್ರೇಷನ್ ಸಂಬಳ ಸಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ನಾವು ಈ ಖರ್ಚು ಕಡಿಮೆ ಮಾಡದೆ ಹೋದರೆ ನೀವು ಏನು ಮಾಡಿದರೂ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ ಹಾಗಾಗಿ ನಾವು ಇವತ್ತು ಅದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು. ಈ ಕರ್ನಾಟಕ ರಾಜ್ಯದ ಆದಾಯದಲ್ಲಿ ಸುಮಾರು 66 ಪರ್ಸೆಂಟನ್ನು ನೀವು ಈ ವಿಭಾಗಕ್ಕೆ ಖರ್ಚು ಮಾಡುವುದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಅದು ಸಾಧ್ಯವಿಲ್ಲ. ನಮ್ಮ ರಾಜ್ಯಕ್ಕೆ ಆ ಶಕ್ತಿ ಇಲ್ಲ. ನಮ್ಮ ರಾಜ್ಯಕ್ಕೆ ಅದನ್ನು ಖರ್ಚು ಮಾಡುವ ಶಕ್ತಿ ಇಲ್ಲ. ಅದನ್ನು ಯಾವ ರೀತಿಯಾಗಿ ಕಡಿಮೆ ಮಾಡುತ್ತೀರಿ ಮಾಡಿ. ಇನ್ನು ಲೋಕಸೇವಾ ಆಯೋಗ ಇದೆ. ನಾನು ದಯವಿಟ್ಟು ನಿಮ್ಮಲ್ಲಿ ಹಲವಾರು ಸಾರಿ ವಿನಂತಿ ಮಾಡುತ್ತೇನೆ, ವೈವಸಿಗೆ 200 ಮಾರ್ಕ್ಸ್ ದಯವಿಟ್ಟು ಕೊಡಬೇಡಿ. ಕಡಿಮೆ ಮಾಡಿ, 150 ರಿಂದ 100 ಮಾಡಿದ್ದಾರೆ. ರಿಟನ್ ಎಕ್ಸಾಮ್ ಏಕೆ ಇಡಬೇಕು, ಕ್ಲಾಸ್ ಓನ್‌ಗೆ ಎಷ್ಟು ವೈವಸಿಗಳು ಇದೆ, ಕ್ಲಾಸ್ ಟು ಗೆ ಎಷ್ಟು ಇದೆ, ನಾನು ಏಕೆ ಅವರಿಗೆ ಇದನ್ನು ಪ್ರಶ್ನೆ ಮಾಡುತ್ತಿದ್ದೇನೆಂದರೆ, ವ್ಯಾಪಕವಾದ ಭ್ರಷ್ಟಾಚಾರ ವೈವಸಿಯಿಂದ ನಡೆಯುತ್ತಿದೆ. ನೀವು 20 ಮಾರ್ಕ್ಸ್ ಮಾತ್ರ ಇಡಿ. 150 ಇಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಅವರು ಯಾರೂ ಆಬ್ಜೆಕ್ಟ್ ಮಾಡುತ್ತಿಲ್ಲ, ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ಬಹಳ ಉತ್ತಮವಾದ ಜನ ಎಂದರೆ ಅವರದೇ ಆದ ಒಂದು ಸ್ಪೆಷಾಲಿಟಿ ಇಟ್ಟುಕೊಂಡು ಸರ್ವೀಸ್‌ನಲ್ಲಿ ಬಂದಿರುತ್ತಾರೆ. ಸ್ಪೆಸಿಫಿಕ್ ಕೇಸಸ್ ಇದ್ದರೆ ಇಂತಹವರು ಹೀಗೀಗೆ ಮಾಡಿದ್ದಾರೆ ಅವರ ಆಸಕ್ತಿ ಹೀಗೆ ಇತ್ತು, ಹೀಗಾಗಿದೆ ಎಂದು ಹೇಳಬಹುದು. ಜನರಲ್ಲಾಗಿ ಹಾಗೆ ಹೇಳಿಬಿಟ್ಟರೆ ಒಳ್ಳೆಯವರೂ ಕೆಟ್ಟವರೂ ಎಲ್ಲಾ ಒಂದೇ ಆಗಿ ಬಿಡುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ .: ಅವರು ಹೇಳಿದ್ದರಲ್ಲಿ ಅರ್ಥ ಇದೆ. 200 ಮಾರ್ಕ್ ವೈಒಸಿಯಲ್ಲಿ ಇರುವುದು ಮೆರಿಟ್ ಮೇಲೆ ಬಂದಿಲ್ಲ.

ಅಧ್ಯಕ್ಷರು : ಅದಕ್ಕೆ ನಾನು ಇಂಟರ್‌ಫಿಯರ್ ಆಗಿಲ್ಲ. He made a sweeping remark over the entire KPSC. It is not fair. You are an Advocate. Tell me.

ಶ್ರೀಮತಿ ಪ್ರಮೀಳಾ ನೇಸರ್ಗಿ : ರಿಮಾರ್ಕ್ ಮಾಡುವುದಕ್ಕೆ ಕಾರಣವೇನೆಂದರೆ, ಈ ಪಾಲಿಸಿ ಸರಿ ಹೋದರೆ ಸರಿ ಹೋಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಒಂದು ಡಿಮ್ಯಾಂಡ್ ಮಾಡುತ್ತಿದ್ದೇನೆ. ಕರ್ನಾಟಕ ಸರ್ಕಾರದಲ್ಲಿ ಕೆಲಸ ಮಾಡುತ್ತಿರತಕ್ಕಂತಹ ಕ್ಲಾಸ್ ಒನ್ ಆಫೀಸರ್ ಮೇಲೆ ಇರತಕ್ಕಂತಹ ಎಲ್ಲಾ ಅಧಿಕಾರಿಗಳ ಆಸ್ತಿಯನ್ನು ಡಿಕ್ಲೇರ್ ಮಾಡಿ. ನಾನು ಫಾರಂನಲ್ಲಿ ಬರೆದು ಕೊಡುತ್ತೇನೆ. ನನಗೂ ಲೋಕಾಯುಕ್ತದಿಂದ ಒಂದು ಫಾರಂ ಕಳುಹಿಸುತ್ತಾರೆ, ನನಗೆ ಗೊತ್ತಿರಲಿಲ್ಲ, ಎಮ್‌ಎಲ್‌ಎ ಆದ ಮೇಲೆ ಫಾರಂಗೆ ಅರ್ಜಿ ಫಿಲ್‌ಅಫ್ ಮಾಡಿದೆ. ಏನು ಸಾರ್ ನಿಮ್ಮ ಮನೆಯಲ್ಲಿ ಟಿವಿ ಇಲ್ಲವಾ ಆಂದರು, ಇದು ನಂಬುವುದಕ್ಕೆ ಸಾಧ್ಯವಿಲ್ಲ. ಹಾಗಾದರೆ ಬಾ ನನ್ನ ಮನೆಯಲ್ಲಿ ನೋಡು, ಅದೇ ನಿಜವಾಗಿ ನೀನು ಮಾಡಬೇಕಾದ ಕೆಲಸ. ನಾನು ಒಂದು ಫಾರಂ ಫಿಲ್ ಅಪ್ ಮಾಡಿಕೊಟ್ಟರೆ ನನಗೆ ವಾಚ್ ಇಲ್ಲ, ಉಂಗುರ ಇಲ್ಲ, ನನಗೆ ಓಲೆ ಇಲ್ಲ ಎಂದು ಬರೆದುಬಿಟ್ಟರೆ ಆಯಿತಾ, ಫೈಲ್ ಇಟ್ಟುಕೊಂಡು ಇವರ ಆಸ್ತಿ ಇಷ್ಟೇ ಇದೆ ಎಂದು ಒಪ್ಪಿಬಿಟ್ಟು ಸುಮ್ಮನಾದರೆ ಯಾವ ಸೀಮೆ ತನಿಖೆ ಹೇಳಿ. ಈ ತನಿಖೆ ನಾನು ಕೇಳುತ್ತಿಲ್ಲ. ಸೆಲ್ಫ್ ಡಿಕ್ಲೇರೇಷನ್ ನಾನು ಮಾಡುತ್ತೇನೆ. ಅವರು ಒಂದು ಫಾರಂ ಕೊಡುತ್ತಾರೆ, ಅದರಲ್ಲಿ ಬರೆದುಕೊಟ್ಟರೆ ಅದೇ ಸೇಲ್ಫ್ ಡಿಕ್ಲೇರೇಷನ್. ಸರ್ಕಾರ ತನಿಖೆ ಮಾಡಲಿ, ಎಲ್ಲಾ ಐಎಎಸ್, ಕೆಎಎಸ್ ಕ್ಲಾಸ್ ಒನ್ ಅಧಿಕಾರಿಗಳ ಆಸ್ತಿ ಎಷ್ಟು ಇದೆ ಎಂದು ತನಿಖೆ ಮಾಡುವುದಕ್ಕೆ ಡಿಕ್ಲೇರ್ ಮಾಡಿಸಿ. ಇದೇ ರೀತಿಯಲ್ಲಿ ರಾಜಕಾರಣಿಗಳದು ಮಾಡಿ. ನನ್ನದು ತಕರಾರು ಇಲ್ಲ. ಅದಕ್ಕೆ ನಾನು ಅಲ್ಲಿಗೆ ಬಿಡುತ್ತೇನೆ. ನಾನು ಸಮಯ ಕೂಡ ಕೇಳಿದ್ದೇ, ಕೊಡಲಿಲ್ಲ. ಸಣ್ಣ ನೀರಾವರಿ ಬಗ್ಗೆ,

MR SPEAKER : Leader, he should commence his reply early. ಇನ್ನೊಬ್ಬ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿದೆ. ಪ್ರೆಸ್‌ನವರೂ ಕವರ್ ಮಾಡಬೇಕು. ಮುಫಸಿಲ್ ಎಡಿಷನ್ಸ್‌ಗೆಲ್ಲಾ ಹೋಗಬೇಕು. ಸಾಯಂಕಾಲ ಒಂದು ಫಂಕ್ಷನ್ ಕೂಡ ಇದೆ. ಸಾಯಂಕಾಲ ಮುಖ್ಯಮಂತ್ರಿಗಳೂ ನಾನು ಆ ಫಂಕ್ಷನ್‌ಗೆ ಹೋಗಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದರ ಜೊತೆಗೆ ಇನ್ನೊಂದು ನಾನು ಸರ್ಕಾರಕ್ಕೆ ಡಿಮಾಂಡ್ ಮಾಡುತ್ತೇನೆ, ಇವತ್ತು ನಮ್ಮ ರಾಜ್ಯದಲ್ಲಿ ಸ್ವಯಂ ಸೇವಾ ಸಂಘಟನೆಗಳ ಹಾವಳಿ ವಿಪರೀತವಾಗಿದೆ. ಸ್ವಯಂ ಸೇವಾ ಸಂಘಟನೆಗಳಿಂದ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಕರ್ನಾಟಕ ರಾಜ್ಯದಲ್ಲಿ ನನಗೆ ಗೊತ್ತಿರತಕ್ಕಂತಹ ಮಾಹಿತಿಯ ಪ್ರಕಾರ 3,670 ಸ್ವಯಂ ಸೇವಾ ಸಂಘ ಸಂಸ್ಥೆಗಳು ಇವೆ. ಅದರಲ್ಲಿ ಎರಡು ಮೂರು ವಿದೇಶದಿಂದ ಸಹಾಯಧನವನ್ನು ಪಡೆಯತಕ್ಕಂತಹ

ಸ್ವಯಂ ಸೇವಾ ಸಂಘ ಸಂಸ್ಥೆಗಳು, ಕೇಂದ್ರ ಸರ್ಕಾರದಿಂದ ಅನುದಾನವನ್ನು ಪಡೆಯತಕ್ಕಂತಹ ಸ್ವಯಂ ಸೇವಾ ಸಂಘ ಸಂಸ್ಥೆಗಳು ಇವೆ. ಕಪಾರ್ಡ್ ಮತ್ತು ಇನ್ನಿತರೆ ವಾಲಂಟರಿ ಆರ್ಗನೈಸೇಷನ್‌ಗಳಿವೆ. ಹಾಗಾಗಿ ಸ್ವಯಂ ಸೇವಾ ಸಂಘ ಸಂಸ್ಥೆಗಳಿಂದ ಸಾವಿರಾರು ಕೋಟಿ ರೂಪಾಯಿಗಳು ಇವತ್ತು ನಮ್ಮ ರಾಜ್ಯದ ಒಳಗೆ ಬರುತ್ತವೆ. ದರ ವಯಲೇಷನ್ ಆಗುತ್ತದೆ. ಎಲ್ಲಾ ವಯಲೇಷನ್ ಆದರೂ ಕೂಡ ಅವರಿಗೆ ಯಾರೂ ಕೇಳುವವರೇ ಇಲ್ಲ. ಕೋಲಾರ ಜಿಲ್ಲೆಯಲ್ಲಿ 350 ವಾಲಂಟರಿ ಆರ್ಗನೈಸೇಷನ್ಸ್ ಇವೆ. ಸಾವಿರಾರು ಕೋಟಿ ರೂಪಾಯಿ ನಾವು ಒಂದು ತನಿಖೆ ಕೂಡ ಮಾಡಿಸಿದ್ದೇವೆ. ಕಪಾರ್ಡ್‌ನಲ್ಲಿ ಅದು ಬ್ಲಾಕ್ ಲಿಸ್ಟ್‌ನಲ್ಲಿ ಹಾಕಿದ್ದರು. ಅದು ಅಷ್ಟು ಸಣ್ಣ ವಿಷಯ ಅಲ್ಲ. ಆದ್ದರಿಂದ ಸದನವನ್ನು ಕೇಳುತ್ತಿದ್ದೇನೆ, ಈ ಸ್ವಯಂ ಸೇವಾ ಸಂಘಟನೆಗಳ ಸೇವಾ ಸಂಘ ಸಂಸ್ಥೆಗಳ ಅವ್ಯವಹಾರವನ್ನು ಸಿಬಿಐನಿಂದ ತನಿಖೆ ಮಾಡಿಸಬೇಕು. ಏಕೆ ಸಿಬಿಐ ಎಂದು ಹೇಳುತ್ತಿದ್ದೇನೆಂದರೆ, ಅದಕ್ಕೆ ವಿಶೇಷ ಕಾರಣ ಇದೆ. ಕೆಲವು ವಿದೇಶದಿಂದ ಹಣ ಬರುತ್ತವೆ, ಸಿಓಡಿ ಡಿಪಾರ್ಟ್‌ಮೆಂಟಲ್ ಇಲಾಖೆಗಳು ಅದು ತನಿಖೆ ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಅದನ್ನು ಸಿಓಡಿಯವರು ಮಾಡುವುದಕ್ಕಾಗುವುದಿಲ್ಲ. ಸಿಬಿಐನವರೇ ತನಿಖೆ ಮಾಡಬೇಕು. ಇವತ್ತು ಸಾವಿರಾರು ಕೋಟಿ ರೂಪಾಯಿಗಳು ದುರುಪಯೋಗವಾಗುತ್ತಿದೆ. ಎಷ್ಟು ದುರುಪಯೋಗವಾಗುತ್ತಿದೆ ಎಂದರೆ, ಒಂದು ವಾಲಂಟರಿ ಆರ್ಗನೈಸೇಷನ್ ಕಪಾರ್ಡ್‌ನಲ್ಲಿ 12 ಲಕ್ಷ ರೂಪಾಯಿ. ನನ್ನ ಕ್ಷೇತ್ರದಲ್ಲಿ ರೋಡ್‌ಗೆ ಮಂಜೂರು ಮಾಡಿ ಒಂದು ಲಕ್ಷ ರೂಪಾಯಿ ಖರ್ಚಾಗದೆ ಒಂದು ಲಕ್ಷ ರೂಪಾಯಿ ತಿಂದು ಹಾಕಿದ ಇಂತಹ ನೂರಾರು ಉದಾಹರಣೆಗಳು ಇವೆ. ಜಿಲ್ಲಾಪಂಚಾಯಿತಿಯವರು ಯಾವುದೇ ಕೆಲಸವನ್ನು ತೆಗೆದುಕೊಂಡಿಲ್ಲ. ಅದನ್ನು ರಾಜ್ಯ ಸರ್ಕಾರ ಸಿಬಿಐಯಿಂದ ತನಿಖೆ ಮಾಡಿಸಬೇಕೆಂದು ನಾನು ಹೇಳುತ್ತೇನೆ. ಇನ್ನೂ ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ, ನಮಗೆ ಬಹಳ ದುಃಖ ಆಗತಕ್ಕಂಥಾದ್ದು ಏನೆಂದರೆ, ಈ ಸದನದಲ್ಲಿ ಕಾವೇರಿ, ಕೃಷ್ಣಾ ಯೋಜನೆಗಳ ಸಾವಿರಾರು ಕೋಟಿ ರೂಪಾಯಿಗಳ ಬಗ್ಗೆ ದಿನಗಟ್ಟಳೆ ಚರ್ಚೆಯಾಗಿದೆ. ಆದರೆ ಸಣ್ಣ ನೀರಾವರಿಗೆ ನೂರು ಕೋಟಿ ರೂಪಾಯಿ ಕೂಡ ಇಲ್ಲ. ಅದರಲ್ಲೂ ಮುಖ್ಯವಾಗಿ ಇವತ್ತು ನಮ್ಮ ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಕೆರೆಗಳೇ ಬಹಳ ಮುಖ್ಯವಾಗಿರತಕ್ಕಂಥಾದ್ದು. ವರದಿಯ ಪ್ರಕಾರ ಇವತ್ತು ಕರ್ನಾಟಕ ರಾಜ್ಯದಲ್ಲಿ 37,328 ಸಣ್ಣ ಮತ್ತು ಮಧ್ಯಮ ವರ್ಗದ ಕೆರೆಗಳಿವೆ. ಹಿಂದೆ ವ್ಯವಸಾಯ ಹೆಚ್ಚಾಗಿ ಆಧಾರವಾಗಿದ್ದುದು ಈ ಕೆರೆಗಳ ಮೇಲೆಯೇ. ಇವತ್ತು ಆ ಕೆರೆಗಳು ಯಾವ ದುಃಸ್ಥಿತಿಗೆ ಬಂದಿವೆ ಎಂದರೆ ಒಂದು ಕಡೆ ಹೂಳು ತುಂಬಿ ಹೋಗಿವೆ, ಇನ್ನೊಂದು ಕಡೆ ಅದನ್ನು ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡು ಉಳುಮೆ ಮಾಡಿಕೊಂಡುಬಿಟ್ಟಿದ್ದಾರೆ. ಇನ್ನೊಂದು ಕಡೆ ತೂಬು ಇಲ್ಲ, ಕಾಲುವೆ ಇಲ್ಲ, ಏನೂ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇದೆ. ಇವತ್ತು ಅದಕ್ಕೆ ರಿಪೇರಿಯೇ ಇಲ್ಲ. ಏಕೆಂದರೆ ಮೈನರ್ ಇರಿಗೇಷನ್‌ನವರ ಹತ್ತಿರ ಹಣ ಇಲ್ಲ. ಇವತ್ತು ನಮ್ಮ 2-3 ಜಿಲ್ಲೆಗಳಲ್ಲಿ ನಾವು ಬದುಕಬೇಕಾದರೆ, ಅಲ್ಲಿ ಅಂತರ್‌ಜಲ ಸಂಪೂರ್ಣವಾಗಿ ಇಂಗಿ ಹೋಗಿದೆ. 450 ಅಡಿ ಆಳಕ್ಕೆ ತೆಗೆದರೂ ಬೋರ್‌ವೆಲ್‌ಗಳಲ್ಲಿ ನೀರು ಬರತಕ್ಕಂಥ ಪರಿಸ್ಥಿತಿ ಇಲ್ಲ. ಆದ್ದರಿಂದ ನೀರಿನ ಅಂತರ್ ಜಲದ ಮಟ್ಟವನ್ನು ಹೆಚ್ಚಿಸಬೇಕಾದರೆ, ಕೆರೆಗಳಲ್ಲಿ ತುಂಬಿರುವ

ಹೂಳನ್ನು ಎತ್ತಿ, ಕೆರೆಗಳನ್ನು ದುರಸ್ತಿ ಮಾಡದೇ ಹೋದರೆ ನಾವು ಅಂತರ್‌ಜಲವನ್ನು ಹೆಚ್ಚು ಮಾಡಲು ಸಾಧ್ಯವೇ ಇಲ್ಲ ಎನ್ನುವುದು ಸರ್ಕಾರಕ್ಕೆ ಕೂಡ ಮನವರಿಕೆಯಾಗಿದೆ. ಆದರೆ ದುರದೃಷ್ಟವಶಾತ್, ಸರ್ಕಾರ ಆ ಕಾರ್ಯಕ್ರಮಕ್ಕೆ ಹಣವನ್ನೇ ಕೊಡುತ್ತಿಲ್ಲ. ಮೈನರ್ ಇರಿಗೇಷನ್‌ಗೆ ಹಣ ಕೊಡದೇ ಇದ್ದರೆ, ಕರ್ನಾಟಕ ರಾಜ್ಯದ ವ್ಯವಸಾಯದಲ್ಲಿ ಇವತ್ತಿಗೂ ಕೂಡ ಶೇ.60 ರಷ್ಟು ವ್ಯವಸಾಯ ಆಧಾರ ಬಿದ್ದಿರತಕ್ಕಂಥಾದ್ದು ಸಣ್ಣ ನೀರಾವರಿಯ ಮೇಲೆಯೇ. ಕೃಷ್ಣಾ ಮೇಲ್ದಂಡೆ ಯೋಜನೆ ಮುಕ್ತಾಯವಾದರೆ ಸಲ್ಪ ಬದಲಾವಣೆಯಾಗಬಹುದು. ಇವತ್ತು ಶೇ. 60 ರಷ್ಟು ವ್ಯವಸಾಯ ಸಣ್ಣ ನೀರಾವರಿಯ ಮೇಲೆ ಆಧಾರವಾಗಿರತಕ್ಕಂಥ ಈ ಪರಿಸ್ಥಿತಿಯಲ್ಲಿ ಅದಕ್ಕೆ ನೀವು ಕೊಟ್ಟಿರತಕ್ಕಂಥ ಹಣವೆಷ್ಟು? ನಮ್ಮಂಥ ಬಯಲು ಸೀಮೆ ಪ್ರದೇಶಗಳು ಏನಾಗಬೇಕು? ಅಂತರ್‌ಜಲ ಕಡಿಮೆಯಾಗುತ್ತಾ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಹೇಗೆ ಬದುಕಬೇಕು ಎನ್ನುವುದನ್ನು ಸರ್ಕಾರ ಆಲೋಚನೆ ಮಾಡಬೇಕಾಗಿದೆ. ಅದಕ್ಕೆ ಮೊದಲು ನಾನು ಕೇಳತಕ್ಕಂಥಾದ್ದು ಏನೆಂದರೆ, ಎಲ್ಲಾ ಕೆರೆಗಳಲ್ಲಿ ತುಂಬಿರುವ ಹೂಳನ್ನು ಒಂದೇ ವರ್ಷದಲ್ಲಿ ತೆಗೆಯಲು ಸಾಧ್ಯವಿಲ್ಲ. ಅದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿ ನಿರ್ದಿಷ್ಟ ಸಮಯದಲ್ಲಿ ಮಾಡಬೇಕು. ಇವತ್ತು ಹೂಳು ಎತ್ತುವ ಕೆಲಸವನ್ನು ಮಳೆಗಾಲದಲ್ಲಿ ಪ್ರಾರಂಭ ಮಾಡುತ್ತೀರಿ. ಅದನ್ನು ಜನವರಿಯಲ್ಲಿ ಪ್ರಾರಂಭ ಮಾಡಬೇಕು. ಅದಕ್ಕೆ ನಿರ್ದಿಷ್ಟವಾದ ಹಣವನ್ನು ಬಜೆಟ್‌ನಲ್ಲಿ ತೆಗೆದಿಡಬೇಕು. ಅದಕ್ಕೆ ಬೇಕಾಗಿರತಕ್ಕಂಥ ನಿಯಮಾವಳಿಗಳನ್ನು ರೂಪಿಸಬೇಕು. ಇಲ್ಲದಿದ್ದರೆ ನಾವು ಅಂತರ್‌ಜಲವನ್ನು ಹೆಚ್ಚಿಸಲು ಆಗುವುದಿಲ್ಲ. ನಮ್ಮಲ್ಲಿ ಕೆರೆಗಳನ್ನು ಬಿಟ್ಟರೆ ಬೇರೆ ದಾರಿಯಿಲ್ಲ. ಆದ್ದರಿಂದ ಕೆರೆಗಳನ್ನು ಉಳಿಸಲೇಬೇಕು. ಸಣ್ಣ ನೀರಾವರಿಗೆ ಹೆಚ್ಚು ಹಣ ಕೊಡಬೇಕಾಗಿದೆ ಎನ್ನುವುದನ್ನು ನಾನು ಕೇಳುತ್ತಿದ್ದೇನೆ. ಇವತ್ತು ಕೆರೆ, ಕಾಲುವೆ, ತೂಬುಗಳನ್ನು ರಿಪೇರಿ ಮಾಡದೆ ಹೋದರೆ ನೀವು ಕೆರೆಗಳನ್ನು ಉಳಿಸಲು ಸಾಧ್ಯವಿಲ್ಲ. ಈ ಬಗ್ಗೆ ಸರ್ಕಾರದ ಮುಂದೆ ಒಂದು ವರದಿ ಕೂಡ ಇದೆ. ಆದ್ದರಿಂದ ಸಣ್ಣ ನೀರಾವರಿಗೆ ಹೆಚ್ಚಿನ ಹಣವನ್ನು ಕೊಡದೇ ಹೋದರೆ ನಮ್ಮ ಜಿಲ್ಲೆಗಳಲ್ಲಿ ಜನ ಬದುಕಲು ಸಾಧ್ಯವಿಲ್ಲ ಎನ್ನುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕೊನೆಯದಾಗಿ, ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಹಿಂದೆ ಕೂಡ ಹೇಳಿದ್ದೆ, ಹಿಂದಿನ ಕಂದಾಯ ಮಂತ್ರಿಗಳು ಇಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಕಂದಾಯ ಇಲಾಖೆಯ ಹೆಸರನ್ನು ಬದಲಾವಣೆ ಮಾಡಿ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಬ್ರಿಟಿಷರ ಕಾಲದಲ್ಲಿ ಅವರಿಗೆ ಇದ್ದಂಥ ಒಂದೇ ಒಂದು ಆದಾಯವೆಂದರೆ, ಭೂಕಂದಾಯ. ಭೂ ಕಂದಾಯವನ್ನು ವಸೂಲಿ ಮಾಡತಕ್ಕಂಥ ಒಂದೇ ಒಂದು ಕಾರ್ಯಕ್ರಮ ಅವರಲ್ಲಿತ್ತು ಹಾಗಾಗಿ ಕಂದಾಯ ಇಲಾಖೆ ಎಂದು ಮಾಡಿ ಕಂದಾಯ ವಸೂಲಿ ಮಾಡಲು ಅಧಿಕಾರಿಗಳನ್ನು ನೇಮಿಸಿದರು. ಈಗಲೂ ಅದೇ ಹೆಸರನ್ನು ಇಟ್ಟುಕೊಂಡಿದ್ದಾರೆ. ಇವತ್ತು ಬರೀ ಕಂದಾಯ ವಸೂಲಿ ಮಾಡುವುದಕ್ಕಷ್ಟೇ ಅವರ ಕೆಲಸ ಸೀಮಿತವಾಗಿಲ್ಲ. ಇವತ್ತು ಕಂದಾಯ ಇಲಾಖೆಯ ಜವಾಬ್ದಾರಿ ಮತ್ತು ಕೆಲಸ ಬಹಳ ವಿಶಾಲಗೊಂಡಿದೆ. ಬಹಳ ಪ್ರಮುಖವಾದಂಥ ಪಾತ್ರವನ್ನು ವಹಿಸುತ್ತಿದೆ. ಅದು ಬರೀ ಕಂದಾಯವನ್ನು ವಸೂಲಿ ಮಾಡತಕ್ಕಂಥ ಇಲಾಖೆಯಾಗಿ ಉಳಿದಿಲ್ಲ. ಹಿಂದೆ ನಾನು ಕಂದಾಯ ಇಲಾಖೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ, ಹಿಂದಿನ ಕಂದಾಯ ಮಂತ್ರಿಗಳು ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ, ಇದು ಒಳ್ಳೆಯ ಸಲಹೆ, ಅದನ್ನು ಬದಲಾವಣೆ ಮಾಡುತ್ತೇವೆ ಎಂದು ಈ ಸದನದಲ್ಲಿ

ಆಶ್ವಾಸನೆ ಕೊಟ್ಟಿದ್ದರು. ನಾನು ಈಗಲೂ ಕೂಡ ಸರ್ಕಾರವನ್ನು ಕೇಳುತ್ತಿದ್ದೇನೆ, ಅದು ಬ್ರಿಟೀಷರು ಕೊಡತಕ್ಕಂಥ ಕೊಡುಗೆ. ಅದರ ಹೆಸರನ್ನು ಬದಲಾವಣೆ ಮಾಡಬೇಕು. ಯಾವ ಹೆಸರನ್ನು ಇಡಬೇಕು ಎಂದು ತೀರ್ಮಾನಿಸಲು ಅದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿ. ಯಾವ ಹೆಸರನ್ನು ಅದಕ್ಕೆ ಇಟ್ಟರೆ ಉಚಿತವಾಗಿರುತ್ತದೆ, ಆ ರೀತಿಯ ಹೆಸರನ್ನು ಇಟ್ಟು, ಕಂದಾಯ ಇಲಾಖೆ ಎಂದು ಹೇಳುವುದನ್ನು ಬದಲಾವಣೆ ಮಾಡಬೇಕು. ಅದನ್ನು ಗಂಭೀರವಾಗಿ ಪರಿಗಣಿಸಬೇಕು. ಕಂದಾಯ ಇಲಾಖೆ ಎಂದು ಹೇಳುವುದು ಒಂದು ರೀತಿ ನಾಚಿಕೆಗೇಡಿನ ಸಂಗತಿ. ರೈತರು ಕಂದಾಯವನ್ನು ಕೊಡುವುದಿಲ್ಲ, ಇವರು ಅದನ್ನು ವಸೂಲು ಮಾಡುವ ಸ್ಥಿತಿಯಲ್ಲೂ ಇಲ್ಲ. ಹೀಗಿರುವಾಗ ಅದನ್ನು ಏಕೆ ಕಂದಾಯ ಇಲಾಖೆ ಎಂದು ಕರೆಯಬೇಕು. ಹಾಗಾಗಿ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತಮ್ಮಲ್ಲಿ ವಿನಂತಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಸನ್ಮಾನ್ಯ ಅಧ್ಯಕ್ಷರೇ, ಇಂದು ಸುಮಾರು 40 ಕ್ಕಿಂತಲೂ ಹೆಚ್ಚು ಬೇಡಿಕೆಗಳನ್ನು ಮಂಡಿಸಿದ್ದೀರಿ. ನಾನು ವಿಶೇಷವಾಗಿ ಎರಡು ಬೇಡಿಕೆಗಳ ಮೇಲೆ ನನ್ನ ಮಾತುಗಳನ್ನು ಕೇಂದ್ರೀಕರಿಸಬೇಕು ಎಂದು ನಾನು ಅಂದುಕೊಂಡಿದ್ದೇನೆ. ಸಮಯದ ಅಭಾವವಿರುವುದರಿಂದ, ತಾವು ಕೊಟ್ಟಿರತಕ್ಕಂಥ ಕಾಲಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ನಿಂತಿದ್ದೇನೆ. ಇಂದು ನಮ್ಮ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಅದರ ಲೋಪದೋಷಗಳ ಬಗ್ಗೆ ತಿಳಿಸಲು ಸದನದ ಸಮಯವನ್ನು ಬಹಳ ದೀರ್ಘವಾಗಿ ನಾವು ಉಪಯೋಗ ಮಾಡಿಕೊಂಡಿದ್ದೇವೆ. ಅದರಲ್ಲೂ, ಕೃಷ್ಣಾ ಮೇಲ್ದಂಡೆ ಯೋಜನೆ ಮೇಲೆ ಬಹುತೇಕ ವಿರೋಧ ಪಕ್ಷದ ಎಲ್ಲ ನಾಯಕರುಗಳು ಹೆಚ್ಚು ಒತ್ತು ಕೊಟ್ಟು ಚರ್ಚೆ ಮಾಡಿ, ಬಹುತೇಕ ನೀರಾವರಿ ಯೋಜನೆಗಳ ಸಫಲತೆಗಾಗಿ ಸದನ ಹೆಚ್ಚಿನ ವೇಳೆಯನ್ನು ಉಪಯೋಗಿಸಿಕೊಂಡಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈಗ ನಾನು ಮಾತನಾಡುವ ಸಂದರ್ಭದಲ್ಲಿ ಆ ವಿಷಯಗಳನ್ನು ಬಿಟ್ಟು, ಬಹುತೇಕ ಎಲ್ಲ ಸದಸ್ಯರು ಅದೇ ವಿಷಯಗಳನ್ನು ಮರುಕಳಿಸಿ ಭಾಷಣ ಮಾಡುವುದಾದರೆ ಈ ಸಮಯದ ಅಭಾವದಲ್ಲಿ ಅದು ಸಾಧ್ಯವಾಗಲಾರದು. ಆದರೆ ಮುಖ್ಯವಾಗಿ ಮೂಲ ಸಮಸ್ಯೆಗಳ ಬಗ್ಗೆ, ನೀರಾವರಿ ಯೋಜನೆಗಳು ಇರತಕ್ಕಂಥ ಇನ್ನೂ ಹಲವಾರು ವಿಚಾರಗಳನ್ನು ಈ ಸದನದಲ್ಲಿ ಹೇಳಿದರೆ ಉಪಯೋಗವಾಗಬಹುದು. ಇಂದು ನಾವು ನೀರಾವರಿ ಬಗ್ಗೆ ಮಾತನಾಡಬೇಕಾದರೆ ಇದು ಇಡೀ ರಾಜ್ಯದ ಆರ್ಥಿಕ ಸ್ಥಿತಿಗತಿಯ ಮೇಲೆ ನೇರವಾದ ಪರಿಣಾಮವನ್ನು ಬೀರತಕ್ಕಂಥ ಒಂದು ಇಲಾಖೆ. ರಾಜ್ಯದಲ್ಲಿರತಕ್ಕಂಥ ಸುಮಾರು ಶೇ.70ರಷ್ಟು ರೈತಾಪಿ ವರ್ಗದವರಿಗೆ ಜೀವನದ ಉಸಿರಾಗತಕ್ಕಂಥ ಇಲಾಖೆ ಇದು. ಆ ದೃಷ್ಟಿಯಿಂದ ಇವತ್ತು ನಮ್ಮ ರಾಜ್ಯ ನೀರಾವರಿ ಇಲಾಖೆಯಲ್ಲಿ ಸ್ವತಂತ್ರ ಬಂದ ನಂತರ ಇಲ್ಲಿಯವರೆಗೆ ಏನು ಸಾಧನೆ ಮಾಡಿದೆ, ಇನ್ನು ಮುಂದೆ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಯೋಚನೆ ಮಾಡಬೇಕು. ನಾಗೇಗೌಡರು ಕೂಡ ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಆದಾಗ್ಯೂ ಇನ್ನೂ ಹೆಚ್ಚು ಒತ್ತು ಕೊಡಬೇಕಾದ್ದುದು ಆದ್ಯ ಕರ್ತವ್ಯವಾಗಿದೆ.

ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ, ನಮ್ಮ ರಾಜ್ಯ ಇನ್ನೂ ಬಹಳಷ್ಟು ಹಿಂದುಳಿದಿದೆ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಅಂಕಿಸಂಖ್ಯೆಗಳೇ ನಮಗೆ ಆಧಾರವಾಗಿದೆ. ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗೆ ಇಷ್ಟೆಲ್ಲಾ ಹೆಚ್ಚು ಒತ್ತನ್ನು ಕೊಟ್ಟರು ಕೂಡ ಸುಮಾರು 55 ಲಕ್ಷ ಹೆಕ್ಟೇರ್ ಭೂಮಿ ನೀರಾವರಿಯಾಗಬೇಕಾದರೆ, ಭಾರೀ ಮತ್ತು ಮಧ್ಯಮ ನೀರಾವರಿಯಲ್ಲಿ 35 ಲಕ್ಷ ಹೆಕ್ಟೇರ್‌ಗಳು, ಸಣ್ಣ ನೀರಾವರಿಯಲ್ಲಿ 10 ಲಕ್ಷ ಹೆಕ್ಟೇರ್ಸ್ ಮತ್ತು 10 ಲಕ್ಷ ಹೆಕ್ಟೇರ್ಸ್ ಅಂತರ್‌ಜಲ ಆಗಬೇಕು. ಸುಮಾರು 55 ಲಕ್ಷ ಹೆಕ್ಟೇರ್ ನೀರಾವರಿ ಮಾಡಬೇಕಾದರೆ ನಾವು ಒಟ್ಟಾರೆ ಎಷ್ಟು ಹಣವನ್ನು ಒದಗಿಸಬೇಕು, ಈಗ ಎಷ್ಟು ಹಣವನ್ನು ಒದಗಿಸಿದ್ದೇವೆ ಎನ್ನುವುದನ್ನು ನಾವು ನೋಡುವುದಾದರೆ ಇಲ್ಲಿಯವರೆಗೆ ಸುಮಾರು 8 ಸಾವಿರ ಕೋಟಿ ರೂಪಾಯಿಗಳನ್ನು ಸಂದಾಯ ಮಾಡಿದ್ದರೂ ಕೂಡ ಭಾರೀ ಮತ್ತು ಮಧ್ಯಮ ನೀರಾವರಿಯಲ್ಲಿ ಸುಮಾರು 16 ಲಕ್ಷ ಹೆಕ್ಟೇರ್ ಮಾತ್ರ ನೀರಾವರಿ ಮಾಡುವುದಕ್ಕೆ ಸಾಧ್ಯವಾಗಿದೆ. ಇದರ ಅರ್ಥ ನೀರಿನ ಬಳಕೆಯನ್ನು ನಾವು ಇನ್ನೂ ಕೂಡ ಮಾಡಲು ಸಾಧ್ಯವಾಗಿಲ್ಲ. ಉದಾಹರಣೆಗೆ, ಕೃಷ್ಣಾ ಕಣಿವೆ ಯೋಜನೆಗಳಲ್ಲಿ ಸುಮಾರು 60 ಭಾಗ, ಕಾವೇರಿ ಯೋಜನೆಯಲ್ಲಿ ಶೇ. 18.80ರಷ್ಟು ಮತ್ತು ಗೋದಾವರಿಯಲ್ಲಿ ಶೇ. 280 ರಷ್ಟು ವೆಸ್ಟ್ ಫ್ಲೋಯಿಂಗ್ ರಿವರ್‌ಗಳಲ್ಲಿ ಶೇ. 12ರಷ್ಟು, ನಾರ್ತ್ ಪೆನ್ನಾರ್‌ನಲ್ಲಿ ಶೇ. 395 ರಷ್ಟು, ಸೌತ್ ಪೆನಾರ್‌ನಲ್ಲಿ ಶೇ195 ರಷ್ಟು ಪಾಲಾರ್‌ದಲ್ಲಿ ಶೇ. 160, ಒಟ್ಟು ಕೆಪಾಸಿಟಿಯನ್ನು ಉಪಯೋಗ ಮಾಡಲು ಸಾಧ್ಯಾವಾಗಿಲ್ಲ. ಒಟ್ಟು 24 ಭಾರೀ ನೀರಾವರಿ ಯೋಜನೆಗಳನ್ನು, 28 ಮಧ್ಯಮ ನೀರಾವರಿ ಯೋಜನೆಗಳಿಗೆ ನಾವು ಬಹುತೇಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು, ಈ ಎಲ್ಲಾ ಯೋಜನೆಗಳನ್ನು ನಿಗದಿತ ಅವಧಿಯಲ್ಲಿ ನಾವು ಮುಗಿಸಬೇಕಾಗಿದೆ. ನಾವು ಎಲ್ಲಿಯವರೆಗೆ ಸಾಗಿ ಬಂದಿದ್ದೇವೆ ಎಂದರೆ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಲ್ಲಿ ನಾವು ಎಷ್ಟು ನೀರಿನ ಸದುಪಯೋಗ ಮಾಡಿಕೊಂಡಿದ್ದೇವೆ ಎಂದರೆ ಸುಮಾರು 1,260 ಟಿ.ಎಂ.ಸಿಯಲ್ಲಿ ಇಲ್ಲಿಯವರೆಗೆ ಉಪಯೋಗ ಮಾಡಿಕೊಂಡಿರತಕ್ಕಂಥಾದ್ದು 851 ಟಿ.ಎಂ.ಸಿ. ಮಾತ್ರ. ಇನ್ನೂ 412 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಈ 412 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬೇಕಾದರೆ ಪೊಟೆನ್ಷಿಯಲ್ ಆಗಿ ಎಷ್ಟು ಕ್ರಿಯೇಟ್ ಮಾಡಿದ್ದೇವೆಂದರೆ ಮೈನರ್ ಮತ್ತು ಮೇಜರ್ ಇರಿಗೇಷನ್ ಕೂಡಿಸಿ ಹೇಳುವುದಾದರೆ ನಾವು ಎಷ್ಟು ದುಡ್ಡು ಖರ್ಚು ಮಾಡಬೇಕೆಂದರೆ 18,216 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದರಲ್ಲಿ ಸುಮಾರು 7,134 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ಇನ್ನು ಸುಮಾರು 11,000 ಕೋಟಿ ರೂಪಾಯಿಗಳ ಬಂಡವಾಳವನ್ನು ನಾವು ಕೂಡಿಸಬೇಕಾಗಿದೆ. ಇಷ್ಟೆಲ್ಲಾ ದುಡ್ಡನ್ನು ಕೂಡಿಸಿ ಇದರ ಜೊತೆಗೆ ಯಾವ ರೀತಿಯಲ್ಲಿ ದುಡ್ಡನ್ನು ಹಾಕುತ್ತೇವೋ ಅಷ್ಟೇ ಪ್ರಮಾಣದಲ್ಲಿ ಪೊಟೆನ್ಷಿಯಲ್ ಕ್ರಿಯೇಟ್ ಆಗಬೇಕು. ಹಾಗಾಗಿ ನಾವು ಎಷ್ಟು ಪೊಟೆನ್ಷಿಯಲ್ ಕ್ರಿಯೇಟ್ ಮಾಡಿದ್ದೇವೆಂಬುದನ್ನು ಎಲ್ಲವನ್ನು ರಿಹರ್ಸಲ್ ಮಾಡಿದ್ದರೂ ಪ್ಲಾನ್ ಯುಟಿಲೈಜ್ ಮಾಡಬೇಕೆಂದರೆ ಸುಮಾರು 39,60,494 ಹೆಕ್ಟಾರ್ಸ್ ಮಾಡಬೇಕಾದ್ದು ಇದೆ. ಅದರಲ್ಲಿ ಯುಟಿಲೈಜ್ ಮಾಡಿರತಕ್ಕಂಥಾದ್ದು 25,43,177 ಲಕ್ಷ ಹೆಕ್ಟಾರ್ಸ್ ಆಗಿದೆ. ಇನ್ನು

ಬ್ಯಾಲೆನ್ಸ್ 14,17,317ಲಕ್ಷ ಹೆಕ್ಟಾರ್ಸ್ ಇದೆ. ಇದರಲ್ಲಿ ಮೇಜರ್ ಮತ್ತು ಮೀಡಿಯಮ್ ಇರಿಗೇಷನ್ ಹದಿನಾಲ್ಕು ಲಕ್ಷ ಹೆಕ್ಟಾರ್ಸ್ ಆಗಿರುವಂಥಾದ್ದು. ಈ ಎಲ್ಲಾ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದರೆ ಮುಖ್ಯವಾಗಿ ಬಹುತೇಕ ನಿರಾಶದಾಯಕವಾಗಿರುವಂತಹ ಉತ್ತರವೆಂದರೆ 55 ಲಕ್ಷ ಹೆಕ್ಟಾರ್ಸ್ ನೀರಾವರಿ ಮಾಡಬೇಕೆಂದರೆ ಇನ್ನು 22-29 ಲಕ್ಷ ಹೆಕ್ಟಾರ್ಸ್ ಕೂಡ ನೀರಾವರಿ ಮಾಡುವುದಕ್ಕಾಗುವುದಿಲ್ಲವೆಂಬುದು ದುರದೃಷ್ಟಕರವಾದಂತಹ ವಿಷಯವಾಗಿದೆ. ಆ ದೃಷ್ಟಿಯಲ್ಲಿ ಇವತ್ತು ಇಡೀ ರಾಜ್ಯದ ಜನರು ಮತ್ತು ಸರ್ಕಾರ ಆಗಲಿ ಸಂಪನ್ಮೂಲದ ಕಡೆಗೆ ಯಾರೂ ಕೂಡ ಲಕ್ಷ್ಯವಿಟ್ಟಿಲ್ಲ ಇವತ್ತು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ನಾನು ವಿರೋಧಪಕ್ಷದಲ್ಲಿದ್ದು ಹೇಳಿದರೆ ತಮಗೆ ಆಶ್ಚರ್ಯವಾಗಬಹುದು. ಎಲ್ಲಾ ಮಂತ್ರಿಗಳು ತಮ್ಮ ತಮ್ಮ ಇಲಾಖೆಗಳಿಗೆ ಹಣವನ್ನು ಖರ್ಚು ಮಾಡುವುದರಲ್ಲಿ ಎಷ್ಟು ಆಸಕ್ತಿ ತೋರಿಸುತ್ತಾರೋ ಅಷ್ಟು ಹಣವನ್ನು ಸಂಗ್ರಹ ಮಾಡುವುದಕ್ಕೆ ಯಾವ ಇಲಾಖಾ ಮಂತ್ರಿಗಳು ಆಸಕ್ತಿಯನ್ನು ವಹಿಸುವುದಿಲ್ಲ. ಇದು ದುರದೃಷ್ಟಕರವಾದಂತಹ ವಿಚಾರವಾಗಿದೆ. ಬಹುತೇಕ ಇಲಾಖೆಗಳಲ್ಲಿರುವಂತಹ ರಿಸೋರ್ಸಸ್ ಮೊಬಲೈಜ್ ಅನ್ನು ದಕ್ಷತೆಯಿಂದ, ಕಾಳಜಿಯಿಂದ ಮಾಡಿದ್ದೆ ಆದರೆ ನಿಮ್ಮ ಇಲಾಖೆಯಲ್ಲಿರುವಂತಹ ಹಣವನ್ನು ಸಂಗ್ರಹ ಮಾಡಿದ್ದೆ ಆದರೆ ರಾಜ್ಯದ ಬೊಕ್ಕಸಕ್ಕೆ, ಯಾವ ಯೋಜನೆಗಳಿಗೂ ಹಣದ ಕೊರತೆ ಬೀಳುವುದಿಲ್ಲವೆಂದು ನನಗನ್ನಿಸುತ್ತದೆ. ಆ ದೃಷ್ಟಿಯಿಂದ ಇವತ್ತು ನಾವು ಹಣವನ್ನು ಖರ್ಚು ಮಾಡುವುದಕ್ಕೆ ಆಸಕ್ತಿಯನ್ನು ಯಾವ ರೀತಿ ತೋರಿಸುತ್ತೇವೆಯೋ ಅಷ್ಟು ದುಡ್ಡನ್ನು ಸಂಗ್ರಹ ಮಾಡುವುದರಲ್ಲಿ ಆಸಕ್ತಿಯನ್ನು ತೋರಿಸದೇ ಇರುವುದರಿಂದ ಇವತ್ತು ರಾಜ್ಯದ ಸಂಪನ್ಮೂಲ ಕ್ರೋಢಿಕರಣದಲ್ಲಿ ನಾವು ಹಿಂದೆ ಬಿದ್ದಿದ್ದೇವೆಂದರೆ ತಪ್ಪಾಗುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಈ ಎಲ್ಲಾ ಯೋಜನೆಗಳನ್ನು ಮುಗಿಸಬೇಕೆಂದರೆ ಸುಮಾರು 10,000 ಸಾವಿರ ಕೋಟಿ ರೂಪಾಯಿಗಳು ಎಲ್ಲಿಂದ ತರುವುದು? ಯಾವ ರೀತಿಯಲ್ಲಿ ತರುವುದು? ಎನ್ನುವ ಬಗ್ಗೆ ಯಾರೂ ಚಿಂತನೆ ಮಾಡುವುದಿಲ್ಲ. ಇದಕ್ಕೆ ಮಾನ್ಯ ಅಧ್ಯಕ್ಷರು ಒಪ್ಪುವುದಾದರೆ ಇದರ ಬಗ್ಗೆ ವಿಶೇಷ ಅಧಿವೇಶನವನ್ನು ಕರೆದು ಯಾವ ರೀತಿ ಸಂಪನ್ಮೂಲಗಳನ್ನು ಕ್ರೋಢಿಕರಿಸಬಹುದೆಂಬ ಬಗ್ಗೆ ಚರ್ಚೆ ಮಾಡಬಹುದು. ನಾವು ಚರ್ಚೆ ಮಾಡಿದ್ದೆ ಆದರೆ ಬಹುತೇಕ ಎಲ್ಲಾ ಯೋಜನೆಗಳಿಗೂ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಬಹುದು. ನಾವು ನೀರಾವರಿ ಯೋಜನೆಯ ಬಗ್ಗೆ ಹೇಳುವುದಾದರೆ ಸುಮಾರು ಐವತ್ತು ವರ್ಷಗಳಿಂದ ಈ ಯೋಜನೆಗಳನ್ನು ಮಾಡಿದ್ದೇವೆ. ಉದಾಹರಣೆಗೆ ಮಲಪ್ರಭಾ, ಘಟಪ್ರಭಾ, ಭದ್ರಾ, ಹಾರಂಗಿ, ಕಬಿನಿ, ಹೇಮಾವತಿ, ಇಷ್ಟೆಲ್ಲಾ ಯೋಜನೆಗಳಾದರೂ ಇನ್ನು ಅನೇಕ ಕಾಲುವೆಗಳ ಕೆಲಸವಾಗಬೇಕಾಗಿದೆ. ಇನ್ನು ಹತ್ತು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಐವತ್ತು ವರ್ಷಗಳಲ್ಲಿ ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಂದಿದೆ. ಅದನ್ನು ಎಂದಾದರೂ ಉಪಯೋಗ ಮಾಡಿದ್ದೀವಾ? ಇದು ಎಂತಹ ದುರದೃಷ್ಟವೆಂದರೆ ಬಹುಶಃ ಇದರ ಬಗ್ಗೆ ಮಾನ್ಯ ನಾಗೇಗೌಡರು ಲಕ್ಷ ವಹಿಸಿದ್ದಾರೋ, ಇಲ್ಲವೋ, ಗೊತ್ತಿಲ್ಲ. ಒಂದು ವಿಚಾರವನ್ನು ಹೇಳುವುದಾದರೆ ಯಾವ್ಯಾವ ಯೋಜನೆಗಳಿಂದ ಈಗ ವಾಟರ್ ರೇಟ್ ಎಂದು ಏನು ಹೇಳುತ್ತಿದ್ದಾರೆ. ಆ ವಾಟರ್ ರೇಟ್ ಡಿಮಾಂಡ್ ಇಲಾಖೆಯಿಂದ ಕಳುಹಿಸುತ್ತಾರೆ. ಇದನ್ನು ಕಂದಾಯ ಇಲಾಖೆಯವರು ಕಲೆಕ್ಟ್ ಮಾಡಬೇಕು. ಇದು ಎಷ್ಟು

ಡಿಮಾಂಡ್ ಇದೆ ಎಷ್ಟು ವಾಟರ್ ರೇಟ್ ಇದೆ ಎಂಬುದು ಬಹುಶಃ ನೀರಾವರಿ ಇಲಾಖೆಯವರಿಗೆ ಗೊತ್ತಿಲ್ಲ. ಈ ವಿಚಾರವಾಗಿ ರೆವಿನ್ಯೂ ಇಲಾಖೆಯವರನ್ನು ಕೇಳಿದರೆ ಅವರು ಏನು ಹೇಳುತ್ತಿದ್ದಾರೆಂದರೆ ಇದು ನಮ್ಮ ಜವಾಬ್ದಾರಿಯಲ್ಲ. ಇದು ನೀರಾವರಿ ಇಲಾಖೆಯವರಿಗೆ ಸೇರಿದ್ದೆಂದು ಹೇಳುತ್ತಾರೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಇದು ನಮಗೆ ಸಂಬಂಧವಿಲ್ಲವೆಂದು ಹೇಳುತ್ತಾರೆ. ನಮಗೆ ಅವರು ಡಿಮಾಂಡ್ ಕಳುಹಿಸುತ್ತಾರೆ, ನಾವು ಪುಸ್ತಕದಲ್ಲಿ ನಮೂದು ಮಾಡುತ್ತೇವೆಂದು ಹೇಳುತ್ತಾರೆ. ಹಾಗಾಗಿ ಇದಕ್ಕೆ ಯಾರು ಜವಾಬ್ದಾರಿ ಎನ್ನುವುದನ್ನು ನಾವು ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ನಾನು ಒಂದು ವಿಚಾರವನ್ನು ನಿಮಗೆ ಹೇಳಬೇಕೆಂದರೆ ಸಂಪನ್ಮೂಲಗಳ ಕೊರತೆಯನ್ನು ತುಂಬುವಂಥಾದ್ದಕ್ಕೆ ಒತ್ತಾಸೆಯನ್ನು ನೀಡುತ್ತಿದ್ದೇನೆಂದರೆ ಇದಕ್ಕೆ ಮಾನ್ಯ ಮಂತ್ರಿಗಳು ಹೆಚ್ಚು ಆಧ್ಯತೆಯನ್ನು ನೀಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ 1992-93ರಲ್ಲಿ 52 ಕೋಟಿ ರೂಪಾಯಿಗಳು ಬರಬೇಕಾಗಿದೆ. ಅದರಲ್ಲಿ ವೈಯಲೇಷನ್ ಆಫ್ ಕ್ರಾಪಿಂಗ್ ಪ್ಯಾಟರ್ನ್, ಅನ್ ಅಥಾರೈಸ್ ಇರಿಗೇಷನ್ ಕೂಡಿಸಿಕೊಂಡು 52 ಕೋಟಿ ರೂಪಾಯಿಗಳು ಬರಬೇಕಾಗಿದೆ. 1993-94ರಲ್ಲಿ 59 ಕೋಟಿ ರೂಪಾಯಿಗಳು ಬರಬೇಕಾಗಿದೆ. 1994-95ರಲ್ಲಿ 57 ಕೋಟಿ ರೂಪಾಯಿಗಳು ಬರಬೇಕಾಗಿದೆ, 1995-96ರಲ್ಲಿ 60 ಕೋಟಿ ರೂಪಾಯಿಗಳು, 1996-97ರಲ್ಲಿ 55 ಕೋಟಿ ರೂಪಾಯಿಗಳು ಬರಬೇಕಾಗಿದೆ. ಇವರು ಎಷ್ಟು ಕಲೆಕ್ಟ್ ಮಾಡಿದ್ದಾರೆಂಬುದನ್ನು 5-10 ವರ್ಷಗಳ ಲೆಕ್ಕವನ್ನು ತೆಗೆದು ನೋಡಲಿ, ಎಂತಹ ದುರದೃಷ್ಟಕರವೆಂದರೆ 50 ಕೋಟಿ ರೂಪಾಯಿಗಳಲ್ಲಿ 5 ಕೋಟಿ ರೂಪಾಯಿಗಳನ್ನೂ ಸಹ ಕಂದಾಯ ಇಲಾಖೆಯವರು ವಸೂಲು ಮಾಡಲಿಲ್ಲ. ಈ ರೀತಿಯಾದರೆ ಯೋಜನೆಗಳನ್ನು ಮುಗಿಸಬೇಕೆಂದರೆ ಎಲ್ಲಿಂದ ಹಣವನ್ನು ತರುವುದು, ಯಾರಿಂದ ತರುವಂಥಾದ್ದು, ಏನು ನೋಟ್ ಪ್ರಿಂಟ್ ಮಾಡಿ ಈ ನೀರಾವರಿಗೆ ಕೊಡುವುದೇ ಇದು ಸಾಧ್ಯವೇ ಇಲ್ಲ. ಈ ಇರಿಗೇಷನ್ ಆ್ಯಕ್ಟ್ ಬದಲಾವಣೆಯಾಗಬೇಕು. ನೀವು ದಯಮಾಡಿ ಕಾನೂನು ತೆಗೆದುಕೊಂಡು ಬನ್ನಿ. ಯಾವ ಅಧಿಕಾರಿಗಳು ವಸೂಲಿ ಮಾಡುವಂಥಾದ್ದಕ್ಕೆ ಮುತುವರ್ಜಿಯನ್ನು ವಹಿಸುವುದಿಲ್ಲ. ನೀವು ಕೊಟ್ಟಿರುವಂತಹ ಹಣವನ್ನು ನೀರಾವರಿ ಇಲಾಖೆಯವರು ಉಪಯೋಗ ಮಾಡುವುದರಲ್ಲಿ ಬಹಳ ದಕ್ಷತೆಯನ್ನು ತೋರಿಸುತ್ತಾರೆ. ಆದೇ ಮೆಂಟೈನ್ ಮತ್ತು ಡಿಮಾಂಡ್ ವಸೂಲಿ ಮಾಡುವಂಥಾದ್ದಕ್ಕೆ ಅಧಿಕಾರಿಗಳು ಮನಸ್ಸು ಮಾಡುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಆದುದರಿಂದ ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟು ನೀರಾವರಿ ಇಲಾಖೆಯಿಂದ ಬರಬೇಕಾದಂತಹ ಹಣ ಏನಿದೆ. ಇದನ್ನು ಮುತುವರ್ಜಿ ವಹಿಸಿ ವಸೂಲು ಮಾಡಿದರೆ ಇಲ್ಲಿಯವರೆಗೆ ಏನು ವಸೂಲಿಯಾಗಿಲ್ಲ, ಅದು ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಒಂದು ವರ್ಷದಲ್ಲಿ ವಸೂಲಿ ಮಾಡಬಹುದು. ತಾವು ಇದನ್ನು ವಸೂಲಿ ಮಾಡಲು ಏನಾದರೂ ತೊಂದರೆ ಇದೆಯೆಂದರೆ ಕಾನೂನನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಈ ನೀರಾವರಿ ಕಾನೂನನ್ನು ತಿದ್ದುಪಡಿ ಮಾಡಿ, ನಾನು ಈ ನೀರಾವರಿ ಆ್ಯಕ್ಟನ್ನು ಏಕೆ ತಿದ್ದುಪಡಿ ಮಾಡಬೇಕೆಂದು ಹೇಳುತ್ತಿದ್ದೇನೆಂದರೆ ಇಲ್ಲಿ ಕೇವಲ ಹಣವನ್ನು ಸಂಗ್ರಹ ಮಾಡುವುದೊಂದೇ ಅಲ್ಲ, ಇಲ್ಲಿ ಹಣದ ಸಂಗ್ರಹದ ಜೊತೆಗೆ ನೀರಿನ ಸದ್‌ಬಳಕೆಯನ್ನು ಮಾಡುವುದಕ್ಕೆ ಕೂಡ

ಸಾಧ್ಯವಾಗುತ್ತದೆ. ಇವತ್ತು ಏನಾಗಿದೆ ಎಂದರೆ ರಿಜರ್‌ವಾಯರ್‌ಗೆ ಸಮಸ್ಯೆಗಳು ಅನೇಕ ಇವೆ. ನಾವು ಇವತ್ತು ಡ್ಯಾಮ್‌ಗಳನ್ನು ಕಟ್ಟಿದ್ದೇವೆ. ಈ ಡ್ಯಾಮ್‌ಗಳನ್ನು ಕಟ್ಟಿ ಸುಮಾರು 30-40 ವರ್ಷಗಳಾಗಿವೆ. ಈ ಡ್ಯಾಮ್‌ಗಳು ಸುರಕ್ಷಿತವಾಗಿದೆಯೋ, ಇಲ್ಲವೋ, ಎನ್ನುವುದನ್ನು ತಾವು ಒಮ್ಮೆಯಾದರೂ ಹೋಗಿ ನೋಡಿದ್ದೀರಾ? ತಾವು ಬಹುತೇಕ ಡ್ಯಾಮ್‌ಗಳ ಒಳಗಡೆ ಹೋಗಿಲ್ಲವೆಂದು ನನಗನ್ನಿಸುತ್ತದೆ. ಆದುದರಿಂದ ಕೊನೆಯ ಪಕ್ಷ ಒಮ್ಮೆಯಾದರೂ ಹೋಗಿ ಎಂದು ಹೇಳುತ್ತೇನೆ. ಈ ಡ್ಯಾಂಗಳ ಸುರಕ್ಷತೆ ಕೂಡ ಬಹಳ ಮುಖ್ಯವಾಗಿದೆ. ಈ ಡ್ಯಾಮ್‌ಗಳಲ್ಲಿ ಹೂಳು ತುಂಬಿ ಸಿಲ್ಟ್ ಅಫ್ ಆಗಿ ಸುಮಾರು 20 ವರ್ಷಗಳಾಗಿವೆ. ಅವು ನವಿಲುತೀರ್ಥ, ತುಂಗಭದ್ರಾ, ಭದ್ರಾ, ಹಾರಂಗಿ, ಹೇಮಾವತಿ, ಇವುಗಳು ಸಿಲ್ಟ್ ಅಫ್ ಆಗಿದೆ. ಅವುಗಳು ಎಷ್ಟು ಸಿಲ್ಟ್ ಅಫ್ ಆಗಿದೆ ಎಂಬುದು ತಾವು ಉತ್ತರವನ್ನು ಹೇಳುವಂತಹ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದನ್ನು ಯಾರೂ ಇದುವರೆಗೂ ಸರ್ವೆ ಮಾಡಿಸಲಿಲ್ಲ. ಒಂದು ವೇಳೆ ಅದರ ಮೇಲೆ ಕ್ರಮ ಕೈಗೊಳ್ಳಲಿಲ್ಲವೆಂದರೆ ಕೊನೆ ಪಕ್ಷ ಗಿಡಗಳನ್ನು ನೆಡುವಂಥಾದ್ದು ಪ್ಲಾಂಟೇಷನ್ ಮಾಡುವಂಥಾದ್ದು ಮಾಡಿ ಈ ಸಿಲ್ಟ್ ಆಗುವಂಥಾದ್ದನ್ನು ತಪ್ಪಿಸದೇ ಹೋದರೆ ಅದು ಸ್ಟೋರೇಜ್ ಆಫ್ ಟ್ಯಾಂಕ್ ಆಗಬಹುದು. ಆದುದರಿಂದ ಆ ದೃಷ್ಟಿಯಿಂದ ತಾವು ಮುಂಜಾಗ್ರತೆಯ ಕ್ರಮವನ್ನು ಮಾನ್ಯ ಮಂತ್ರಿಯವರು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಕಾಲುವೆಗಳ ವಿಚಾರದಲ್ಲಿ ಕೂಡ ಬಹಳ ಎಕ್ಸೆಸ್ ವಾಟರ್ ಬಿಟ್ಟು ನೀರಿನ ಸದ್‌ಬಳಕೆ ಸರಿಯಾಗಿ ಪಡೆಯದಿರುವುದರಿಂದ ಕಾಲುವೆಗಳ ಸೋರಿಕೆ ಮತ್ತು ನೀರಿನ ಸದ್‌ಬಳಕೆ ಸರಿಯಾಗಿ ಮಾಡದೇ ಇರುವುದರಿಂದ ಕಾಲುವೆಗಳು ಒಡೆದು ರೈತರು ನೀರನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯಾಗಿದೆ. ಯಾವ ನೀರಾವರಿಯ ಅಧಿಕಾರಿಗಳು ಅವರ ಜೀವವನ್ನು ಒತ್ತೆ ಇಟ್ಟು ನೀರನ್ನು ಹರಿಸುವಂತಹ ಪ್ರಯತ್ನದಲ್ಲಿಲ್ಲ. ಅನೇಕ ಸಲ ನೀರಾವರಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ ನಮಗೇಕೆಬೇಕು, ನಮ್ಮ ಹೆಂಡತಿ ಮಕ್ಕಳು ಸುಖವಾಗಿದ್ದಾರಲ್ಲಾ, ನಾವು ಸುಖವಾಗಿರುತ್ತೇನೆಂಬ ಭಾವನೆಯಲ್ಲಿರುತ್ತಾರೆ. ಈ ರೈತರ ಕಡೆಯಿಂದ ಹೊಡೆತಕ್ಕೆ ಗುರಿಯಾಗುವಂತಹ ಪರಿಸ್ಥಿತಿ ನಮಗೆ ಏಕೆ ಬೇಕೆನ್ನುವಂತಹ ಬಹಳ ನಿಷ್ಕಾಳಜಿಯನ್ನು ಮಾಡುವಂತಹ ಅಧಿಕಾರಿಗಳು ಇರುವುದರಿಂದ ಇವತ್ತು ನೀರಾವರಿಯ ವ್ಯವಸ್ಥೆ ಬಹಳ ಹದಗೆಟ್ಟಿದೆ. ತಾವು ಇದರ ಬಗ್ಗೆ ಆಸಕ್ತಿ ವಹಿಸಬೇಕಾಗುತ್ತದೆ. ಈ ಐವತ್ತು ವರ್ಷಗಳಿಂದ ಆಗಿರುವಂತಹ ಅನಾಹುತಗಳು ಬಹುಶಃ ಇನ್ನು ಹತ್ತುವರ್ಷಗಳು ಇದೇ ರೀತಿಯಲ್ಲಿ ಮುಂದುವರೆದರೆ ನಮ್ಮ ನಾಡಿನಲ್ಲಿರುವಂತಹ ಎಲ್ಲಾ ಭೂಮಿಗಳು ಬಂಜರು ಭೂಮಿಗಳಾಗುವುದರಲ್ಲಿ ಸಂದೇಹವಿಲ್ಲ ಇದರ ಬಗ್ಗೆ ತಾವು ಬೇಕಾದರೆ ಸತ್ವ ಪರೀಕ್ಷೆ ಮಾಡಿಸಿ, ತಾವು ಇನ್‌ಸ್ಪೆಕ್ಷನ್ ಮಾಡಿ. ಇವತ್ತು ಉದಾಹರಣೆಗೆ ಹೇಳುವುದಾದರೆ ಉಪಾಧ್ಯಕ್ಷರ ತಾಲ್ಲೂಕಿನಲ್ಲಿ ಸುಮಾರು 25-30 ಸಾವಿರ ಎಕರೆ ಸವಳು ಜಮೀನು ಆಗುತ್ತಿದೆ. ಈ ರೀತಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ನೀರಿನ ಬಳಕೆ ಸರಿಯಾಗಿ ಆಗದೇ ಇದ್ದರೆ ನೀರು ನಮಗೆ ಎಷ್ಟು ಉಪಯೋಗವಾಗುತ್ತದೆಯೋ ಅಷ್ಟೇ ಕೆಡುಕು ಆಗಬಹುದು. ಆ ದೃಷ್ಟಿಯಿಂದ ಈ ನೀರಾವರಿ ಆ್ಯಕ್ಟ್ ಅನ್ನು ಜಾರಿಗೆ ತಂದು ಈ ನೀರಾವರಿ ಅಧಿಕಾರಿಗಳಿಗೆ ಕಂದಾಯವನ್ನು ವಸೂಲು ಮಾಡುವಂಥಾದ್ದು ಕೊಡಬೇಕು, ಮತ್ತೆ ಅವರಿಗೆ ಮ್ಯಾಜಿಸ್ಟೀರಿಯಲ್

ಪವರ್ ಕೊಡಬೇಕು. ಈ ಕೆಲಸ ಅವರಿಗೆ ಆಗದೆ ಹೋದರೆ ನೀರಿನ ಬಳಕೆದಾರರ ಸಂಘಗಳ ಮೂಲಕ ವಂತಿಗೆಯನ್ನು ಕೊಡಿಸುವಂತಹ ಹೆಚ್ಚಿನ ಜವಾಬ್ದಾರಿಯನ್ನು ಅವರಿಗೆ ಕೊಟ್ಟರೆ ನೀರಿನ ನಿರ್ವಹಣೆಯನ್ನು ಅವರೇ ಮಾಡುತ್ತಾರೆ, ಕಂದಾಯವನ್ನು ಅವರೇ ವಸೂಲಿ ಮಾಡುತ್ತಾರೆ. ಈ ರೀತಿಯಾದರೆ ನೀರಾವರಿ ಯೋಜನೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಬಹುದು. ಆ ದೃಷ್ಟಿಯಿಂದ ತಾವು ಮನಸ್ಸು ಮಾಡಿ ಕೆಲಸವನ್ನು ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

4.10 ಪಿ.ಎಂ.

ಇನ್ನು ಅನಾವಶ್ಯಕವಾದ ಸಿಬ್ಬಂದಿಗಳಿದ್ದಾರೆ. ಕೆಲವು ಕಡೆ ಕಾಲುವೆ, ಡ್ಯಾಂಗಳ ಕೆಲಸ ಮುಗಿದಿದ್ದರೂ ಆ ಸಬ್ ಡಿವಿಷನ್‌ಗಳನ್ನು ಹಾಗೆಯೇ ಮುಂದುವರೆಸಿದ್ದೇವೆ. ಅದನ್ನು ದಯವಿಟ್ಟು ಕಿತ್ತು ಎಲ್ಲಿ ಕೆಲಸ ಇದೆಯೋ ಅಲ್ಲಿ ಅವರನ್ನು ನಿಯೋಜಿಸಬಹುದು. ಹಿಂದೆ ಎರಡು ಮೂರು ಚೀಫ್ ಇಂಜಿನಿಯರ್‌ಗಳು ನೀರಾವರಿ ಯೋಜನೆಗಳನ್ನು ಬಹಳ ಅಚ್ಚುಕಟ್ಟಾಗಿ, ಅಡ್ಮಿನಿಸ್ಟ್ರೇಟೀವ್ ಆಗಿ ನಡೆಸುತ್ತಿದ್ದರು. ಇವತ್ತು ಇಪ್ಪತ್ತು, ಇಪ್ಪತ್ತಮೂರು ಜನ ಚೀಫ್ ಇಂಜಿನಿಯರ್‌ಗಳಿದ್ದರೂ ಕೂಡ ಇವತ್ತು ಅಂಥ ಏನು ದಕ್ಷತೆಯನ್ನು ಇವತ್ತು ಅಲ್ಲಿ ಕಾಣುತ್ತಿಲ್ಲ. ಇವತ್ತು ಇನ್ನು ಇಪ್ಪತ್ತು ಚೀಫ್ ಇಂಜಿನಿಯರ್‌ಗಳನ್ನು ಮಾಡಿದರೆ ಆಡಳಿತ ಎಂದೂ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲ. ಇರುವ ಇಂಜಿನಿಯರ್‌ಗಳ ದಕ್ಷತೆಯನ್ನು ಹೆಚ್ಚು ಮಾಡಬೇಕಾದರೆ ಪೀರಿಯಾಡಿಕಲ್ ಇನ್‌ಸ್ಪೆಕ್ಷನ್ ಅನ್ನು ಕೂಡ ತಾವು ಮಾಡಬೇಕಾಗುತ್ತದೆ; ತಾವು ಅನಿರೀಕ್ಷಿತ ಭೇಟಿಗಳನ್ನು ಕೂಡ ಕೊಡಬೇಕಾಗುತ್ತದೆ. ಆ ಮೇಲೆ ಬೆಂಗಳೂರಿನ ಸಚಿವಾಲಯದಲ್ಲಿ ಕುಳಿತು ಕೆಲಸ ಮಾಡುವವರನ್ನು ಬಿಡಿಸಿ ಅವರನ್ನು ಸಾಧ್ಯವಿದ್ದಷ್ಟು ವೇಳೆ ಕಾಲುವೆ ಇನ್‌ಸ್ಪೆಕ್ಷನ್‌ಗೆ ಕಳುಹಿಸಿದ್ದೇ ಆದರೆ, ತಿಂಗಳಿಗೆ ಒಂದು ಸಾರಿ ಆ ಕಾಲುವೆಗೆ ಹೋಗಲಿ, ಡ್ಯಾಂಗೆ ಭೇಟಿ ಕೊಡಲಿ, ಡ್ಯಾಂನಲ್ಲಿರುವ ಅನೇಕ ಸಮಸ್ಯೆಗಳನ್ನು ಚರ್ಚೆ ಮಾಡಲಿ ಅದರಿಂದ ಸಮಸ್ಯೆಗಳು ಇತ್ಯರ್ಥವಾಗುತ್ತವೆ. ಇಲ್ಲಿ ಬೆಂಗಳೂರಿನಲ್ಲಿ ಕುಳಿತು ಸಭೆಗಳನ್ನು ಮಾಡುವುದರಿಂದ ಯಾವುದೇ ಯೋಜನೆ, ಸಮಸ್ಯೆಗಳು ಪರಿಹಾರವಾಗುವುದಕ್ಕೆ ಸಾಧ್ಯವಿಲ್ಲವೆನ್ನುವುದು ನನ್ನ ವೈಯಕ್ತಿಕ ವಿಚಾರವಾಗಿದೆ. ದಯವಿಟ್ಟು ಅದನ್ನು ಮಾಡಿದಾಗ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆನ್ನುವುದನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಸಾಮಾನ್ಯವಾಗಿ ಹೆಚ್ಚು ಮಾತನಾಡುವ ಸ್ವಭಾವವಲ್ಲ ನಿಮ್ಮದು, ಸಾಮಾನ್ಯವಾಗಿ ನಾನು ಸಮಯಕೊಟ್ಟರೂ ಮಾತನಾಡುವುದಿಲ್ಲ, ಹತ್ತೇ ನಿಮಿಷದಲ್ಲಿ ಮುಗಿಸುವವರು ಇವತ್ತು ಏತಕ್ಕೆ ಹೀಗೆ?

ಶ್ರೀ ಟಿ.ಬಿ. ಜಯಚಂದ್ರ : ಸಂಪನ್ಮೂಲವನ್ನು ಯಾವ ರೀತಿ ಖರ್ಚು ಮಾಡಬೇಕೆನ್ನುವ ಸಲಹೆಯನ್ನು ಬಹುಶಃ ಯಾರೂ ಕೊಡದಿರುವುದನ್ನು ಅವರು ಕೊಡುತ್ತಿದ್ದಾರೆ, ಆಡಳಿತ ಮಾಡಿ ಅನುಭವವಿರತಕ್ಕಂಥವರು, ಅದು ಸರ್ಕಾರದ ದೃಷ್ಟಿಯಿಂದ ಬಹಳ ಉಪಯುಕ್ತವಾಗಿರತಕ್ಕಂಥದ್ದು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಹೆಚ್ಚು ಮಾತನಾಡುವ ಸ್ವಭಾವ ಅವರದಲ್ಲ, ಅದಕ್ಕೆ ಹೇಳಿದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಅವರು ವಿರೋಧಪಕ್ಷದ ಸದಸ್ಯರಿಗಿಂತ ಹೆಚ್ಚಾಗಿ ನಮ್ಮ ನೀರಾವರಿ ಮಂತ್ರಿಗಳ ರೀತಿಯಲ್ಲೇ ಮಾತನಾಡುತ್ತಿದ್ದಾರೆ, ಅವರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬಹುದು.

ಶ್ರೀ ಟಿ. ಬಿ. ಜಯಚಂದ್ರ : ಸರ್ಕಾರ ಒಪ್ಪಿಕೊಂಡ ಮೇಲೆ ಕನಿಷ್ಟ ಪಕ್ಷ ಅರ್ಧಗಂಟೆ ಕಾಲವಾದರೂ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಡಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಆ ದೃಷ್ಟಿಯಿಂದ ತಾವು ಇವತ್ತು ಕುಳಿತು ಅನಾವಶ್ಯಕವಾಗಿರುವ ಸಬ್ ಡಿವಿಜನ್‌ಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕಿ, ಅದಕ್ಕೆ ರಾಜಕೀಯ ಒತ್ತಡಗಳು ಬರಬಹುದು ಆದರಿಂದ ಏನು ಪ್ರಯೋಜನವಾಗುವುದಿಲ್ಲ, ಅದರಿಂದ ಒಳ್ಳೆಯ ಹೆಸರು ಬರುವುದಿಲ್ಲ ದಯವಿಟ್ಟು ಆ ಸಬ್‌ಡಿವಿಜನ್‌ಗಳನ್ನು ಬಂದ್ ಮಾಡಿ ಎಲ್ಲಿ ಕೆಲಸವಿರುತ್ತದೆ ಅಲ್ಲಿ ಕೆಲಸ ನಿರ್ವಹಿಸುವುದಕ್ಕೆ ಹಾಕಬೇಕು. ನಾನು ಎಲ್ಲರಲ್ಲೂ ವಿನಂತಿ ಮಾಡಿಕೊಂಡು ಹೇಳುತ್ತೇನೆ, ಬಹುತೇಕ ಒಪ್ಪುತ್ತೀರೋ ಇಲ್ಲವೋ ಇನ್ನು ಉಳಿದಿರುವ ಎರಡು ವರ್ಷಗಳ ಅವಧಿಯೊಳಗೆ ಈ ನೀರಾವರಿಗೆ ಕೊಟ್ಟಿರುವ ಅನುದಾನ ಇನ್ನೂ ಕಡಿಮೆ ಎನಿಸುತ್ತದೆ. ಅದಕ್ಕೆ ಬಹುತೇಕ ಎಲ್ಲಾ ಅಧಿಕಾರಿಗಳ ಮೇಲೆ ಟ್ಯಾಕ್ಸ್ ಹಾಕಿ ತಪ್ಪೇನು ಇಲ್ಲ ಅಥವಾ ಎರಡು ವರ್ಷದೊಳಗೆ ಈ ನೀರಾವರಿ ಯೋಜನೆಗೆ ಹೆಚ್ಚು ಅನುದಾನವನ್ನು ಕೊಟ್ಟು ಅನುದಾವನ್ನು ರಸ್ತೆಗಳಿಗೆ ಬಂದ್ ಮಾಡಿ, ತಾವು ಒಪ್ಪುವುದಾದರೆ ಜನತಾ ಮನೆಗಳನ್ನು ಕಟ್ಟುವುದನ್ನಾದರೂ ಬಂದ್ ಮಾಡಿ, ಎರಡು ವರ್ಷ ವೃದ್ಧಾಪ್ಯವೇತವನ್ನು ಕೊಡುವುದನ್ನು ಬೇಕಾದರೆ ಬಂದ್ ಮಾಡಿ ಏನು ಪ್ರಳಯವೇನು ಆಗುವುದಿಲ್ಲ. ದಯವಿಟ್ಟು ನೀರಾವರಿ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಮುಗಿಸುವುದಕ್ಕೆ ಇನ್ನು ಸಾವಿರಾರು ಕೋಟಿ ರೂಪಾಯಿಗಳನ್ನು ಸಂದಾಯ ಮಾಡುವ ಕೆಲಸವನ್ನು ಮಾಡಿ; ಇದಕ್ಕೆ ನಾನಂತೂ ಆತ್ಮಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ನಾವೇನು ಆಪತ್ತುಗಳನ್ನು ಅನುಭವಿಸುತ್ತೇನೆ ಆದಾಗಬಾರದೆನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ದಯವಿಟ್ಟು ಆಯವ್ಯಯದಲ್ಲಿ ಇನ್ನೂ ಹೆಚ್ಚಿನ ಹಣವನ್ನು ನೀರಾವರಿಗೆ ಒದಗಿಸಬೇಕೆಂದು ಕೇಳುತ್ತೇನೆ, ಮತ್ತು ನಿಗದಿತ ಅವಧಿಯೊಳಗೆ ಈ ಕಾಮಗಾರಿಗಳು ಮುಗಿಯುವುದರಿಂದ ಬಹುಶಃ ಎಸ್ಕಲೇಷನ್ ಏನು ಹೆಚ್ಚಿಗೆ ಆಗುತ್ತದೆ ಅದ ಕಡಿಮೆಯಾಗುತ್ತದೆ. ಆದರೆ ದುರಾದೃಷ್ಟವಶಾತ್ ಅದನ್ನು ನಿಗದಿತ ಅವಧಿಯೊಳಗೆ ಅದನ್ನು ಮುಗಿಸುವುದೇ ಇಲ್ಲ. ಯಾವುದಾದರೂ ಕಾರಣದಿಂದ ಮುಂದೂಡಿ ಎರಡು ವರ್ಷಗಳಾಗುವುದನ್ನು ನಾಲ್ಕು, ಹತ್ತು ವರ್ಷಗಳವರೆಗೆ ಮುಂದೂಡುವ ಪದ್ಧತಿ ಏನಿದೆ ಅದನ್ನು ತಪ್ಪಿಸಿ ನಿಗದಿತ ಕಾಲದೊಳಗೆ ಆದರೆ ಇಪತ್ತು ಹತ್ತು ಕೋಟಿಯಲ್ಲಾಗಬೇಕಾದ ಕೆಲಸ ಹತ್ತು ಕೋಟಿ ರೂಪಾಯಿಗಳಲ್ಲೇ ಮುಗಿಯುತ್ತದೆ. ಹಾಗೆಯೇ ಈಗ ನಮ್ಮ ಡಿವಿಜನ್‌ಗಳಲ್ಲಿ ಏನು ಖರೀದಿ ಮಾಡುತ್ತಿದ್ದಾರೆ, ನಿಮಗು ಗೊತ್ತಿರುವಂತೆ, ಎಲ್ಲಾ ಡಿವಿಜನ್‌ಗಳಲ್ಲಿ ಅನಾವಶ್ಯಕವಾಗಿ ಯಾವುದೇ ಉಪಯೋಗವಿಲ್ಲದ ವಸ್ತುಗಳನ್ನು ಉದ್ದೇಶಪೂರ್ವಕವಾಗಿ ಸರ್ಕಾರಕ್ಕೆ ಮೋಸಮಾಡಬೇಕೆಂದು ಸರ್ಕಾರಕ್ಕೆ

ಕಣ್ಣುಮುಚ್ಚಬೇಕೆಂದು ಎಲ್ಲಾ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಖರೀದಿ ಮಾಡುತ್ತಾರೆ. ದಯವಿಟ್ಟು ಅದನ್ನು ತಾವು ಪೂರ್ತಿ ಬಂದ್ ಮಾಡಬೇಕು. ಯಾವುದಾದರೂ ತುಂಬಾ ಅವಶ್ಯಕತೆ ಇದ್ದಲ್ಲಿ ಸರ್ಕಾರದ ಅನುಮತಿಯನ್ನು ಪಡೆದು ಖರೀದಿ ಮಾಡುವ ಕಾನೂನನ್ನು ದಯಮಾಡಿ ತರಬೇಕು. ಆ ಖರೀದಿ ಮಾಡುವ ಉದ್ದೇಶ ಅಷ್ಟೇ ಅಲ್ಲ, ಈ ಕಾಲುವೆ ತೋಡುವುದರಲ್ಲಿ ಎಲ್ಲಾ ಇಂಜಿನಿಯರ್‌ಗಳು ಏನು ಮಾಡುತ್ತಾರೆಂದರೆ, ಎಕ್ಸಿಕ್ಯೂಷನ್‌ಗೆ ಎಷ್ಟು ಆಸಕ್ತಿಯನ್ನು ತೋರಿಸುತ್ತಾರೋ ಅಷ್ಟು ಪೊಟೆನ್‌ಷಿಯಾಲಿಟಿಗೆ ಆಸಕ್ತಿ ತೋರಿಸುವುದಿಲ್ಲ; ಇದು ನಿಮ್ಮೆಲ್ಲರಿಗೂ ಕೂಡ ಗೊತ್ತಿದೆ. ನಾವು ಕಾಲುವೆಗಳನ್ನು ತೋಡುವುದರಲ್ಲಿ ಎಷ್ಟು ಆಸಕ್ತಿಯನ್ನು ತೋರಿಸುತ್ತೇವೆ ಅಷ್ಟೇ ಪ್ರಮಾಣದಲ್ಲಿ ನೀರಿನ ಪೊಟೆನ್‌ಷಿಯಾಲಿಟಿಯನ್ನು ಕ್ರಿಯೇಟ್ ಮಾಡುವುದರಲ್ಲಿ ಯಾರು ಆಸಕ್ತಿಯನ್ನು ತೋರಿಸುವುದಿಲ್ಲ ಇದಕ್ಕೆ ನಾನು ಮಲಪ್ರಭಾ ಎಡದಂಡೆ ಕಾಲುವೆಯನ್ನು ಉದಾಹರಣೆ ಕೊಡುತ್ತೇನೆ. ಈ ಕಾಲುವೆಯಲ್ಲಿ 168 ಕಿ.ಮೀ. ಉದ್ದ ಅದರಲ್ಲಿ ಸುಮಾರು 130 ರಿಂದ 142 ಕಿ.ಮೀ.ವರೆಗೆ ತಾವು ಈಗ ಕಾಲುವೆ ತೋಡುವವರಿದ್ದೀರಿ. ಈ ಮಧ್ಯೆ ಸುಮಾರು 122 ಕಿ.ಮೀ.ನಲ್ಲಿ ಯಾವುದೋ ಕಾರಣದಿಂದ 3 ವರ್ಷದಿಂದ ನಿಂತು ಹೋಗಿದೆ. ಅಷ್ಟೇ ಅಲ್ಲ, ಆ ಕೆಲಸವನ್ನು ಕೂಡ ಕಾರ್ಯಗತ ಮಾಡುವುದಿಲ್ಲ ಅದರ ಜೊತೆಗೆ 142 ಕಿ.ಮೀ ಮಧ್ಯದಲ್ಲಿ ಎಷ್ಟು ಡಿಸ್ಟ್ರಿಬ್ಯೂಟರ್‌ಗಳು ಬರುತ್ತವೆ ಎಷ್ಟು ಹಂಚಿಕೆಗಳು ಬರುತ್ತವೆ ಎಷ್ಟು ಸಿಡಿ ವರ್ಕ್‌ಗಳು ಬರುತ್ತವೆ, ಆ ಸಿಡಿ ವರ್ಕ್‌ಗಳನ್ನು ಮಾಡುವುದಕ್ಕೆ ಇಂಜಿನಿಯರ್‌ಗಳು ಮನಸ್ಸು ಮಾಡುವುದಿಲ್ಲ, ಹಾಗಾದರೆ ಈ ಉದ್ದೇಶ ಸಾಧ್ಯವಾಗುವುದಿಲ್ಲ. ಯಾವ ರೀತಿ ಕಾಲುವೆಗಳ ಬಗ್ಗೆ ಆಸಕ್ತಿಯನ್ನು ತೋರಿಸುತ್ತೀರಿ ಅಷ್ಟೇ ಪ್ರಮಾಣದಲ್ಲಿ ಆಸಕ್ತಿಯನ್ನು ವಿತರಣೆಯಲ್ಲಾಗಲಿ ಔಟ್‌ಲೇಟ್ಸ್‌ಗಳನ್ನಾಗಲಿ ಮಾಡಿದ್ದೇ ಆದರೆ ಇರಿಗೇಷನ್ ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಆಗುತ್ತದೆ. ಆದರೆ, ದುರಾದೃಷ್ಟವಶಾತ್ ನಾವು ಕಾಲುವೆಗಳನ್ನು ತೋಡುವುದರಲ್ಲೇ ಆಸಕ್ತಿ ತೋರಿಸುತ್ತೇವೆ ವಿನಹ ಈ ನೀರಾವರಿಯಾಗಬೇಕೆನ್ನುವುದರ ಬಗ್ಗೆ ಯಾರೇ ಇಂಜಿನಿಯರ್ ಕೂಡ ಆಸಕ್ತಿ ತೋರಿಸವುದಿಲ್ಲವೆನ್ನುವುದು ಬಹುಶಃ ತಮ್ಮ ಅನುಭವಕ್ಕೂ ಬಂದಿರುವ ವಿಚಾರ. ಆ ದೃಷ್ಟಿಯಿಂದ ಎಷ್ಟು ಹಣವನ್ನು ವೆಚ್ಚ ಮಾಡುತ್ತಾರೋ ಅವರಿಗೆ ಇಷ್ಟೇ ನೀರಾವರಿಯಾಗಬೇಕೆಂದು ಒಂದು ಪ್ರೋಗ್ರಾಂ ಕೊಡಿ. ಇರುವ ಅಂಕಿ ಸಂಖ್ಯೆಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಬಹುಶಃ ಹೇಳಿದರೆ ತಾವು ತಪ್ಪು ತಿಳಿದುಕೊಳ್ಳುತ್ತೀರಿ. ಬಹುಶಃ ಈ ವರ್ಷವು ಕೂಡ ಒಂದು ಲಕ್ಷ ಹೆಕ್ಟೇರ್‌ಗೆ ನೀರಾವರಿಯನ್ನು ಕೊಡುತ್ತೀರೆಂದು ಹೇಳಿದಿರಿ, ಈ ವರ್ಷ 50 ಸಾವಿರ ಹೆಕ್ಟೇರ್ ಅನ್ನು ನೀರಾವರಿ ಮಾಡುವುದಕ್ಕೆ ನಮ್ಮ ಇಂಜಿನಿಯರ್‌ಗಳಿಗೆ ಆಗಿಲ್ಲ; ಅವರಿಗೆ ನೀರಾವರಿ ಬಗ್ಗೆ ಆಸಕ್ತಿ ಇಲ್ಲ, ಕಾಲುವೆ ತೋಡುವುದರ ಬಗ್ಗೆ ಆಸಕ್ತಿ ಇದೆ. ದಯವಿಟ್ಟು ಅದರ ಬಗ್ಗೆ ಹೆಚ್ಚು ಗಮನವನ್ನು ತಾವು ಕೊಡಬೇಕು; ಹೆಚ್ಚು ಪ್ರದೇಶ ನೀರಾವರಿಯಾಗಬೇಕೆಂದರೆ ತಾವು ವಿಶೇಷ ಆಸಕ್ತಿಯನ್ನು ಕೂಡ ತೋರಿಸಬೇಕಾಗುತ್ತದೆ. ಇನ್ನು ಭೂ ಸ್ವಾಧೀನದ ಬಗ್ಗೆ ಬಹುತೇಕ ನಮ್ಮ ಎಲ್ಲಾ ಇಂಜಿನಿಯರ್‌ಗಳು ನಾವು ಎಷ್ಟು ಆಸಕ್ತಿಯಿಂದ ಕಾಲುವೆಗಳನ್ನು ತೆಗೆದುಕೊಳ್ಳುತ್ತೇವೆ ಹಾಗೆಯೇ ರೈತರು ತಮ್ಮ ಜಮೀನನ್ನು ಕೊಟ್ಟಿರುತ್ತಾರೆ. ಆದರೆ ಒಬ್ಬ ಇಂಜಿನಿಯರ್ ಕೂಡ ರೈತನಿಗೆ ಹಣವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇದು

ಬಹಳ ದುರಾದೃಷ್ಟ, ಅವರು ಜಮೀನು ಕಳೆದುಕೊಂಡ ನಂತರ ಅವರಿಗೆ ಪರಿಹಾರ ಕೊಡಿಸುವುದಕ್ಕೆ ಆಸಕ್ತಿಯನ್ನು ತೋರಿಸದಿದ್ದರೆ ಮತ್ತೊಂದು ಯೋಜನೆಗೆ ಆ ಜಮೀನನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ರೈತ ಮನಸ್ಸು ಮಾಡುವುದಿಲ್ಲ. ಆ ದೃಷ್ಟಿಯಿಂದ ಇವತ್ತು ಭೂಸ್ವಾಧೀನದ ಪ್ರಕರಣಗಳು ಆಯಾಭಾಗದಲ್ಲಿ ಏನು ಪೆಂಡಿಂಗ್ ಇದ್ದಾವೆ, ಆಯಾ ಇಂಜನಿಯರ್‌ಗಳು ಸ್ವತಃ ಎಕ್ಸ್‌ಪಿಡೇಟ್ ಮಾಡಿ ರೈತರಿಗೆ ಹಣ ಕೊಡಿಸುವ ಕೆಲಸವನ್ನು ಮಾಡಬೇಕು. ಘಟಪ್ರಭಾ ಬಲದಂಡೆ ಯೋಜನೆ ಬಹುತೇಕ ಹತ್ತು ವರ್ಷಗಳಿಂದ ಹಾಗೆ ಇದೆ ಹೆಚ್ಚಿನ ಪ್ರಗತಿಯಾಗಿಲ್ಲ, ಅದಕ್ಕೆ ಹೆಚ್ಚಿನ ಹಣವನ್ನು ಆ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಹೇಳುತ್ತೇವೆ. ಇವತ್ತು ಸಣ್ಣ ನೀರಾವರಿ ಬಗ್ಗೆ ಹೇಳಬೇಕಾಗಿತ್ತು ಸಮಯ ಇಲ್ಲದ ಕಾರಣ ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ಕಂದಾಯ ಇಲಾಖೆ ಬಹಳ ಮುಖ್ಯವಾದ ಇಲಾಖೆ. ವಿಶೇಷವಾಗಿ ಆ ಇಲಾಖೆಯಲ್ಲಿ ಅವಿದ್ಯಾವಂತರು, ಮುಗ್ಧರು ಬಹಳ ಜನರಿರುವುದರಿಂದ ಆ ಇಲಾಖೆ ಬಹಳ ಗಂಭೀರವಾಗಿ ಕೆಲಸ ಮಾಡಬೇಕು. ಆದುದರಿಂದ ಇವತ್ತು ತಾವು ಯಾವುದೇ ಕೋರ್ಟಿನಿಂದ ಮಾಹಿತಿಯನ್ನು ತರಿಸಿಕೊಳ್ಳಬಹುದು, ಇವತ್ತು ರೈತರಿಗೆ ದ್ವೇಷಾಸೂಯೆ ಸೃಷ್ಟಿ ಮಾಡಿರುವುದು, ವ್ಯಾಜ್ಯಗಳು ಬೆಳೆದಿರುವುದು ಪೂರ್ಣವಾಗಿ ತಮ್ಮ ಇಲಾಖೆಯಿಂದ ಬ್ರಿಟೀಷರ ಕಾಲದಲ್ಲಿ ಏನು ಬಂತು ಅದು ಬಿಟ್ಟರೆ ಆ ಇಲಾಖೆಯಲ್ಲಿ ವಿಶೇಷವಾದ ಯಾವ ಬದಲಾವಣೆಯೂ ಇಲ್ಲ, ಇಡೀ ಭೂಮಿಯನ್ನು ರೀಸರ್ವೆ ಮಾಡಿ ಮೂವತ್ತು ವರ್ಷಗಳಾಯಿತು ಕರ್ನಾಟಕದಲ್ಲಿ ಶೇಕಡ 50 ರಿಂದ 60 ರಷ್ಟು ಮೊಕದ್ದಮೆಗಳು ನಾಶವಾಗಬೇಕಾದರೆ, ನಿಯಮಾವಳಿ ಪ್ರಕಾರ 30 ವರ್ಷಕ್ಕೊಂದು ಸಾರಿ ಜಮೀನು ರೀಸರ್ವೆಯಾಗಬೇಕು? ಆದರೆ ರೀಸರ್ವೆ ಯಾವಾಗ ಆಗಬೇಕು? ಆದರೆ ರೀಸರ್ವೆ ಯಾವಾಗ ಆಗುತ್ತದೆ. ತಾವು ರೀಸರ್ವೆ ಮಾಡಿಸಬೇಕು. ರೀಸರ್ವೆ ಮಾಡಿಸಿದರೆ ಸಮಸ್ಯೆ ಅರ್ಧ ಭಾಗ ಬದಲಾವಣೆಯಾಗುತ್ತದೆ. ಎರಡನೆಯದಾಗಿ, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ರೈತರು ತಾಲ್ಲೂಕು ಕಛೇರಿಗೆ ಹೋಗದೇ ಇರುವಂತೆ ಒಂದು ಪಾಸ್ ಬುಕ್ಕನ್ನು ಕೊಡಬಹುದಾಗಿತ್ತು. ಆದರೆ ಸುಮಾರು 1983-84ನೇ ಇಸವಿಯಿಂದ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ತಾವು ಅದನ್ನು ಹೇಳಿಕೊಂಡೇ ಬಂದಿದ್ದೀರಿ. ಆದರೆ ಯಾವುದೇ ಪಾಸ್ ಬುಕ್ಕನ್ನು ಇದುವರೆಗೂ ಕೊಟ್ಟಿಲ್ಲ. ಪಾಸ್ ಬುಕ್ ಮಾದರಿಯನ್ನು ತಯಾರು ಮಾಡಿದಿರಿ. ಆದರೆ ಪಾಸ್ ಬುಕ್ಕನ್ನು ಕೊಡಲಿಲ್ಲ. ಪಾಸ್ ಬುಕ್ಕನ್ನು ಕೊಡುವುದರ ಮೂಲಕ ರೈತರು ಪೂರ್ಣ ಪ್ರಮಾಣದಲ್ಲಿ ತಾಲ್ಲೂಕು ಕಛೇರಿಗೆ ಹೋಗದೇ ಇರುವಂತೆ ಮಾಡಬಹುದು. ವರ್ಷಕ್ಕೆ ಒಂದು ಸಲ ರೈತರಿಗೆ ಮನೆಗೆ ಆರ್.ಟಿ.ಸಿ. ಕೊಡತಕ್ಕಂಥ ಒಂದು ಚಿಂತನೆಯನ್ನು ಮಾಡಬೇಕು. ಇನ್ನು, ಯಾವುದೇ ಭೂಸ್ವಾಧೀನ ಇರಲಿ, 4(1), 6(1) ನೋಟಿಫಿಕೇಷನ್ 5, 6 ವರ್ಷಗಳಾಗಿದ್ದರೂ ಪೂರ್ಣ ಪ್ರಮಾಣವಾಗಿ ಮುಗಿದಿಲ್ಲ. ಆದ್ದರಿಂದ ಒಂದು ಕಾಲಮಿತಿಯೊಳಗೆ ಅದನ್ನು ತಾವು ಮಾಡಿಕೊಡಬೇಕು. ಆಗ ರೈತರಿಗೆ ನೇರವಾಗಿ ದುಡ್ಡು ಬರುತ್ತದೆ. 8-9-10 ವರ್ಷಗಳಾಗಿದ್ದರೂ 4(1), 6(1) ನೋಟಿಫಿಕೇಷನ್ ಆಗಿಲ್ಲ, ಇನ್ನು, ಕಂದಾಯ

ಇಲಾಖೆಯಲ್ಲಿ ಬಹಳ ಮುಖ್ಯವಾದುದು ತಹಶಿಲ್ದಾರ್ ಹುದ್ದೆಗಳು. ಈಗ ಎಲ್ಲ ತಹಶಿಲ್ದಾರ್ ಹುದ್ದೆಗಳನ್ನು ಇ.ಓ. ಆಗಿ ಮಾಡಿದ್ದೀರಿ. ಈಗ ಯಾವುದೇ ತಾಲ್ಲೂಕಿನಲ್ಲಿ ಬಹಳ ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡತಕ್ಕಂಥ ತಹಶಿಲ್ದಾರುಗಳು ಇಲ್ಲ. ಎಲ್ಲ ಕಡೆ ಇದೇ ಸಮಸ್ಯೆಯಾಗಿದೆ. ಅದನ್ನು ತಾವು ದಯವಿಟ್ಟು ಗಂಭೀರವಾಗಿ ಚಿಂತನೆ ಮಾಡಬೇಕು. ಇನ್ನು ಬರಗಾಲಕ್ಕೆ ಸಂಬಂಧಪಟ್ಟಂತೆ, ಅದು ಬರಗಾಲ ಪೀಡಿತವಾದಂಥ ಯಾವುದೇ ಪ್ರದೇಶವಿರಲಿ, ಯಾವುದೇ ಬೆಳೆಗಳಾದರೂ ಆರು ಆಣೆಗಿಂತ ಕಡಿಮೆಯಾದರೆ ಆಣೆವಾರು ಪದ್ಧತಿ ಪ್ರಕಾರ ಆರ್.ಟಿ.ಸಿ ಬರೆಸತಕ್ಕಂಥಾದ್ದಕ್ಕೆ ತಾವು ಸ್ಟ್ರಿಕ್ಟ್ ಆಗಿ ಇನ್‌ಸ್ಟ್ರಕ್ಷನ್‌ಗಳನ್ನು ಕೊಡಬೇಕು. ಬಹಳ ಜನ ವಿಲೇಜ್ ಅಕೌಂಟೆಂಟ್‌ಗಳಿಗೆ ಕ್ವಾರ್ಟರ್ಸ್‌ಗಳನ್ನು ಕೊಟ್ಟಿದ್ದೀರಿ. ಆದರೆ ಯಾರು ಸ್ಥಳದಲ್ಲಿ ಇರುವುದಿಲ್ಲ. ಪಾಸ್ ಬುಕ್ಕನ್ನು ಕೊಟ್ಟರೆ ವಿಲೇಜ್ ಅಕೌಂಟೆಂಟ್ ಹುದ್ದೆಯನ್ನೇ ರದ್ದು ಮಾಡಬಹುದೆಂದು ನನಗನಿಸುತ್ತದೆ. ನಿಜವಾಗಿ ನಮಗೆ ಬಹಳ ತೊಂದರೆಯಾಗಿರುವುದು ಅವರಿಂದಲೇ. ಆದ್ದರಿಂದ ಅವರು ಆಯಾ ಸ್ಥಳದಲ್ಲೇ ಇದ್ದು, ವಿಲೇಜ್ ಅಕೌಂಟೆಂಟ್‌ಗಳು ರೈತರನ್ನು ಭೇಟಿ ಮಾಡಿ, ರೈತರ ಸಮಸ್ಯೆ ಬಗ್ಗೆ ಯೋಚನೆ ಮಾಡಿ ಕೆಲಸ ಮಾಡುವುದಕ್ಕೆ ತಾವು ಹೆಚ್ಚು ಒತ್ತು ಕೊಡಬೇಕು. ಅದನ್ನು ತಾವು ತಹಶೀಲ್ದಾರರಿಗೆ ಸ್ಟ್ರಿಕ್ಟ್ ಆಗಿ ಹೇಳಬೇಕು. ಬರಗಾಲದ ಬಗ್ಗೆ ಸರ್ಕಾರಕ್ಕೆ ಒಂದು ವರದಿ ಕೊಡಬೇಕಾದರೆ, ಆ ಬರಗಾಲ ಪೀಡಿತ ಪ್ರದೇಶಗಳನ್ನು ತಾವು ಎ,ಬಿ,ಸಿ ಪ್ರದೇಶಗಳೆಂದು ಕ್ಲಾಸಿಫಿಕೇಷನ್ ಮಾಡಿಸಿ. ಏಕೆಂದರೆ ಬರಗಾಲದಲಿ ಪರಿಹಾರವನ್ನು ಸಮನಾಗಿ ಹಂಚುತ್ತೀರಿ. ಸುಮಾರು 15 ವರ್ಷಗಳಿಂದ ಬರಗಾಲ ಅನುಭವಿಸುತ್ತಿರುವ ತಾಲ್ಲೂಕುಗಳು, ಜಿಲ್ಲೆಗಸ್ನು ಗುರುತಿಸಿ ಅವುಗಳನ್ನು 'ಎ' ಪ್ರದೇಶ ಎಂದು ಮಾಡಬೇಕು. 'ಬಿ' ಪ್ರದೇಶವೆಂದರೆ, ಸುಮಾರು 8 ವರ್ಷಗಳಿಂದ ಬರಗಾಲವನ್ನು ಅನುಭವಿಸುತ್ತಿರುವಂಥ ಪ್ರದೇಶಗಳು ಎಂದು ಮಾಡಬೇಕು. ಈಗ ತಾತ್ಕಾಲಿಕವಾಗಿ ಅಂದರೆ 3-4 ವರ್ಷಗಳಿಂದ ಬರಗಾಲವನ್ನು ಅನುಭವಿಸುತ್ತಿರತಕ್ಕಂಥ ಪ್ರದೇಶಗಳನ್ನು 'ಸಿ' ಎಂದು ಮಾಡಬೇಕು. ಈ ರೀತಿ ಮಾಡಿ ಹಣವನ್ನು ಬಿಡುಗಡೆ ಮಾಡಿ, ಯಾವಯಾವ ಪ್ರದೇಶಗಳಿಗೆ ಹೆಚ್ಚು ಒತ್ತು ಕೊಡಬೇಕು ಎನ್ನುವುದನ್ನು ಸರ್ಕಾರಕ್ಕೆ ಮಾಹಿತಿ ಕೊಡುವುದರ ಮೂಲಕ, ಅತೀ ಹೆಚ್ಚು ಬರಗಾಲದ ನೋವಿನಲ್ಲಿರತಕ್ಕಂಥ ಜನರಿಗೆ ತಾವು ನ್ಯಾಯ ದೊರಕಿಸಿಕೊಡಬೇಕು. ಇನ್ನು ಅರಣ್ಯ ಇಲಾಖೆಯ ಬಗ್ಗೆ ಬಹಳ ಬೆಳಕು ಚೆಲ್ಲತಕ್ಕಂತ ಮಾತನ್ನು ಅರಣ್ಯ ಪ್ರದೇಶದಿಂದ ಬಂದಿರುತಕ್ಕಂಥ ನಮ್ಮ ಸ್ನೇಹಿತರು ಹೇಳಿದ್ದಾರೆ. ಆದರೆ, ತಾವು ಮೂರು ಚಿಂತನೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಒಂದು, ಯಾವುದೇ ಗಿಡ ಮರಗಳನ್ನು ನೆಡಬೇಕಾದರೆ ಇವತ್ತು ಪ್ರಕೃತಿಯ ಮೇಲೆ ಆಗುತ್ತಿರತಕ್ಕಂಥ ಅಪಾಯಗಳನ್ನು ಚಿಂತನೆ ಮಾಡಬೇಕು. ಇಡೀ ರಾಜ್ಯಾದ್ಯಂತ ಹಕ್ಕಿ ಪಕ್ಷಿಗಳು ಬಂದು ವಾಸ ಮಾಡತಕ್ಕಂಥ ಗಿಡಗಳನ್ನು ಎಲ್ಲಾ ಕಡೆ ನೆಡುವುದರ ಮೂಲಕ ಕೃಷಿ ಕ್ಷೇತ್ರವನ್ನು ರಕ್ಷಣೆ ಮಾಡತಕ್ಕಂಥ ಕೆಲಸವನ್ನು ಅರಣ್ಯ ಇಲಾಖೆಯವರು ಅತ್ಯಂತ ಜವಾಬ್ದಾರಿಯುತವಾಗಿ ಮಾಡಬೇಕು. ಇದು ಮೊಲನೆಯದು. ಎರಡನೆಯದಾಗಿ, ಕರ್ನಾಟಕದಲ್ಲಿ ಒಟ್ಟು ಆರು ಸಾವಿರ ಪಂಚಾಯಿತಿಗಳಿವೆ. ಈ ಆರು ಸಾವಿರ ಪಂಚಾಯಿತಿಗಳಲ್ಲಿರುವ ಎಲ್ಲಾ ಜನ ಪ್ರತಿನಿಧಿಗಳನ್ನೊಳಗೊಂಡಂತೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಈ ನಾಲ್ಕು ತಿಂಗಳಲ್ಲಿ

ಯಾವಾಗಲಾದರೂ 15 ದಿವಸಗಳ ಕಾಲ ವನಮಹೋತ್ಸವವನ್ನು ಆಚರಣೆ ಮಾಡತಕ್ಕಂಥಾದ್ದನ್ನು ಮತ್ತು ಕಾಡನ್ನು ಬೆಳೆಸುವುದರಿಂದ ಜನರಿಗೆ ಏನೇನು ಅನುಕೂಲಗಳಾಗುತ್ತವೆ ಎನ್ನುವುದನ್ನು ತಿಳಿಸುವಂಥ ಪರಿಣಾಮಕಾರಿಯಾದಂಥ ಚಿಂತನೆಯನ್ನು ಮಾಡಿ ಸಾಮಾಜಿಕ ಅರಣ್ಯವನ್ನು ಬೆಳೆಸುವುದಕ್ಕೆ ಹೆಚ್ಚು ಒತ್ತು ಕೊಡಬೇಕು. ಒಂದು ಪಂಚಾಯಿತಿಯಲ್ಲಿ, ಒಂದು ವರ್ಷಕ್ಕೆ ಕಡ್ಡಾಯವಾಗಿ ಒಂದು ಸಾವಿರ ತೇಗದ ಸಸಿಗಳನ್ನು ನೆಡಸಬೇಕು ಮತ್ತು ಒಂದು ಸಾವಿರ ಇತರೆ ಸಸಿಗಳನ್ನು ನೆಡಿಸಬೇಕು. ಒಂದು ಪಂಚಾಯಿತಿಯಲ್ಲಿ ಒಂದು ಸಾವಿರ ತೇಗದ ಸಸಿಗಳನ್ನು ತಾವು ನಡೆಸಿದರೆ 25 ವರ್ಷಗಳಲ್ಲಿ ಅದು 20 ಕೋಟಿ ರೂಪಾಯಿ ಆಗುತ್ತದೆ. ರೈತರನ್ನು ಇದರಲ್ಲಿ ಇನ್‌ವಾಲ್ವ್ ಮಾಡಬೇಕು ಎಂದು ಹೇಳುತ್ತಿದ್ದೇನೆ, ನೀವು ನೆಡಿ ಎಂದು ಹೇಳುತ್ತಿಲ್ಲ. ಅರಣ್ಯ ಇಲಾಖೆಯವರು ಮಾಡಿಸಬೇಕಾದಂತಹ ಕೆಲಸ ಇದು. ಉದಾಹರಣೆಗೆ ಹೇಳುವುದಾದರೆ, ಸನ್ಮಾನ್ಯ ಮೊಯಿದ್ದೀನ್‌ರವರೇ ತಾವು ಗ್ರಾಮಾಂತರ ಪ್ರದೇಶದಲ್ಲಿದ್ದೀರಿ. ತಮ್ಮ ಗ್ರಾಮದಲ್ಲಿ ಒಂದು ಸಾವಿರ ತೇಗದ ಸಸಿಗಳನ್ನು ನೆಟ್ಟರೆ 25 ವರ್ಷಗಳಲ್ಲಿ 20 ಕೋಟಿ ರೂಪಾಯಿ ಆದಾಯ ಬರುತ್ತದೆ. ಆ ರೀತಿ ತಾವು ಎಲ್ಲಾ ರೈತರಿಂದ ನೆಡಿಸಿದರೆ 500 ಕೋಟಿ ರೂಪಾಯಿ ಆದಾಯವನ್ನು ಮಾಡಬಹುದು. ನಮ್ಮ ತಂದೆ ಒಂದು ಸಸಿ ನೆಟ್ಟಿದ್ದಾರೆ. ಇವತ್ತು ನಾನು ಅದನ್ನು ಮಾರಿದರೆ, ಅದು 2 ಲಕ್ಷ ರೂಪಾಯಿಗೆ ಹೋಗುತ್ತದೆ. ಆದರೆ ಆ ಸಸಿಯ ಬೆಲೆ ಕೇವಲ ಒಂದೂವರೆ ರೂಪಾಯಿ ಮಾತ್ರ. ಇದರಿಂದ ರೈತರು ಆರ್ಥಿಕವಾಗಿ ಭದ್ರವಾಗಿರಬಹುದು ಮತ್ತು ಮರಗಿಡಗಳನ್ನು ನೆಡುವಾಗ ಪ್ರಕೃತಿದತ್ತವಾದ, ಮಳೆಗೆ ಅನುಕೂಲವಾಗುವಂಥ ಗಿಡಗಳನ್ನು ನೆಡಬೇಕು. ಪ್ರತಿವರ್ಷ ಕಡ್ಡಾಯವಾಗಿ 10-12 ದಿವಸಗಳ ಕಾಲ ವನಮಹೋತ್ಸವವನ್ನು ಆಚರಣೆ ಮಾಡುವ ದಿಕ್ಕಿನಲ್ಲಿ ಚಿಂತನೆ ಮಾಡಿ, ಅದರಲ್ಲಿ ರಾಜ್ಯದಲ್ಲಿರುವ ಆರು ಸಾವಿರ ಪಂಚಾಯಿತಿಗಳಲ್ಲಿ ಕೆಲಸ ಮಾಡತಕ್ಕಂಥವರು ಒಳಗೊಳ್ಳುವಂತೆ ಮಾಡಬೇಕು. ಅದರಲ್ಲಿ ಎಲ್ಲ ಇಲಾಖೆಯ ವಾಹನಗಳು ಮತ್ತು ಅಧಿಕಾರಿಗಳನ್ನು ಇನ್‌ವಾಲ್ವ್ ಮಾಡಿ, ಅವರ ಮೂಲಕ ಪ್ರಕೃತಿಯನ್ನು ಕಾಪಾಡತಕ್ಕಂಥ ದಿಕ್ಕಿನಲ್ಲಿ ತಾವು ಯೋಚನೆ ಮಾಡಬೇಕು. ಇವತ್ತು ಶೇ. 9ರಷ್ಟು ಕಾಡು ಇದೆ ಎಂದು ಹೇಳಿದರು. ಇದು ಹೀಗೆ ಮುಂದುವರೆದರೆ ಮುಂದೆ ಅರಣ್ಯ ರೋಧನವಾಗುತ್ತದೆ. ಆದರೆ ಈಗ ನಿಮ್ಮ ಹತ್ತಿರ ನಾವು ಯಾವ ರೋಧನ ಮಾಡಬೇಕೆಂದು ಗೊತ್ತಿಲ್ಲ. ಏಕೆಂದರೆ ನಮ್ಮ ಕಡೆ ಕಬ್ಬಿನ ಗದ್ದೆಗೆ ಹಂದಿಗಳು ನುಗ್ಗಿವೆ. ಆ ಹಂದಿಗಳನ್ನು ಹೊಡೆಸಿ ಹಾಕಿ ಕಬ್ಬನ್ನು ಉಳಿಸುವಂಥ ಮತ್ತು ಭತ್ತವನ್ನು ಉಳಿಸುವಂಥ ಕೆಲಸವನ್ನು ಮಾಡಿ ಎಂದರೆ ವೈಲ್ಡ್ ಲೈಫ್ ಆ್ಯಕ್ಟ್ ಪ್ರಕಾರ ಹಂದಿಗೆ ನಾವು ಹೊಡೆಯುವ ಹಾಗಿಲ್ಲ ಎಂದು ಹೇಳುತ್ತಾರೆ. ಮತ್ತೇನು ಮಾಡಬೇಕು? ತಾವು ಯೋಚನೆ ಮಾಡಬೇಕು, ಒಂದು ಎಕರೆಯಲ್ಲಿ 10 ಟನ್, 8 ಟನ್, 7 ಟನ್ ಕಬ್ಬನ್ನು ನಾಶ ಮಾಡುತ್ತಿವೆ. ತಾವು ಬಂದು ಹಂದಿಗಳಿಗೇನಾದರೂ ಒಂದು ದಾರಿ ಕಾಣಿಸುತ್ತೀರಾ? ಅಥವಾ ಹಂದಿಗಳು ಅಲ್ಲೇ ಉಳಿದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಾ? ಈ ಹಂದಿಗಳೇನು ಕಡಿಮೆ ಮರಿಗಳನ್ನು ಹಾಕುವುದಿಲ್ಲ. ಒಂದು ಸಲಕ್ಕೆ 7-8 ಮರಿಗಳನ್ನು ಹಾಕುತ್ತವೆ. ನಮ್ಮ ಕಡೆ ಸಿಕ್ಕಾಪಟ್ಟೆ ಹಂದಿಗಳು ಇವೆ. ನಾನು ಹೇಳುತ್ತಿರುವಂಥವು ಕಾಡು ಹಂದಿಗಳು. ಇವು ಮಂಡ್ಯ ಜಿಲ್ಲೆಯಲ್ಲಿ ಬಹಳ ಜಾಸ್ತಿಯಾಗಿವೆ. ಅವುಗಳನ್ನು ಹೊಡೆಯುವುದಕ್ಕೆ

ಅರಣ್ಯ ಇಲಾಖೆಯವರು ಏನು ಚಿಂತನೆ ಮಾಡುತ್ತೀರಿ? ಅರಣ್ಯ ಇಲಾಖೆಯವರು ಸಾಮಾಜಿಕ ಅರಣ್ಯ ಬೆಳೆಸುವುದನ್ನು ಮಾತ್ರ ಬಹಳ ಗಂಭೀರವಾಗಿ ಚಿಂತನೆ ಮಾಡದಿದ್ದರೆ, ಮುಂದಿನ ಜನಾಂಗಕ್ಕೆ ನಾವು ಅತ್ಯಂತ ಕೆಟ್ಟ ಪರಿಣಾಮವಾಗತಕ್ಕಂಥ ಪ್ರಕೃತಿಯನ್ನು ಬಿಟ್ಟು ಹೋಗುತ್ತೇವೆ ಎಂದು ಹೇಳುತ್ತೇನೆ. ಆದ್ದರಿಂದ ದಯವಿಟ್ಟು ಅರಣ್ಯದ ಬಗ್ಗೆ ತಾವು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಹೇಳಬೇಕಾದರೆ, ತಾವು ಸಂಘಟಿತ ಕಾರ್ಮಿಕರಿಗೆ ಸವಲತ್ತುಗಳನ್ನು ಕೊಟ್ಟಿದ್ದೀರಿ. ಆದರೆ ಅಸಂಘಟಿತ ಕಾರ್ಮಿಕರಿಗೆ ತಮ್ಮದ್ದು ಏನಾದರೂ ಕಾರ್ಯಕ್ರಮವಿದೆಯೇ ಎಂದು ಕೇಳುತ್ತೇನೆ. ಅಸಂಘಟಿತ ಕಾರ್ಮಿಕರು ಒಂದು ಕೋಟಿ ಇದ್ದಾರೆ. ಅವರ ಬಗ್ಗೆ ಯಾವುದೇ ಒಂದು ಕಾನೂನನ್ನಾಗಲೀ, ಯಾವುದೇ ಒಂದು ವೈಜ್ಞಾನಿಕ ಚಿಂತನೆಯನ್ನಾಗಲಿ, ಅವರ ಜೀವನದ ಭದ್ರತೆಯ ಬಗ್ಗೆ ಯಾಗಲೀ ಯಾವುದೇ ಯೋಜನೆ ಇಲ್ಲ. ಉದ್ಯೋಗ ಭರವಸೆ ಯೋಜನೆಯಲ್ಲಿ ಮಾತ್ರ 155 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಅದು 8 ದಿವಸಗಳ ಕೂಲಿಗೆ ಮುಗಿದು ಹೋಗುತ್ತದೆ. 100 ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿ ಮಾಡಬೇಕೆಂದು ತಾವು ಏನು ಚಿಂತನೆ ಮಾಡಿದ್ದೀರಿ, ಅದರ ಪ್ರಕಾರ ಅಷ್ಟು ಜನ ಕಾರ್ಮಿಕರಿಗೆ ನೀವು ಉದ್ಯೋಗ ಕೊಟ್ಟರೆ, ಉದ್ಯೋಗ ಭರವಸೆ ಯೋಜನೆಯಲ್ಲಿ ನೀಡಿರುವ 155 ಕೋಟಿ ರೂಪಾಯಿ 8 ದಿವಸಗಳಿಗೆ ಮುಗಿದು ಹೋಗುತ್ತದೆ. ಅಲ್ಲಿ ಬಹಳ ಜನ ಮಹಿಳೆಯರಿದ್ದಾರೆ. ಮಹಿಳಾ ಕೃಷಿ ಆಯೋಗಗಳನ್ನು ಮಾಡುತ್ತೇವೆ. ಮಹಿಳಾ ಕಾರ್ಮಿಕರ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಿ ಎಂದು ನನಗೆ ಗೊತ್ತಿಲ್ಲ. ಇಲ್ಲಿ ಶೇ. 33 ರಷ್ಟು ಮಹಿಳಾ ಸದಸ್ಯರಿರಬೇಕು ಎಂದು ಹೇಳುತ್ತೀರಿ. ಇಡೀ ರಾಜ್ಯದಲ್ಲಿರುವ ಶೇ. 48-49 ರಷ್ಟು ಕೃಷಿ ಕಾರ್ಮಿಕರಲ್ಲಿ ಶೇ.22-23 ರಷ್ಟು ಇರತಕ್ಕಂಥ ಮಹಿಳಾ ಕಾರ್ಮಿಕರ ಬಗ್ಗೆ ಯಾವುದೇ ಚಿಂತನೆ ಮಾಡುತ್ತಿಲ್ಲ. ಏಕೆ ಅವರಿಗೆ ಇನ್‌ಷೂರೆನ್ಸ್ ಸ್ಕೀಂ ಅನ್ನು ಇನ್‌ಟ್ರಡ್ಯೂಸ್ ಮಾಡಬಾರದು? ಒಬ್ಬ ಮಹಿಳೆ 10 ವರ್ಷದಲ್ಲಿ ದುಡಿಯಲು ಪ್ರಾರಂಬ ಮಾಡುತ್ತಾಳೆ, 40-45 ವರ್ಷಕ್ಕೆ ಮುಗಿಸುತ್ತಾಳೆ ಎಂದರೂ ಹೆಚ್ಚು ಪ್ರೀಮಿಯಂ ಆಗುವುದಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮನಸ್ಸು ಮಾಡಿದರೆ ಅವಳ ನಿವೃತ್ತಿ ವಯಸ್ಸಿನಲ್ಲಿ ಅವಳಿಗೆ ಸುಮಾರು 30 ರಿಂದ 40 ಸಾವಿರ ರೂಪಾಯಿ ಸಿಗಬಹುದು. ಇವತ್ತು ಒಬ್ಬರಿಗೆ ಪ್ರಿಮಿಯಂ 250 ರಿಂದ 300 ರೂಪಾಯಿಗಳಿಗೂ ಹೆಚ್ಚು ಆಗುವುದಿಲ್ಲ. 250 ರೂಪಾಯಿ ರಾಜ್ಯ ಸರ್ಕಾರಕ್ಕೆ ಬೀಳಬಹುದು, ಕೇಂದ್ರ ಸರ್ಕಾರಕ್ಕೆ 250 ರೂಪಾಯಿ ಬೀಳಬಹುದು. ಇದರ ಮೂಲಕ ಅವರ ಜೀವನದಲ್ಲಿ ಬದಲಾವಣೆ ಮಾಡಬಹುದು. ಮಹಿಳಾ ಆಯೋಗದಲ್ಲಿ ತಾವು ಇದನ್ನು ಚಿಂತನೆ ಮಾಡಬೇಕು. ಇವತ್ತು ಎಲ್ಲೆಲ್ಲಿ ಮದುವೆ ಮನೆಗಳಿವೆ, ಎಲ್ಲೆಲ್ಲಿ ದೇವಸ್ಥಾನಗಳಿವೆ ಅಲ್ಲಿ ಹೋಗಿ ಕೆಲಸ ಮಾಡಿ ಜೀವನ ನಡೆಸತಕ್ಕಂಥ ಪರಿಸ್ಥಿತಿ ಇದೆ. ತಾವು ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಬೇಕು. ಅಸಂಘಟಿತ ಕಾರ್ಮಿಕರಿಗೆ ನಿವೃತ್ತಿ ವೇತನ ಕೊಡುವ ಬಗ್ಗೆ ಸರ್ಕಾರ ಏನಾದರೂ ಚಿಂತನೆ ನಡೆಸಿದರೆ ಇದು ಬಹಳ ಮಹತ್ತರದ ಬದಲಾವಣೆ ಆಗುತ್ತದೆ. ಇಲ್ಲದಿದ್ದರೆ ನಾವು ಕೊಡುತ್ತಿರುವ ಉದ್ಯೋಗ ಭರವಸೆಯೋಜನೆಯಡಿ ಅಸಂಘಟಿತ ಕಾರ್ಮಿರಿಗೆ ಯಾವುದೇ ರೀತಿಯ ಭದ್ರತೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಚಿಂತನೆ ಮಾಡಿ ಎಂದು ನಾನು

ಹೇಳುತ್ತೇನೆ. ಇದನ್ನು ನಾಳೆ ಮಾಡಿ ಎಂದು ನಾನೇನು ಹೇಳುವುದಿಲ್ಲ, ಎಲ್ಲವನ್ನೂ ಸರ್ಕಾರ ಮಾಡುವುದಕ್ಕಾಗುವುದಿಲ್ಲ, ವಿರೋಧಿ ರಂಗದಲ್ಲಿದ್ದುಕೊಂಡು ನಾನು ಹೇಳಿರುವುದನ್ನು ನೀವು ಮಾಡಿ ಎಂದು ನಾನು ಹೇಳುವುದಿಲ್ಲ. ಸರ್ಕಾರ ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಿ ಈ ಕೆಲಸವನ್ನು ಒಂದು ವರ್ಷ ಅಥವಾ ಆರು ತಿಂಗಳಲ್ಲಿ ಮಾಡಿ. ಮತ್ತೊಂದು ವಿಚಾರ ಏನೆಂದರೆ, ಈ ಯುವಜನ ಮತ್ತು ಕ್ರೀಡಾ ಇಲಾಖೆಯ ಬಗ್ಗೆ ಯಾರೂ ಮಾತನಾಡುವುದಿಲ್ಲವಾದ್ದರಿಂದ ನಾನು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಕಳೆದ ಸಲ ಇದೇ ಸದನದಲ್ಲಿ ಪ್ರಸ್ತಾಪಿಸಿದ್ದೆ. ಸುಮಾರು 12 ವರ್ಷದ ರಾಧ ಎನ್ನುವ ಹುಡುಗಿ 11 ಮೆಡಲ್‌ಗಳನ್ನು ತೆಗೆದುಕೊಂಡಿದ್ದಳು, ತಾವು ಆ ಹುಡುಗಿಯನ್ನು ಹಾಸ್ಟೆಲ್‌ಗೆ ಸೇರಿಸಿದಿರಿ. ಆ ಹುಡುಗಿ ನಮ್ಮ ರಾಜ್ಯಕ್ಕೆ, ರಾಷ್ಟ್ರಕ್ಕೆ ಬಹುಮಾನವನ್ನು ತರುವ ಕೆಲಸ ಮಾಡುತ್ತಾಳೆಂದು ಹೇಳಿದ್ದೆ. ಅದೇ ಪ್ರಕಾರವಾಗಿ ಇಂದು ಆ ಹುಡುಗಿ ಜರ್ಮನಿಗೆ ಹೋಗುತಕ್ಕಂಥ ಪರಿಸ್ಥಿತಿ ಬಂದಿದೆ. ಮಾನ್ಯ ಅಧ್ಯಕ್ಷರೆ ನಿಮ್ಮ ಜಿಲ್ಲೆಯ ಆ ಹುಡುಗಿಯನ್ನು ಸರ್ಕಾರ, ಬಿಸಿಎಂ ಹಾಸ್ಟೆಲ್‌ನಿಂದ, ಕ್ರೀಡಾ ಹಾಸ್ಟೆಲ್‌ಗೆ ಸೇರಿಸಿದ್ದಕ್ಕೆ ತಮಗೆ ಧನ್ಯವಾದಗಳು. ಈ ರೀತಿ ತಾವು ಕ್ರೀಡಾ ಹಾಸ್ಟೆಲ್‌ನಲ್ಲಿ ಸೇರಿಸಿರುವ ಹುಡುಗಿ ಕ್ರಾಸ್‌ಕಂಟ್ರಿರೇಸ್‌ನಲ್ಲಿ ಇವತ್ತು ಜರ್ಮನಿಯಲ್ಲಿ ಸ್ಪರ್ಧೆಗಾಗಿ ತೆರಳಿದ್ದಾಳೆ. ಇವತ್ತು ಈ ಇಲಾಖೆಯಲ್ಲಿ ತೊಡಗಿಸಿರುವ ಹಣ ಕಡಿಮೆ ಇದೆ. ನಾಳೆ ದೊಡ್ಡಕೆರೆ ಮೈದಾನದಲ್ಲಿ ಮಾನ್ಯ ಸಿದ್ಧರಾಮಯ್ಯ, ಹಾಗೂ ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ಕುಸ್ತಿ ಪಂದ್ಯ ನಡೆಯುತ್ತಿದೆ. ಆ ಕುಸ್ತಿ ಪಂದ್ಯದಲ್ಲಿ ಒಬ್ಬೊಬ್ಬ ಪೈಲ್ವಾನರಿಗೆ ಸುಮಾರು ಒಂದು-ಒಂದೂ ಕಾಲು ಲಕ್ಷ ರೂಪಾಯಿ ಕೊಟ್ಟು ಆ ಕುಸ್ತಿ ಪಂದ್ಯವನ್ನು ನಡೆಸುತ್ತಿದ್ದಾರೆ. ಇದಕ್ಕೆ ಮಾನ್ಯ ಸಿದ್ಧರಾಮಯ್ಯನವರದೇ ಅಧ್ಯಕ್ಷತೆ ನಾವು ಕೂಡ ಇಲ್ಲಿ ಅತಿಥಿಯಾಗಿ ಹೋಗುತ್ತಿದ್ದೇನೆ. ನಾನು ಹೇಳಿದ್ದು ಮಾನ್ಯ ಸಿದ್ಧರಾಮಯ್ಯನವರಿಗೆ ಮತ್ತು ಮಹದೇವಪ್ಪನವರಿಗೆ ಕುಸ್ತಿ ಎಂದು ಹೇಳಲಿಲ್ಲ. ಅದು ಕುಸ್ತಿಯ ಪಂದ್ಯಾಟದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಅಧ್ಯಕ್ಷತೆ ವಹಿಸುತ್ತಾರೆಂದು ಹೇಳಿದೆ. ಉತ್ತರ ಕರ್ನಾಟಕದಲ್ಲಿ ಬಹಳ ಗರಡಿಗಳಿವೆ. ಒಂದೊಂದು ಹಳ್ಳಿಯಲ್ಲಿ ಸುಮಾರು ಆರೇಳು ಗರಡಿಗಳಿವೆ- ಇದಕ್ಕಾಗಿ ತಾವು ಗರಡಿಗಳ ಜಿಲ್ಲಾ ಮಟ್ಟದ ಕುಸ್ತಿ ಸಂಘ ಮಾಡಿ ಇವುಗಳನ್ನು ಉದ್ಧಾರ ಮಾಡಬೇಕಾಗುತ್ತದೆ. ನಾನು ಸುಮಾರು 20-24 ವರ್ಷದಿಂದ ಎಲ್ಲಾ ಹಳ್ಳಿಗಳಲ್ಲಿ ತಿರುಗಿರುವುದರಿಂದ ದೇಹವನ್ನು ಸುಂದರ, ಸದೃಢವಾಗಿಡತಕ್ಕಂಥ ಕಾರ್ಯ ಈ ಗರಡಿಗಳಲ್ಲಿ ನಡೆಯುತ್ತಿದೆ. ಮಾನ್ಯ ಪ್ರಕಾಶ್‌ರವರೆ, ತಾವು ತುಂಬಾ ವಿಚಾರ ತಿಳಿದಿರುವವರು, ಹಾಗೂ ಬಹಳ ಚೆನ್ನಾಗಿ ಸಾಂಸತಿಕವಾಗಿ ಮಾತನಾಡುತ್ತೀರಿ ಬಹುಶಃ ಇದು ತಮಗೆ ಗೊತ್ತಿರಬುಹುದು, ಪ್ರಪಂಚದಲ್ಲಿ ಅತ್ಯಂತ ಸಾಂಸತಿಕವಾದ ವಿಚಾರ ಎಂದರೆ ಈ ಕ್ರೀಡಾರಂಗ. ಇಂದು ಪ್ರಪಂಚದಲ್ಲಿ ಈ ಕ್ರೀಡಾಂಗ ಶಾಂತಿ, ನೆಮ್ಮದಿಯನ್ನು ತಂದು ಕೊಟ್ಟಿದೆಯಲ್ಲದೆ ಅಸ್ಪೃಶ್ಯತೆ ಹಾಗೂ ಧರ್ಮಗಳ ದ್ವೇಷವನ್ನು ನಾಶ ಮಾಡಿದೆ. ಆದರೆ ಇವತ್ತು ಗರಡಿ ಪೈಲ್ವಾನ್‌ಗಳು: ಹೊಟ್ಟೆಗಿಲ್ಲದೆ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೋಸ್ಕರವಾಗಿ ಒಂದು ಸಂಘ ಮಾಡಿ, ಯಾವ ಯಾವ ರೀತಿಯಲ್ಲಿ ಇವುಗಳ ಅಭಿವೃದ್ಧಿ ಮಾಡಬೇಕೆಂದು ಚಿಂತನೆ ಮಾಡಬಹುದು. ಇವತ್ತು ಈ ಕ್ರೀಡೆಯನ್ನು ಏಕೆ ಇಂಟ್ರೊಡ್ಯೂಸ್ ಮಾಡಿದರು ಎಂದರೆ,

ಮುಂದಿನ ಪೀಳಿಗೆಯವರು ಆರೋಗ್ಯಕರವಾಗಿ, ದೃಢಕಾಯರಾಗಿ ಹುಟ್ಟ ಬೇಕೆಂದು ಇದನ್ನು ಇಂಟ್ರೊಡ್ಯೂಸ್ ಮಾಡಿದರು. ಆದರೆ ನಮ್ಮ ರಾಜ್ಯದಲ್ಲಿ ಇದು ಯಾವುದೂ ಆಗಿಲ್ಲ. ಮಾನ್ಯ ತಿಮ್ಮಪ್ಪನವರೇ ನೀವು ದೊಡ್ಡ ಪೈಲ್ವಾನ್ ಆಗಬಹುದಾಗಿತ್ತು, ಅದು ಬಿಟ್ಟು ನೀವು ಇಲ್ಲಿ ಬಂದು ಕುಳಿತ್ತಿದ್ದೀರಿ. ಏಕೆಂದರೆ ಶಿವಮೊಗ್ಗದಲ್ಲಿ ಗರಡಿ ಇದೆಯೇ? ಗರಡಿ ಇಲ್ಲ ಅಲ್ಲಿ ಗಾರುಡಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಸಾಗರ, ಶಿವಮೊಗ್ಗ, ಹೊನ್ನಳ್ಳಿ, ಇಲ್ಲಿ ಗರಡಿಗಳು ಇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಶಿವಮೊಗ್ಗದಲ್ಲಿ ಗರಡಿ ಇಲ್ಲ, ಗಾರುಡಿ ಇದೆ.

ಅಧ್ಯಕ್ಷರು : ಪ್ರಕಾಶ್‌ರವರೇ ಸೊರಬದಲ್ಲಿ ಶಿಕಾರಿಪುರದಲ್ಲಿ ಗರಡಿ ಇದೆ, ಸಾಗರದಲ್ಲಿ ಗರಡಿ ಇದೆಯೇ?

(ನಗು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕ್ರೀಡಾಂಗಣಕ್ಕೆ ಹೆಚ್ಚು ಹಣ ಕೊಡುವುದಕ್ಕೆ ಕಡ್ಡಾಯ ಕ್ರೀಡೆ ಮಾಡುವುದಕ್ಕೆ ಮಾನ್ಯ ಗೋವಿಂದೇಗೌಡರು ಹೆಚ್ಚು ಗಮನಹರಿಸಬೇಕು. ಯಾವ ಶಾಲೆಯಲ್ಲೂ ಬಿಪಿಎಡ್, ಸಿಪಿಎಡ್, ಟೀಚರ್ಸ್‌ಗಳನ್ನು ನೇಮಕ ಮಾಡಿಲ್ಲ. 7ನೇ ತರಗತಿಯಿಂದ ಮುಂದೆ ಬರುವ ತರಗತಿಗಳಿಗೆ ಕಡ್ಡಾಯವಾಗಿ ಈ ಕ್ರೀಡೆಯನ್ನು ಪರಿಚಯ ಮಾಡಿ ಕೊಡುವ ಕೆಲಸ ಮಾಡಬೇಕು. ದೇಹ ಚೆನ್ನಾಗಿದ್ದರೆ ಧ್ಯೇಯ ಚೆನ್ನಾಗಿರುವುದಕ್ಕೆ ಸಾಧ್ಯ. ದೇಹ ಚೆನ್ನಾಗಿಲ್ಲದಿದ್ದರೆ ಧ್ಯೇಯ ಹೇಗೆ ಚೆನ್ನಾಗಿರುತ್ತದೆ. ಮೆದುಳಿನ ಶಿಕ್ಷಣ ಎಷ್ಟು ಮುಖ್ಯವೋ ದೈಹಿಕ ಶಿಕ್ಷಣ ಕೂಡ ಅಷ್ಟೇ ಮುಖ್ಯ. ಅದಕ್ಕೆ ಆಂಗ್ಲಭಾಷೆಯಲ್ಲಿ ಒಂದು ಗಾದೆ ಇದೆ. "ಸೌಂಡ್ ಮೈಂಡ್ ಇನ್ ಎ ಸೌಂಡ್ ಬಾಡಿ" ಎಂದು. ಆದ್ದರಿಂದ ದೇಹ ಸದೃಢವಾಗಿರಬೇಕಾಗಿದ್ದರೆ ಕಡ್ಡಾಯವಾಗಿ ವ್ಯಾಯಾಮವನ್ನು ಮಾಡಬೇಕು.

ಶ್ರೀ ಎನ್. ರಾಜಣ್ಣ : ಸ್ವಾಮಿ ವಿವೇಕಾನಂದರವರು "ಐರನ್ ಬಾಡಿ ವಿತ್ ಸ್ಟೀಲ್ ನರ್ವ್ಸ್" ಎಂದು ಹೇಳಿದ್ದಾರೆ.

ಅಧ್ಯಕ್ಷರು : ರಾಜಣ್ಣನವರೆ, ಮಾನ್ಯ ರಮಾನಾಥ ರೈ ಬರುವುದನ್ನು ನೋಡಿ ಈ ಮಾತನ್ನು ಹೇಳುತ್ತೀರಿ. ಅವರು ಬರುವುದನ್ನು ನೋಡಿ ಹೇಳುತ್ತಿದ್ದಾರೆ.

(ನಗು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಕುಸ್ತಿಯಲ್ಲಿ ನಮ್ಮ ದೇಶ 10 ವರ್ಷಗಳ ಕಾಲ ವರ್ಲ್ಡ್ ಚಾಂಪಿಯನ್ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಇತ್ತು. ಪ್ರಪಂಚದ ಯಾವುದೇ ದೇಶವು ನಮ್ಮ ದೇಶದ ಸಮಕ್ಕೆ ಕುಸ್ತಿ ಮಾಡುವಂತಹ ಪ್ರದರ್ಶನ ಮಾಡಿಲ್ಲ. ಅಂತಹ ಸ್ಥಿತಿಯಲ್ಲಿ ನಮ್ಮ ದೇಶ ಇತ್ತು. ಬಹುಶಃ ತಮಗೆ ತಿಳಿದಿರಬಹುದು, ಗಾಮ ಎನ್ನುವ ಒಬ್ಬ ಪೈಲ್ವಾನ್ ಒಂದು ದಿವಸಕ್ಕೆ 16 ಸೇರು ಹಾಲು, ಎರಡು ಸೇರು ಬಾದಾಮಿ, 10 ಡಜನ್ ಬಾಳೆ ತಿಂದು, ಒಂದೇ ಬಾರಿಗೆ ನಾಲ್ಕು ಸಾವಿರ ದಂಡೆ ಹೊಡೆಯುತ್ತಿದ್ದ. ಆದರೆ ಕೊನೆಗೆ ಊಟವಿಲ್ಲದೆ ಸತ್ತು ಹೋದ.

ಇವತ್ತು ಸಾಮಾನ್ಯವಾಗಿ ಎಲ್ಲಾ ಪೈಲ್ವಾನ್‌ಗಳು, ಕ್ರೀಡಾಪಟುಗಳು ಅದೇ ಸ್ಥಿತಿಗೆ ಬಂದಿದ್ದಾರೆ. ತಾವು ಹೋದ ಸಾರಿ ಕ್ರೀಡೆಗೆಂದು ಮೀಸಲಾಗಿಟ್ಟಿದ್ದ ಟೆಕ್ನಿಕಲ್ ಕೋರ್ಸ್‌ನಲ್ಲಿ ಅನ್ಯಾಯವಾಯಿತು. ಏಕೆಂದರೆ, ಕ್ರೀಡೆಯಲ್ಲಿ ಕ್ರೀಡೆಗೆ ಮೆರಿಟ್ ಇರಬೇಕೆ ವಿನಾಃ ಮಾರ್ಕ್ಸ್ ಮೆರಿಟ್ ಇರಬಾರದು. ಇದರಿಂದಾಗಿ ಕಳೆದ ಬಾರಿ ಬಹಳ ಅನ್ಯಾಯವಾಯಿತು, ಅದು ಈ ವರ್ಷ ಅನ್ಯಾಯ ಆಗದ ರೀತಿಯಲ್ಲಿ ತಿದ್ದುಪಡಿ ಮಾಡಬೇಕು. ತಿದ್ದುಪಡಿಯಾದ ನಂತರ, ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ, ನ್ಯಾಷನಲ್ ಲೆವೆಲ್‌ನಲ್ಲಿ, ಸ್ಟೇಟ್ ಲೆವೆಲ್‌ನಲ್ಲಿ ಯಾರು ಪ್ರತಿಭಾವಂತ ಕ್ರೀಡಾಪಟುಗಳು ಇರುತ್ತಾರೋ ಅಂಥವರಿಗೆ ಟೆಕ್ನಿಕಲ್ ಕೋರ್ಸ್‌ನಲ್ಲಿ ಸೀಟು ಕೊಡುವಂತಹ ಕೆಲಸ ಮಾಡಬೇಕು. ಹೋದ ವರ್ಷ ಮಾರ್ಕ್ಸ್ ಮೆರಿಟ್ ಮಾಡಿದ್ದರಿಂದ ಕ್ರೀಡಾಪಟುಗಳಿಗೆ ಬಹಳ ತೊಂದರೆಯಾಯಿತು, ಇಪ್ಪತ್ತು ವರ್ಷಗಳಿಂದ ಈ ರೀತಿ ಆಗಿರಲಿಲ್ಲ. ಆದ್ದರಿಂದ ದಯವಿಟ್ಟು ಇದಕ್ಕೆ ಒಂದು ತಿದ್ದುಪಡಿ ತರುವ ಬಗ್ಗೆ ಚಿಂತನೆ ಮಾಡಬೇಕು. ಈ ಗರಡಿ ಮನೆಗಳಿಗೆ ಹೆಚ್ಚಿನ ಅನುದಾನ ಕೊಡುವಲ್ಲಿ ಚಿಂತನೆ ಮಾಡಬೇಕು. ಕೊನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಅಪಾರವಾಗಿ ಸಮಾಜದ ಬಗ್ಗೆ ಚಿಂತನೆ ಮಾಡುವವರು ಆಗಿದ್ದಾರೆ. ಈ ಒಂದು ದೃಷ್ಟಿಯಿಂದ ಹೇಳುವುದಾದರೆ, ಕೆಪಿಎಸ್‌ಸಿಯಿಂದ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಹತ್ತು ಕೃಪಾಂಕವನ್ನು ಕೊಡುವ ವ್ಯವಸ್ಥೆ ಸರ್ಕಾರದವರು ಮಾಡಿದ್ದೀರಿ. ಆದರೆ 1992 ರಿಂದ 1998ರವರೆಗೆ ಎ ಮತ್ತು ಬಿ. ಗ್ರೂಪ್ ಹುದ್ದೆಗಳಿಗೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ನಡೆದಿಲ್ಲ. ಆಯಾಯ ವರ್ಷ ಪರೀಕ್ಷೆ ನಡೆದರೆ, ಅಭ್ಯರ್ಥಿಗಳು ಆ ಪರೀಕ್ಷೆಯಲ್ಲಿ ಭಾಗವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ. ಒಂದು ಪಕ್ಷ ಭಾಗವಹಿಸದಿದ್ದರೆ ಅದು ಕೂಡ ಅವರ ಜವಾಬ್ದಾರಿಯಾಗಿರುತ್ತದೆ. ಆದರೆ ಪರೀಕ್ಷೆ ನಡೆಸದಿದ್ದರೆ ಇದಕ್ಕೆ ಸರ್ಕಾರವೇ ಜವಾಬ್ದಾರಿಯಾಗಬೇಕಾಗುತ್ತದೆ. ಆದ್ದರಿಂದ, ವಯೋಮಿತಿಯನ್ನು ಸಡಿಲಿಸಿ ವಂಚಿತರಾಗಿರುವ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು. ಇದರ ಬಗ್ಗೆ ತಮ್ಮ ಜೆಡಿಎಲ್‌ಪಿಯಲ್ಲೂ ಚರ್ಚೆಯಾಗಿದೆ, ಸುಮಾರು 196 ಶಾಸಕರು ಕೂಡ ಬರವಣಿಗೆಯಲ್ಲಿ ಸಹಿ ಮಾಡಿಕೊಟ್ಟಿದ್ದೇವೆ. ಅನ್ಯಾಯವಾಗಿರುವ ಅಭ್ಯರ್ಥಿಗಳು ಕೂಡ ತಮ್ಮ ರಕ್ತದ ಮೂಲಕ ಹೆಸರುಗಳನ್ನು ಬರೆದು ಸರ್ಕಾರದ ಗಮನವನ್ನೂ ಸೆಳೆದಿದ್ದಾರೆ. ಆದ್ದರಿಂದ, ಇದೊಂದು ಸಾರಿ ವಯೋಮಿತಿಯನ್ನು ಸಡಿಲಿಸಿ ಅನ್ಯಾಯವಾಗಿರುವ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕೆಲವು ಇಲಾಖೆಗಳ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡದ್ದಾರೆ ಅದಕ್ಕೆ ಮಂತ್ರಿಯವರು ಉತ್ತರ ಕೊಡಬಹುದು, ಆದರೆ ಸಮಯದ ಅಭಾವದಿಂದಾಗಿ ಉತ್ತರ ಕೊಡುವ ಅವಕಾಶ ಮಾನ್ಯ ಮಂತ್ರಿಗಳಿಗೆ ಸಿಗುವುದಿಲ್ಲ, ಆದ್ದರಿಂದ ಸರ್ಕಾರದ ಪರವಾಗಿ ಎಲ್ಲಾ ಇಲಾಖೆಗಳನ್ನು ಕವರ್ ಮಾಡಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ.

+ ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಇಲಾಖೆಯ ಬೇಡಿಕೆಗಳ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಇನ್ನು ಕೆಲವರು ಇಲಾಖೆಯ ಬೇಡಿಕೆಗಳ ಬಗ್ಗೆ

ಮಾತನಾಡುವವರಿಗೆ ಸಮಯ ದೊರಕದೆ ಅಸಮಧಾನವಾಗಿರಬಹುದು ಸರ್ಕಾರದ ಕೆಲಸ ಏನು? ಸರ್ಕಾರ ಏನು ಮಾಡಿದೆ? ಮಾಡಬೇಕಾಗಿರುವುದನ್ನು ಮಾಡದೇ ಇದ್ದರೆ ಅಥವಾ ಮಾಡಬಾರದನ್ನು ಮಾಡಿದರೆ, ತಮ್ಮ ಸಮ್ಮುಖದಲ್ಲಿ ನಮ್ಮ ಗಮನಕ್ಕೆ ತರುವುದು ಮಾನ್ಯ ಸದಸ್ಯರ ಮತ್ತು ವಿರೋಧ ಪಕ್ಷದ ನಾಯಕರ ಹಕ್ಕು.

4.40 ಪಿ.ಎಂ.

ಕಳೆದ ಬಾರಿ ನಾನು ಸಮಗ್ರವಾಗಿ ಬಜೆಟ್ ಮೇಲೆ ಭಾಷಣ ಮಾಡಿದವರ ಮಾತುಗಳನ್ನು ಕೇಳಿ ಉತ್ತರ ಕೊಟ್ಟಂತಹ ಸಂದರ್ಭಕ್ಕಿಂತ ಹೆಚ್ಚು ಇವತ್ತೇನು ಇಲ್ಲ. ಇವತ್ತು ಎಲ್ಲಾ ಇಲಾಖೆಗಳ ಬಗ್ಗೆ ಅದೇ ಮಾತು ಮತ್ತು ಅದೇ ಟೀಕೆಗಳು ಹಾಗೂ ಸರ್ಕಾರದ ಸಾಧನೆಗಳ ಬಗ್ಗೆ ಒಬ್ಬಿಬ್ಬರು ಮಹಾನುಭಾವರನ್ನು ಬಿಟ್ಟರೆ, ಇನ್ನುಳಿದವರು ಈ ಸರ್ಕಾರ ಏನೂ ಸಾಧನೆ ಮಾಡಿಲ್ಲ ಎಂಬ ಧಾಟಿಯಲ್ಲಿ ಮಾತನಾಡಿದ್ದಾರೆ. ಅದಕ್ಕೆ ನಾನು ಮಲಗಿದ್ದವರನ್ನು ಎಬ್ಬಿಸಬಹುದು, ಆದರೆ ಮಲಗಿದ್ದ ಹಾಗೆ ಮಾಡತಕ್ಕಂಥವರನ್ನು ಎಬ್ಬಿಸುವುದಕ್ಕೆ ಕಷ್ಟವಾಗುತ್ತದೆ. ವಿರೋಧಪಕ್ಷದ ನಾಯಕರಾಗಿರುವ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಯು.ಕೆ.ಪಿ. ಮೇಲೆ ಮತ್ತು ಮೊಸಲಾತಿ ಬಗ್ಗೆ, ಕೆಲವು ಇಲಾಖೆಯಲ್ಲಿ ಆಗಿರತಕ್ಕಂಥ ಲೋಪದೋಷಗಳ ಮೇಲೆ ಹೊಸದಾಗಿ ಏನಾದರೂ ಹೇಳಿರುವುದನ್ನು ನಾನು ಗಮನಿಸಿಲ್ಲ ನೆನ್ನೆ ದಿವಸ ಹೊಸದು ಏನು ಹೇಳಿದರು ಎಂದರೆ, ಮುಖ್ಯಮಂತ್ರಿಗಳು ಜಾತಿವಾದಿಗಳಾಗಿದ್ದಾರೆ ಮತ್ತು ಅವರ ಜಾತಿಯವರಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಅವರು ಹೊಸದಾಗಿ ಹೇಳಿದರು. ನಾನು ಅವರಿಂದ ಈ ಮಾತನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಯಾವ ಆಧಾರದ ಮೇಲೆ ಹೇಳಿದ್ದಾರೋ ನನಗಂತು ಗೊತ್ತಿಲ್ಲ. ಅಥವಾ ಪರಿಶಿಷ್ಟಜಾತಿಯ ಜನಾಂಗದವರ ಸಂಖ್ಯೆಯನ್ನು ತೆಗೆದುಕೊಂಡು ಹೇಳಿರಬಹುದೇನೋ ಅದು ಸಹ ಗೊತ್ತಿಲ್ಲ. ಇವತ್ತು ನನ್ನ ಕಛೇರಿಯಲ್ಲಿ ಪ್ರಿನ್ಸಿಪಲ್ ಸೆಕ್ರೆಟರಿ ಬಿ.ಎಸ್. ಪಾಟೀಲ್ ಮತ್ತು ಅಷ್ಟೇ ಅಧಿಕಾರವನ್ನು ಹೊಂದಿರತಕ್ಕಂಥ ಜಂಟಿ ಕಾರ್ಯದರ್ಶಿ ಶ್ರೀ ಸಿದ್ದಯ್ಯ ಮತ್ತು ನನ್ನ ಎಲ್ಲಾ ಮೀಟಿಂಗ್ಸ್ ಮತ್ತು ಪ್ರೋಗ್ರಾಮ್‌ಗಳನ್ನು ಅರೇಂಜ್ ಮಾಡತಕ್ಕಂಥ ಮಿಸ್ಟರ್ ಖಾನ್, ನನ್ನ ಪರ್ಸನಲ್ ಸೆಕ್ರೆಟರಿ ಆಗಿರುವ ದಯಾಶಂಕರ್ ಮತ್ತು ಪೊಲಿಟಿಕಲ್ ಸೆಕ್ರೆಟರಿ ಆಗಿರತಕ್ಕಂಥ ಕೆ. ಶ್ರೀನಿವಾಸ್, ಚೀಫ್ ಇಂಟಲಿಜೆನ್ಸ್ ಆಫೀಸರ್ ರಾಮಾನುಜಮ್ ಇಷ್ಟು ಜನ ಬಹಳ ಪ್ರಾಮುಖ್ಯ ಸ್ಥಾನದಲ್ಲಿರತಕ್ಕಂಥವರು. ಅದರೊಳಗೆ ನನಗೆ ಬಹಳ ಸಂಬಂಧವಿದ್ದರೆ, ಅಂದರೆ ಜಾತಿಯ ಸಂಬಂಧವಿದ್ದರೆ, ಬಿ.ಎಸ್.ಪಾಟೀಲ್ ಅಥವಾ ದಯಾಶಂಕರ್ ಇರಬಹುದು. ನನ್ನ ದೃಷ್ಟಿಯಲ್ಲಿ ಇದಕ್ಕಿಂತ ಹೆಚ್ಚಿನ ಸಾಮಿಪ್ಯ ಮತ್ತು ಕಾನ್‌ಫಿಡೆನ್ಸ್ ಏನು ಇದೆ, ನಾನು ಅವರನ್ನು ನೋಡುವ ದೃಷ್ಟಿಯಲ್ಲಿ ಎಂದರೆ, ಸಿದ್ಧಯ್ಯನವರು ಪರಿಶಿಷ್ಟ ಜಾತಿಯವರು ಮತ್ತು ಖಾನ್ ನನ್ನ ಬ್ರದರ್ ಇನ್ ಲಾ ಮತ್ತು ರಾಮಾನುಜಮ್ ನನ್ನ ಕಜಿನ್ ಇರಬಹುದು. ಒಕ್ಕಲಿಗರು ಮತ್ತು ಮುಸಲ್ಮಾನ್ ಮತ್ತು ಪರಿಶಿಷ್ಟಜಾತಿಯವರ 7 ಜನರಲ್ಲಿ 6 ಜನ ಅವರೇ ಇದ್ದಾರೆ, ಮತ್ತು ಇದರಲ್ಲಿ ಒಬ್ಬ ಲಿಂಗಾಯಿತ ಇದ್ದಾನ ನನ್ನ ಮನೆಯಲ್ಲಿ ಅಡುಗೆ ಮಾಡುವವನು ಮಾತ್ರ ಲಿಂಗಾಯಿತ ಇನ್ನುಳಿದ ಡ್ರೈವರ್ ಮತ್ತು ಗನ್ ಮ್ಯಾನ್, ಇವರೆಲ್ಲಾ ಬೇರೆ ಜಾತಿಯವರು ಇದ್ದಾರೆ. ನಾನು ಜಾತಿವಾದಿ ಎಂದು ಅವರು ಹೇಳಿರತಕ್ಕಂಥದ್ದು ಅತ್ಯಂತ

ದುರಾದೃಷ್ಟಕರವಾದ ಮಾತು ಅದಕ್ಕೆ ಯಾವುದೇ ಆಧಾರವು ಇಲ್ಲ. ನಾನು ಯಾವಾಗಲೂ ಆ ರೀತಿಯ ಆಲೋಚನೆಯನ್ನು ಮಾಡಿದವನೂ ಅಲ್ಲ ಇನ್ನು ಮೇಲಾದರೂ ಅವರು ಸ್ವಲ್ಪ ವಿಷಯವನ್ನು ತಿಳಿದುಕೊಂಡು ಹೇಳುವುದು ಒಳ್ಳೆಯದು. ಮಾನ್ಯ ಖರ್ಗೆಯವರ ಎಸ್ಟಾ ಬ್ಲಿಷ್ ಮೆಂಟ್‌ನಲ್ಲಿ ಒಬ್ಬ ಲಿಂಗಾಯಿತ ಮತ್ತು ಐದು ಜನ ಪರಿಶಿಷ್ಟ ಜಾತಿಯವರು ಇದ್ದಾರೆ ಮತ್ತು ಇಬ್ಬರು ಬ್ರಾಹ್ಮಣರು ಮತ್ತು ಒಬ್ಬ ಮುಸಲ್ಮಾನ ವ್ಯಕ್ತಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಬ್ರಾಹ್ಮಣರು ಮತ್ತು ಪರಿಶಿಷ್ಟ ಜಾತಿಯವರು ಹಾಗೂ ಮುಸಲ್ಮಾನರು ಎಲ್ಲಾ ಕಡೆ ಸಿಗುತ್ತಾರೆ. ಆದರೆ ಲಿಂಗಾಯುತರು ಕೇವಲ ಕರ್ನಾಟಕದಲ್ಲಿ ಮಾತ್ರ ಇದ್ದಾರೆ, ಇದಕ್ಕೆ ನಾನು ಏನು ಮಾಡಲಿ? ಇವತ್ತು ಪರಿಶಿಷ್ಟ ಜಾತಿಯವರಿಗೆ ಮತ್ತು ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರು ಹಾಗೂ ಮಹಿಳೆಯರಿಗೆ ನಮ್ಮ ಸರ್ಕಾರದ ಪಾಲಿಸಿಯಲ್ಲಾಗಲಿ ಅಥವಾ ಕಾನೂನಿನಲ್ಲಾಗಲಿ ಮತ್ತು ನಮ್ಮ ಸ್ಥಳೀಯ ಸಂಸ್ಥೆಗಳಲ್ಲಾಗಲಿ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿರತಕ್ಕಂಥ ಯಾವುದಾದರೂ ಸರ್ಕಾರ ಈ ದೇಶದಲ್ಲಿದ್ದರೆ ಅದು ಜನತಾದಳದ ಸರ್ಕಾರ. ನಾವು ಬಾಯಲ್ಲಿ ಹೇಳುವುದಲ್ಲ, ಇವತ್ತು ಮೀಸಲಾತಿಯನ್ನು ಕೊಟ್ಟು ನಾವು ಹೇಳಿದಂತೆ ನಡೆದುಕೊಂಡಿದ್ದೇವೆ. ಆದ್ದರಿಂದ ನಾನು ಇವತ್ತು ಬರೀ ಲಿಂಗಾಯಿತ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೇನೆ ಎಂದು ಹೇಳುವುದು ಸರಿಯಲ್ಲ. ಅಥವಾ ತಪ್ಪು ಮಾಹಿತಿಯಿಂದ ಬೇಕಾದರು ಅವರು ಹೇಳಿರಬಹುದು ಇವತ್ತು ಬಹಳ ಉನ್ನತ ಹುದ್ದೆಯಲ್ಲಿರುವವರೆಲ್ಲರೂ ಪರಿಶಿಷ್ಟ ಜಾತಿಯವರೆ ಇದ್ದಾರೆ. ಉದಾಹರಣೆಗೆ , ಕೆ.ಎಸ್.ಆರ್.ಟಿ.ಸಿಯ ಎಂ.ಡಿ.ಯವರು ಮತ್ತು ಎಕ್ಸೈಜ್ ಕಮಿಷನರ್, ಸಿರಿಕಲ್ಚರ್ ಕಮೀಷನರ್, ಎಂ.ಪಿ.ಎಂ. ನ ಸಿ.ಎಂ.ಡಿ, ಇರಿಗೇಷನ್ ಸೆಕ್ರೆಟರಿ, ಸೆಕ್ರೆಟರಿ ಮೈನರ್ ಇರಿಗೇಷನ್, ಸೆಕ್ರೆಟರಿ ಮೆಡಿಕಲ್ ಎಜುಕೇಷನ್, ಇನ್ನು ಎಂ.ಡಿ. ಲೆವಲ್‌ನಲ್ಲಿ, ಟ್ರಾನ್ಸ್‌ಪೋರ್ಟ್ ಕಮೀಷನರ್, ಇವರು ನಿನ್ನೆ ದಿವಸ ಬದಲಾವಣೆ ಆಗಿದ್ದಾರೆ, ಎಂ.ಡಿ.ಇನ್ ಕೆ.ಎಸ್.ಟಿ.ಡಿ.ಸಿ., ಜಾಯಿಂಟ್ ಕಮಿಷನರ್ ಬಿ.ಸಿ.ಸಿ ಮತ್ತು ಜಾಯಿಂಟ್ ಸೆಕ್ರೆಟರಿ ಟು ಸಿ.ಎಮ್. ಇಷ್ಟೊಂದು ಉನ್ನತ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರು ಇದ್ದಾರೆ. ನನಗೆ ಯಾವಾಗಲೂ ಬೇರೆ ದೃಷ್ಟಿ ಇಲ್ಲ. ನಮಗೆ ಏನಾದರೂ ಶಿಕ್ಷಣ ಮತ್ತು ರಾಜಕೀಯ ಪಾಠ ಬಂದಿದ್ದರೆ ಈ ಜಾತಿ ಪದ್ಧತಿಯಿಂದ ದೇಶದಲ್ಲಿ ಆಗಿರತಕ್ಕಂಥ ಅನಾಹುತಗಳ ವಿರುದ್ಧ ಹೋರಾಟ ಮಾಡಿಕೊಂಡು ಬಂದವರೇ ಹೊರತು ಅದನ್ನು ಪ್ರೋತ್ಸಾಹ ಮಾಡಬೇಕೆಂದು ನಾವು ಹೇಳಿದವರಲ್ಲ. ಇದನ್ನು ಲೋಹಿಯರವರಿಂದಲಾಗಲಿ ಅಥವಾ ಬೇರೆಯವರಿಂದ ಆಗಲಿ ಕಲಿತಿಲ್ಲ. ಮಾನ್ಯ ವಿ.ಪಿ. ಸಿಂಗ್‌ರವರ ಸರ್ಕಾರ ಇದ್ದಾಗ ಏನು ಮಾಡಿತು? ಏಕೆಂದರೆ ಇವೆಲ್ಲಾ ಹಳೆಯದಾಗಿದೆ ಡಾ: ಅಂಬೇಡ್ಕರ್‌ರವರಿಗೆ 'ಭಾರತ ರತ್ನ' ಎಂದು ರೆಕಗನ್‌ನೈಝ್ ಮಾಡಿದವರು ಯಾರು ಎಂದು ಮಾನ್ಯ ಖರ್ಗೆಯವರಿಗೆ ಗೊತ್ತಿದೆಯೆ? ನಾವು ನಮ್ಮ ದೃಷ್ಟಿಕೋನವನ್ನು ಪೊಲಿಟಿಕಲ್ ಅಡ್ವಾಂಟೇಜ್ ತೆಗೆದುಕೊಳ್ಳುವುದಕ್ಕೆ ಮಾಡುತ್ತಿಲ್ಲ; This is our commitment. ಈ ರೀತಿ ಸಮಾಜದಲ್ಲಿ ನೀಚ ಮತ್ತು ತುಚ್ಛ ಭಾವನೆಗಳು, ಉಚ್ಚ ಮತ್ತು ನೀಚ ವರ್ಗಗಳು, ಈ ರೀತಿ ಏರುಪೇರುಗಳು ಇದ್ದರೆ, ಆ ಸಮಾಜ ಮತ್ತು ಆ ದೇಶ ಯಾವುದೇ ಕಾರಣಕ್ಕೆ ಮತ್ತು ಯಾವುದೇ ಸರ್ಕಾರ ಬಂದರೂ ಉದ್ಧಾರ ಆಗುವುದಿಲ್ಲ ಎಂಬುದನ್ನು

ಮೂರು ಸಾವಿರ ವರ್ಷಗಳ ಅನುಭವದಿಂದ ಹೇಳಬಹುದು. ಹಿಂದೆ ಅಮೇರಿಕಾ ದೇಶದಲ್ಲಿ ನೀಗ್ರೋ ಜನರನ್ನು, ಎತ್ತಿನ ಬದಲಾಗಿ, ಕುದುರೆಯ ಬದಲಾಗಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದರು ಮತ್ತು ಚಾಟಿಯಲ್ಲಿ ಹೊಡೆಯುತ್ತಿದ್ದರು, ಗುಂಡು ಹಾರಿಸುತ್ತಿದ್ದರು. ಅವರು 300 ವರ್ಷದಲ್ಲಿ ಇವತ್ತು ಪ್ರಪಂಚದ ಒಂದನೇ ಸ್ಥಾನಕ್ಕೆ ಬಂದಿದ್ದಾರೆ, ಏಕೆಂದರೆ ನಮಗಿದ್ದ ರೋಗಗಳು ಅವರಿಗೆ ಇರಲಿಲ್ಲ. ಇದನ್ನು ಹಲವಾರು ಬಾರಿ ಹೇಳಿದ್ದೇನೆ. ನಾವು ಇದನ್ನು ಬಹಳ ವ್ಯವಸ್ಥಿತವಾಗಿ ಸಮಾಜವನ್ನು ಎಷ್ಟು ಚೆನ್ನಾಗಿ ಪದರ ಪದರಾಗಿ ಮಾಡಿದ್ದೇವೆ ಎಂದರೆ, ನಾನು ಲಿಂಗಾಯಿತ, ಇದರಲ್ಲಿ 15-20 ತರಹ ಲಿಂಗಾಯಿತರು ಮತ್ತು 35-40 ರೀತಿಯ ಬ್ರಾಹ್ಮಣರು, ಇವರು ಬೇಕಾದರೆ ಇನ್ನೂ 300 ಜನ ಆಗಲಿ, ಇವತ್ತು ಕುರುಬರಲ್ಲಿ ದೊಡ್ಡ ಕಂಬಳಿ, ಸಣ್ಣ ಕಂಬಳಿ ಎಂದು, ಹರಿಜನರಲ್ಲಿ ಎಡಗೈ, ಬಲಗೈ ಎಂದು ವರ್ಗಗಳನ್ನು ಮಾಡಿರುವುದು ಒಂದು ವ್ಯವಸ್ಥಿತವಾದ ಸಂಚು ಆಗಿದೆ. ನದಿಗೆ ಸಣ್ಣ ಪ್ರವಾಹಗಳೆಲ್ಲಾ ಸೇರಿ ಹರಿದರೆ ಎಷ್ಟು ಒಳ್ಳೆಯದಾಗುತ್ತದೆಯೋ, ಅದೇ ರೀತಿ ಕಾಲುವೆಗಳಲ್ಲಿ ಹರಿದರೆ ಅಷ್ಟು ಒಳ್ಳೆಯದು ಆಗುವುದಿಲ್ಲ. ನಮ್ಮ ದೇಶದಲ್ಲಿ ಎಲ್ಲಾ ಬುದ್ಧಿವಂತಿಕೆಗಳು ಇದನ್ನು ಒಡೆದು ಸೀಳುಸೀಳು ಮಾಡಿ ಒಬ್ಬರು ಇನ್ನೊಬ್ಬರನ್ನು ನಂಬದ ಹಾಗೆ ಮಾಡಿವೆ. ಇದಕ್ಕೆ ಯಾರೋ ಒಬ್ಬರು ಕಾರಣ ಅಲ್ಲ. ಬುದ್ಧ, ಬಸವ ಮತ್ತು ಅಂಬೇಡ್ಕರ್, ಹಾಗೂ ಗಾಂಧಿ, ಇವರೆಲ್ಲರೂ ಈ ಒಂದು ಕೆಟ್ಟ ವ್ಯವಸ್ಥೆ ಇರಬಾರದೆಂದು ಇದರ ವಿರುದ್ಧ ಹೋರಾಡಿದ್ದಾರೆ. ಇವತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷ ಆದರೂ ಇನ್ನೂ 40 ಜನ ಹೆಬ್ಬೆಟ್ಟು ಒತ್ತುವರು ಇದ್ದಾರೆ ಅಂದರೆ ಯಾವುದಾದರು ದೇಶಕ್ಕೆ ಹೋದರೆ ನಾವು ನಾಚಿಕೆ ಪಡಬೇಕಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳಾದ ನ್ಯೂಕ್ಲಿಯರ್ ಸೈಂಟಿಸ್ಟ್‌ಗಳು ಇದ್ದಾರೆ. We have shown that ours is such a great nation. We have shown that. We are second to none in that riposte but what about the society you have. What about the problems you have-unemployment, poverty, communal confrontation and bomb culture is threatening the entire integrity of the society. ಎಲ್ಲೋ ಪಾಕಿಸ್ತಾನ ಎಜೆಂಟ್ ಯಾರ ಮೂಲಕ ಬಂದು ರಾಜಸ್ಥಾನದ ಸಿಟಿಯಲ್ಲಿದ್ದಾನೆ. ದೆಹಲಿಯಲ್ಲಿ ಬಾಂಬ್ ಸ್ಫೋಟ, ಮುಂಬಯಿಯಲ್ಲಿ ಬಾಂಬ್ ಸ್ಫೋಟ, ಕೇರಳಾದಲ್ಲಿ ಮತ್ತು ಕೊಯಮತ್ತೂರಿನಲ್ಲಿ ಬಾಂಬ್ ಸ್ಫೋಟ ಆಗಿದೆ. ಈ ದುರ್ಬಲತೆ ಏಕೆ ಬಂದಿದೆ ಎಂದರೆ, ಸಮಾಜದಲ್ಲಿರತಕ್ಕಂಥ ಆಂತರಿಕ ದುರ್ಬಲತೆಯನ್ನು ನಾವು ತಿಳಿದುಕೊಳ್ಳದೆ ಹೋದರೆ ನಾವು ಎಷ್ಟೇ ವರ್ಷ ಏನು ಮಾತನಾಡಿದರೂ ಬಹಳ ಕಷ್ಟವಾಗುತ್ತದೆ. ಮಾನ್ಯ ಖರ್ಗೆಯವರು ಒಬ್ಬರೆ ಪರಿಶಿಷ್ಟ ಜಾತಿ: ಪರಿಶಿಷ್ಟ ಜನಾಂಗದವರು ಅಲ್ಲ. ಡಾ: ಅಂಬೇಡ್ಕರ್ ಬಗ್ಗೆ ತಿಳಿದುಕೊಂಡಿದ್ದಾರೆ, ಅವರಿಗೆ ಆ ರೀತಿ ಭಾವನೆ ಬೇಡ. ಅವರು ಇನ್ನು ಹೆಚ್ಚು ಓದುವುದು ಮತ್ತು ತಿಳಿದುಕೊಳ್ಳುವುದು ಒಳ್ಳೆಯದು. ರಿಜರ್ವೇಶನ್ ಬಗ್ಗೆ ತಿಳಿದುಕೊಳ್ಳಬೇಕು. ರಿಜರ್ವೇಶನ್ ಬಗ್ಗೆ ನಮ್ಮ ಸರ್ಕಾರ ಬಂದ ಮೇಲೆ ಅದಕ್ಕೆ ಎಷ್ಟೊಂದು ಪ್ರಾಮುಖ್ಯತೆ ಕೊಡಬೇಕು. ಬಾಕ್‌ಲಾಗ್ ಇರುವುದನ್ನು ಒನ್ ಟೈಮ್ ಮಾಡಬೇಕು. ಪ್ರಮೋಶನ್ ರಿಜರ್ವೇಶನ್ ಮಾಡಬೇಕು. ಸುಪ್ರೀಂ ಕೋರ್ಟ್ ಡೈರೆಕ್ಷನ್ ಬೇರೆ ಇದೆ. ನಾವು ಈ ವಿಷಯಗಳನ್ನು ಆಧರಿಸಿ ಬಗೆಹರಿಸುವುದಕ್ಕೆ

ಪ್ರಯತ್ನ ಮಾಡುವಾಗ ಅದನ್ನೇ ಒಂದು ಇಸ್ಸ್ಯೂ ಮಾಡಿಕೊಂಡು ಸಿಂಗಲ್ ಪಾಯಿಂಟ್ ಮೇಲೆ ಅದು ಒಂದು ಇಸ್ಸ್ಯೂ ಕಾನೂನು ಪ್ರಕಾರ ಮಾಡಬೇಕು ನಿಜ. ಒಂದು ಇಲಾಖೆಯಲ್ಲಿ ಇಂಬ್ಯಾಲೆನ್ಸ್ ಆಗಬಾರದು. ಆದರೆ ಈಗ ಇಂಬ್ಯಾಲೆನ್ಸ್ ಈ ದೇಶದಲ್ಲಿ ಇದೆ. ಜನರು ತಪ್ಪು ತಿಳಿದುಕೊಳ್ಳುವುದಿಲ್ಲ ಎನ್ನುವ ವಿಶ್ವಾಸ ಇದೆ. ಕೇಂದ್ರ ಸರ್ಕಾರದಲ್ಲಿ ನಿವೃತ್ತಿ ವಯಸ್ಸನ್ನು 60ಕ್ಕೆ ಹೆಚ್ಚಿಸಿದ್ದಾರೆ ಯಾವ ಉದ್ದೇಶಕ್ಕೆ. ಯಾರಾದರೂ ಈ ದೇಶದಲ್ಲಿ ಅರ್ಥಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞ ಗೊತ್ತಾಗಿರ ತಕ್ಕಂಥದ್ದು ಯಾರಿಗೋಸ್ಕರ ಇದನ್ನು ಮಾಡಿದ್ದಾರೆ. ಗೊತ್ತಾಗುವುದಿಲ್ಲವೆ? ನಮ್ಮ ಸರ್ಕಾರದ ಬಗ್ಗೆ ಯು.ಕೆ.ಪಿ.ಯಲ್ಲಿ ಭ್ರಷ್ಟಾಚಾರದ ಬಗ್ಗೆ ಹೇಳಿದರು, ನಾನು ಕೊನೆಗೆ ಹೇಳಿದೆ, ನಾವು ಎಲ್ಲರೂ ಕೂಡಿಕೊಂಡು ಹೋಗಿ ನೋಡಿಕೊಂಡು ಬರೋಣ, ಚಿಮ್ಮನ ಕಟ್ಟಿಯವರು ಅದರ ಬಗ್ಗೆ ಹೇಳಿದ್ದಾರೆ. ನಾನು ಅದರ ಬಗ್ಗೆ ನೋಟ್ ಮಾಡಿಕೊಂಡಿದ್ದೇನೆ. ಸ್ಮಾಲ್ ಇರಿಗೇಷನ್ ಮುಗಿಸಬೇಕು ಅವರು ಹೇಳಿದ್ದು ನಿಜ ಇದೆ. ನಮ್ಮ ಪರ್‌ಫಾರ್ಮೆನ್ಸ್ ಏನು ನಾವು ಹೇಳಿದ್ದು ಏನು? ಹಿಂದೆ ಹೇಳಿದ್ದು ಏನು ನಾವು ಅದನ್ನು ನೋಡಬಾರದೇ. ನಾವು ಮಾಡಿದ್ದು ಏನು ಇಲ್ಲವೆ? ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಬಗ್ಗೆ ನಾನು ಹೇಳುತ್ತೇನೆ. ಬಾಯಲ್ಲಿ ಹೇಳಿದ್ದು ಇದೆ, ಮಾಡಿದ್ದು ಇದೆ. ಶಿಕ್ಷಣ ಇಲಾಖೆಯ ಬಗ್ಗೆ ತೆಗೆದುಕೊಳ್ಳಿ. ಬರೀ ಉದ್ದಕ್ಕೆ ನಾನು 1991ನೇ ಇಸ್ವಿಯಿಂದ ಹೇಳುವುದಕ್ಕೆ ಹೋಗುವುದಿಲ್ಲ. ಗಂಗಾ ಕಲ್ಯಾಣ ಮಾಡಿದ್ದೇವೆ. 1994-95ನೇ ಇಸ್ವಿಯಲ್ಲಿ 4 ರೆಸಿಡೆನ್ಸಿಯಲ್ ಸ್ಕೂಲ್‌ಗಳು ಇದ್ದವು. 1998ನೇ ಇಸ್ವಿಗೆ 37 ರೆಸಿಡೆನ್ಸಿಯಲ್ ಸ್ಕೂಲ್‌ಗಳನ್ನು ನಾವು ಮಾಡಿದ್ದು. 4 ಎಲ್ಲಿ 37 ಎಲ್ಲಿ ಸ್ವಾಮಿ. ನ್ಯೂ ಹಾಸ್ಟೆಲ್ 1994-95ರಲ್ಲಿ 22 ಇದ್ದದ್ದು ಅವರ ಕಾಲದಲ್ಲಿ, ನಾವು 1998-99ಕ್ಕೆ 206 ಮಾಡಿದ್ದು. 22 ಇದ್ದದ್ದು 206ಕ್ಕೆ ಹಚ್ಚಿಸಲಾಗಿದೆ. ತಾವು ಇದರ ಬಗ್ಗೆ ನೋಡಬೇಕು. ಇವತ್ತು ಇದು ಕಣ್ಣಿಗೆ ಕಾಣುವುದಿಲ್ಲವೆ? ಹಾಸ್ಟೆಲ್ಸ್ ಕಾಣುವುದಿಲ್ಲವೆ? ವಿದ್ಯಾರ್ಥಿಗಳಿಗೆ ಮಾಡಿದ ಸಹಾಯ ಕಾಣುವುದಿಲ್ಲವೆ? ಆಮೇಲೆ ಎಲ್ಲಾ ಶಾಂತವಾಗಿದೆ, ಈ ರಾಜ್ಯದಲ್ಲಿ ಏನು ಕ್ರೈಂ ರೇಟ್ಸ್ ಬಗ್ಗೆ ಶ್ರೀರಾಮರೆಡ್ಡಿಯವರು ಹೇಳಿದರು ಯಾವುದೇ ಒಂದು ಸರ್ಕಾರದ ಕೆಲಸದಿಂದ ಕಡಿಮೆಯಾಗುವುದಿಲ್ಲ. ಇಡೀ ಸಮಾದಲ್ಲಿ ಸಂತುಲನತೆ ಸಮಾಧಾನ ಅದರಿಂದ ಕ್ರೈಂ ರೇಟ್ಸ್ ಕಡಿಮೆಯಾಗುತ್ತದೆ. ಆದರೆ ಈ ಮೂರು ವರ್ಷದಲ್ಲಿ ಏನು ಮಾಡಿದ್ದೇವೆ ಅದರ ಬಗ್ಗೆ ನಾನು ಗರ್ವದಿಂದ ಹೇಳುತ್ತೇನೆ. ನಮ್ಮ ಪೋಲೀಸ್ ಇಲಾಖೆ ಒಳ್ಳೆಯ ಕೆಲಸ ಮಾಡಿದೆ. When compared to any other State in the country. ನಾವು ಪೋಲೀಸ್‌ರನ್ನು ಹಾಗೆ ಕಂಡುಕೊಂಡಿದ್ದೇವೆ. ಬೆಂಗಳೂರು ಸಿಟಿಯಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸ್ವತಃ ನೋಡಿರಬಹುದು. ಹೊಯ್ಸಳ ಇವುಗಳನ್ನು ನೋಡಿರಬಹುದು ಅವರ ಕಾರ್ಯಕ್ರಮಗಳನ್ನು ನೀವು ಕಂಡಿರುತ್ತೀರಿ. ಎಷ್ಟು ಇಂಪ್ರೂವ್‌ಮೆಂಟ್ ಆಗಿದೆ. ನಾವು ಎಲ್ಲಾ ಕ್ರೈಂಸ್ ತೆಗೆದಿದ್ದೇವೆ, ಎಲ್ಲರೂ ಸಭ್ಯಸ್ಥರಾಗಿದ್ದಾರೆಂದು ನಾವು ಹೇಳುವುದಿಲ್ಲ. ಇದಕ್ಕೆ ಕಾರಣ, ಪಕ್ಕದ ರಾಜ್ಯಗಳಲ್ಲಿ ದುಷ್ಟಸಂಸ್ಥೆಗಳು ಇವೆ. ಅಲ್ಲಿ ಏನು ಕೆಲಸ ಅವರ ಕಾರ್ಯ ವ್ಯಾಪ್ತಿ ಏನು ಮಾಡುತ್ತಾರೆ. ನಮ್ಮ ಪಕ್ಕದ ಬಾರ್ಡರ್ ಏರಿಯಾದಲ್ಲಿ ಮಾಡುತ್ತಾರೆ. ಅದಕ್ಕೆ ನಾವು ಒಂದು ಸ್ಪೆಷಲ್ ಟಾಸ್ಕ್‌ಫೋರ್ಸ್ ಮಾಡಿದ್ದೇವೆ. ವೀರಪ್ಪನ್ ಒಬ್ಬ ಕಳ್ಳನನ್ನು ಹಿಡಿಯುವುದಕ್ಕೆ ಆಗಲಿಲ್ಲ, ಎಲ್ಲೋ ಒಂದು ಕಡೆ ರಿಮಾರ್ಕ್

ಬಂದಿದೆ. ತಮಿಳುನಾಡು ಮತ್ತು ನಮ್ಮ ಸರ್ಕಾರ ಕೂಡಿ ಜಂಟಿಯಾಗಿ ಅವನ ವಿರುದ್ಧವಾಗಿ ಕಾರ್ಯಚರಣೆ ಪ್ರಾರಂಭ ಮಾಡಿದಾಗ ಬಹಳ ದೊಡ್ಡಪ್ರಮಾಣದಲ್ಲಿ ನಮ್ಮ ಪೋಲೀಸರ ಹತ್ಯೆ ಆಯಿತು. ಸುಮಾರು 120 ಜನ ನಮ್ಮ ಅಧಿಕಾರಿಗಳನ್ನು ಕೊಂದು ಹಾಕಿದರೂ ನಾವು ಸಂಯಮ ಬರಲಿಲ್ಲ. ಪಕ್ಕದ ರಾಜ್ಯದವರು ಅವನಿಗೆ ಸಹಕರಿಸಿದರು ವೀರಪ್ಪನ್‌ಗೆ ತಮಿಳುನಾಡು ಏರಿಯಾದಲ್ಲಿ ಬೆಂಬಲ ಕೊಟ್ಟರು. 10-6 ಹಳ್ಳಿಗಳು ಅವನ ಪರಿವಾಗಿ ಇದ್ದವು. ನಮ್ಮ ಪೋಲೀಸ್‌ರಿಗೆ ಏನು ಮಾಡುವುದಕ್ಕಾಗಲಿಲ್ಲ. ಇನ್ನು ಒಂದು ಮಾತನ್ನು ಹೇಳುತ್ತಾರೆ, ರಾಜಕೀಯ ಪಕ್ಷದವರು ಅವನಿಗೆ ಬೆಂಬಲ ಕೊಡುತ್ತಿದ್ದಾರೆ. I don't want to attribute motive to any Government. ಒಬ್ಬ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಆಗಲಿಲ್ಲ. ನಾವು ಪ್ರಯತ್ನ ಮಾಡಿ ಅವನ ಸಂಧಾನಕ್ಕಾಗಿ ಕಳುಹಿಸಿದೆವು. ನಕ್ಕೀರನ್ ಪತ್ರಿಕೆಯ ಸಂಪಾದಕರಾದ ಆರ್.ಆರ್. ಗೋಪಾಲ್ ಇವರನ್ನು ಕಳುಹಿಸಿದೆವು. ಆದರೂ ನಮ್ಮ ಎಚ್ಚರಿಕೆಯಲ್ಲಿ ನಮ್ಮ ಗಡಿ ಭಾಗದಲ್ಲಿ ಕೆಲಸ ಮಾಡಿದ್ದೇವೆ. ಅವನ ಹಿಂಬಾಲಕರು ಮತ್ತು ಕೆಲವು ಜನರು ಈಗ ಸರಂಡರ್ ಆಗಿದ್ದಾರೆ ಅವನ ಡಿಮಾಂಡ್ಸ್ ಏನು Criminal Procedure Code, Indian Penal Code is not different from Tamil Nadu to Karnataka. We cannot do that. ತಮಿಳುನಾಡು ಸರ್ಕಾರಕ್ಕೆ ನಾವು ಹೇಳಿದ್ದು. ಅವನನ್ನು ನೀವು ಬೇಕಾದರೆ ನಿಮ್ಮ ಜೈಲಿನಲ್ಲಿ ಇಟ್ಟುಕೊಳಿ. We have to follow certain procedures ಸುಪ್ರೀಂಕೋರ್ಟ್‌ಗೆ ಕೇಳಿದ್ದು, ನಮ್ಮ ಕೇಸ್ ಟ್ರಾನ್ಸ್‌ಫರ್ ಆಗಬೇಕು. ಟ್ರಾನ್ಸ್‌ಫರ್ ಮಾಡಿದರೆ ತಮಿಳುನಾಡು ಸರ್ಕಾರಕ್ಕೆ ಸರೆಂಡರ್ ಆಗುತ್ತಾನೆ. Which Government will accept it. ಅದಕ್ಕಾಗಿ ನಾನು ಹೇಳುತ್ತೇನೆ, ಅವನ ದಿನಗಳು ಸಮೀಪಕ್ಕೆ ಬಂದಿವೆ. ಮೊದಲನೆಯದಾಗಿ ಹೇಳಬೇಕೆಂದರೆ ಅವನ ಸಂಖ್ಯಾಬಲ ಇಲ್ಲ, ಮತ್ತು ಅವನ ಆರೋಗ್ಯ ಸರಿಯಾಗಿಲ್ಲ. ಅಂತಹ ಒಬ್ಬ ಸಮಾಜ ಘಾತಕನ ಬಗ್ಗೆ ಸರ್ಕಾರ ಎಲ್ಲ ರೀತಿಯ ಕಾರ್ಯಕ್ರಮ ಮಾಡಿದರೆ. ಕೆಲವರು ಹೇಳುತ್ತಾರೆ, ಬಂದೂಕು ಇದ್ದರೆ ಹುಲಿ ಹೊಡೆಯುತ್ತೇನೆ. ನೀವು ಇಲಿ ಹಿಡಿಯುವುದಕ್ಕೆ ಆಗಲ್ಲ. ಆ ಇಲಿಯನ್ನು ಬೋನ್ ಹಾಕಿ ಹಿಡಿಯಬೇಕಾಗುತ್ತದೆ. ಅವನು ಕಾಡಿನಲ್ಲಿರುವಂಥ ಮನುಷ್ಯ. ಅದಕ್ಕಾಗಿ ನಮ್ಮ ಪೋಲೀಸರ ಬಗ್ಗೆ ನಮ್ಮ ಸರ್ಕಾರದ ಬಗ್ಗೆ ಯಾರೂ ಅನುಮಾನ ಪಡುವುದು ಬೇಡ. ಯಾವುದೇ ಕಾರಣಕ್ಕಾಗಿ ಅವನ ಕಾರ್ಯಚರಣೆ ಮುಂದುವರೆಯುವುದಕ್ಕೆ ನಾವು ಬಿಡುವುದಿಲ್ಲ. ಸ್ವತಃ ಅವನೇ ಶರಣಾಗಬೇಕು ಅಥವಾ ಅವನನ್ನು ಎಲಿಮಿನೇಟ್ ಮಾಡಬೇಕು ನಮ್ಮ ಪ್ರಕಾರ ನಾವು ಕೈಬಿಡುವುದಿಲ್ಲ, ಇದು ಲಾ ಆ್ಯಂಡ್ ಆರ್ಡರ್ ಸಿಚುಯೇಶನ್. ಈಗ ಬಾರ್ಡರ್ ಏರಿಯಾದಲ್ಲಿ ಈ ಕಾರ್ಯಾಚರಣೆ ಇದೆ. ಇನ್ನು ಬೆಂಗಳೂರು, ವಿಶೇಷವಾಗಿ ಮಂಗಳೂರು ಮತ್ತು ಕೋಸ್ಟಲ್ ಕೆಲವು ಟೌನ್‌ಗಳಲ್ಲಿ ಸ್ವಲ್ಪ ವಿದೇಶಿ ಶಕ್ತಿಗಳ ಆಪರೇಶನ್ ಆಗುತ್ತಿವೆ. ಬೆಂಗಳೂರಿನಲ್ಲಿ ಇವತ್ತು ಯಾರು ಬಾಂಬ್‌ನ್ನು ಹಾಕಿ ರಾಜಕೀಯ ಮಾಡುವುದಕ್ಕೆ ಬರುವುದಿಲ್ಲ . ಹೈದರಬಾದ್‌ನಲ್ಲಿ ಬಾಂಬ್ ಹಾಕಿದವರು ಬಂದು ಬೆಂಗಳೂರಿನಲ್ಲಿ ಉಳಿದುಕೊಂಡಿರುತ್ತಾರೆ. ಸ್ಪೆಸಿಫಿಕ್ ಆಗಿ ಕಂಪ್ಲೈಂಟ್ ಸಿಕ್ಕಿದರೆ ಹಲವಾರು ಜನರನ್ನು ದಸ್ತಿಗಿರಿ ಮಾಡಿ ಆಯಾ ರಾಜ್ಯಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಕೆಲವರು ರಾಜಕೀಯ ಕೊಲೆಗಳ ಬಗ್ಗೆ ಪ್ರಸ್ತಾಪ

ಮಾಡಿದರು. ಆಳಂದ, ಅಫಜಲ್‌ಪುರ್, ಹೊಸಕೋಟೆ ಇಲ್ಲಿ ಕೊಲೆಗಳು ಆಗಿದೆ. ಈ ಕೊಲೆಗಳು ರಾಜಕೀಯ ಕೊಲೆಗಳಲ್ಲ. ಈ ಕೊಲೆಗಳು ಅವರ ವೈಯಕ್ತಿಕ ದ್ವೇಷಕ್ಕೆ, ಆಸ್ತಿಗೆ, ಹಣ್ಣಿಗೆ ಹಾಗೂ ವ್ಯವಹಾರಕ್ಕೆ ಇರಬಹುದು. ಆ ಕಾರಣಗಳಿಂದ ಒಂದು ಗುಂಪು, ಇನ್ನೊಂದು ಗುಂಪಿನ ಮೇಲೆ ಆಗಿರುವಂತಹ ಕೊಲೆಗಳು. ಬಾಂಬೆಯಲ್ಲಿ ಮಾಫಿಯಾ ಎಂಬ ಒಂದು ಗುಂಪು ಆಪರೇಟ್ ಮಾಡುತ್ತಿದೆ. ಇದರಲ್ಲಿ ಅವರಷ್ಟಕ್ಕೆ ಅವರೇ ಕೊಲೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಅವರಿಗೆ ಅವರೇ ಎಲಿಮಿನೇಟ್ ಮಾಡಿಕೊಳ್ಳುತ್ತಿದ್ದಾರೆ. ಈ ಕೊಲೆಗಳು ಆಗಿರುವುದು ರಾಜಕೀಯವಾಗಿ ಅಲ್ಲ. ನಾನು ಹೇಳುವುದೇನೆಂದರೆ, ನಮ್ಮ ಪಕ್ಷದವರಾಗಲೀ, ಬಿಜೆಪಿಯವರಾಗಲಿ, ಕಾಂಗ್ರೆಸ್‌ನವರಾಗಲಿ, ನಾವು ನಮ್ಮ ಪಕ್ಷಗಳಿಂದ ಉತ್ತೇಜನವನ್ನು ಕೊಟ್ಟು ಅಪರಾಧಕ್ಕೆ ಬೆಂಬಲವನ್ನು ಕೊಟ್ಟಿರುವ ಬಗ್ಗೆ ಯಾರು ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಈ ತರಹ ಅಪರಾಧಗಳಿಗೆ ಬೆಂಬಲವನ್ನು ಕೊಟ್ಟಿರುವುದಿಲ್ಲ. ಹಿಂದೆಯೂ ಕೊಟ್ಟಿರುವುದಿಲ್ಲ, ಮುಂದೆಯೂ ಕೊಡುವುದಿಲ್ಲ. ಆದರೆ ಎಲ್ಲವೂ, ರಾಜಕೀಯ ಕೊಲೆಗಳಾಗುತ್ತವೆ ಎಂದು ಸರ್ವೆ ಸಾಧಾರಣವಾಗಿ ಹೇಳಿದರೆ ಅದು ಸರಿಯಲ್ಲ. ಪ್ರತಿಯೊಂದು ಕೇಸ್‌ನಲ್ಲೂ ಇರಬಹುದು. ಯಾವನೋ ಒಬ್ಬ ವ್ಯಕ್ತಿ ಕೊಲೆ ಮಾಡಿರಬಹುದು. ಕಾಂಗ್ರೆಸ್, ಬಿಜೆಪಿ, ದಳಕ್ಕೆ ಸೇರಿದ ಯಾವನೋ ಒಬ್ಬ ಸಂಬಂಧಿಕ ಈ ಕೃತ್ಯವನ್ನು ಮಾಡಿರಬಹುದು ಅವನು ಅಪರಾಧಿ ಇರಬಹುದು. ಆದರೆ ಅದಕ್ಕೆ ಪಕ್ಷಗಳ ಮೇಲೆ, ಸರ್ಕಾರದ ಮೇಲೆ ರಾಜಕೀಯ ಕೊಲೆಗಳು ಎಂದು ಹೇಳುವುದರಿಂದ ಅನಾವಶ್ಯಕವಾಗಿ ಜನರ ಮನಸ್ಸು ಸೆಳೆಯುತ್ತದೆ. ದ್ವೇಷ ಬೆಳೆಯುತ್ತದೆ. ಈ ರೀತಿ ಮಾಡಬಾರದು. Politically we should assist each other to eliminate violance from the society. ಹಿಂಸೆ ಇದೆ. ಇದನ್ನು ತಡೆಯಲು ಏನು ಮಾಡಬೇಕು ಎಂಬುದರ ಬಗ್ಗೆ ಸಹಕರಿಸಬೇಕೆ ಹೊರತು ಬೆರಳು ಮಾಡಿ ನೀವು ಇದನ್ನು ಮಾಡುತ್ತೀರಾ ಎಂದು ಹೇಳುವುದು ಸರಿಯಲ್ಲ. ನಾನು ಕರಾವಳಿಯ ಬಗ್ಗೆ ಹಿಂದೆ ಒಂದು ಸಾರಿ ಹೇಳಿದ್ದೆ. ಕರಾವಳಿ ಪ್ರದೇಶಕ್ಕೆ ನನ್ನನ್ನು ಮತ್ತು ಹಿರಿಯ ಸಚಿವರನ್ನು ಆಫೀಸರ್‌ರವರು ಕರೆದುಕೊಂಡು ಹೋಗಿ ತೋರಿಸಿದರು. ನೀವು ಈ ಭಾಗಗಳಲ್ಲಿ ವಲ್ನರಬಲ್ ಪಾಯಿಂಟ್‌ಗಳು ಇದೆ. ಈ ಭಾಗದಲ್ಲಿ ಕೋಸ್ಟಲ್ ಗಾರ್ಡನ್ನು ಹಾಕಬೇಕು ಎಂದು ಹೇಳಿದರು. ಅದಕ್ಕೆ ಈಗಾಗಲೇ ಎರಡು ಅತ್ಯಾಧುನಿಕ ಮೋಟಾರ್ ಬೋಟ್‌ಗಳು, ಅದಕ್ಕೆ ಬೇಕಾದ ಉಪಕರಣಗಳು ಎಲ್ಲವನ್ನೂ ಖರೀದಿ ಮಾಡಿದ್ದೇವೆ. ಈಗಾಗಲೇ ಬೋರ್ಟ್ ಇನ್‌ಚಾರ್ಜ್ ಮಂತ್ರಿಗಳು ಬಂದಿದ್ದಾರೆ. ಅವರು ನನಗೆ ನಿನ್ನೆ ದಿನವೇ ವರದಿ ಮಾಡಿದರು. ನಾನು ಅವುಗಳನ್ನು ಕೊಂಡುಕೊಂಡಿದ್ದೇವೆ. ನಾನು ಪೋಲೀಸ್‌ನವರಿಗೂ ಅದಕ್ಕೆ ಸರಿಯಾದ ಜನರನ್ನು ತರಬೇಕು ಎಂದು ಹೇಳಿದ್ದೇನೆ.

MR. SPEAKER : In his reply also he has mentioned.

ಶ್ರೀ ಜೆ.ಹೆಚ್. ಪಟೇಲ್ : ಅದನ್ನು ನಾವು we are looking to it and we are doing something about it. For the first time we have taken steps. ನೀರಾವರಿ ಮತ್ತು ವಿದ್ಯುಚ್ಛಕ್ತಿ ಇವೆರಡೂ ಬಹಳ ಪ್ರಾಮುಖ್ಯವಾದಂತಹ, ನಮ್ಮ ಇಡೀ ಆರ್ಥಿಕ ಪರಿಸ್ಥಿತಿಗೆ

ಬೆನ್ನೆಲುಬು ಆಗಿರುವಂತಹ ಎರಡು ಕಾರ್ಯಕ್ರಮಗಳು. ನಾವು ನೀರಾವರಿಯ ಬಗ್ಗೆ ಹಲವಾರು ಸಾರಿ ಹೇಳಿದ್ದೇವೆ. ಅದು ಅಪ್ಪರ್‌ಕೃಷ್ಣ ಇರಲಿ, ಮಲಪ್ರಭಾ ಮತ್ತು ಘಟಪ್ರಭಾ ಇರಲಿ, ನೀವು ದುಡ್ಡು ಖರ್ಚು ಮಾಡಿರುವ ಬಗ್ಗೆ ಹೇಳುತ್ತೀರಿ ಕೆಲಸವಾಗಿರುವುದು ಏನು? ನಾವು ಕೆಲಸವಾಗಿರುವುದನ್ನು ಸಹ ಹೇಳಿದ್ದೇನೆ. ನಾವು ಇಷ್ಟು ಕಿ. ಮೀ. ಕಾಲುವೆ ಮತ್ತು ಆರ್.ಸಿ. ವರ್ಕ್ ಆಗಿರುವ ಬಗ್ಗೆ ಹೇಳಿದ್ದೇನೆ. ಅದರ ಬಗ್ಗೆ ತಮ್ಮ ನೇತೃತ್ವದಲ್ಲಿ ಹೋಗಿ ನೋಡಿಕೊಂಡು ಬರಬಹುದು. Seeing is better than hearing about it. ಇದರ ಜೊತೆಗೆ ಒಂದು ಸಲಹೆ ಏನು ಬಂತೆಂದರೆ, ನಮ್ಮ ನೀರಾವರಿಯ ಸಚಿವರು ಏನು ಹೇಳಿದರು. ಕೃಷ್ಣ ಜಲ ಭಾಗ್ಯ ನಿಗಮದ ಮಾದರಿಯಲ್ಲಿ ಮಹಾರಾಷ್ಟ್ರದಲ್ಲಿ ನೀರಾವರಿ ಯೋಜನೆಗಳಿಗೆ ಹಣ ನೀಡಲು ನಾಲ್ಕು ಪ್ರತ್ಯೇಕ ನಿಗಮಗಳನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ಹಲವಾರು ಕಡೆಯಿಂದ ಅವರು ಹಣವನ್ನು ತಂದು ಕೆಲಸವನ್ನು ಮಾಡಿಸುತ್ತಿದ್ದಾರೆ. ನಾವು ಇನ್ನೊಂದು ಆಡಿಷನಲ್ ಅದು ಮಲಪ್ರಭಾ ಇರಬಹುದು, ಅಪ್ಪರ್ ತುಂಗಾ ಅಲ್ಲಿ ಕೆಲಸಗಳೇನು ಪ್ರಾರಂಭವಾಗಿದೆ. ಆ ಕೆಲಸಗಳಿಗೆ ಅನುಕೂಲವಾಗಲು ಇನ್ನೊಂದು ನಿಗಮವನ್ನು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ. ಅದನ್ನು ನಾವು ಕಾನೂನು ಪ್ರಕಾರ ಮಾಡುತ್ತೇವೆ. ಇನ್ನೊಂದು ಹೊಸ ನಿಗಮವನ್ನು ರಚನೆ ಮಾಡಿ, ಅದರಿಂದ ಹಣವನ್ನು ತೆಗೆದುಕೊಂಡು ಏನೇನು ಕೆಲಸಗಳಾಗಬೇಕು ಅದಕ್ಕೆ ಆ ಹಣವನ್ನು ಉಪಯೋಗಿಸುತ್ತೇವೆ. ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ಕರ್ನಾಟಕ ಪವರ್ ಕಾರ್ಪೊರೇಷನ್, ಪವರ್ ಜನರೇಷನ್ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಟ್ರಾನ್ಸ್‌ಮಿಷನ್ ಜವಬ್ದಾರಿಯನ್ನು ಹೊತ್ತಿದೆ. ಕರ್ನಾಟಕ ಪವರ್ ಕಾರ್ಪೊರೇಷನ್‌ನವರು 1997-98ನೇ ಇಸವಿಯ ಜನರೇಷನ್‌ನಲ್ಲಿ ಶೇಕಡ 33 ರಷ್ಟು has been added, which is the highest in India. 33% of the power generation has been added, which is the highest in India. Raichur Thermal power Station, achieved a generation of 5,532 million units and a plant load factor of 75% which is No. 3 in the country. so whatever we have done, in 1996-97 itself we have spent more than Rs. 250 Crores and we have already commissioned. ಒಂದು ಮೆಗಾವ್ಯಾಟನ್ನು 10 ವರ್ಷಗಳಲ್ಲಿ ಸೇರಿಸಿರಲಿಲ್ಲ. ಈಗ ಎರಡು ವರ್ಷಗಳಲ್ಲಿ ಅದು ನಾನ್‌ಕನ್‌ವೆನ್‌ಷನ್ ಎನರ್ಜಿ ಇರಲಿ. Wind energy or solar energy fuel based, in this in 1998-99 there will be a record increase in the generation capacity of 340 MW. We are going to do it. 1, 2, 3, & 4 are operating. 5 & 6 we are going to complete them in the course of 30 months. This is the record achievement in the country. ಸಾಮಾನ್ಯವಾಗಿ 4-5 ವರ್ಷಗಳು ಇದರಲ್ಲಿ ತೆಗೆದುಕೊಂಡಿದ್ದು ಇದೆ. ಮೊದಲನೆ ಯೂನಿಟ್‌ಗೆ ನಾವು ಮೂರುವರೆ, ನಾಲ್ಕು ವರ್ಷ ತೆಗೆದುಕೊಂಡಿದ್ದೇವೆ. Now, Raichur Thermal 5th & 6th will be ready in 30 months. ಮಾರ್ಚಿನಲ್ಲಿ ಒಂದು ಕಮೀಷನ್ ಆಗುತ್ತದೆ. 1998-99ರಲ್ಲಿ ಇನ್ನೊಂದು ಕಮೀಷನ್

ಆಗುತ್ತದೆ. ಇದನ್ನು ತಾವು ಹೋಗಿ ನೋಡಿಕೊಂಡು ಬರಲಿ. 5-6ನೇ ಸಣ್ಣ ಪ್ರಾಜೆಕ್ಟ್ ಅಲ್ಲ, ಅದು ಬಹಳ ದೊಡ್ಡ ಪ್ರಾಜೆಕ್ಟ್. ನೀವು ಕಣ್ಣು ಮುಚ್ಚಿಕೊಂಡರೂ ಸಹ ಅದು ಕಾಣುವ ತರಹ ಇದೆ. ಸಾಧನೆಯಾಗಿದೆ, ವಿದ್ಯುತ್ ಉತ್ಪಾದನೆಯಾಗಿದೆ. ಈ ವಿಂಡ್‌ಬಿಲ್‌ನಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರೇ ಇದು ಗಾಳಿ ಮಾತಾಗಿತ್ತು. ಗಾಳಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬಲ್ಲೆವು ಎಂದು ಈಗಾಗಲೇ 10 MW we have generated and 100 MW we have given to private companies, who are already working. ತಾವು ಚಿತ್ರದುರ್ಗದ ಕಡೆಹೋಗುವಾಗ ಈ ಗಾಳಿಯಂತ್ರವನ್ನು ಗುಡ್ಡದಕಡೆ ನೋಡಬಹುದು ಗದಗ್ ಕಡೆ ಹೋಗುವವರು ಅಲ್ಲಿ ಕಪ್ಪತ್ತಗುಡ್ಡದ ಮೇಲೆ ಈ ಗಾಳಿಯಂತ್ರವನ್ನು ಸಹ ನೋಡಬಹುದು. ಈ ಚಿತ್ರದುರ್ಗದ ಗುಡ್ಡ, ಗದಗಿನ ಕಪ್ಪತ್ತಗುಡ್ಡ ನಮ್ಮ ಸರ್ಕಾರ ಬಂದ ಮೇಲೆ ಬರಲಿಲ್ಲ ಅವುಗಳು ಮೊದಲಿನಿಂದಲೂ ಇದೆ. ಆಗ ಯಾಕೆ ಬರಲಿಲ್ಲ. ಈ ಗಾಳಿಯಂತ್ರಗಳು. That is a technology invented almost two decades backs ನಾನು ಬೇರೆ ಬೇರೆ ದೇಶಗಳಲ್ಲಿ ದೊಡ್ಡ ದೊಡ್ಡ ವಿಂಡ್‌ಫಾರಂಗಳು ನೋಡಿದ್ದೇವೆ. ಆಗ ಅವರು ಮಾಡಲಿಲ್ಲ. ಈಗ ನಾವು ಇದನ್ನು ಮಾಡಿದ್ದೇವೆ, ಅವರಿಗೆ ಅದು ಕಾಣುವುದಿಲ್ಲ ಹಾಗೆಯೇ ಸಣ್ಣ ಸಣ, ಥರ್ಮಲ್ ಪ್ಲಾಂಟ್ಸ್ but oil will be used instead of coal. ಅಂಥವು ಸುಮಾರು 18 ಖಾಸಗಿ ಕಂಪನಿಗಳಿಗೆ ವಿದ್ಯುತ್ ಉತ್ಪಾದಿಸಲು ಅನುಮತಿಯನ್ನು ನೀಡಲಾಗಿದೆ. ಅಲ್ಲಿ ಕೆಲಸಗಳು ಪ್ರಾರಂಭವಾಗಿದೆ. ತಣ್ಣೀರ್‌ಬಾವಿಯಲ್ಲಿ ಒಂದು ಬಾರ್ಜ್ ಮೌಂಟೆಡ್ ಪ್ರಾಜೆಕ್ಟ್ ಕೆಲಸ ಅಲ್ಲಿ ಪ್ರಾರಂಭ ಮಾಡಿದೆ. ನಾನು ಮಂಗಳೂರಿಗೆ ಹೋದಾಗ ಅಲ್ಲಿಗೆ ಬಂದು ಕೆಲವರು ಮನವಿಗಳನ್ನು ಕೊಟ್ಟು ಇದನ್ನು ಮಾಡಬೇಡಿ ಎಂದು ಹೇಳಿದರು. ಒಂದು ಕಡೆ ಹೇಳುತ್ತೀರಿ ಇಲ್ಲಿ ವಿದ್ಯುತ್ ಸಪ್ಲೈ ಇಲ್ಲ, ಇನ್ನೊಂದು ಕಡೆ ಕೊಜೆಂಟ್ರಿಕ್ಸನ್ನು ಮಾಡಬೇಡಿ, ಬಾರ್ಜ್ ಮೌಂಟೆಡ್ ಮಾಡಬೇಡಿ ಎಂದು ಹೇಳುತ್ತೀರಿ. ಏನು ಮಾಡಬೇಕೆಂದು ತಾವು ಹೇಳಿ? ಆ ಕೆಲಸ ಪ್ರಾರಂಭ ಮಾಡಿರುವುದನ್ನು ನಿಲ್ಲಿಸೋಣವೇ? ನಿಮಗೆ ಹೇಗೆ ತಿಳಿಯುತ್ತದೆಯೋ ಹಾಗೆ ಮಾಡಿಕೊಳ್ಳಿ. We are positively doing something in that field. Our Government alone is responsible ಅದಕ್ಕೆ ನಾನು ಪರಿಸರವಾದಗಳಿಗೆ, ನಾನು ಪರಿಸರದ ಬಗ್ಗೆ ಚಿಂತನೆ ಮಾಡುವುದು ತಪ್ಪು ಎಂದು ಹೇಳುವುದಿಲ್ಲ. ಪರಿಸರವಾದಿಗಳು ಇದರ ಬಗ್ಗೆ ಯೋಚನೆ ಮಾಡಬೇಕು. ಆದರೆ ವಿದ್ಯುತ್ತನ್ನು ಉತ್ಪಾದನೆ ಮಾಡುವಾಗ ಆಗುವಂತಹ ಕೆಲವು ಮಾಲಿನ್ಯ ಮಾನವ ಮತ್ತು ಇತರ ಜೀವಿಗಳಿಗೆ ಅಪಾಯವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯಿಂದ ಈ ಯೋಜನೆಯನ್ನು ಕೈಗೊಳ್ಳುತ್ತಿದ್ದೇವೆ. ಈ ಪ್ರಾಜೆಕ್ಟನ್ನು ಮಾಡಬೇಡಿ, ಆದ್ದರಿಂದ ಈ ನೆಗೆಟೀವ್ ಅಪ್ರೋಚ್ ಇದೆಯಲ್ಲಾ, ಇದರಿಂದ ಬಹಳ ಜನ ಬರತಕ್ಕಂತವರು ಈಗಾಗಲೇ ಈ ಕೆಲಸವನ್ನು ಪ್ರಾರಂಭ ಮಾಡಲು ಒಪ್ಪಕೊಂಡಿರುವವರು, ಆಮೇಲೆ ಪರಿಸ್ಥಿತಿಯನ್ನು ನೋಡಿ ಅಲ್ಲಿ ಸುಮ್ಮನೆ ಏಕೆ ಹೋಗುವುದು ಗಲಾಟೆಯಾಗುತ್ತದೆ ಎಂದು ಹಿಂಜರಿಯುತ್ತಾರೆ.

5.10 ಪಿ.ಎಂ.

ಆದುದರಿಂದ ಈ ಸದನಕ್ಕೆ ನಾನು ಇಷ್ಟೇ ಮನವಿ ಮಾಡುವುದು, ಯಾವುದೇ ಪ್ರದೇಶದ

ಯಾವುದೇ ಭಾಗದಲ್ಲಿ ಎಲೆಕ್ಟ್ರಿಸಿಟಿ ಜನರೇಟ್ ಆದರೂ, ಕಳ್ಳಂಬೆಳ್ಳದಲ್ಲಿ ಆದರೂ ಶಿವಮೊಗ್ಗಕ್ಕೆ ಬರುತ್ತದೆ. ಬರೀ ನಮಗೆ ಮಾತ್ರ ಅಲ್ಲ ಕೊಡುವುದು. ಕೋಲಾರದಲ್ಲಿ ಚಿನ್ನ ಉತ್ಪಾದನೆ ಆದರೆ ಬರೀ ಕೋಲಾರಕ್ಕೆ ಹೋಗುವುದಿಲ್ಲ. ನಮಗೇ ಕೊಡಿ, ಚಿನ್ನ ಎಲ್ಲ ನಮ್ಮದೇ ಎಂದು ಯಾರೂ ಕೇಳುವುದಿಲ್ಲ. ಅದಕ್ಕೆ ಇವತ್ತು ಒಂದು ಕಾಂಪ್ರಹೆನ್ಸೀವ್ ವಿಜನ್ ಬೇಕು. ನಮ್ಮ ರಾಜ್ಯವನ್ನು ಹೇಗೆ ಅಭಿವೃದ್ಧಿ ಮಾಡಬೇಕು, ಮುಂದಿನ 5-10 ವರ್ಷಗಳಲ್ಲಿ ಏನಾಗಬೇಕು, ನಮ್ಮ ದೇಶದ ಬೇಡಿಕೆ ಏನು ಎಂಬುದನ್ನು ನೋಡಬೇಕು. Our requirement will be more than 12,000 MW in another five Years. We have only 3,500 MW. Then what are we going to do? ಅದಕ್ಕೆ ಏನು ಮಾಡಬೇಕು? ಎಲೆಕ್ಟ್ರಿಸಿಟಿಗೆ ಬೇರೆ ಸಬ್‌ಸ್ಟಿಟ್ಯೂಟ್ ಇಲ್ಲ. ಇವತ್ತು ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ. ಎಲೆಕ್ಟ್ರಿಸಿಟಿ ಸ್ಟೋರಬಲ್ ಕಮಾಡಿಟಿ ಅಲ್ಲ. ಅಲ್ಲಿ ಉತ್ಪಾದನೆಯಾದರೆ ಇಲ್ಲಿ ಉಪಯೋಗವಾಗಬೇಕು, ಬಳಕೆಯಾಗಬೇಕು. ರೇಡಿಯೋ ಕೇಳುವಾಗ, ರೇಡಿಯೋ ಮೂಲಕ ನ್ಯೂಸ್ ಬ್ರಾಡ್‌ಕ್ಯಾಸ್ಟ್ ಮಾಡುತ್ತಾರಲ್ಲ ಆ ಸಂದರ್ಭದಲ್ಲಿ ರೇಡಿಯೋ ಕೇಳಿದರೆ ಕೇಳಿದ ಹಾಗೆ, ಇಲ್ಲದಿದ್ದರೆ ಅದು ಗಾಳಿಗೆ ಹೋಗುತ್ತದೆ. ಆದ್ದರಿಂದ electricity is not an energy which can be stored. ಹಿಂದಿನದೆಲ್ಲ ಏನೇ ಇರಲಿ ಅದು ಗೊತ್ತಿಲ್ಲದೆ ಆಗಿದೆ. ಎಲೆಕ್ಟ್ರಿಸಿಟಿ ಇಟ್ಟುಕೊಂಡಿರುತ್ತಾರೆ, ಶ್ರೀಮಂತರು ಕೇಳಿದರೆ ಕೊಡುತ್ತಾರೆ, ಬಡವರು ಕೇಳಿದರೆ ಕೊಡುವುದಿಲ್ಲ ಅನ್ನುವುದಕ್ಕೆ ಅದನ್ನೇನು ಸಕ್ಕರೆ ಮಾಡಿಕೊಂಡಿದ್ದಾರೆಯೆ? ಗೋಧಿ, ಸಕ್ಕರೆಯಾದರೆ ಸ್ಟೋರ್‌ನಲ್ಲಿ ಇಟ್ಟುಕೊಂಡು ಮಾರುತ್ತಾರಲ್ಲ ಹಾಗೆ ಎಲೆಕ್ಟ್ರಿಸಿಟಿಯನ್ನು ಮಾರುವುದಕ್ಕೆ ಬರುವುದಿಲ್ಲ. ಆದುದರಿಂದ ಇವತ್ತು ನಾವು ಆಕಡೆ ಬಹಳ ಗಮನ ಕೊಟ್ಟಿದ್ದೇವೆ. ಇವತ್ತಿನ ದಿವಸ ಕೆಇಬಿ.ಯನ್ನು ಬಹಳ ಕಷ್ಟದಲ್ಲಿ ಮ್ಯಾನೇಜ್ ಮಾಡುತ್ತಿದ್ದೇವೆ. ಕಳೆದ ವರ್ಷ ಇದೇ ತಿಂಗಳು, ಇದೇ ದಿನ ನಮಗೆ 52 ರಿಂದ 54 ಅಥವಾ 56 ಮೆಗಾಯೂನಿಟ್ ವಿದ್ಯುತ್ ಒಂದು ದಿನಕ್ಕೆ ಕನ್‌ಸ್ಯೂಮ್ ಆಗುತ್ತಿತ್ತು. ಈ ಸಾರಿ ಮೊನ್ನೆ ಮಳೆ ಬಂದಮೇಲೆ ಸ್ವಲ್ಪ ಕಡಿಮೆಯಾಗಿದೆ. 72ರವರೆಗೆ ಹೋಗಿದೆ; ಅಂದರೆ ಏನು ಮಾಡುವುದು? ಎಲ್ಲಾ ಕಡೆ ರೈತರು ಅದನ್ನೇ ಅವಲಂಬಿಸಬೇಕು. ಇಂಡಸ್ಟ್ರಿಗಳಿಗೆ ಅದನ್ನೇ ಅವಲಂಬಿಸಬೇಕು, ಕುಡಿಯುವ ನೀರಿಗೆ ಕೂಡ ಅದೇ ಬೇಕು. ಯಾವುದನ್ನು ಒಂದು ಕಾಲದಲ್ಲಿ ಜನರು ಉಪಯೋಗಿಸುತ್ತಿರಲಿಲ್ಲ ಅದು ಇವತ್ತು ಅಗತ್ಯ ವಸ್ತುವಾಗಿದೆ. Electricity has become an essential commodity. ಅದನ್ನು ಸರಿಪಡಿಸಿಕೊಂಡು ಡಿಮ್ಯಾಂಡ್ ಅಂಡ್ ಸಪ್ಲೈ ಹೇಗೆ ಮಾಡಬೇಕೆಂದು ಎರಡೂ ಸಂಸ್ಥೆಗಳು ಹಗಲು ರಾತ್ರಿ ಕೆಲಸ ಮಾಡುತ್ತಿವೆ. ವಿದ್ಯುತ್ ಮಂಡಲಿಯ ಕೆಲಸಗಾರರು ಕೆಲವು ಕಡೆ ಜನರ ಹತ್ತಿರ ಬೈಯಿಸಿಕೊಳುತ್ತಾರೆ, ಕೆಲವು ಕಡೆ ಕಛೇರಿಗೆ ಜನರು ಹೋಗಿ ಅಧಿಕಾರಿಗಳನ್ನು ಹೊಡೆಯುತ್ತಾರೆ. ರೈತರಿಗೆ ಒಂದೊಂದು ಸಾರಿ ಆ ರೀತಿ ಸಿಟ್ಟು ಬರುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಬೆಳೆ ಹಾಳಾದಾಗ, ಒಳ್ಳೆಯ ಹೊತ್ತಿನಲ್ಲಿ ಪಂಪುಸೆಟ್ಟು ಕೆಟ್ಟಾಗ ಅಥವಾ ಮೋಟಾರ್ ಬರ್ನ್ ಆದಾಗ ಆ ಸಿಟ್ಟನ್ನು ಯಾರ ಮೇಲಾದರೂ ಹೋಗಬೇಕಲ್ಲ, ಕೆಇಬಿ. ಮೇಲೆ ಹೋಗುತ್ತದೆ. ಆ ಸಿಟ್ಟು ನಮ್ಮದಲ್ಲ, ಮೊಯಿಲಿಯವರು ಮಾಡಿದ್ದು ನೀನು ಹೋಗಿ ಹೊಡೆಯುವುದಾದರೆ ಅವರನ್ನು ಹೊಡಿ; ಅವರು ಮಾಡಲಿಲ್ಲ, ಅದಕ್ಕೋಸ್ಕರ ಈ

ರೀತಿ ಆಗಿದೆ ಎಂದು ಹೇಳುತ್ತೇವೆ. ಮೊಯಿಲಿಯದಲ್ಲ ಗೊತ್ತಿಲ್ಲ ನಮಗೆ, ನಿಮ್ಮ ಕಾಲದಲ್ಲಿ ಹೀಗಾಗಿದೆ ಎಂದು ಹೇಳುತ್ತಾರೆ. ಹಾಗಾಗಿ ಯಾರೋ ಮಾಡಿದ ಸಾಲಕ್ಕೆ ಯಾರೋ ಬಡ್ಡಿ ಕಟ್ಟುವುದು ಯಾರೋ ಮಾಡಿದ ತಪ್ಪಿಗೆ ಯಾರೋ ಉತ್ತರ ಕೊಡುವುದು; ಆದುದರಿಂದ ಅದು ಬೇಡ. ಕೊನೇಪಕ್ಷ ಈಗಲಾದರೂ ನಾವೆಲ್ಲರೂ ಒಟ್ಟನಿಂದ ಪ್ರಯತ್ನ ಮಾಡಿ ನಮಗೆ ಕೊಜೆಂಟ್ರಿಕ್ಸ್ ಕ್ಲಿಯರ್ ಆಗಬೇಕು. ನಾನು ಮಾನ್ಯ ಪ್ರಧಾನಮಂತ್ರಿಗಳನ್ನು ಕಂಡು, ಅದರಲ್ಲೂ ವಿಶೇಷವಾಗಿ ನಾವೆಲ್ಲರೂ ಹೋದಾಗ ಕೊಜೆಂಟ್ರಿಕ್ಸ್ ಕ್ಲಿಯರ್ ಮಾಡಬೇಕೆಂದು ಹೇಳಿ ಬಂದಿದ್ದೇವೆ. The matter is before the Government of India. ಅವರು ಅದನ್ನು ಅರಿತುಕೊಂಡಿದ್ದಾರೆ. I am hopeful that it will be cleared as quickly as possible. ಹಾಗೆಯೇ ನಾಗರ್ಜುನ ಪ್ರಾಜೆಕ್ಟ್. ಅವರೆಡೂ ಬಹಳ ದೊಡ್ಡ ಪ್ರಾಜೆಕ್ಟ್‌ಗಳು. ಒಂದೊಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕ ಪ್ರಾಜೆಕ್ಟ್‌ಗಳು. ಅವೆಲ್ಲ ಕ್ಲಿಯರ್ ಆಗಿ ಬಂದರೆ ನಮಗೆ 3 ವರ್ಷಗಳಲ್ಲಿ ಯಾವುದೇ ತೊಂದರೆ ಇಲ್ಲದೆ ಕೃಷಿ ಕಾರ್ಯ ನಡೆಯುತ್ತದೆ. ಈಗ ಏನಾಗಿದೆ ಎಂದರೆ, ಸೆಂಟ್ರಲ್ ರೆಗ್ಯುಲೇಟರಿ ಕಮೀಷನ್ ಅಪಾಯಿಂಟ್‌ಮೆಂಟ್ ಮಾಡಿ ಎಂದು ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ಅವರು ಹೇಳುತ್ತಾರೆ, ಯಾರಿಗೂ ಪುಕ್ಕಟ್ಟೆಯಾಗಿ ವಿದ್ಯುತ್ ಕೊಡಕೂಡದು. ಕನಿಷ್ಟ ಪಕ್ಷ 50 ಪರ್ಸೆಂಟ್ ಜೆನೆರೇಟಿಂಗ್ ಕಾಸ್ಟ್ ತೆಗೆದುಕೊಂಡು ನೀವು ಯಾರಿಗಾದರೂ ಸಬ್ಸಿಡೈಸ್ಡ್ ಮಾಡುವುದಾದರೆ, ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳಿಗೆ, ಫಾರ್ಮರ್ಸ್‌ಗೆ ಸಬ್ಸಿಡೈಸ್ಡ್ ಮಾಡುವುದಾದರೆ ಮಾಡಿ ಎಂದು ಹೇಳುತ್ತಾರೆ. ಅದಕ್ಕಿಂತ ಕಡಿಮೆ ಸಬ್ಸಿಡೈಸ್ ಮಾಡಿ ರಾಜ್ಯ ಸರ್ಕಾರ ಈ ರೀತಿ ದುಂದುವೆಚ್ಚ ಮಾಡಿದರೆ, ಅವು ಇಂಟರ್ ನ್ಯಾಷನಲ್ ಫೈನಾನ್ಸಿಯರ್ಸ್ ಇರಲಿ, ಮಲ್ಟಿನ್ಯಾಷನಲ್ ಫೈನಾನ್ಸಿಯರ್ಸ್ ಇರಲಿ, ಅವರು ಯಾರೂ ದುಡ್ಡು ಕೊಡುವುದಿಲ್ಲ. ವರ್ಲ್ಡ್ ಬ್ಯಾಂಕ್ ಟೀಂ ಬಂದಾಗ ಅದರ ಅಧ್ಯಕ್ಷರು ಹೇಳಿದರು, ನೀವು ಫಾರ್ಮರ್ಸ್‌ಗೆ ಸಬ್ಸಿಡೈಸ್ ಮಾಡಕೂಡದು. He is not from America. He was from china. ನಾನು ಅವರನ್ನು ಕೇಳಿದೆ, ಇದು ಹೇಗೆ ಎಂದ? ನೀವು ವಿಶ್ವಬ್ಯಾಂಕಿನಿಂದ ಸಾಲ ಕೇಳುತ್ತೀರಿ, ಅಪ್ಪರ್ ಕೃಷ್ಣಾಗೆ ಕೇಳುತ್ತೀರಿ, ಪವರ್ ಪ್ರಾಜೆಕ್ಟ್‌ಗೆ ಕೇಳುತ್ತೀರಿ. ನಿಮಗೆ ನಾವು ಸಾಲ ಕೊಡುವಾಗ ನಿಮ್ಮ ವಾಪಸ್ಸು ಕೊಡುವ ಶಕ್ತಿ ಹೇಗಿದೆ ಎಂದು ನಾವು ನೋಡಿ ಕೊಡಬೇಕೇ ಬೇಡವೆ? ನಿಮಗೆ ವಾಪಸ್ಸು ಕೊಡುವ ಶಕ್ತಿ ಇಲ್ಲದಿದ್ದರೂ ನಾವು ನಿಮಗೆ ಸಾಲವನ್ನು ಕೊಟ್ಟುಕೊಂಡು ಹೋದರೆ ನಾವು ಮುಂದೆ ಏನು ಮಾಡಬೇಕು? ಅದಕ್ಕೆ ನಾವು ಅವರಿಗೆ ಹೇಳಿದೆ, ಈಗ ಆಂಧ್ರದವರು ಒಪ್ಪಿಕೊಂಡಿದ್ದಾರೆ, ಹರಿಯಾಣದವರು ಒಪ್ಪಿಕೊಂಡಿದ್ದಾರೆ. ಆ ಪ್ರಕಾರ ಅವರು ರೈತರಿಗೆ ಒಂದೇ ಸಾರಿ ಅಲ್ಲ, ಗ್ರಾಜುಯಲ್ ಆಗಿ ಒಟ್ಟು ವೆಚ್ಚದ ಶೇಕಡ 50 ರಷ್ಟು ಮಾಡಿಕೊಳ್ಳಬೇಕೆಂದು ಒಪ್ಪಿಕೊಂಡಿದ್ದಾರೆ. ಇನ್ನು ತಮಿಳು ನಾಡಿನವರು ಒಪ್ಪಿಲ್ಲ ತಮಿಳುನಾಡಿಗೆ ಅವರು ಏನು ಹೇಳಿದ್ದಾರೆಂದರೆ, ನೀವು 700 ಅಥವಾ 800 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ರೆಗ್ಯುಲೇಟರಿ ಅಥಾರಿಟಿ ಎಂದು ಮಾಡುತ್ತಾರಲ್ಲಾ ಅವರಿಗೆ ಕೊಡಿ; ಕೊಟ್ಟು ಏನು ಬೇಕಾದರೂ ಮಾಡಿಕೊಳ್ಳಿ. ಉಚಿತವಾಗಿಯಾದರೂ ಕೊಡಿ ಎಂದು ಆ ರೀತಿ ಹೇಳಿದರೆ ನಾವು ಇವತ್ತು

ಈಗಾಗಲೇ ಪವರ್ ಸೆಕ್ಟಾರ್‌ಗೆ 17 ಪರ್ಸೆಂಟ್ ಕೊಟ್ಟಿದ್ದೇವೆ. ಅದು ಪ್ರೈವೈಟ್ ಸೆಕ್ಟಾರ್ ಇನ್‌ವೆಸ್ಟ್‌ಮೆಂಟ್ ಇರುವುದರಿಂದ; ಇಲ್ಲದಿದ್ದರೆ ಇರಿಗೇಷನ್‌ಗೆ 30 ಪರ್ಸೆಂಟ್ ಕೊಡಬೇಕಾಗುತ್ತದೆ. ಆದುದರಿಂದ, ನಾವು ಯಾವುದೇ ಹಣಕಾಸಿನ ಬ್ಯಾಲೆನ್ಸಿಂಗ್ ಮಾಡುವುದಾಗಲಿ, ನಮ್ಮ ಯೋಜನೆಯನ್ನು ಕಾರ್ಯಗತಗೊಳಿಸುವುದಾಗಲಿ ಇವೆಲ್ಲಾ ಕೆಲವು ಎಕ್ಸ್‌ಟರ್ನಲ್ ಏಜೆನ್ಸಿಗಳು ಇರುತ್ತವೆ. ನಮ್ಮ ದೇಶದಲ್ಲಿರತಕ್ಕವರು ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ತಯಾರಿದ್ದಾರೆ. ಆ ಇನ್‌ವೆಸ್ಟ್‌ಮೆಂಟಿಗೆ ಬೇಕಾದ ವಾತಾವರಣವನ್ನು ನಾವು ಕ್ರಿಯೇಟ್ ಮಾಡದೆ, ಎಲ್ಲಾ ಕಡೆ ನೀನು ಬರಬೇಡ, ಅವನು ಬರಬೇಡ, ಕಾರ್ಖಾನೆಗಳು ಬರಬೇಡ, ಎಂದರೆ ಹೇಗೆ? ಮೊದಲಬಾರಿಗೆ ನಮ್ಮ ರಾಜ್ಯದಲ್ಲಿ ಆಟೋಮೊಬೈಲ್ ಇಂಡಸ್ಟ್ರಿ ನಮ್ಮ ಸರ್ಕಾರದಲ್ಲಿ ಬಂದಿರುವುದು ಸ್ಪಷ್ಟ. ಟೆಲ್ಕೋ ಟೊಯೋಟಾ, ಓಲ್ವೊ ಇವು ಮೊದಲಬಾರಿಗೆ ಅವರ investment will go to more than Rs.10.000/- crore ultimately. ಈ ವರ್ಷ ಅವರ ಒಟ್ಟು ಇನ್‌ವೆಸ್ಟ್‌ಮೆಂಟ್ 400 ಕೋಟಿ ಚಿಲ್ಲರೆ ಆಗಿದೆ. ಆ ವಿವರಗಳನ್ನು ಬೇಕಾದರೆ ನಾನು ಕೊಡುತ್ತೇನೆ. ಆದುದರಿಂದ, ನಾನು ಇಷ್ಟೇ ಈ ಸದನಕ್ಕೆ ವಿನಂತಿ ಮಾಡಿಕೊಳ್ಳುವುದು, Toyota 600 crores; Suzuki Scooters 150 crores; Volvo I phase 300 Crores; Telco 350 Crores; Leela International Conventions 300 Crores; Jindal Vijayanagar Fertilisers 1,000 crores; Mukund Steels 350 crores; Mico 300 crores; Infosys 150 crores; Wipro 360 Crores; HPCL oil pipline between Bangalore & Mangalore 670 crores. This is the investment which is there. You can see it. This is not just an idea. This is an investment which we have been able to achieve. ಇದು ಮಾಡುವುದು ಬೇಡವೇ? ಮಾಡಿ ಶಿಕ್ಷಣಕ್ಕೆ ಆದ್ಯತೆ ಕೊಟ್ಟಿದ್ದೇವೆ, ವಸತಿಗೆ ಆದ್ಯತೆ ಕೊಟ್ಟಿದ್ದೇವೆ, ವಸತಿಗೆ ಹಿಂದಿನ ಸರ್ಕಾರಗಳು 5-5 ವರ್ಷ ಮಾಡದೇ ಇದ್ದುದನ್ನು ಮಾಡಿ 2,50,000 ಮನೆಗಳನ್ನು ಕಟ್ಟಿ ಫಲಾನುಭವಿಗಳಿಗೆ ಕೊಟ್ಟಿದ್ದೇವೆ. ಮೊನ್ನೆ 55 ಸಾವಿರ ಜನ ಶಿಕ್ಷಕರನ್ನು ನೇಮಕಾತಿ ಮಾಡಿದಾಗ ಶೇಕಡ 18 ರಷ್ಟು ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿದ್ದೇವೆ. ಇದುವರೆಗೆ ಯಾರೂ ಮಾಡಿಲ್ಲ ಯಾಡಿಯೂರಪ್ಪನವರೆ. ಅಷ್ಟು ಕಟ್ಟುನಿಟ್ಟಾಗಿ ಮಾಡುತ್ತಿದ್ದೇವೆ. ಕೆಲಸ ಮಾಡುತ್ತಿರುವವರಿಗೆ ಕೆಲಸ ಮಾಡಿ ಎಂದು ಹೇಳುವುದು ಬಿಟ್ಟು, ಕಾಲು ಹಿಡಿದು ಎಳೆಯುವುದು, ಕೈಹಿಡಿದು ಎಳೆಯುವುದು ಸರಿಯಲ್ಲ. ನಾಳೆ ದಿವಸ ನೀವೇ ಸರ್ಕಾರ ಮಾಡಬಹುದು. ಮಾನ್ಯ ಖರ್ಗೆಯವರು ಮಾಡುವ ಲಕ್ಷಣ ಕಾಣುತ್ತಿಲ್ಲ. ಆ ಒಂದು ಭರವಸೆ ಅವರಿಗೆ ಇದ್ದಹಾಗೆ ಕಾಣುತ್ತಿಲ್ಲ. ಬಹುಶಃ ಮಾನ್ಯ ತಿಮ್ಮಪ್ಪನವರಿಗೆ ಚಿಂತೆ ಇರಬಹುದು. ಅವರಲ್ಲಿ ಆಳುವ ಲಕ್ಷಣ ಕಾಣುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಯಾರು ಮಾಡುತ್ತಾರೆಂದು ನಿಮ್ಮ ಚಿಂತನೆ? ಯಾರಿಗೋ ಹೇಳಿದ ಹಾಗೆ ಕಾಣುತ್ತಿದೆಯಲ್ಲ. ನಮಗೆ ನಿಮ್ಮ ಮೇಲೆ ನಂಬಿಕೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಆಳುವ ಲಕ್ಷಣ ಕಾಣದೆ ಇರಬಹುದು. ಆದರೆ ನೀವು ಉಳಿಯುವ ಲಕ್ಷಣ ಕಾಣುತ್ತಿಲ್ಲ.

ಅಧ್ಯಕ್ಷರು : ಇಷ್ಟೊಂದು ಸಾಬೀತಾಗಿದೆ ಇನ್ನೇನು ಅನುಮಾನ ನಿಮಗೆ?

ಶ್ರೀ ಎಂ. ವರದೇಗೌಡ : ನಾವೇ ಆಳುತ್ತೇವೆ ನಿಮ್ಮ ಸಹಕಾರದಿಂದ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ತಿಮ್ಮಪ್ಪನವರ ಕಡೆಯವರು ಆಳುವ ಲಕ್ಷಣ ಕಾಣುವುದಿಲ್ಲವೆಂದು ಹೇಳುತ್ತಾರೆ. ತಿಮ್ಮಪ್ಪನವರು ನೀವು ಉಳಿಯುವುದಿಲ್ಲವೆಂದು ಅವರು ಹೇಳುತ್ತಾರೆ. ಮತ್ತೆ ಯಾರು ಬರುವವರು? ಭಾರತೀಯ ಜನತಾ ಪಕ್ಷದವರು ನಾವೇ ಎಂದು ಅಲ್ಲಿ ಕೂಗುತ್ತಿದ್ದಾರೆ. ನನಗೆ ಹಾಗೆ ಕಾಣಿಸುತ್ತಿಲ್ಲ. ಇದು ಸಾಧ್ಯವಿಲ್ಲವೆಂದು ನಾನು ಹೇಳುತ್ತಿದ್ದೇನೆ.

SRI N. RAJANNA : The broken iron rod may be weld, but it loses strength. 18 ಪಕ್ಷಗಳು ಸೇರಿ ಇವತ್ತು ದೆಹಲಿಯಲ್ಲಿ ಆಡಳಿತ ನಡೆಸುತ್ತಿದ್ದೀರಿ. It may be welded. But , it loses its strength.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಒಂದು ಸತ್ಯ ಬಹಿರಂಗವಾದದ್ದು ಏನೆಂದರೆ, ಮುಖ್ಯಮಂತ್ರಿಗಳು ಅವರಿಗೆ ಹೇಳಿದರು ನೀವು ಆಳುವ ಲಕ್ಷಣ ಇಲ್ಲವೆಂದು. ತಿಮ್ಮಪ್ಪನವರು ನೀವು ಉಳಿಯುವ ಲಕ್ಷಣ ಇಲ್ಲವೆಂದು ಹೇಳಿದರು. ತಾವು ಒಂದು ಸತ್ಯಸಂಗತಿಯನ್ನು ಹೇಳಿದಿರಿ, ಏನಾದರೂ ಭಾರತೀಯ ಜನತಾಪಕ್ಷ ಬಂದರೆ ಬರಬಹುದೆಂದು. ನೀವೇನು ಸಲಹೆಗಳನ್ನು ಕೊಟ್ಟಿದ್ದೀರಿ, ಯಾವ ಅಪೇಕ್ಷೆಗಳನ್ನು ಇಟ್ಟುಕೊಂಡಿದ್ದೀರಿ ಅವುಗಳನ್ನು ನಿಮ್ಮ ಕಾಲದಲ್ಲಿ ಮಾಡುವುದಕ್ಕೆ ಆಗದಿದ್ದರೆ ನಾವು ಬಂದು ಅವುಗಳನ್ನು ಮಾಡಿ ನಿಮ್ಮ ಅಪೇಕ್ಷೆಯನ್ನು ಪೂರೈಸುತ್ತೇವೆ ಮತ್ತು ಜನಹಿತ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್ : ಅಪ್ಪನಕೂಟ ಉಂಡರೂ ಅದೇ ಅವ್ವನಕೂಟ ಉಂಡರೂ ಅದೆ. ಮೊದಲು ಈಗ ಹೇಗೂ ರಾಷ್ಟ್ರದ ಜವಾಬ್ದಾರಿ ಇದೆ ಅದನ್ನು ನಿಭಾಯಿಸಿಕೊಳ್ಳಿ ಆಮೇಲೆ ನೋಡಿಕೊಳ್ಳುತ್ತಾರೆ. ಯಾವುದು ಹೇಗೆ ಎಂದು. ಇನ್ನು ಗೃಹ ಇಲಾಖೆ ಅದರಲ್ಲಿ ಕೆಲಸ, ವಿದ್ಯುಚ್ಛಕ್ತಿ ಅದರಲ್ಲಿ ಆಗಿರತಕ್ಕದ್ದು ನೀರಾವರಿ ಇಲಾಖೆಯಲ್ಲಿ ಮಾಡಿರತಕ್ಕ ಕೆಲಸ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗೋಸ್ಕರ ವಿಶೇಷ ಘಟಕ ಯೋಜನೆ ಸ್ಕೀಮ್‌ನಲ್ಲಿ 4 ಇದ್ದದ್ದು 40ಕ್ಕೆ ಏರಿಸಿ, 20 ಶಾಲೆ ಗಳಿದ್ದುದನ್ನು 200 ಶಾಲೆಗಳಿಗೆ ಏರಿಸಿ ನಾವು ಇವತ್ತು ಕೆಲಸ ಮಾಡಿದ್ದೇವೆ ಲಾ ಅಂಡ್ ಆರ್ಡರ್ ತಾವೆಲ್ಲರೂ ಒಪ್ಪುತ್ತೀರಿ ಎನ್ನುವ ವಿಶ್ವಾಸವಿದೆ. ಹಿಂದೆ ಯಾವಾಗಲೂ ಇಷ್ಟು ಶಾಂತಯುತವಾಗಿರಲಿಲ್ಲ. ಯಾವ riots ಇಲ್ಲ. ಯಾವ ವಿದ್ಯಾರ್ಥಿಗಳು ಮುಷ್ಕರ ಮಾಡಲಿಲ್ಲ. ಇಲ್ಲಿ ನೀವು ಧರಣಿ ಕೂಡುವುದು ನಾವು ಡಿಮಾಂಡ್ ಕೊಡುವುದು ಅದು ನಡೆಯುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅದು ನಡೆಯುತ್ತದೆ ಅದು ಅನಿವಾರ್ಯ. We have mainatined the peace and harmony in the state. We zare No.1 state in the country. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನೀವು ಯಾವ ರಾಜ್ಯವನ್ನೇ ತೆಗೆದುಕೊಳ್ಳಿ, ತಮಿಳುನಾಡಿಗೆ ಹೋಗಿ ಆಂಧ್ರಪ್ರದೇಶಕ್ಕೆ

ಹೋಗಿ, ಕೇರಳಕ್ಕೆ ಹೋಗಿ, ಮಹಾರಾಷ್ಟ್ರಕ್ಕೆ ಹೋಗಿ ಕೆಲವು ಕಡೆ ಹೋದರೆ ವಾಪಸ್ಸು ಬರುವುದೇ ಅನುಮಾನವಿದೆ. Peaceful State Karnataka, ಇದು ಎಲ್ಲಾ ಕಡೆ ಬಂದಿದೆ. ಇನ್ನು ಕೆಲಸ ಯಾವುದು ಆಗಬೇಕೋ ಅದು ಆಗಿಲ್ಲವೆನ್ನುವುದು ಗೊತ್ತಿದೆ. ಈಗ ರಸ್ತೆಗಳ ಕೆಲಸ ಸರಿಯಾಗಿ ಆಗಲಿಲ್ಲ. ಆಗಿರುವುದನ್ನು ಹೇಳುತ್ತೇನೆ. ಸೇತುಗಳು ಇನ್ನು ಹೆಚ್ಚು ಆಗಬೇಕು. ಟ್ರಾನ್ಸ್‌ಪೋರ್ಟೇಶನ್ ಇಂಪ್ರೂವ್ ಆಗಬೇಕು. We have achieved remarkably. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಎನ್ನುವುದು ಮಾನ್ಯ ತಿಮ್ಮಪ್ಪನವರಿಗೆ ಗೊತ್ತು. ಆ ಕಡೆ ಅದನ್ನು ಹ್ಯಾಂಡಲ್ ಮಾಡಿರುವವರು ಇದ್ದಾರೆ ಅವರಿಗೆ ಗೊತ್ತು. ಅದನ್ನು ಮುಚ್ಚಿಕೊಂಡು ಬೀಗಹಾಕಿಕೊಂಡು ಹೋಗಬೇಕಾದುದನ್ನು ಅದಕ್ಕೆ ಜೀವ ತಂದು ಯಾವುದು ವರ್ಷಕ್ಕೆ 50-60 ಕೋಟಿ ಲುಕ್ಸಾನು ಆಗುತ್ತಿತ್ತು ಅದು ಈಗ ಲಾಭ ಮಾಡುತ್ತಿದೆ. ಈಗ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಲಾಭ ಮಾಡುತ್ತಿದೆ. ನಾವು ಯಾವ ಕಂಪನಿಗಳನ್ನು ಪ್ರೈವೈಟ್‌ನವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೊ, ಕೆಲವು ಕೊಟ್ಟಿದ್ದೇವೆ. ಇನ್ನು ಯಾವುದನ್ನು ನಾವು ಪಬ್ಲಿಕ್ ಸೆಕ್ಟಾ ಅಂಡರ್‌ಟೇಕಿಂಗ್ ಸ್ಮಾಲರ್ ಯೂನಿಟ್ಸ್ ಇವೆ Which can be managed, ನಾವು ಹೊಸದಾಗಿ ಏನಾದರೂ ಹಣವನ್ನು ಇನ್‌ವೆಸ್ಟ್ ಮಾಡಿದರೆ ಅದನ್ನು ಉಳಿಸುವ ಹಾಗೆ ಇರಬೇಕು. ಅಂತಹವು ಆದಷ್ಟು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸಾಧ್ಯವಾಗದೆ ಇರತಕ್ಕವು ಯಾರಾದರೂ ಖಾಸಗಿಯವರು ಮುಂದೆ ಬಂದರೆ ಅವರಿಗೆ ವಹಿಸಿಕೊಡುತ್ತೇವೆ. ಇನ್ನು ಅಗ್ರಿಕಲ್ಚರ್ ಬಗ್ಗೆ ನಮ್ಮ ಮಿನಿಸ್ಟರ್ ಅವರು ಮಾತನಾಡುವಾಗ ಹೂವು ಅರಳಿದವು, ಹಣ್ಣು ಮಾಗಿದವು ಅಪೋಸಿಷನ್‌ದವರು ತೆಪ್ಪಗಾದರು (ನಗು) ಇವತ್ತು ರೈತರಿಗೆ ಅನುಕೂಲವಾಗತಕ್ಕದ್ದು ಯಾವುದೇ ಇರಲಿ ಅಗ್ರಿಕಲ್ಚರ್, ಪಶುಸಂಗೋಪನೆ ಈ ಎಲ್ಲ ಡಿಪಾರ್ಟ್‌ಮೆಂಟ್‌ಗಳಲ್ಲಿ perceptible achievement ಮಾಡಿದ್ದೇವೆ. ಹಾರ್ಟಿಕಲ್ಚರ್ ತಮಗೆ ಗೊತ್ತಿದೆ. ಬಿಜಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ ಸ್ವಲ್ಪ ತೊಂದರೆ ಇದೆ. ಇವತ್ತು ರೈತರು ಬದುಕಬೇಕೆಂದರೆ ತರಕಾರಿ ಹೂವು ಹಣ್ಣು ಬೆಳೆದು ಬದುಕಬಹುದು. ಅದಕ್ಕೋಸ್ಕರ ಏನು ಮಾಡಬೇಕೆಂದು ವಿಚಾರ ಎಕ್ಸ್‌ಪೋರ್ಟ್ ಫೆಸಿಲಿಟೀಸ್ ಪ್ರೊವೈಡ್ ಮಾಡಿದ್ದೇವೆ. ಮೊನ್ನೆ ಬಂದ ಪ್ರಧಾನಮಂತ್ರಿಗಳಿಗೂ ಹೇಳಿದ್ದೇವೆ. ಎಕ್ಸ್‌ಪೋರ್ಟ್ ಫೆಸಿಲಿಟೀಸ್ ಪ್ರೊವೈಡ್ ಮಾಡಿಯೆಂದು ಹೇಳಿದ್ದೇವೆ. ಕೋಲ್ಡ್ ಸ್ಟೋರೇಜ್ ಕೆಪಾಸಿಟಿ ಫುಡ್ ಪ್ರೋಸೆಸಿಂಗ್ ಯೂನಿಟ್ ಇವುಗಳನ್ನು ಮಾಡಿದರೆ ನಮ್ಮ ರೈತ ತಾನಾಗಿಯೇ ಉಳಿದುಕೊಳ್ಳುತ್ತಾನೆ. ಉದಾಹರಣೆಗೆ ಟೊಮ್ಯಾಟೋ ತೆಗೆದುಕೊಳ್ಳಿ. ಅದನ್ನು ಸಿಂಗಾಪುರಕ್ಕೆ ತೆಗೆದುಕೊಂಡು ಹೋಗಿ ಕಚಪ್ ಮಾಡಿ ಕಳುಹಿಸುತ್ತಾರೆ. ನಮ್ಮಲ್ಲಿ ಒಂದು ಕೆ.ಜಿ.ಗೆ. 2-3 ರೂಪಾಯಿ ಒಂದೊಂದು ಸಾರಿ ಅದು 1 ರೂಪಾಯಿಗೆ ಮಾರಾಟವಾಗುವುದುಂಟು. ಅದನ್ನು ಅವರು ತೆಗೆದುಕೊಂಡು ಕಚಪ್ ಮಾಡಿ ನಮಗೆ ವಾಪಸ್ಸು ಕಳುಹಿಸುತ್ತಾರೆ. ಆ ಕಚಪ್‌ಗೆ ನಾವು ಬೇಕಾದರೆ 15 ರೂಪಾಯಿ ಕೊಡುತ್ತೇವೆ. ಏಕೆಂದರೆ ಪ್ರೋಸೆಸಿಂಗ್ ಯೂನಿಟ್ ಅವರ ಹತ್ತಿರ ಇದೆ. So, we have to concentrate on food preocessing units in these two districts. Export cargo services to be provided by the Government of India, which I think, they will agree. ಇನ್ನು

ಟೂರಿಸಂ ಬಗ್ಗೆ ಹೇಳುವುದಾದರೆ, ಪ್ರತಿ ವರ್ಷ ಮುರ್ನಾಲ್ಕು ಕೋಟಿ ರೂಪಾಯಿ ಖರ್ಚಾಗುತ್ತಿತ್ತು. ಟೂರಿಸಂ ಹೋಟೆಲ್‌ಗಳಿಗೆ ಹೋದರೆ ಅವನು ಮತ್ತೆ ಆ ಕಡೆ ಮುಖ ಹಾಕಿ ನೋಡುತ್ತಿರಲಿಲ್ಲ. There has been a profit of Rs. 62 lakh this year, first time. ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಹೊಸದಾಗಿ 35 ಹೈಟೆಕ್ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಪ್ರವಾಸಿಗರ ಆಗಮನ ಜಾಸ್ತಿಯಾಗುತ್ತಿದೆ. ನಮ್ಮ ರಾಜ್ಯದಲ್ಲಿರತಕ್ಕ ಪ್ರವಾಸೋದ್ಯಮ ಐತಿಹಾಸಿಕ ಸ್ಥಳಗಳು ಬೇರೆ ಎಲ್ಲೂ ಕೂಡ ಇಲ್ಲ. Nowhere. ಕೆಲವರು ಕಾಶ್ಮೀರದ ವ್ಯಾಲಿಯನ್ನು ನೋಡಬಹುದು. ಕೆಲವರು ಡಾರ್ಜಲಿಂಗ್‌ನ ಗುಡ್ಡ ನೋಡಬಹುದು. ನಾನು ಸಹ ನೋಡಿದ್ದೇನೆ. ತ್ರಿಪುರ ಚೈನಾ ಬಾರ್ಡರ್ ಮಿಜೋರಾಂ ಇವೆಲ್ಲ ನೋಡಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕ ವನ್ಯಗಳು ಪ್ರಾಣಿ ಸಂಪತ್ತನ್ನಾಗಲಿ ಪಕ್ಷಿಗಳ ಸಂಪತ್ತು, ಸಮುದ್ರದಂಡೆ ಪ್ರಾಚೀನ ಗುಹೆಗಳು, ಗೊಮ್ಮಟೇಶ್ವರ ಅಂತಹ ಅಪೂರ್ವವಾದ ಶಿಲ್ಪಕಲೆ ಎಲ್ಲೂ ಇಲ್ಲ. ಆದರೆ ಅದನ್ನು ತೋರಿಸುವುದಕ್ಕೆ ನಾವು ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಜನ ನೋಡುತ್ತಾರೆ. ನಮ್ಮಲ್ಲಿ ಏನಾಗಿದೆ ಅಂದರೆ ಎಲ್ಲವನ್ನೂ ಪುಕ್ಕಟ್ಟೆ ನೋಡಬೇಕು. ಹಿಂದೆ ಲಾಲ್ ಬಾಗ್ ಹೇಗಿತ್ತು? ಒಂದು ಕಾಲಕ್ಕೆ ಕಬ್ಬನ್ ಪಾರ್ಕ್ ಹೇಗಿತ್ತು? ನಾನು 50 ವರ್ಷಗಳಿಂದ ಬೆಂಗಳೂರು ನೋಡುತ್ತಿದ್ದೇನೆ. ಈಗ ಎಲ್ಲಾ ಹಾಳಾಗುತ್ತಿದೆ. ಜನಗಳಿಗೆ ಒಂದು ರೀತಿ ಜವಾಬ್ದಾರಿ ಇಲ್ಲ. ಎಲ್ಲಿ ಅಂದರೆ ಅಲ್ಲಿ ಅಸಹ್ಯ ಮಾಡಿಬಿಡುತ್ತಾರೆ. ಅದಕ್ಕೆ ಸಿವಿಕ್ ಕಾನ್ಷಿಯಸ್‌ನೆಸ್ ಬರಬೇಕು. ಸರ್ಕಾರ ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಅದನ್ನು ಮಾಡದೆ ನಾವು ಜನರ ಅಪೇಕ್ಷೆಗಳನ್ನು ಅವರ ಕಷ್ಟಗಳನ್ನು ನಿವಾರಣೆ ಮಾಡುತ್ತೇವೆಂದರೆ ಹೇಗೆ ಸಾಧ್ಯ? ಅದನ್ನೆಲ್ಲ ಮಾಡದೆ ನಾವು ಸುಮ್ಮನೆ ಏರ್‌ಪೋರ್ಟ್ ಮಾಡಿದರೆ ಯಾರೂ ಅದಕ್ಕೆ ಬೆಲೆ ಕೊಡುವುದಿಲ್ಲ. ಅದಕ್ಕೆ ಪ್ರವಾಸೋದ್ಯಮ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಇದನ್ನು ಕೇಂದ್ರ ಸರ್ಕಾರದವರು ಮಾಡಬೇಕು. ನಮ್ಮವರೇ ಮಂತ್ರಿಗಳು ದೆಹಲಿಯಲ್ಲಿ ಇರುವುದರಿಂದ ಆದಷ್ಟು ಬೇಗ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ ಕ್ಲಿಯರ್ ಮಾಡಬೇಕು. ಈಗಿರುವ ಏರ್‌ಪೋರ್ಟನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಿದೆ. ನಮ್ಮ ರಾಜ್ಯದ ಸಮಗ್ರ ಆರ್ಥಿಕ ಬೆಳವಣಿಗೆಯಾಗಬೇಕು. ಹಾಗೆ ಇದ್ದಾಗ ಸಮಾಧಾನಕರವಾದ ಪರಿಸ್ಥಿತಿ ಸಮಾಜದಲ್ಲಿದ್ದರೆ ಈ ಕೊಲೆಗಳು, ಸುಲಿಗೆಗಳು, ಅತ್ಯಾಚಾರಗಳು ಬೇರೆ ಜನರ ಮೇಲೆ ಬಿದ್ದುಹೋಗುವುದು ಇವೆಲ್ಲ ಕಡಿಮೆಯಾಗುತ್ತವೆ. ಈ ದಿಕ್ಕಿನಲ್ಲಿ ಕೋರ್‌ಸೆಕ್ಟಾರ್‌ನಲ್ಲಿ ಇಂಡಸ್ಟ್ರೀಸ್ ಪವರ್ ಅಂಡ್ ಎಜುಕೇಶನ್ ಸೋಸಿಯಲ್ ಸರ್ವೀಸ್ ನಲ್ಲಿ ಎಜುಕೇಶನ್ ಹೌಸಿಂಗ್ ಆಮೇಲೆ ಅಗ್ರಿಕಲ್ಚರ್, ಹಾರ್ಟಿಕಲ್ಚರ್ ಪಶುಸಂಗೋಪನೆ ಇದು ಯಾವುದೇ ಸೆಕ್ಟಾರ್‌ನಲ್ಲಿ ನಾವು ಅಚೀವ್‌ಮೆಂಟ್ ಮಾಡುತ್ತಾ ಹೋದರೆ ಎಲ್ಲೋ ಒಬ್ಬ ಆಫೀಸರ್ ಅಪಾಯಿಂಟ್‌ಮೆಂಟ್ ಮಾಡುವಾಗ ಏನೋ ಮಾಡಿದ ಎಂದು ದೊಡ್ಡ ಇಷ್ಯೂ ಮಾಡುವುದು. ಒಂದು ಇಲಾಖೆಯಲ್ಲಿ ನೀವು ಕಂಡುಹಿಡಿದಿದ್ದೀರಿ. ಯಾವುದೋ ಒಂದು ಡಿಸ್ಟ್ರಿಕ್ಟ್ ರಿವ್ಯೂ ಮಾಡುವಾಗ ಯಾವನೋ ಒಬ್ಬ ಜಿಲ್ಲಾಪಂಚಾಯಿತಿ ಇಂಜಿನಿಯರ್ ಒಬ್ಬ ಧಾರವಾಡ ಜಿಲ್ಲಾ ಪಂಚಾಯಿತಿಯಲ್ಲಿ ದುಡ್ಡು ತಿಂದು ಹಾಕಿಬಿಟ್ಟಿದ್ದ. ಅವನ್ನ ಹಿಡಿದು ಶಿಕ್ಷೆ ಕೊಡಬೇಕಾಯಿತು ಇವೆಲ್ಲ ರೋಗ ಇವೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್‌ಗೆ ಬಂದಾಗ ಬಹಳ ಜನ ಸಲಹೆ ಕೊಟ್ಟಿದ್ದಾರೆ. ಒಬ್ಬ ತಹಶೀಲ್ದಾರ್ ಜಿಲ್ಲಾಧಿಕಾರಿಗೆ ತಲೆಬಾಗಿ ನಡೆಯಬೇಕು. ತಹಶೀಲ್ದಾರ್ ಅವರಿಗೆ ಎಂ.ಎಲ್.ಎ. ಬೆಂಬಲ ಕೊಟ್ಟು, ಡೆಪ್ಯೂಟಿ ಕಮೀಷನರ್ ಅವರಿಗೆ ನೋಡಿಕೊಳ್ಳುತ್ತೇನೆಂದು ಹೇಳಿದರೆ, ಯಾವ ಅಡ್ಮಿನಿಸ್ಟ್ರೇಷನ್ ಎಂದು ಹೇಳುತ್ತೀರಿ? ಡೆಪ್ಯೂಟಿ ಕಮೀಷನರ್ ಅವರು ತಮಗೆ ನೆನಪಿರುವಹಾಗೆ ಒಂದು ಕಾಲಕ್ಕೆ ಅವರು ಜಿಲ್ಲೆಯ ದೊರೆಗಳು. ಆಗ, ಅವರ ಅಡ್ಮಿನಿಸ್ಟ್ರೇಷನ್ ಹಾಗೆ ಇತ್ತು. ಕಾರು ಇಲ್ಲದೇ ಇದ್ದರೆ, ಕುದುರೆ ಮೇಲಾದರೂ ಓಡಾಡುತ್ತಿದ್ದರು. ಕೆಲಸಗಳು ನಡೆಯುತ್ತಿದ್ದವು. ಈಗ ಹೇಗಾಗಿದೆ, ನಾನು ಕಾರಣ ಹೇಳುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಯಾರು ಕಾರಣ, ಏಕೆ ಹಿಂಗಾಯಿತು ಎಂಬುದನ್ನು ಹೇಳುವುದಿಲ್ಲ. ಮುಖ್ಯಮಂತ್ರಿಯಾದವರು, ಮುಖ್ಯ ಕಾರ್ಯದರ್ಶಿಗೆ ನೀನು ದುಡ್ಡು ಕಲೆಕ್ಟ್ ಮಾಡು ಎಂದು ಹೇಳಿದರೆ, ಏನು ಉಳಿಯುತ್ತದೆ? ಏನೂ ಉಳಿಯುವುದಿಲ್ಲ, ಜಾಮೀನಿನ ಮೇಲೆ ಓಡಾಡಬೇಕು. ನಾವು ಅದನ್ನು ಮಾಡಿಲ್ಲ. ಈ ಸರ್ಕಾರದ ಮೇಲೆ ಯಾವುದೇ ಒಂದು ಆಪಾದನೆ, ಯಾವ ಕಾಲಕ್ಕೂ ಯಾವುದೇ ಸಂಸ್ಥೆ ಇರಲಿ ಇಂತಾದ್ದು ಅಪರಾಧ ಮಾಡಿದ್ದಾರೆಂದು ಹೇಳುವುದಕ್ಕೇ ಆಗುತ್ತಾ ಇಲ್ಲ. ಅಂದರೆ, ಅಂತಾದ್ದು ಮಾಡಿಲ್ಲ. ಅಂತಾದ್ದು ನಡೆದೂ ಇಲ್ಲ. ಆದರೆ, ಒಂದು ವಸ್ತು ಸ್ಥಿತಿಯನ್ನು ಹೇಳಬೇಕಾಗಿದೆ. ಈ ಚುನಾವಣೆ ಕಾಲಕ್ಕೆ ಎಲ್ಲಾ ಪಕ್ಷಗಳೂ ಚುನಾವಣೆ ಖರ್ಚಿಗೆ ಎಂದು ಬಂಡವಾಳ ವಸೂಲ್ಮಾಡುತ್ತೇವೆ. ದಯವಿಟ್ಟು ಏನಾದರೂ ಮಾಡಿ ಎಲ್ಲಾ ಪಾರ್ಟಿಯ ಮುಖಂಡರು ಈ ಚುನಾವಣೆಯಲ್ಲಿ ಹಣ ಕಲೆಕ್ಟ್ ಮಾಡುವುದನ್ನು ಎಲಿಮಿನೇಟ್ ಮಾಡಿದರೆ, 90% of the corruption will go automatically, ಬಿ.ಜೆ.ಪಿ. ಯವರಿಗೂ ಹೇಳುತ್ತೇನೆ, ಕಾಂಗ್ರೆಸ್‌ನವರಿಗೂ ಹೇಳುತ್ತೇನೆ.

(ಗೊಂದಲ)

ನಾನು ಹೇಳಿದು ನೀವು ಹಿಂದೆ ಮಾಡಿದ್ದೀರಿ, ಬಿಟ್ಟಿದ್ದೀರಿ ಎಂದಲ್ಲ. ನಾನು ಹೇಳುತ್ತಾ ಇರುವುದು ಮುಂದಾದರೂ ಈಗಿರತಕ್ಕಂಥ ಕನ್‌ಕ್ಲೂಷನ್, ಈಗಿರತಕ್ಕಂಥ ಸರ್ಕಾರದ ದುರ್ಬಲತೆಗಳು, ಆ ಎಲ್ಲಾ ಕೀಟಗಳು ಹುಟ್ಟುವುದು, ದೋಷಗಳು ಹುಟ್ಟುವುದೇ ಅಲ್ಲೇ. ಅದೊಂದನ್ನು ನಾವು ತಿದ್ದುಕೊಳ್ಳಬೇಕು. ಜೆ.ಪಿ. ಹೇಳಿದರು, ಆದರೆ ನಾವು ಮಾಡಲಿಲ್ಲ. ತಾರ್ಕುಂಡೆ ಕಮಿಟಿ ಅಪಾಯಿಂಟ್ ಮಾಡಿದ್ದರು, ಆಗ ನಾವೆಲ್ಲರೂ ಒಟ್ಟಿಗೇ ಇದ್ದೆವು. ಆಗ ಹೇಳಿದ್ದನ್ನು ಮಾಡಿದ್ದರೆ, ಎಲೆಕ್ಟೋರಲ್ ರಿಫಾರಮ್ಸ್ ಮಾಡಿ, ಜನರಲ್ ಕೋಡ್ ಆಫ್ ಕಾಂಡಕ್ಟನ್ನು ಎಲ್ಲಾ ಪಾರ್ಟಿಗಳು ಒಪ್ಪಿಕೊಂಡು ನಡೆಸದೇ ಹೋದರೆ ಕಷ್ಟವಾಗುತ್ತದೆ. ಬಿ.ಜೆ.ಪಿ.ಯವರು ಖರ್ಚು ಮಾಡಿದರು ಎಂದು ಕಾಂಗ್ರೆಸ್‌ನವರು, ಕಾಂಗ್ರೆಸ್‌ನವರು ಮಾಡಿದರು ಎಂದು ನಾನು. ಹೀಗೆ ಮಾಡಿ ಯಾರು ಯಾರು ಹೆಚ್ಚು ಹಣ ವಸೂಲ್ಮಾಡಿ ಗೆಲ್ಲುತ್ತಾರೋ ಅವರೇ ದೊಡ್ಡ ಪಾರ್ಟಿ ಎಂದಾಗುತ್ತದೆ. ಆ ರೀತಿ ಆಗಬಾರದು. ಬಿ.ಜೆ.ಪಿ ಯವರೇ ಗೆಲ್ಲಲಿ, ಕಾಂಗ್ರೆಸ್ಸೇ ಗೆಲ್ಲಲಿ ನಾವೇ ಗೆಲ್ಲಲಿ. ನಾವು ಇವತ್ತು ಜನರ ಸಂಪೂರ್ಣ ಸಹಕಾರದಿಂದ, ಬೆಂಬಲದಿಂದ ಪರವಾಯಿಲ್ಲ ಇವರು ಕೆಲಸ ಮಾಡುತ್ತಾರೆ, ಇವರಿಗೆ ಬೆಂಬಲ ಕೊಡೋಣ ಎಂದು ಹೇಳಬೇಕೇ ಹೊರತು ದುಡ್ಡು ಕೊಟ್ಟವನಿಗೆ ಓಟು ಆಗಬಾರದು. ಅದೂ ಗುಂಡಾಗಿರಿ. ಕೆಲವು ರಾಜ್ಯಗಳಲ್ಲಿ ಹೇಳುವುದಕ್ಕೇ ಆಗುವುದಿಲ್ಲ. ಉತ್ತರ

ಭಾರತದಲ್ಲಿ ಇದು ಜಾಸ್ತಿ. ದಕ್ಷಿಣ ಭಾರತದಲ್ಲಿ ಎಷ್ಟೋ ಉತ್ತಮ. ಉತ್ತರ ಭಾರತದಲ್ಲಿ ಚುನಾವಣೆಯೇ ಇಲ್ಲ, ಪ್ರಜಾತಂತ್ರದಲ್ಲಿ ಹುರುಳು ಇಲ್ಲ. ಯಾರು ಯಾರಿಗೆ ಹೇಗೇಗೆ ತಿಳಿಯುತ್ತದೋ ಹಂಗೆ. ಅಲ್ಲಿ ಮಂತ್ರಿಮಂಡಲದ ಗಾತ್ರಕ್ಕೂ, ಯಾವುದಕ್ಕೂ ಸಂಬಂಧವೇ ಇಲ್ಲ. ಇಲ್ಲಿ ಏನಾದರೂ ಸ್ವಲ್ಪ ಹೆಚ್ಚಾದರೆ ಜಂಬೋ ಸೈಜ್ಡ್ ಎಂದು ನಮ್ಮ ಸ್ನೇಹಿತರು ಬಡಿದುಕೊಳ್ಳುತ್ತಾರೆ. ಅವುಗಳಿಗೆ ಶಬ್ದಗಳೇ ಇಲ್ಲ. ಜಂಬೋನೋ ಯಾವುದೋ. My only appeal to the House what is that we are going to do to check these things ನಾವು ಮಾಡದೇ ಇದ್ದರೆ, ಬಿಡಿ ಬಾಕಿ ಗುಣ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ದೇಶ ಅಪಾಯದಲ್ಲಿ ಸಿಗುತ್ತದೆ. ಇವತ್ತು ಇದನ್ನೇ ಹೇಳುತ್ತೇನೆ. ಕೇಂದ್ರ ಸರ್ಕಾರ ಕೆಲವು ತೀರ್ಮಾನಗಳನ್ನು ತೆಗೆದು ಕೊಂಡಿದೆ ಉದಾಹರಣೆಗೆ 5ನೇ ವೇತನ ಆಯೋಗ. ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಚರ್ಚೆ ನಡೆದಾಗ ನಾವಿಬ್ಬರೂ ಇದ್ದೆವು. ಅಲ್ಲಿ ಚಿದಂಬರ ಅವರು ಹೇಳಿದರು, ನಾವು ವಿರೋಧ ಮಾಡಿದೆವು. ಈ ರೀತಿ ನೀವು ಮಣಿದರೆ, ರಾಜ್ಯ ಸರ್ಕಾರದವರು ಈ ಭಾರವನ್ನು ಎಲ್ಲ ಹೊರಬೇಕು? 18 ಸಾವಿರ ಕೋಟಿ, ನಿಮ್ಮ ಸರ್ಕಾರ ಬರುವುದಕ್ಕೆ ಮುಂಚೆ. ಆಗ ರಾಜಾಸ್ಥಾನದ ಮುಖ್ಯಮಂತ್ರಿಗಳು, ಮಧ್ಯಪ್ರದೇಶದ ಮುಖ್ಯಮಂತ್ರಿಗಳು, ಆಂಧ್ರದ ಮುಖ್ಯಮಂತ್ರಿಗಳು ನಾವು ಸೆಂಟ್ರಲ್ ಹಾಲ್‌ನಲ್ಲಿ ಸೇರಿ ಏನಾದರೊಂದು ಮಾಡಬೇಕೆಂದು ಹೇಳಿದೆವು. We cannot allow this kind of a thing. ಅದು ಏನೂ ಆಗಲಿಲ್ಲ. 5ನೇ ವೇತನ ಆಯೋಗ ಆಯಿತು ಎಂದು ಅವರು ಮಾಡಿದರು. ನಾಮ ಹೆಚ್ಚಾಯಿತು ಎಂದು ನೀನು, ನೀರು ಹೆಚ್ಚಾಯಿತು ಎಂದು ನಾನು. ಹೀಗೆ ನಾಮ ತೇಯ್ದು, ತೇಯ್ದು ಜನ ತೆಳ್ಳಗೆ ಆಗಿದ್ದಾರೆ. ನಾವು ತೇಯ್ದವರು ಹೇಗಾದರೂ ಇರಲಿ. ಇವತ್ತು ಜನ ತೆಳ್ಳಗೆ ಆಗಿ ಹೋಗಿದ್ದಾರೆ. ಮತ್ತೆ ಇವರು ನಿವೃತ್ತಿ ವಯಸ್ಸನ್ನು 60 ವರ್ಷ ಎಂದು ಮಾಡಿದ್ದಾರೆ. ಇವರು ಯಾರನ್ನು ಕೇಳಿದರು? They have not consulted any State. ಈ ರೀತಿ ಕೆಲವು ವಿಚಾರಗಳಲ್ಲಿ ಕೇಂದ್ರ ಸರ್ಕಾರದ ತೀರ್ಮಾನ ತೆಗೆದುಕೊಳ್ಳುವಾಗ ಸರ್ವಾಂಗೀಣವಾಗಿ ರಾಜ್ಯಸರ್ಕಾರಗಳ ಆರ್ಥಿಕ ಮತ್ತು ಆಡಳಿತಾತ್ಮಕ ದೃಷ್ಟಿಯನ್ನು ನೋಡಬೇಕು. ಅವರು ರಾಜಕೀಯವಾಗಿ ನೋಡುವುದು ಬೇಡ. ಈ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಮತ್ತು ಅದರಂತೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿದ್ದೇನೆ. ಮತ್ತು ಪತ್ರವನ್ನೂ ಬರೆದಿದ್ದೇನೆ. ಈ ಬಜೆಟ್ ಬಗ್ಗೆ ಹೇಳಿದರು. ಇನ್ನೂ ಸುಧಾರಣೆ ಮಾಡುತ್ತೇವೆ. ನನಗೆ ಹೇಳಿದರು, ಮುಂದಿನ ಅಧಿವೇಶನದ ಹೊತ್ತಿಗೆ ಇರುವುದೇ ಇಲ್ಲ. ಇವರೇ ಹೋಗುತ್ತಾರೆ, ಅವರೇ ಹೋಗುತ್ತಾರೆ. ಬಜೆಟನ್ನೆ ಮಂಡಿಸುವುದಿಲ್ಲವೆಂದು ಹೇಳಿದರು. ಯಾರು ಯಾರು ಏನೇನು ಕನಸು ಕಂಡಿದ್ದರೋ ಏನಾಗಿದ್ದರೋ ಗೊತ್ತಿಲ್ಲ. ಅವರು ಎಲ್ಲೆಲ್ಲಿ ಇದ್ದಾರೋ ಅದೂ ಸಹ ಗೊತ್ತಿಲ್ಲ. ಅವರಿಗೆ ಕೆಟ್ಟ ಕನಸು ಬಿದ್ದು, ಗಾಬರಿಯಾಗಿ ಚೀರಾಡಿಕೊಂಡರೆ ನಾವೇನು ಮಾಡಲಿ. ಅದಕ್ಕೋಸ್ಕರ ವಿಶೇಷವಾಗಿ ಖರ್ಗೆಯವರಿಗೆ, ತಾವು ಸರ್ಕಾರಕ್ಕೆ ಕೊಡುವಾಗ ಆಧಾರ ರಹಿತವಾದ, ನಾನು ಕಮ್ಯುನಲ್ ಎಂದು ಹೇಳುವುದು. ಇಲ್ಲಿಯವರೆಗೂ ಯಾರು, ಯಾವ ಸಂದರ್ಭದಲ್ಲೂ ಕಮ್ಯುನಲ್ ಎಂದು ಹೇಳಿಲ್ಲ. ಅಂತಾದ್ದರಲ್ಲಿ ನಾನು ಕಮ್ಯುನಲ್ ಎಂದು ಹೇಳಿದ್ದಾರೆ. ದುರಾದೃಷ್ಟ ಅವರ ಮಾತು ಆ ರೀತಿ ಬರಬಾರದಾಗಿತ್ತು. ಎಷ್ಟು ಹೇಳಿ, ಇನ್ನು ಯಾವ ಅಪಾಯಿಂಟ್‌ಮೆಂಟ್‌ನಲ್ಲಿ ಏನಾಗಿದೆ; ಆಮೇಲೆ ನೀವು, ಎರಡು ಕರ್ನಾಟಕದ ಬಗ್ಗೆ

ಮಾತನಾಡಿದಿರಿ. ದಯವಿಟ್ಟು ತಮ್ಮಂಥವರು ಮಾತನಾಡಬಾರದು. ನೀವು ಕನ್ನಡಕ್ಕೋಸ್ಕರ ಹೋರಾಟ ಮಾಡಿಕೊಂಡು ಬಂದವರು.

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡಿದ್ದು ಆ ತರಹ ಕೂಗು ಇದೆ. ನಾವು ಯಾರೂ ಬೆಂಬಲ ಕೊಡಬಾರದು, ಏಕೀಕರಣ ಒಂದೇ. ಆ ಜನರ ಬೇಡಿಕೆ ಏನಿದೆ, ಅದಕ್ಕೆ ನಾವು ಬೆಂಬಲ ಕೊಡಬೇಕು, ಅವರಿಗೆ ಅನುಕೂಲ ಮಾಡಬೇಕು ಎಂದು ಹೇಳಿದ್ದೇವೆಯೇ ಹೊರತು, ಆ ರೀತಿ ಈ ಜನ್ಮದಲ್ಲಿ ನಾನು ಹೇಳುವುದಕ್ಕೆ ಸಾಧ್ಯವೇ ಇಲ್ಲ ನಿಮಗೆ ಯಾರೋ ಸುಳ್ಳು ಭಾಷಣ ಕೊಟ್ಟಿದ್ದಾರೆ. ತಾವು ನಮ್ಮ ಮಾತುಗಳನೆಲ್ಲಾ ಓದಿಕೊಂಡು ಉತ್ತರ ಕೊಟ್ಟರೆ, ಇನ್ನೂ ಚೆನ್ನಾಗಿರುತ್ತೆ. ಚೆನ್ನಾಗಿ ಕೊಡುತ್ತಾ ಇದ್ದೀರಿ ಇನ್ನೂ ಚೆನ್ನಾಗಿರುತ್ತೆ ಎಂದು ನನ್ನ ಭಾವನೆ. ನಾನು ಹೇಳಿದ್ದು, ಒಂದು ಆಯೋಗವನ್ನು ರಚನೆ ಮಾಡಿ, ನಿಜವಾಗಿಯೂ ಆ ಜನರ ತೊಂದರೆಗಳ ಬಗ್ಗೆ ಬೇಡಿಕೆಗಳನ್ನು ಒಂದೇ ಸಮನೆ ಇಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಆಯೋಗ ರಚನೆ ಮಾಡಿ ವರ್ಷಾನುಗಟ್ಟಲೆ ಕಳೆಯುವುದಕ್ಕಿಂತ ಆ ಪ್ರದೇಶಗಳಿಂದ ಈ ಕೂಗು ಬರುತ್ತಾ ಇದೆ. ಯಾರು ಯಾರು, ಯಾವ ಯಾವ ಕಾರಣಕ್ಕಾಗಿ ಹೇಳಿದ್ದಾರೋ ಅದು ಬೇಡ. ಆದರೆ, ಒಟ್ಟಾರೆ ಆಗುವುದಿಲ್ಲ. ಕೆಲವು ವಿಚಾರಗಳಲ್ಲಿ ಮಾನ್ಯ ಭೈರೇಗೌಡರ ಹಾಗೆ ಉಡಾಫೆ ಹೊಡೆಯುವುದು ಬೇಡ. ಅಲ್ಲಿ ಸೂಕ್ಷ್ಮವಾದಂಥ ಕೆಲವು ಅಭಿವೃದ್ಧಿ ಕಾರ್ಯಗಳು ಆಗಬೇಕಾದ್ದು ಇವೆ. ಅದಕ್ಕೆ ಆ ಕೂಗು ಎಂದು ಯಾರು ಹೇಳುತ್ತಾರೆ. ಪ್ರಮುಖವಾಗಿ ಪಾಟೀಲ್ ಪುಟ್ಟಪ್ಪನವರಂಥ ವಿಚಾರವಾದಿಗಳು ವಿಶೇಷವಾಗಿ ಹೇಳುತ್ತಾರೆ. ಅದಕ್ಕೆ ಸಂಬಂಧಪಟ್ಟವರೊಡನೆ ಸ್ವಲ್ಪ ಮಟ್ಟಿಗೆ ಸಮಾಲೋಚನೆ ಮಾಡಿ.

ಶ್ರೀ ಜೆ.ಊಹೆಚ್. ಪಟೇಲ್ : ಉತ್ತರ ಕರ್ನಾಟಕದವರು, ದಕ್ಷಿಣ ಕರ್ನಾಟಕದವರುಗಳ ಬಗ್ಗೆ ಈ ರೀತಿ ನಾವು ಭಿನ್ನವಾಗಿ ಆಲೋಚನೆ ಮಾಡಬಾರದು. ಆದರೆ ಕಾರಣಾಂತರದಿಂದ, ಈಗ ಹೈದರಾಬಾದ್ ಕರ್ನಾಟಕ ಹಿಂದುಳಿದಿದೆ ಎಂಬುದರ ಬಗ್ಗೆ ವಿವಾದವೇ ಬೇಡ. ಏಕೆಂದರೆ, ಅದು ಹಿಂದುಳಿದೇ ಇರಬೇಕೆಂದು ಇದ್ದುದು ನಿಜ. ಆದರೆ, ಬಾಂಬೆ ಪ್ರದೇಶದಲ್ಲಿ, ಮದ್ರಾಸ್ ಪ್ರಾಂತ್ಯದಲ್ಲಿದ್ದದು ಹಳೇ ಮೈಸೂರು. ಹಳೇ ಮೈಸೂರಿನ ಸ್ಥಿತಿಗತಿಗಳು ಆಗಿನ ಕಾಲದ ರಾಜರ ಒಳ್ಳೆಯತನ ಇರಬಹುದು. ದಿವಾನರುಗಳು, ವಿಶ್ವೇಶ್ವರಯ್ಯನವರಂಥ ದಿವಾನರುಗಳು, ಮಿರ್ಜಾ ಇಸ್ಮಾಯಿಲ್‌ರವರಂಥ ದಿವಾನರುಗಳು ಇದ್ದುದರಿಂದ ಇಲ್ಲಿ ಸ್ವಲ್ಪ ಉತ್ತಮವಾದಂಥ ಆಡಳಿತ ಇತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಳೆಯ ಮೈಸೂರು ಎಂದು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. ಹಳೆಯ ಮೈಸೂರಿನಲ್ಲಿರತಕ್ಕ ಕೋಲಾರ ಜಿಲ್ಲೆ ಇಡೀ ಕರ್ನಾಟಕದಲ್ಲಿ ಲೋಯೆಸ್ಟ್ ಪರ್ ಕ್ಯಾಪಿಟಾ ಇರತಕ್ಕಂಥ ಜಿಲ್ಲೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏನಾದರೂ ಕಾರ್ಯಕ್ರಮ ಹಾಕಿ.

5.40 ಪಿ.ಎಂ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಡೀ ಕರ್ನಾಟಕದಲ್ಲಿ ಲೋಯೆಸ್ಟ್ ಪರ್ ಕ್ಯಾಪಿಟಾ ಇರತಕ್ಕಂಥ ಜಿಲ್ಲೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಬಗ್ಗೆ ತಾವು ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್ : ಅದು ಗೊತ್ತಿದೆ. ಯಾವುದೇ ರೀತಿಯ ನದಿಗಳು ಇಲ್ಲ ಬಂಗಾರ ಇತ್ತು ಅದನ್ನೂ ಈಗ ಕಳೆದುಕೊಂಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಬಂಗಾರ ಇಲ್ಲ ಬಂಗಾರ ಪೇಟೆ ಇದೆ.

ಶ್ರೀ ಜೆ.ಹೆಚ್. ಪಟೇಲ್ : ಬರೀ ಪೇಟೆ ಇದೆ ಬಂಗಾರ ಇಲ್ಲ. ಮಾನ್ಯ ಅಧ್ಯಕ್ಷರೇ ಈಗ ಯು.ಕೆ.ಪಿ. ಮಲಪ್ರಭಾ, ಘಟಪ್ರಭಾ, ಈ ಯೋಜನೆಗಳು ಇಂಪ್ಲಿಮೆಂಟೇಶನ್ ಆದರೆ 15 ಲಕ್ಷ ಎಕರೆಗಳಿಗಿಂತಲೂ ಹೆಚ್ಚು ನೀರಾವರಿಯಾಗುತ್ತದೆ, 3 ಜಿಲ್ಲೆಗಳಲ್ಲಿ. ಈಗ ನಾವು ಕನ್ನಂಬಾಡಿ ಗಿನ್ನಂಬಾಡಿ ಎಲಾ ಕಟ್ಟಿಕೊಂಡರೂ ಇದರ ಮೂರು ನಾಲ್ಕು ಪಟ್ಟು ಜಾಸ್ತಿಯಾಗುತ್ತದೆ. ಈಗ ನಾವು ಕೆಲಸ ಮಾಡುತ್ತಿದ್ದೇವೆ. ಯು.ಕೆ.ಪಿ ಕೆಲಸ ಮಾಡುತ್ತಿದ್ದೇವೆ. ನಾವು ಕೆಲಸ ಮಾಡುವಾಗ ಬೇಗ ಕೆಲಸ ನಡೆಯಲಿ ಎಂದು ಮಾಡಿದರೆ, ಅದು ನೂರು ಕೋಟಿ ರೂಪಾಯಿಗಳಲ್ಲಿ ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ಎಂದು ಹೇಳುವುದು, ಹೇಳುವುದಕ್ಕಾದರೂ ಏನಾದರೂ ಬೇಕಲ್ಲ. ಆಗಿರಬಹುದು ಕೆಲವು ಟೆಕ್ನಿಕಲ್ ಡಿಫೆಕ್ಟ್ಸ್ ಆಗಿರಬಹುದು, We have achieved something which has not been done ಅದಕ್ಕೆ ಉತ್ತರ ಕರ್ನಾಟಕದಲ್ಲಿ ಬರುವ ಹೊಸ ಇಂಡಸ್ಟ್ರೀಸ್‌ಗೆ ಆಗಲಿ, ಅದು ಟೆಲ್ಕೋ ಆಗಲಿ, ಇನ್ನು ಕೆಲವು ಇಂಡಸ್ಟ್ರೀಗಳು ಬಿಜಾಪುರದ ಹತ್ತಿರ ಗುಲ್ಬರ್ಗದ ಹತ್ತಿರ, ಎಲ್ಲಿ ನೀರಿನ ಸೌಲಭ್ಯ ಇದೆ, ಅಂತಹ ಕಡೆ ನಾವು ಅವುಗಳನ್ನು ಡೈವರ್ಟ್ ಮಾಡಿದರೆ, ಅಲ್ಲಿನ ಅಗ್ರಿಕಲ್ಚರ್, ಹಾರ್ಟಿಕಲ್ಚರ್, ಕೆಲವು ಕಡೆ ಸಿರಿಕಲ್ಚರ್, ನಾವು ಅವುಗಳಿಗೆ ಉತ್ತೇಜನ ಕೊಟ್ಟರೆ ಅಭಿವೃದ್ಧಿಯಾಗುತ್ತವೆ, ಈಗ ಎಜುಕೇಷನ್ ಬಗ್ಗೆ, ಹೆಲ್ತ್ ಬಗ್ಗೆ, our Government has done commendable job. ಗುಲ್ಬರ್ಗ ಜಿಲ್ಲೆಯಲ್ಲಿ, it is upgraded now. We are spending 85 crores which has come as aid from Germany. ಅಲ್ಲಿ ಸ್ಕೂಲ್‌ಗಳೇ ಇರಲಿಲ್ಲ. ಸ್ಕೂಲ್‌ಗಳು ಇದ್ದರೂ ಉಪಾಧ್ಯಾಯರು ಇರಲಿಲ್ಲ. ಇವತ್ತು ನಾವು ಎಲ್ಲಾ ಹಳ್ಳಿಗಳಿಗೂ ಸ್ಕೂಲ್‌ಗಳನ್ನು ಮಾಡಿದ್ದೇವೆ. ಉಪಾಧ್ಯಾಯರನ್ನು ಕೊಟ್ಟಿದ್ದೇವೆ. ಅಭಿವೃದ್ಧಿ ಅಂದರೆ ಏನು? ವಿದ್ಯಾಭ್ಯಾಸ, ಆರೋಗ್ಯ, ಅವರ ಕೃಷಿ ಮತ್ತು ಉದ್ಯೋಗಗಳು, ಇದು ಅಭಿವೃದ್ಧಿ. ಅಭಿವೃದ್ಧಿ ಅಂದರೆ ಈಗ ನಮ್ಮ ಕೊಡಗಿನ ಜನ ಅವರು ಒಂದು ಕಾಲಕ್ಕೆ ಯೂರೋಪಿಯನ್ ಸ್ಟೈಲ್‌ನವರು ಮೊದಲಿನಿಂದಲೂ, ಈಗ ಪ್ಲಾಂಟರ್, ನಾವು ಹುಡುಗರು ಇದ್ದಾಗ ಅವರು ಪ್ಲಾಂಟರ್ ಅಂದರೆ ಅವರುಕಾರು ಇಟ್ಟಿರುತ್ತಾರೆ, ಅವರು ಒಳ್ಳೆಯ ಯೂರೋಪಿಯನ್ ಸ್ಟೈಲ್‌ನಲ್ಲಿ ಒಳ್ಳೆಯ ಟೈ ಕಟ್ಟಿರುತ್ತಾರೆ ಎಂದು, ಈಗ ಪಾಪ ಕೆಲವು ಪ್ಲಾಂಟರ್ಸ್ ಹೇಳುವುದಕ್ಕೆ ಆಗುವುದಿಲ್ಲ ಆ ಸ್ಥಿತಿ ಆಗಿರುತ್ತಾರೆ. ಹಿಂದೆ ಇದ್ದ ಕಲ್ಪನೆಗಳು ಬೇರೆ, ಈಗ ಇರತಕ್ಕಂಥ

ಬೆಳವಣಿಗೆಗಳೇ ಬೇರೆ. Let us have comprehensive vision ಸಮಗ್ರವಾದ ದೃಷ್ಟಿಯನ್ನು ಇಟ್ಟುಕೊಳ್ಳೋಣ. ತಾವೆಲ್ಲ ಸಹಕಾರ ಕೊಡಿ. ಕೊಡಗಿನವರದ್ದೇ ಒಂದು ಡಿಸ್ಟಿಂಕ್ಷನ್ ಇದೆ. ಅವರು ದೇಶಕ್ಕೋಸ್ಕರ ಹೋರಾಟ ಮಾಡಿದ್ದಾರೆ, ದೊಡ್ಡ ದೊಡ್ಡ ಸೈನಿಕರನ್ನು ಕೊಟ್ಟಿದ್ದಾರೆ. ಆದ್ದರಿಂದ ಒಂದೊಂದು ಭಾಗದಲ್ಲಿಯೂ ವಿಶಿಷ್ಟತೆ ಇದೆ. ಅಂತಹ ನಾಡು ಇದು ಕನ್ನಡ ನಾಡು. ಇದನ್ನು ಹೇಗೆ ಬೆಳೆಸಬೇಕು ಏನು ಮಾಡಬೇಕು ಎನ್ನುವುದಕ್ಕೆ ಸಲಹೆ ಕೊಡಿ ತಪ್ಪಾಗಿದ್ದರೆ ತಿಳಿಸಿ, ವಿನಾಃ ಕಾರಣ ಆಧಾರ ರಹಿತವಾದಂತಹ ಜಾತಿ ಆಧಾರದ ಮೇಲೆ ಟೀಕೆ ಮಾಡುವುದು, ಇದನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ, ಹೋದ ವರ್ಷ ನಾನು ಇಲಾಖಾ ವೈಜ್ ಕೊಟ್ಟಿದ್ದೆ. ಈ ಸಾರಿ ಎಲ್ಲಾ problem has been attended to. ಎಜುಕೇಶನ್, ಹಾರ್ಟಿಕಲ್ಚರ್, ಅಗ್ರಿಕಲ್ಚರ್ ಅಂತೂ ವಿರೋಧ ಪಕ್ಷದವರು ಸುಸ್ತಾಗಿ ಹೋದರು ಎಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಆಗಲೇ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ನಿಮ್ಮಷ್ಟು ದೀರ್ಘವಾದ ಉತ್ತರ ಕೊಡುವುದಿಲ್ಲ ಇವತ್ತು, 6 ಗಂಟೆಗಳ ಕಾಲ ಉತ್ತರ ಕೊಟ್ಟಿದ್ದೀರಿ. ರೆಕಾರ್ಡ್‌ಬ್ರೇಕ್ ಆಗಿದೆ ಎಂದು ಹೇಳಿದೆ.

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೆ ಅವರು ಅಷ್ಟು ಉತ್ತರ ಕೊಟ್ಟ ಮೇಲೆ, ನಾಗೇಗೌಡರು ಹೇಳಿದ ಮೇಲೆ ಫೈನಾನ್ಸ್ ಮಿನಿಸ್ಟರ್ ಹೇಳಿದ ಮೇಲೆ ನಾನು ಇಷ್ಟೂ ಹೇಳಬಾರದಿತ್ತು. ಮಾಡಿರುವುದೆಲ್ಲಾ ಚೆನ್ನಾಗಿದೆಯಪ್ಪ ನೀವು ಮನೆಗೆ ಹೋಗಿ ಬನ್ನಿ ಎಂದು ಹೇಳಬೇಕಾಗಿತ್ತು. ಆದರೂ ಇನ್ನೂ ಒಂದು ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಕಂಟಿನಿಯಸ್ ಆಗಿ ವಿಧಾನ ಸಭೆಯ ಸಿಟ್ಟಿಂಗ್ಸ್ ನಾವು ಮೊದಲ ಬಾರಿಗೆ ಮಾಡಿದ್ದೇವೆ. ಈ ತರಹ 40 ದಿವಸ 60 ದಿವಸ ಕುಳಿತಿರುವುದು. ಮೊದಲು ಎಲ್ಲಿ ಕುಳಿತುಕೊಳ್ಳುತ್ತಿದ್ದರು. ಮೊದಲು ಒಂದು ವಾರ 10 ದಿವಸಕ್ಕೆ ಮುಗಿಯುತ್ತಿತ್ತು. ಆ ವಾರ ಹತ್ತು ದಿನಗಳಲ್ಲಿ 7 ದಿನ ನಿಮ್ಮ ಧರಣಿ, 3 ದಿವಸ ವಾಕ್ ಔಟ್ ನಡೆಯುತ್ತಿತ್ತು. ಅದು ಬೇಡ ಎಂದು ನಾನು ಹೇಳುವುದು. ಇನ್ನು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮತ್ತೆ ಹಲವಾರು ತಿಂಗಳುಗಳ ನಂತರ ನಾವು ಸೇರೋಣ. ಕೆಲವು ವಿಷಯಗಳು ಅಷ್ಟು ಹೊತ್ತಿಗೆ ಪ್ರಸ್ತಾಪಕ್ಕೆ ಬರುತ್ತದೆ. ಆದ್ದರಿಂದ ತಮ್ಮೆಲ್ಲರಿಗೂ ಅಧ್ಯಕ್ಷರಿಗೂ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ..

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು...........

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ಒಂದು ಪ್ರಕಟಣೆ ಇದೆ. ಅದನ್ನು ಹೇಳಬಿಡುತ್ತೇನೆ.

ಮುಖ್ಯಮಂತ್ರಿಗಳ ಹೇಳಿಕೆ

ಕರ್ನಾಟಕದಲ್ಲಿ ಡೀಸೆಲ್ ದರದ ಬಗ್ಗೆ

ಭಾರತ ಸರ್ಕಾರವು ವಿವಿಧ ರಾಜ್ಯಗಳಲ್ಲಿ ಡೀಸಲ್‌ನ ಚಿಲ್ಲರೆ ಬೆಲೆಯನ್ನು ದಿನಾಂಕ